ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

(ರಜತೋತ್ಸವದ ವಿಶೇಷ ಸಂಚಿಕೆ)

ಸಂಪುಟ 25 ಸಂಚಿಕೆ 1–2
ಜನವರಿ-ಜೂನ್ 1996

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore. Vol. 25 No. 1 & 2, January—June 1996

ಸಂಪಾದಕ ಸಮಿತಿ :

ಡಾ॥ ಎನ್. ಆರ್. ಶೆಟ್ಟಿ ಅಧ್ಯಕ್ಷರು
ಕುಲಪತಿಗಳು

ಡಾ॥ ಕೆ. ಮರುಳಸಿದ್ದಪ್ಪ ಪ್ರಧಾನ ಸಂಪಾದಕರು
ಪ್ರಾಧ್ಯಾಪಕರು ಹಾಗೂ ನಿರ್ದೇಶಕರು

ಡಾ॥ ಶ್ರೀಮತಿ ಲೀಲಾರಾವ್ ಸಂಪಾದಕರು
ಪ್ರಾಧ್ಯಾಪಕರು, ಸಂಹವನ ವಿಭಾಗ

ಶ್ರೀಮತಿ ಎಂ. ಸುಮಿತ್ರ "
ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ

ಶ್ರೀ ಎಂ. ಜಿ. ಮಂಜುನಾಥ್ "
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ

ವಾರ್ಷಿಕ ಚಂದಾ : ರೂ. 15–00
ವಿದ್ಯಾರ್ಥಿಗಳಿಗೆ ರೂ. 10–00 (ದೃಢೀಕರಣ ಪತ್ರವನ್ನು ಕಳುಹಿಸಬೇಕು)
ಆಜೀವ ಸದಸ್ಯತ್ವ ರೂ. 150–00

ಪ್ರಕಾಶಕರು :
ಎಂ. ಪುಟ್ಟಸ್ವಾಮಿ
ನಿರ್ದೇಶಕ (ಕಾರ್ಯನಿರ್ವಾಹಕ), ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–560 056

ಮುದ್ರಕರು :
ಎಸ್. ಎಂ. ಹೊನ್ನಪ್ಪ
ನಿರ್ದೇಶಕ (ಕಾರ್ಯನಿರ್ವಾಹಕ)
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಪ ರಿ ವಿ ಡಿ ಪುಟ

ಕಲ್ಪನೆಯು ಬೆನ್ನೇರಿ...ಬಿದ್ದಾಗ

ತಮಿಳ್ ಸೆಲ್ವಿ

ಅಂಕು ಡೊಂಕಾಗಿದ್ದರೂ ರಸ್ತೆ
ನಾವು....ನೆಟ್ಟಗೆ ನಡೆಯಬೇಕು
ಇಲ್ಲವೇ...ಎಡವುವುದು ತಪ್ಪೀತೇ ?
ಅದಕ್ಕೆಂದು ಅದನ್ನು ರಿಪೇರಿ ಮಾಡುವುದು ನಮ್ಮಿಂದಾದೀತೇ ?
ಎಂಥ ಹಾದಿಯಾದರೂ ನಡೆದು ಕ್ರಮಿಸಬೇಕು ದೂರ

ನಡೆದು ಬಂದ ದೂರದ
ನೆನಪಿನಾಳವನ್ನು ಅಗೆದಷ್ಟೂ...
ಆಳ ಆಳಕ್ಕಿದು ಅದರ ವಿಸ್ತಾರ ಮತ್ತಷ್ಟು ಹೆಚ್ಚಿ
ಆದರಲ್ಲಿ ಎಂದೋ ನೆಟ್ಟ ಬೀಜ ಮೊಳೆತು ಚಿಗುರಿ ಗಿಡವಾಗಿ
ಕಲ್ಪನೆಯ ಬೆನ್ನೇರಿ
ಎತ್ತರೆತ್ತರ ಆಕಾಶದೆತ್ತರ ಬೆಳೆದಾಗ
ಮುಚ್ಚಂಜೆಯಲ್ಲೂ ಕಪ್ಪು ನೆರಳುಗಳ ಭೀಕರ ಅಲೆದಾಟ
ಮೂಲ ಪ್ರವೃತ್ತಿಗಳೇ ಬಿಳಿಲುಗಳಾಗಿ
ಬೇರು ಬಿಟ್ಟು ಆಳವಾಗಿ ನೆಲೆಯೂರಿದಾಗ
ತಲೆಯೆತ್ತಿ ದೃಷ್ಟಿಸಿದರೂ ಕಣ್ಣಿಗೇ ಕಾಣಲಾರದಷ್ಟು ಎತ್ತರಕ್ಕೇರಿ...
ಏಕಿಷ್ಟು ಎತ್ತರವಾಗುತ್ತೀರಿ ನೆನಪುಗಳೇ ?
ಕೊಂಚ ಬಾಗಲಾರಿರಾ ?

ಕಲ್ಪನೆಯ ಗರಿಗಳ ರೆಕ್ಕೆ ಬಿಚ್ಚಿ ಇನ್ನೇನು ಹಾರಬೇಕೆನ್ನುವಾಗ
ಹಠಾತ್ತನೊಂದು ದಿನ
ಕತ್ತರಿಸಬೇಕಾಯಿತ್ತು ರೆಕ್ಕೆ–ಪುಕ್ಕಗಳ
ನೆಲದಾಳದ ಬೇರನ್ನೂ ಬಗೆದು ಮತ್ತದೇ
ಕೂಪಕ್ಕೆ ತಳ್ಳುವ
ಕುಟಿಲ ಕಾರಸ್ಥಾನ
ಕ್ಷಣಿಕ ಕ್ಷುದ್ರತೆಯಲ್ಲೂ ಮೆರೆವ ದಬ್ಬಾಳಿಕೆಗೆ
ಜೊತೆಗೆ

ಕ್ರೂರತೆಗೆ ಸಾಕ್ಷಿಯಾಗಬೇಕಾಯ್ತು !
ಗರಿಬಿಚ್ಚದಂತೆ ಬಿಗಿಯಾಗಿ ಕಟ್ಟಬೇಕಾಯ್ತು
ಕಲ್ಪನೆಯ ರೆಕ್ಕೆ–ಪುಕ್ಕಗಳ ಕತ್ತರಿಸಬೇಕಾಯ್ತು
ದನಿಯುಡಗಿ ಮಾತುಗಳೂ ಮೂಕವಾದವು
ಕನಸಿನ ದಾರಿಯ ನಡುವೆ ಗಿಡವೊಂದು ನಿಂತಿತ್ತು
ಅರಳಿ, ಹೂಗಳು ಗಿಡದ ತುಂಬ ಹರಡಿ
ಹೊಸಲಂಗವುಡಿಸಿತ್ತು. ಆದರೆ...
ನನ್ನ ಸಂವೇದನೆ ಬತ್ತಿತ್ತು
ಬರಿದಾದ ಮೋಡ ತಿಳಿಯಾಗಿ ತೋರುವ
ನೀಲಾಕಾಶದಲ್ಲಿ
ಕನಸುಗಳನ್ನು ಪುನಃ ಹುಡುಕಿಕೊಂಡು
ಕಣಿವೆಯ ಅಂಚಲ್ಲಿ ಮತ್ತೆ ನಿಂತಿದ್ದೇನೆ
ಚೇನ್ನಗನಸುಗಳ ಕಾಣುವಾಸೆಯಿಂದ !

ಗಂಗರ ಒಂದು ಹೊಸ ಶಾಸನ

ಡಾ. ಹಂಪ. ನಾಗರಾಜಯ್ಯ

1.0. ಪೀಠಿಕೆ

ಯುವ ಪತ್ರಕರ್ತ ಜಿ. ಡಿ. ಯತೀಶ್ ನೀಡಿದ ಸುಳಿವು ತಿಳಿದು ಎಂ, ಜಿ. ಮಂಜುನಾಥ ರೊಂದಿಗೆ 26-05-96 ರಂದು ಗುತ್ತಲಿಗೆ ಹೋದೆ. ಗುತ್ತಲು ಗ್ರಾಮ ಮಂಡ್ಯದಿಂದ ಕೆ. ಎಂ. ದೊಡ್ಡಿ ಮಾರ್ಗದಲ್ಲಿ ಮಂಡ್ಯಕ್ಕೆ ನಾಲ್ಕು ಕಿ.ಮೀ. ಅಂತರದಲ್ಲಿದೆ. ಊರಾಚೆ ಇರುವ ಹೊಲಗಳ ಹತ್ತಿರ ಅರ್ಕೇಶ್ವರ ಸ್ವಾಮಿಯ ಮತ್ತು ಗುತ್ತಲಮ್ಮನ ಎರಡು ಗುಡಿಗಳಿವೆ. ಅರ್ಕೇಶ್ವರ ದೇವಾಲಯವು ಆಮೂಲಾಗ್ರವಾಗಿ ಜೀರ್ಣೋದ್ಧಾರ ವಾಗುತ್ತಿದೆ. ಹಳೆಯ ಗೋಡೆಯನ್ನು ಕೆಡವಿದಾಗ ಅಲ್ಲಿದ್ದ ಎರಡು ಕಲ್ಲುಚಪ್ಪಡಿಗಳಲ್ಲಿ ಶಾಸನವಿರುವುದನ್ನು ಗುರುತಿಸಲಾಯಿತು. ಹಾಗೆಯೇ ಮೇಲ್ಛಾವಣಿಯ ಸೂರಿನಲ್ಲಿದ್ದ ಒಂದು ಕಲ್ಲುಚಪ್ಪಡಿಯಲ್ಲಿಯೂ ಶಾಸನವಿರುವುದು ಕಂಡುಬಂದಿತು ; ಮೇಲ್ಛಾವಣಿಗೆ ಚಾಚಿದಂತೆ ಹಾಸಿದ್ದ ಕಲ್ಲಿನ ಶಾಸನವನ್ನು ಈ ಹಿಂದೆಯೇ ಓದಿ ದಾಖಲಿಸಿದೆ. ಗೋಡೆ ಯಲ್ಲಿ ಸೇರಿಹೋಗಿದ್ದ ಎರಡು ಶಾಸನಗಳು ಹೊಸವು ; ಅವುಗಳಲ್ಲಿ ಒಂದು ಶಾಸನ ವನ್ನು ಕುರಿತು ಈ ಸಂಟಿಪ್ಪಣಿ.

1.1. ಶಾಸನ ಪಾಠ

(ಮಂಡ್ಯ ಜಿಲ್ಲೆ) ಮಂಡ್ಯ ತಾಲೂಕಿಗೆ ಸೇರಿದ ಗುತ್ತಲು ಗ್ರಾಮದ ಹೊರಗಡೆ ಇರುವ ಅರ್ಕೇಶ್ವರ ದೇವಾಲಯದ ಗೋಡೆಯೊಳಗೆ ಸೇರಿದ್ದ ಕಲ್ಲುಚಪ್ಪಡಿಯಲ್ಲಿರುವ ಅಪ್ರಕಟಿತ-ಹೊಸ ಶಾಸನದ ಪಾಠ : ಎಂ. ಜಿ. ಮಂಜುನಾಥರ ಸಹಾಯದಿಂದ ಈ ಶಾಸನ ಪಾಠವನ್ನು ಓದಲಾಯಿತು.

1. ಶ್ರೀ ಸ್ವಸ್ತಿ ಸಮಸ್ತ ಸುರಾಸುರ ಮ
2. ಸ್ತಕ ಮಕುಟಾಂಶುಜಳ ಜಾ
3. ಳಂ ಧೌತಪದ ಪ್ರಸ್ತುತ ಜಿ
4. ನೇನ್ದ್ರ ಶಾಸನಮಸ್ತು ಚಿರಂ ಭ
5. ದ್ರಮಮಳ ಭವ್ಯಜನಾನಾಂ ॥
6. ವಿಖ್ಯಾತಃ ಪಾಣ್ಡ್ಯವಂಶೋದ್ಭವ
7. ವಿದಿತಯಶೋಮೂರ್ತ್ತಿರಾರ್ಯ್ಯ



ಗುತ್ತಲಿನ ಹೊಸ ಶಾಸನ

8. ನಾವಶಾ ಪಸ್ಯ . . . . ಪ್ರ
9. ವರಕುಲವದ್ಯದಾನ ಸಂಪ
10. ನ್ನ ಯೋಗಾ . . ವಿದ್ಯಾಧರ ವಿ
11. ದ್ಯಾಧರ . . . . ಕ ಸರ್ವ್ವ
12. ಪಾತ್ರಃ ಪ್ರಸಿದ್ಧಸ್ತಸ್ಯ ಶ್ರೀ ಕೀ
13. ರ್ತ್ತಿ ವಿದ್ಯಾಪತಿಹಿತ ಚರಿತ್ರ
14. ಲೋಕ ವಿದ್ಯಾಧರಾಖ್ಯಃ ॥ .
15. . . ಮರುಳ ಭೀವಶಾಜಾತಾ ವಿ
16. ದ್ಯಾಧರಾಖ್ಯ ನೃಪಾಳಕ ಸ
17. ರ್ವ್ವ ಲೋಕಸ್ಯ ಗಂಗಪಟ್ಟ ಪ್ರಸಿದ್ಧ
18. ಯೋಃ ॥ ಶ್ರೀ ಸ್ವಸ್ತಿ ಸಮಸ್ತಭುವನ
19. ಜನ ವಿನೂತ ಜಿನಪತಿ ಚರ
20. ಣ ಸರಸೀರುಹಂ ಮಧುಕರ
21. ನಿಜಾನ್ವಯ ದಿನಕರಂ ಅಭಿ ಮಾ

(ಇಲ್ಲಿಂದ ಮುಂದಿನದು ಶಾಸನ ಸ್ತಂಬದ ಎಡಬದಿಯಲ್ಲಿರುವ ಬರೆಹ)

22. . . . .
23. . . . .
24. ಸಖ ಳ
25. ಸ್ವರ್ಗ್ಗಂ ಪಡೆ
26. . . . .
27. ನಿ ಸ . .

(ಮುಂದಿನ ಸ್ವಲ್ಪ ಭಾಗ ತ್ರುಟಿತ)

ಇದು ಸಾದ್ಯಂತವಾಗಿ ಜೈನ ಶಾಸನ, ನಿಸಿದಿ ಕಲ್ಲು. ಶಾಸನದ ಆರಂಭದಲ್ಲಿರುವುದು ಸಂಸ್ಕೃತ ಶ್ಲೋಕ, ಜಿನಸ್ತುತಿ ಪದ್ಯ. ಆರಂಭದ 22 ಸಾಲುಗಳಲ್ಲಿ ಸರಾಸರಿ ಪ್ರತಿ ಸಾಲಿಗೆ ಹತ್ತು ಅಕ್ಷರಗಳಿವೆ. ಕಡೆಯ ಆರು ಸಾಲುಗಳು ತುಂಬ ತ್ರುಟಿತವಾಗಿದ್ದು, ಸರಾಸರಿ ಪ್ರತಿ ಸಾಲಿಗೆ ನಾಲ್ಕು ಅಕ್ಷರಗಳಿರುವ ಚಿಕ್ಕ ಪಂಕ್ತಿಗಳಾಗಿವೆ. ಶಾಸನದ ತೇದಿ ನಮೂದಾಗಿಲ್ಲ. 10–11 ನೆಯ ಪಾದಗಳಲ್ಲಿ ವಿದ್ಯಾಧರ ಎಂಬ ಹೆಸರು ಎರಡು ಸಲ ಆವರ್ತನಗೊಂಡಿದೆ.

ಶಾಸನದ ಸಾರಾಂಶ : ಆರಂಭದ ಆರು ಸಾಲುಗಳಲ್ಲಿ ಜಿನರ ಮಂಗಳಾಚರಣೆಯ ಶ್ಲೋಕವಿದೆ. ಏಳನೆಯ ಪಾದದಿಂದ 12 ನೆಯ ಪಾದದವರೆಗೆ ವಿಖ್ಯಾತನೂ, ಪಾಂಡ್ಯ ವಂಶ ಸಂಜಾತನೂ, ಪ್ರಸಿದ್ಧ ಯಶೋಮೂರ್ತಿಯೂ ಆದ ಒಬ್ಬ ವ್ಯಕ್ತಿಯ ವಿಚಾರ

ವಿದೆ, ಆತನ ಹೆಸರು ಹೇಳಿರುವ ಭಾಗವಷ್ಟೂ ನಷ್ಟವಾಗಿದೆ. ಪಂಕ್ತಿ 13 ರಿಂದ ಮುಂದಕ್ಕೆ ಲೋಕ ವಿದ್ಯಾಧರ ಎಂಬ ಹೆಸರಿನ ಪುರುಷನ ಪರಿಚಯವಿದೆ. ಮರುಳ ಭೀಮನ ಮಗನಾದ ವಿದ್ಯಾಧರ ಎಂಬ ಹೆಸರಿನ ನೃಪಾಲಕನು ಗಂಗ ಪಟ್ಟದಲ್ಲಿದ್ದು ಪ್ರಸಿದ್ಧನಾಗಿದ್ದಾನೆ. ವಿದ್ಯಾಧರನು ಜಿನರ ಅಡಿದಾವರೆಯಲ್ಲಿ ದುಂಬಿಯಂತೆಯೂ, ತನ್ನ ವಂಶಕ್ಕೆ ಸೂರ್ಯನಂತೆಯೂ ಇದ್ದಾನೆ. ಅಭಿಮಾನ (ಮೇರುವಾದ) ಆತನು ಸಮಾಧಿಯಿಂದ ಮುಡಿಪಿದನು ; ಆತನ ನೆನಪಿಗೆ ನಿಲ್ಲಿಸಿದ ನಿಸಿದಿ ಶಾಸನವಿದು.

2.1. ಹಿನ್ನೆಲೆ

ಗುತ್ತಲು ಮತ್ತು ಸುತ್ತು ಮುತ್ತಲು ಇರುವ ಊರು ಕೇರಿ ನಗರ ಪ್ರದೇಶವಷ್ಟೂ ಜೈನ ಪ್ರಭಾವದ ಪ್ರದೇಶ. ಸಗರಮಣಲೆಯರೂ, ಗಂಗರೂ, ರಾಷ್ಟ್ರಕೂಟವಲ್ಲಭರ ಸಾಮಂತ–ಮಾಂಡಲಿಕರಾಗಿದ್ದು ಈ ಭಾಗದಲ್ಲಿ ಆಡಳಿತಾರೂಢ ರಾಗಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಕ್ರಿ. ಶ. ಎಂಟರಿಂದ ಹನ್ನೊಂದನೆಯ ಶತಮಾನದವರೆಗೆ ಗಂಗವಾಡಿಯಲ್ಲಿ ಅಂತರ್ಗತವಾಗಿದ್ದ ಮಂಡ್ಯ ಜಿಲ್ಲೆಯನ್ನು ಗಂಗರು ಸತತವಾಗಿ ನಾನ್ನೂರು ವರ್ಷ ಆಳಿದರು.

ಮಂಡ್ಯ ಜಿಲ್ಲೆಯಲ್ಲಿ ಸಿಗುವ ಗಂಗರ ಮೊಟ್ಟಮೊದಲನೆಯ ಶಾಸನ ಕ್ರಿ. ಶ. 713ರ ಕೆಜಿಗೋಡು ವಿಷಯಕ್ಕೆ ಸೇರಿದ್ದು : EC. VII (R) ಮಂ. 35. (111 ಮಂ 113) ಕಿ. ಶ. 713. ಹಳ್ಳಿಗೆರೆ : ಪು. 219–23. ಈ ಜಿಲ್ಲೆಯಲ್ಲಿ ದೊರೆತಿರುವ ಗಂಗರ ಕಟ್ಟ ಕಡೆಯ ಶಾಸನ ಕ್ರಿ. ಶ. 1024 ರಲ್ಲಿ ರಚಿತವಾಗಿದೆ : ಅದೇ, ಮಂ. 54 (XIV ಮಂ 126) 10–11ಶ (1024) ಹಳೇಬೂದನೂರು. ಪು. 236.

ಮಂಡ್ಯ, ಮಳವಳ್ಳಿ, ಮದ್ದೂರು ತಾಲೂಕುಗಳ ಪ್ರದೇಶಗಳು ಸೇರಿ ಆಗಿದ್ದ ಕೆಳಲೆನಾಡು–ಕಿಳಲೆ ಸಹಸ್ರ ಪ್ರದೇಶವನ್ನು ರಾಷ್ಟ್ರಕೂಟರ ಸಾಮಂತರಾಗಿ, ಗಂಗರ ಮಿತ್ರರಾಗಿ ಸಗರಮಣಲೆಯರು ಇನ್ನೂರೈವತ್ತು ವರ್ಷ ಆಳಿದರು. ಈಗಿನ (ಅರೆ) ತಿಪ್ಪೂರು ತೀರ್ಥದಲ್ಲಿ ಗೊಮ್ಮಟ ಮೂರ್ತಿಯನ್ನೂ, ಆರೇಳು ಬಸದಿಗಳನ್ನೂ ಮಾಡಿಸಿದವರು ಮಣಲೆಯರೇ. ಮಂಡ್ಯ ತಾಲೂಕು ಮತ್ತು ಮದ್ದೂರು ತಾಲೂಕು ಒಳಗೊಂಡು ಆಗಿದ್ದ ಕುಂದೂರುನಾಡನ್ನು (ಕುಂದನಾಡು. ಕುಂದೂರ್ನಾಡು, ಕುಂದುನ್ನಾಡು) ಗಂಗರು ಆಳಿದರು : ಅದೇ, ಮಂ 67 (111 ಮಂ 78) 997. ಬೇಲೂರು ಪು. 244 (– ಗಂಗ ಪೆರ್ಮಾನಡಿಗಳ್ + ಕುಂದೂರ್ ನಾಡನಾಳುತ್ತಮಿರೆ). ಹೀಗೆ ಮಂಡ್ಯ ಜಿಲ್ಲೆ ಹಾಗೂ ಗುತ್ತಲುಗ್ರಾಮ ಪ್ರದೇಶವನ್ನು ಗಂಗರು ಆಳುತ್ತಿದ್ದ ಈ ಹಿನ್ನೆಲೆಯಲ್ಲಿ ಈಗ ಹೊಸದಾಗಿ ಸಿಕ್ಕಿರುವ ಶಾಸನದ ಒಕ್ಕಣೆಯನ್ನು ಪರಾಮರ್ಶಿಸ ಬೇಕಾಗುತ್ತದೆ.

3.1. ಪರಿಶೀಲನೆ

ಗುತ್ತಲಿನ ಅರ್ಕೇಶ್ವರ ದೇವಾಲಯದಲ್ಲಿ ಪತ್ತೆಯಾಗಿರುವ ಪ್ರಸ್ತುತ ಹೊಸ ಶಾಸನದ ಕೇಂದ್ರ ವ್ಯಕ್ತಿ (ಲೋಕ) ವಿದ್ಯಾಧರ. ಶ್ರವಣಬೆಳುಗೊಳದ ಒಂದು ಶಾಸನದಲ್ಲಿ ಸಾವಿಯಬ್ಬೆಯ ಪತಿಯಾದ ಲೋಕ–ವಿದ್ಯಾಧರನನ್ನು ಹೆಸರಿಸಿದೆ [EC. II (R) 172 (139) 10 ಶ. ಪು. 116-17]. ಆದರೆ ಆ ಲೋಕ ವಿದ್ಯಾಧರನಿಗೂ ಗುತ್ತಲಿನ ಹೊಸ ಶಾಸನೋಕ್ತ ಲೋಕವಿದ್ಯಾಧರನಿಗೂ, ನಾಮ ಸಾದೃಶ್ಯವೇ ಹೊರತು, ಯಾವ ಸಂಬಂಧವೂ ಇಲ್ಲ. ಶ್ರವಣಬೆಳುಗೊಳ ಶಾಸನೋಕ್ತ ಲೋಕವಿದ್ಯಾಧರನು ದೋರನ ಮಗ, ಗುತ್ತಲು ಶಾಸನೋಕ್ತ ಲೋಕವಿದ್ಯಾಧರನು ಮರುಳಭೀಮನ ಮಗ.

ಗುತ್ತಲು ಶಾಸನದಲ್ಲಿ ಹೆಸರಿಸಿರುವ (ಲೋಕ) ವಿದ್ಯಾಧರನು ಗಂಗಪಟ್ಟ ಪ್ರಸಿದ್ಧನೂ, ಮರುಳಭೀಮನ ಮಗನೂ, ಜಿನಪತಿ-ಚರಣ ಸರಸೀರುಹ ಮಧುಕರನೂ ಆಗಿದ್ದಾನೆ. ಗಂಗರು ಮೊದಲಿನಿಂದ ಕಡೆಯತನಕ ಜೈನರಾಗಿದ್ದುದನ್ನು ಶಾಸನಗಳು ಸಾರಿವೆ; ಈ (ಲೋಕ) ವಿದ್ಯಾಧರನೂ ಜಿನಭಕ್ತನಾಗಿದ್ದುದು ಅದಕ್ಕೆ ಅನುಗುಣ ವಾಗಿದೆ. ಈತನು ಗಂಗ ಪಟ್ಟಕ್ಕೆ ಬಂದದ್ದು ಯಾವಾಗ, ಈತನ ತಂದೆ ಮರುಳ ಭೀಮಃ ಯಾರು, ಗುತ್ತಲಿಗೆ ಮುಡಿಪಿದ್ದು ಬಂದು ಹೇಗೆ– ಎಂಬುದು ಪರಿಶೀಲನಾರ್ಹ ಅಂಶಗಳು.

ಮರುಳ ಎಂಬ ಹೆಸರು ಗಂಗರಾಜರಲ್ಲಿ ಪ್ರಸಿದ್ಧವಾದದ್ದು. [ARSIE 1934–35. A–23. 962; EI. XXXVI. Pp. 97–110]. ಗಂಗವಂಶದಲ್ಲಿ ಪ್ರಸಿದ್ಧನಾದ ಇಮ್ಮಡಿ ಬೂತುಗ ಪೆರ್ಮಾಡಿಯ ಹಿರಿಯ ಮಗನಾದ ಮರುಳನು ರಾಷ್ಟ್ರಕೂಟರ ಕೃಷ್ಣ III (935–67) ಚಕ್ರವರ್ತಿಯ ಅಳಿಯನಾಗಿದ್ದು ಸಾಮ್ರಾಟ ನಿಂದ ಮದನಾವತಾರವೆಂಬ ಅಪೂರ್ವ ಕೊಡೆಯ ಮರ್ಯಾದೆಗೆ ಪಾತ್ರನಾಗಿದ್ದನು. [MAR. 1921. Pp. 8-16. 962-63 ; IWG : 1984 : No. 138. Pp. 411-32 ಕಲಿಯುಗ ಭೀಮ ಎಂಬ ಬಿರುದಾಂಕಿತನಾದ ಈ ಮರುಳನು ಜಿನವರಚರಣಾಂಭೋ ರುಹ ಮಧುಪಾಯಮಾನ ಮಾನಸನಾಗಿದ್ದನೆಂದು ಕೂಡ್ಲೂರು ಶಾಸನದಲ್ಲಿದೆ [IWG : 1984 : No. 138 : P. 419 : ಸಾಲು : 96]. ರನ್ನಕವಿಯೂ ಅಜಿತ ಪುರಾಣದಲ್ಲಿ ಈ ಮರುಳ (ಮಮಳ) ನನ್ನು ಜಿನಧರ್ಮಪ್ರಭಾವನೆ ಮಾಡಿದ ಹಿರಿಯರ ಸಾಲಿನಲ್ಲಿಟ್ಟು ಸ್ಮರಿಸಿದ್ದಾನೆ [12–9].

ಮರುಳನನ್ನು ಕುರಿತು ಇರುವ ಶಾಸನಗಳ ಚಿತ್ರಣವು ಗುತ್ತಲಿನ ಹೊಸ ಶಾಸ ನೋಕ್ತ ಮರುಳನಿಗೆ ಸರಿಯಾಗಿ ಹೊಂದಿಕೊಳ್ಳುತ್ತವೆ. ಅದರಿಂದ, ಕ್ರಿ.ಶ. 962–63 ರಲ್ಲಿದ್ದ ಗಂಗರದೊರೆಯಾದ ಮರುಳನ ಮಗನೇ ಈ (ಲೋಕ) ವಿದ್ಯಾಧರನೆಂದು

ತಿಳಿಯಲು ಅವಕಾಶವಿದೆ. ಆದರೆ ಇಂಥ ತೀರ್ಮಾನವನ್ನು ಕದಲಿಸುವ, ಪ್ರಶ್ನಿಸುವ ಅನ್ಯಾನ್ಯ ಆಧಾರಗಳು ಉಪಲಬ್ಧವಿವೆ.

ಗಂಗರ ಮನೆತನದಲ್ಲಿ ಇಮ್ಮಡಿ ಬೂತುಗನ ಬಹು ಪ್ರಸಿದ್ಧನಾದ ಮಹಾ ಮಂಡಲೇಶ್ವರ [sii·xi–i, 36,942. ರೋಣ ; ಅದೇ, 37, 946, ಕುರ್ತ್ಯಕೋಟಿ ; El. IV· ಸು. 940. ಪು. 350 ಹೆಬ್ಬಾಳ ; EI. XV· 23. 1071–72 ಗಾವರವಾಡ ; EC. VIII (BLR) ನಗರ 35, 1077, ಹೊಂಬುಜ ; EC· IX (R) ಚೇ, 388, 954 ಬಸ್ತಿಹಳ್ಳಿ. ಪು. 351–52 ಇತ್ಯಾದಿ], ಈತನಿಗೆ ಆರು ಜನ ಮಕ್ಕಳು; ಮರುಳ, ಕುಂದಣ ಸೋಮಿದೇವಿ (ಪತಿ. ರಾಜಾದಿತ್ಯ), ಇಮ್ಮಡಿ ಮಾರಸಿಂಹ, ರಾಜಮಲ್ಲ, ನೀತಿಮಾರ್ಗ ಗೋವಿಂದರ ಮತ್ತು ವಾಸವ. ಬೂತುಗನ ಕಡೆಯ ಮಗನಾದ ವಾಸವನಿಗೆ (ಹೆಂ. ಕಂಚಲದೇವಿ) ಇಬ್ಬರು ಮಕ್ಕಳು ; ಗೋವಿನ್ದರದೇವ (ರಕ್ಕಸಗಂಗ) ಮತ್ತು ಅರು ಮುಳಿದೇವ. ವಾಸವನ ಹಿರಿಯ ಮಗನಾದ ಗೋವಿಂದರ ದೇವ (ರಕ್ಕಸ ಗಂಗ)ನಿಗೆ ಮಕ್ಕಳಿರಲಿಲ್ಲ, ಕಿರಿಯ ಮಗನಾದ ಅರುಮುಳಿದೇವನಿಗೆ (ಹೆಂ. ಗಾವಬ್ಬರಸಿ) ಮೂವರು ಮಕ್ಕಳಿದ್ದರು–ಚಟ್ಟಲದೇವಿ ಮತ್ತು ರಾಜ ವಿದ್ಯಾಧರ ;

> ಸರಸತಿಯುಂ ಸಿರಿಯುಂ ದಿನ
> ಕರನುಂ ಪುಟ್ಟಿದ್ದುರ್ವೆಂಬಿನಂ ಚಟ್ಟಲೆಯುಂ
> ವರವಧು ಕಂಚಲೆಯುಂ ಸ
> ತ್ಪುರುಷೋತ್ತಮನೆನಿಪ ರಾಜ ವಿದ್ಯಾಧರಂ ॥
> [EC. VIII (1902) ನಗರ 35. ಸಾಲು 48–49]

ಅಪುತ್ರಕನಾದ ರಕ್ಕಸಗಂಗ (ಗೋವಿಂದರ) ನು ತನ್ನ ತಮ್ಮನಾದ ಅರುಮುಳಿದೇವನ ಈ ಮೂವರು ಮಕ್ಕಳನ್ನು ಸಾಕಿ ಬೆಳೆಸಿದನು. ಚಟ್ಟಲದೇವಿಯು ಕಂಚಿಪುರವರೇಶ್ವರ ಕಾಡುವೆಟ್ಟಿಯ ಪತ್ನಿಯಾದಳು, ಕಂಚಲದೇವಿಯು ಪೊಂಬುಚ್ಚಪುರವರಾಧೀಶ ಸಾಂತರರ ಬೀರದೇವ (ತ್ರೈಳೋಕ್ಯ ಮಲ್ಲವೀರ ಸಾಂತರದೇವ) ನಿಗ ವಲ್ಲಭೆಯಾದಳು. ತನ್ನ ತಮ್ಮ ಅರುಮುಳಿದೇವನಿಗೆ ಹೀಗೆ ಮಕ್ಕಳು ಮತ್ತು ಮುಖ್ಯವಾಗಿ ಒಬ್ಬಮಗ–

> ಪುಟ್ಟೆ ತನಗಂದು ರಾಜ್ಯದ
> ಪಟ್ಟಂ ಕೈ ಸಾರ್ದ್ದುದೆಂದು ರಕ್ಕಸಗಂಗಂ
> ನಿಟ್ಟಿಸಿ ತನ್ನರಮನೆಯೊ
> ಳ್ಪಟ್ಟನೆ ತಂದಿರಿಸಿದಂ ಮಹೋತ್ಸವದಿಂದಂ ।। (ಅದೇ. ಸಾಲು : 49)

ರಕ್ಕಸಗಂಗ ಗೋವಿಂದರ ದೇವನು ತನ್ನ ತರುವಾಯ ಗಂಗ ಪಟ್ಟದ ಉತ್ತರಾಧಿಕಾರಿಯಾಗಿ ರಾಜ ವಿದ್ಯಾಧರನಿಗೆ ಪಟ್ಟ ಕಟ್ಟಿದನು. ಈ ರಕ್ಕಸಗಂಗ ಸತ್ಯವಾಕ್ಯ ಗೋವಿಂದರ ದೇವನು ಮಂಡ್ಯ ಮದ್ದೂರು ಮಳವಳ್ಳಿ ತಾಲೂಕುಗಳನ್ನು ಒಳಗೊಂಡ ಗಂಗರಾಜ್ಯ

ವನ್ನು ಕ್ರಿ.ಶ, 1024 ರವರೆಗೆ ಆಳಿದನು] EC.VII (R) ಮಂ 54 (XIV ಮಂ 126) 1024. ಹಳೇ ಬೂದನೂರು. ಪು. 236] ಅನಂತರ ಗಂಗರ ದಾಖಲೆಗಳು ಈ ಜಿಲ್ಲೆಯಲ್ಲಿ ಇರಲಿಲ್ಲ. ಈಗ ಸಿಕ್ಕಿರುವ ಹೊಸ ಶಾಸನದಿಂದ ಮಂಡ್ಯಜಿಲ್ಲೆಯಲ್ಲೂ ಮತ್ತು ಒಟ್ಟಾರೆ ಗಂಗರ ಆಳ್ವಿಕೆಯ ಚರ್ಚೆಗೂ ಜೀವ ಬಂದಂತೆ ಆಗಿದೆ.

3.2 ಸಂದೇಹಗಳು – ಪರಿಹಾರ

ಗುತ್ತಲು ಹೊಸ ಶಾಸನದಲ್ಲಿ ಬರುವ ವಿದ್ಯಾಧರನು ಮರುಳ ಭೀಮಜಾತನೆಂದು ಹೇಳಿದೆ, ಅದರಿಂದ ಈ ಮರುಳನು ಬೂತಗನು ಹಿರಿಯ ಮಗನೇ ಹೊರತು, ಬೂತುಗನ ಮೊಮ್ಮಗನಾಗಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಮೂಡುವುದು ಸಹಜ ; ಅಂದರೆ ಮರುಳನು ಹೇಗೆ ಅರುಮುಳಿದೇವನಾಗಲು ಸಾಧ್ಯ ಎಂಬ ಸಂಶಯ ಉಂಟಾಗುತ್ತದೆ, ಈ ಅನುಮಾನ ಪರಿಹಾರಕ್ಕಾಗಿ ಹೊಂಬುಜ ಶಾಸನವನ್ನು ಆಶ್ರಯಿಸಬೇಕು.

ಬೂತುಗನ ಮಗನಾದ ಮರುಳನಿಗೆ ಕೆಲವು ಪ್ರಶಸ್ತಿಗಳಿದ್ದುವು: ಕಲಿಯುಗ ಭೀಮ [IWG :1984 : No. 102, 139, 159], ನೀತಿಮಾರ್ಗ, ಗಂಗ ಚಕ್ರಾಯುಧ, ಗಂಗ ಮಾರ್ತಾಂಡ, ಪುಣುಸೆಯಗಂಗ. ಈ ಬಿರುದುಗಳಲ್ಲದೆ ಮರುಳನಿಗೆ ಅರಮೊೞಿದೇವ ಎಂಬ ಹೆಸರಿತ್ತು. ಬೂತುಗನ ಮಗನಾದ ವಾಸವನ ಇಬ್ಬರು ಮಕ್ಕಳಾದ ಗೋವಿಂದರ ದೇವ ಮತ್ತು ಅರುಮುಳಿದೇವ–ಇವರಿಗೂ ಕೆಲವು ಬಿರುದುಗಳಿದ್ದುವು. ಗೋವಿಂದರದೇವನ ಇತರ ಪ್ರಶಸ್ತಿ ಸಹಿತ ಹೆಸರುಗಳು : ಸತ್ಯವಾಕ್ಯ, ರಕ್ಕಸಗಂಗ, ಗಂಗನಾರಾಯಣ, ಪೆರ್ಮಾನಡಿ, ಗಂಗನಾರಾಯಣ, ಗಂಗಚೂಡಾಮಣಿ, ವೀರ ಮಾರ್ತಣ್ಡದೇವ. ಅರುಮುಳಿದೇವನ ಪ್ರಶಸ್ತಿಗಳು : ಕೊಮರಂಕಭೀಮ, ನೀತಿಜ್ಞ, ನೀತಿಮಾರ್ಗ, ನೀತಿಮಹಾರಾಜ. ಅರುಮೊೞಿ ಮತ್ತು ಅರುಮುಳಿ ಎಂಬ ಎರಡು ಹೆಸರುಗಳೂ ಒಂದೇ ಮೂಲದ ಮತ್ತು ಒಂದೇ ಅರ್ಥದ ರೂಪಗಳು ; ಇವು ಅಚ್ಚಗನ್ನಡ (ದ್ರಾವಿಡ) ಮೂಲದ ಹೆಸರುಗಳು ; ಇದರ ಅರ್ಥ ಸಹ ಸತ್ಯವಾಕ್ಯ ಎಂದೇ. ಗಂಗರಾಜರ ಬಿರುದುಗಳಲ್ಲಿ ಬರುವ ಸತ್ಯವಾಕ್ಯ ಎಂಬುದಕ್ಕೆ ಸಂವಾದಿಯಾದ ಕನ್ನಡ ಶಬ್ದರೂಪ ಅರುಮೊೞಿ (ಮುಳಿ). ಮರುಳನಿಗೆ (ಬೂತುಗನ ಹಿರಿಯ ಮಗ) ಅರುಮೊೞಿದೇವ ಎಂಬ ಹೆಸರೂ ಇದ್ದಹಾಗೆಯೇ, ಅರುಮುಳಿದೇವನಿಗೂ (ವಾಸವನ ಮಗ) ಮರುಳ ಎಂಬ ಇನ್ನೊಂದು ಹೆಸರೂ ಇದ್ದಿತೆಂಬುದು ಗುತ್ತಲಿನಲ್ಲಿ ದೊರೆತಿರುವ ಈ ಹೊಸ ಶಾಸನದಿಂದ ಸಾಬೀತು ಆಗುತ್ತದೆ.

ಅರುಮುಳಿದೇವನ ಹಿರಿಯ ಮಗಳು ಚಟ್ಟಲದೇವಿಯು, ತನ್ನ ಗಂಡನು ಸತ್ತಮೇಲೆ ಕಂಚಿಯುಸ್ಸು ತೊರೆದು, ಪೊಂಬುಚ್ಚದಲ್ಲಿ ಬಂದು ನೆಲಸಿದಳು. ಅದಕ್ಕೆ ಕಾರಣವೂ ಇತ್ತು. ಚಟ್ಟಲೆಯ ತಂಗಿಯಾದ ಕಂಚಲದೇವಿಯು (ಬೀರಲದೇವಿ)

ನಾಲ್ಕು ಗಂಡು ಮಕ್ಕಳನ್ನು ಹಡೆದು ಮರಣಹೊಂದಿದಳು. ತನ್ನ ತಂಗಿಯ ಚಿಕ್ಕ ಪುಟ್ಟ ಬಾಲಕರನ್ನು ಸಾಕಿ ಬೆಳೆಸುವ ಹೊಣೆಯನ್ನು, ಆ ಮಕ್ಕಳ ಸ್ವಂತ ದೊಡ್ಡಮ್ಮಳಾದ ಚಟ್ಟಲೆಯು ವಹಿಸಿಕೊಂಡಳು. ಆಕೆ ಸಾಕಿ ಬೆಳೆಸಿದ ನಾಲ್ಕು ಮಕ್ಕಳು : ತೈಲ (ಭುಜಬಳ ಸಾಂತರ), ಗೊಗ್ಗಿಗ (ಗೋವಿಂದರದೇವ ನನ್ನಿಶಾಂತರ), ಒಡ್ಡುಗ (ವಿಕ್ರಮ ಶಾಂತರ) ಮತ್ತು ಬಮ್ಮ (ಬ್ರಹ್ಮ). ಈ ನಾಲ್ವರೂ ಪ್ರಸಿದ್ಧ ಸಾಂತರ ಅರಸರೆನಿಸಿದರು.

ಚಟ್ಟಲದೇವಿಯ ತಂದೆ ಅರುಮುಳಿದೇವನೂ, ತಾಯಿ ಗಾವಬ್ಬರಸಿಯೂ, ತಂಗಿ ಕಂಚಲ (ವೀರಲ) ದೇವಿಯೂ ಮತ್ತು ಒಡಹುಟ್ಟಿದ ಒಬ್ಬನೇ ತಮ್ಮ ರಾಜ ವಿದ್ಯಾಧರ (ರಾಜಾದಿತ್ಯ)ನೂ–ಒಬ್ಬರಾದ ಮೇಲೊಬ್ಬರು ಸಾಲಾಗಿ ನಿಧನರಾದರು. ಅದರಿಂದ ಅವರೆಲ್ಲರ ನೆನಪಿಗಾಗಿ, ಪರೋಕ್ಷವಿನಯಾರ್ಥವಾಗಿ ಪೊಂಬುಚ್ಚದಲ್ಲಿ ಚಟ್ಟಲೆಯು ಪ್ರಸಿದ್ಧ ಪಂಚವಸದಿಯನ್ನು ಕಟ್ಟಿಸಿದಳೆಂದು ಶಾಸನ ಸಾರಿದೆ : ಧರ್ಮ್ಮಂ ಪ್ರಾಗೇವಚಿನ್ತ್ಯೇತ್ ಎಂಬ ವಾಕ್ಯಾರ್ಥಮಂ ಭಾವಿಸಿ ಅರುಮುಳಿದೇವಂಗಂ ಗಾವಬ್ಬರಸಿಗಂ ವೀರಲದೇವಿಗಂ ರಾಜಾದಿತ್ಯದೇವಂಗಂ ಪರೋಕ್ಷವಿನಯಮಪ್ಪಾಡಲೆಂದು ಉರ್ವ್ವೀ ತಿಳಕಮೆನಸಿದ ಪಂಚವಸದಿಯಂ (ಮಾಡಿಸಿದಳ್). [EC. VIII (BLR) ನಗರ. 35, 1077, ಹೊಂಬುಜ, ಪು. 362, ಸಾಲು : 62-63]. ಇದಲ್ಲದೆ ಆ ಪಂಚಬಸದಿಯ ಪ್ರತಿಬದ್ಧವಾಗಿ ಆನಂದೂರಲು ಚಟ್ಟಲದೇವಿಯುಂ ಶ್ರೀಮತ್ ತ್ರಿಭುವನಮಲ್ಲ ಶಾಂತರದೇವನುಂ ಬೀರಬ್ಬರಸಿಯರ್ಗ್ಗೆ ಪರೋಕ್ಷವಿನಯುಮಾಗಿ ಬಸದಿಯಂ ಶ್ರೀಮದ್ ದ್ರವಿಳಸಂಘದ - ಅರುಂಗಳಾನ್ವಯದ ವಾದಿಘರಟ್ಟನೆನಿಸಿದ ಶ್ರೀಮದಜಿತಸೇನ ಪಣ್ಡಿತದೇವರ ನಾಮೋಚ್ಚಾರಣದಿಂ ಕೆಸರ್ಕ್ಕಲ್ಲಿಕ್ಕಿಸಿದರ್ [ಅದೇ, ತೀರ್ಥಹ. 192, 1103, ದಾನಶಾಲೆ, ಪು. 687, ಸಾಲು : 34-36].

ಅರುಮೊಳಿದೇವನು ಸಹ ಸನ್ಯಸನಂಗೆಯ್ದು ಮುಡಿಪಿದ್ದನ್ನು ಶಾಸನ ದಾಖಲಿಸಿದೆ [EC. IX(R) ಸಪು 30 (V ಮಂಜಾ 55)ಅತೇದಿ. ಬಾಳ್ಳು. ಪು. 158]. ಅರುಮುಳಿದೇವನು ಮರಣಿಸಿದ ತೇದಿ ಶಾಸನದಲ್ಲಿಲ್ಲ. ಆದರೆ ಸಕಲೇಶಪುರ 21, 29, 32, 33, ಮತ್ತು 55ನೆಯ ಸಂಖ್ಯೆಯ ಹಾಗೂ ಬೇಲೂರು 524ನೆಯ ಶಾಸನಗಳ ಅಂತರ-ಬಾಹ್ಯ ಪ್ರಮಾಣಗಳಿಂದ ನೀತಿಮಹಾರಾಜ ಅರುಮುಳಿದೇವನು ಕ್ರಿ.ಶ. 1024 ರಿಂದ 1035ರ ವರೆಗೆ ಆಳಿದನೆಂದೂ, ಕ್ರಿ.ಶ. 1035ರಲ್ಲಿ ಜೈನಧರ್ಮ ಪ್ರಣೀತ ಪಂಡಿತಮರಣವನ್ನು ಪಡೆದನೆಂದೂ ತಿಳಿಯಬಹುದಾಗಿದೆ.

ಅಣ್ಣನಾದ (ನೀತಿಮಾರ್ಗ–ಪೆರ್ಮಾನಡಿ–ಗೋವಿಂದರದೇವ) ರಕ್ಕಸಗಂಗನು ಕ್ರಿ.ಶ. 999 ರಿಂದ 1024ರ ವರೆಗೂ, ತರುವಾಯ ತಮ್ಮನಾದ (ನೀತಿಮಹಾರಾಜ) ಅರುಮುಳಿದೇವನು ಕ್ರಿ. ಶ. 1024 ರಿಂದ 1035 ರ ವರೆಗೂ ಗಂಗರಸರಾಗಿ

ಮಾಂಡಲಿಕರಾಗಿ ಆಳಿದರು. ಅರುಮುಳಿದೇವನ ಮಗನಾದ ವಿದ್ಯಾಧರನು ಸಹ, ತನ್ನ ದೊಡ್ಡಪ್ಪ ರಕ್ಕಸಗಂಗ ಪೆರ್ಮಾನಡಿಯು ಆಳುತ್ತಿದ್ದ, ಮಂಡ್ಯ ಜಿಲ್ಲೆಯ ಗುತ್ತಲನ್ನೂ ಒಳಗೊಂಡ ಗಂಗರ ಪ್ರದೇಶವನ್ನು 1024 ರಿಂದ (ಯುವರಾಜನಾಗಿ) ಆಳುತ್ತಿದ್ದನು.

4.1. ಎರಡು ಜಿಜ್ಞಾಸೆ

ವಿದ್ಯಾಧರನ ವಿಚಾರವಾಗಿ ದೊರೆತಿರುವ ಮಾಹಿತಿ, ಒಟ್ಟು ಶಾಸನಗಳ ಮೊತ್ತ ಕಡಮೆ. ಇದುವರೆಗೆ ಆತನನ್ನು ಕುರಿತ ಮುಖ್ಯ ಶಾಸನವೆಂದರೆ ಹೊಂಬುಜ ಪೂರ್ವೋಕ್ತ ಶಾಸನವೊಂದೇ ಆಗಿತ್ತು. ಅದರಲ್ಲಿ ವಿದ್ಯಾಧರನ ಹಿರಿಯರ-ಹಿಂದಿನ ಏಳು ತಲೆಮಾರುಗಳ ವಿಸ್ತಾರವಾದ ವಿವರಣೆಯಿದೆ. ಆತನ ತಾಯಿ-ತಂದೆಯರ ಸಮಗ್ರ ಪರಿಚಯವೂ ಅಲ್ಲಿದೆ. ಆದರೂ ವಿದ್ಯಾಧರನ ಜೀವನ ಸಾಧನೆಗಳು ಸರಿಯಾಗಿ ತಿಳಿಯದು. ಆತ ಹುಟ್ಟಿದ್ದು. ಆತನನ್ನು ದೊಡ್ಡಪ್ಪ ದತ್ತು ಪಡೆದದ್ದು, ಆತ ಸತ್ತದ್ದರಿಂದ ದೊಡ್ಡ ಅಕ್ಕಳಾದ ಚಟ್ಟಲೆಯು ಪರೋಕ್ಷ ವಿನಯಕ್ಕಾಗಿ ಪಂಚ ಬಸದಿ ಕಟ್ಟಿಸಿದ್ದು ಗೊತ್ತಿತ್ತು. ಆದರೆ ವಿದ್ಯಾಧರನು ಎಲ್ಲಿ ಮತ್ತು ಹೇಗೆ ಸತ್ತನೆಂಬ ಆತನ ಬದುಕಿನ ಕಡೆಯ ದಿನಗಳ ಚಿತ್ರಣ ಅಜ್ಞಾತವಾಗಿತ್ತು. ಕತ್ತಲೆಯಲ್ಲಿದ್ದ ವಿದ್ಯಾಧರನ ಬಾಳಿನ ಉತ್ತರಾರ್ಧವನ್ನು ಗುತ್ತಲಿನ ಈ ಹೊಸ ಶಾಸನ ಒಮ್ಮೆಲೇ ಬೆಳಕಿಗೆ ತಂದಂತಾಗಿದೆ.

ಈಗ ಉದ್ಭವಿಸುವ ಪ್ರಶ್ನೆಯೆಂದರೆ ತಂದೆಯಾದ ಅರುಮುಳಿದೇವನು ಮೊದಲು ಸನ್ಯಸನದಿಂದ ಮುಡಿಪಿದನೊ, ಇಲ್ಲವೇ ಮಗನಾದ ವಿದ್ಯಾಧರನು ಮೊದಲು ಮುಡಿಪಿದನೊ ಎಂಬುದು. ತಂದೆಯೇ ಮೊದಲು ಸಾಯುವುದು ಲೋಕ ರೂಢಿ. ಅದರಲ್ಲಿ ಅತಿಶಯವೇನಿಲ್ಲ, ಕ್ರಮಲೋಪವೂ ಇಲ್ಲ. ತಂದೆ ಅರುಮುಳಿದೇವನು, ಮಗ ಇನ್ನೂ ಬದುಕಿರುವಾಗ, ನಿಧನನಾಗಿದ್ದರೆ ಆದರಿಂದ ಮಗನಿಗೆ ದುಃಖವಾದರೂ ಸಲ್ಲೇಖನ ವ್ರತ ಸ್ವೀಕರಿಸುವುದು ಸಹಜವಲ್ಲ. ಆದರೆ ಅದೇ ತಂದೆ ಇನ್ನೂ ಬದುಕಿರುವಾಗ. ಬಹುಕಾಲ ಬಾಳಬೇಕಾದ ಮಗ ಮರಣಿಸಿದರೆ ಆ ನೋವು ತಂದೆಗೆ ದುರ್ಭರ; ಪುತ್ರ ಶೋಕಂ ನಿರಂತರಂ ಎಂಬ ಸೂಕ್ತಿಯಿದೆ. ಹೀಗಾಗಿ ಮಗ ವಿದ್ಯಾಧರನು ಸುಮಾರು ಕ್ರಿ.ಶ. 1034–35 ರಲ್ಲಿ ಗುತ್ತಲಲ್ಲಿ ಸನ್ಯಸನ ವಿಧಾನದಿಂದ ಮುಡಿಪಿರಬೇಕೆಂದೂ, ಆ ನೋವಿನ ಆಧಿಕ್ಯದಿಂದ ತಡೆಯಲಾಗದೆ ತಂದೆ ನೀತಿ ಮಹಾರಾಜ ಅರುಮುಳಿದೇವನು ಕ್ರಿ. ಶ. 1035 ರಲ್ಲಿ ಸನ್ಯಸನದಿಂದ ಮುಡಿಪಿದ ನೆಂದೂ ತೀರ್ಮಾನಿಸಬಹುದು.

ಗುತ್ತಲಿನಲ್ಲೇ ವಿದ್ಯಾಧರನು ಮುಡಿಪಿದ್ದಕ್ಕೆ ಪ್ರಬಲ ಕಾರಣಗಳಿದ್ದರೂ ಅದರ ಸ್ವರೂಪ ತಿಳಿಯದಾಗಿದೆ. ಆಗಲೇ ಹೇಳಿರುವಂತೆ ಗುತ್ತಲೂ ಸೇರಿಕೊಂಡು ಮಂಡ್ಯ

ಜಿಲ್ಲೆಯ ಈ ಮದ್ದೂರು–ಮಳವಳ್ಳಿ ಪರಿಸರ ಗಂಗವಾಡಿ ತೊಂಬತ್ತಾರು ಸಾಸಿರ ಪ್ರದೇಶವಾಗಿತ್ತು. ತಿಪ್ಪೂರು ತೀರ್ಥವಂತೂ ವಿಖ್ಯಾತವಾಗಿತ್ತು. ರಾಷ್ಟ್ರಕೂಟ ಕೃಷ್ಣನು III ಚೋಳರ ಮೇಲೆ ವಿಜಯಿಯಾಗಿ, ಬೂತುಗನು ಚೋಳರ ರಾಜಾದಿತ್ಯನ ಆನೆಯ ಮೇಲೇರಿ ಅದರ ಅಂಬಾರಿಯನ್ನೇ ರಣರಂಗವಾಗಿಸಿ (ಬಿಸುಗೆಯ ಕಳನಾಗಿ) ರಾಜಾದಿತ್ಯನನ್ನು ಕೊಂದದ್ದೂ, ಬೂತಗನ ಬಲಗೈ ಬಂಟ ಸಗರಮಣಲೆರನು ಚೋಳರಾಜಾದಿತ್ಯನ ಆನೆಯನ್ನು ಕೊಂದು ಕಾಳಿಯೆಂಬ ಶ್ರೇಷ್ಠ ಹೆಣ್ಣುನಾಯಿಯನ್ನು ಪಡೆದದ್ದೂ-ಇವೆಲ್ಲ ನಡೆದ ಆತುಕೂರು ಸಹ ಈ ಗುತ್ತಲಿಗೆ ಹತ್ತಿರದ ಊರು.

ಗುತ್ತಲಲ್ಲಿ ಜಿನಾಲಯಗಳಿದ್ದುವು. ಗುತ್ತಲಿನ ಒಂದು ಶಾಸನದಲ್ಲಿ ಎರಡು ಕಡೆ 'ಬಸದಿಹಳ್ಳಿ'ಯ ಪ್ರಸ್ತಾಪವೂ ಬಂದಿದೆ [EC· VII (R) ಮಂ 60 (111 ಮಂ 100) 1316. ಗುತ್ತಲು. ಪು. 239–40, ಸಾಲುಃ 9, 18] ಗುತ್ತಲಲ್ಲಿದ್ದು ಹಾಳಾದ ಬಸದಿಯ ವಿಚಾರ ಊರಿನ ಹಿರಿಯರು ಹೇಳುವ ಮಾಹಿತಿಯಿಂದ ಸಾಬೀತಾಗುತ್ತದೆ. ದೊರೆತಿರುವ ನಿಸದಿ ಶಾಸನವೇ ಅಲ್ಲಿದ್ದ ಬಸದಿಗೆ ಪ್ರತ್ಯಕ್ಷ ಸಾಕ್ಷಿ. ಅರ್ಕೇಶ್ವರ ಗುಡಿಯ ಪಕ್ಕದಲ್ಲಿ ಇರುವ ಕುಂಟೆಯೊಳಗೆ ಸೇರಿ ಹೋಗಿರುವ ತೀರ್ಥಂಕರ ವಿಗ್ರಹದ ವಿಚಾರವಾಗಿ ಊರಿನವರು ತಿಳಿಸಿದ್ದಾರೆ. ಈ ದೇವಾಲಯದ ನೆರೆ ಹೊರೆಯ ತಮ್ಮ ಹೊಲಗದ್ದೆಗಳನ್ನು ಮಾರಿಕೊಂಡು ಇಲ್ಲಿದ್ದ ಜೈನ ಕುಟುಂಬಗಳವರು ಗುಳೆ ಹೋದದನ್ನೂ ಗುತ್ತಲು ಗ್ರಾಮದ ವೃದ್ಧರು ವಿವರಿಸಿದ್ದಾರೆ. ಈ ಎಲ್ಲ ಅಂಶಗಳು, ಸಾಕ್ಷಾಧಾರಗಳು ಗುತ್ತಲಲ್ಲಿ, ನಿರ್ದಿಷ್ಟವಾಗಿ ಈಗಿರುವ ಮತ್ತು ನಿಷದಿಕಲ್ಲು ಸಿಕ್ಕಿರುವ ಅರ್ಕೇಶ್ವರ ನೇವಾಲಯದ ಹತ್ತಿರ ಜಿನಾಲಯವಿದ್ದು ಹಾಳಾಗಿರುವುದನ್ನು ದೃಢ ಪಡಿಸುತ್ತವೆ. ಪ್ರಾಯಃ ಅರ್ಕೇಶ್ವರ ಗುಡಿಯೂ ಮತಾಂತರಗೊಂಡ ಬಸದಿಯಾಗಿ ದ್ದಿರಬಹುದು.

5.1. ಮಹತ್ವದ ಅಂಶಗಳು

ಈಗ ಹೊಸದಾಗಿ ದೊರೆತಿರುವ ಗುತ್ತಲಿನ ಪುಟ್ಟ ಶಿಲಾಶಾಸನವು ಐತಿಹಾಸಿಕ ಮಹತ್ವದ್ದಾಗಿದೆ. ಈ ಶಾಸನದ ಒಕ್ಕಣೆಯಿಂದ ಕೆಳಕಂಡ ತೀರ್ಮಾನಗಳಿಗೆ ತಲಪಬಹುದು :

i) ಬೂತುಗನ ಮೊಮ್ಮಗನೂ, ವಾಸವನ ಮಗನೂ, ಹೊಂಬುಜ ಶಾಸನೋಕ್ತನೂ [EC. VIII (1902) ನಗರ 35. 1077] ಆದ ಸತ್ಯವಾಕ್ಯ ಗೋವಿಂದರದೇವ ರಕ್ಕಸಗಂಗನೂ, ಮಂಡ್ಯ 54ನೆಯ ಶಾಸನೋಕ್ತ [EC. VII (R) ಮಂ 54 (XIV ಮಂ 126). 1024. ಹಳೇ ಬೂದನೂರು. ಪು. 236, ಸಾಲು : 1–7] ಸತ್ಯವಾಕ್ಯ ಗೋವಿಂದರ ರಕ್ಕಸಗಂಗ ಪೆರ್ಮಾನಡಿಯೂ ಅಭಿನ್ನರು.

ii) ಈ ಸತ್ಯವಾಕ್ಯಗೋವಿಂದರ ರಕ್ಕಸಗಂಗ ಪೆರ್ಮಾನಡಿಯ ದತ್ತುಪುತ್ರನೇ ವಿದ್ಯಾಧರ. ವಿದ್ಯಾಧರನು ಸತ್ಯವಾಕ್ಯಗೋವಿಂದರ ರಕ್ಕಸಗಂಗನ ತಮ್ಮನಾದ ಅರಮುಳಿದೇವನ ಮಗ. ವಿದ್ಯಾಧರನಿಗೆ ಲೋಕವಿದ್ಯಾಧರ (ಗುತ್ತಲಿನ ಹೊಸ ಶಾಸನ ಪ್ರಯೋಗ), ರಾಜ ವಿದ್ಯಾಧರ (ಹುಂಚ ಶಾಸನ ಪ್ರಯೋಗ) ಮತ್ತು ರಾಜಾದಿತ್ಯ (ಹೊಂಬುಜ ಶಾಸನ ಪ್ರಯೋಗ) ಎಂಬ ಮೂರು ಹೆಸರುಗಳಿವೆ.

iii) ವಿದ್ಯಾಧರನನ್ನು 'ದಿನಕರಂ ಪುಟ್ಟಿದ್ದುರ್ವವೆಂಬಿನಂ' ಹುಟ್ಟಿದನೆಂದು ಹೊಂಬುಜ ಶಾಸನದಲ್ಲಿ ವರ್ಣಿಸಿದೆ, 'ನಿಜಾನ್ವಯ ದಿನಕರ' ನೆಂದು ಗುತ್ತಲಿನ ಹೊಸ ಶಾಸನ ಬಣ್ಣಿಸಿದೆ.

iv) ಗಂಗರಿಗೆ ವಿದ್ಯಾಧರ ಎಂಬುದು ಪ್ರಿಯವಾದ ಹೆಸರು. ಇಮ್ಮಡಿ ಮಾರ ಸಿಂಹನಿಗೆ ಇದ್ದ ಹಲವು ಬಿರುದುಗಳಲ್ಲಿ 'ಗಂಗ ವಿದ್ಯಾಧರ' ಎಂಬುದೂ ಒಂದು [EC. II (R) 64 (59) ಸು. 975. ಪು. 22. ಸಾಲು : 103].

v) ಮಂಡ್ಯ ಜಿಲ್ಲೆಯಲ್ಲಿ ಗಂಗರು ಹತ್ತನೆಯ ಶತಮಾನದ ಅಂತ್ಯದವರೆಗೆ ಆಳಿದರೆಂಬ ತಿಳಿವಳಿಕೆಯಿತ್ತು. ಈಗ ದೊರೆತಿರುವ ಗುತ್ತಲು ಶಾಸನದಿಂದಾಗಿ ಮಂಡ್ಯ ಜಿಲ್ಲೆಯಲ್ಲಿ ಗಂಗರ ಆಳಿಕೆಯು ಹನ್ನೊಂದನೆಯ ಶತಮಾನದ ಮಧ್ಯಭಾಗದವರೆಗೂ ಮುಂದುವರಿದಿತ್ತೆಂದು ಖಾತ್ರಿಯಾಗುತ್ತದೆ.

vi) ಗುತ್ತಲು ಒಂದು ಜೈನ ಕೇಂದ್ರವಾಗಿತ್ತು. ಇಲ್ಲಿ ಒಂದೆರಡು ಬಸದಿಗಳು ಇದ್ದುದಕ್ಕೆ ಸಾಕ್ಷ್ಯಾಧಾರಗಳಿವೆ. ಹಿಂದೆ ಇನ್ನೂ ಹೆಚ್ಚು ಬಸದಿಗಳಿದ್ದಿರ ಬಹುದು.

vii) ಗುತ್ತಲು ಗ್ರಾಮವು ಹಿಂದೆ ಗಂಗರ ಅಂತಿಮಘಟ್ಟದ ಆಳಿಕೆಯ ನೆಲೆವೀಡು ಗಳಲ್ಲಿ ಒಂದಾಗಿದ್ದಿರಬಹುದು.

viii) ಗುತ್ತಲಿನ ಈಗಿನ ಅರ್ಕೇಶ್ವರ ದೇವಾಲಯ ಮತ್ತು ಅದರ ಹತ್ತಿರವಿರುವ ಗುತ್ತಲಮ್ಮನ ಗುಡಿಗಳು ಇರುವ ಸ್ಥಳಗಳಲ್ಲಿ ಹಿಂದೆ ಜಿನಾಲಯಗಳಿದ್ದುವು.

ix) ಗಂಗರ ರಾಜಕುಮಾರನಾದ (ಲೋಕ) ವಿದ್ಯಾಧರ (—ರಾಜಾದಿತ್ಯ)ನು ಗುತ್ತಲಿನಲ್ಲಿದ್ದ ಬಸದಿಯೊಂದರಲ್ಲಿ ಸು. 1034–35 ರಲ್ಲಿ ಸಲ್ಲೇಖನ ವ್ರತ ಸ್ವೀಕರಿಸಿ ಮುಡಿಪಿದನು.

x) ವಿದ್ಯಾಧರನು ಇಲ್ಲಿಯೇ ಸನ್ಯಸನ ವಿಧಿಯಿಂದ ಮುಡಿಪಿರಬೇಕಾದರೆ ಇಲ್ಲಿನ ಬಸದಿಗಳಲ್ಲಿ ಜೈನಾಚಾರ್ಯರೂ ಇದ್ದರು; ಅವರ ವಿವರಗಳು ಗೊತ್ತಿಲ್ಲ.

xi) ಗುತ್ತಲಿನಲ್ಲಿ ಅಥವಾ ಅದರ ಹತ್ತಿರದಲ್ಲಿ ಇದ್ದ ಬಸದಿಹಳ್ಳಿ ಬಗ್ಗೆ ಇಲ್ಲಿನ ಶಾಸನ [ಅದೇ, ವುಂ. 60. 1316] ಉಲ್ಲೇಖಿಸಿದ್ದರೂ ಆ ಬಸದಿಗ್ರಾಮ ಯಾವುದೆಂಬುದು ಸರಿಯಾಗಿ ತಿಳಿಯುತ್ತಿಲ್ಲ.

xii) ಬೂತುಗನ ಹಿರಿಯ ಮಗನಾದ ಮರುಳನಿಗೆ ಅರುಮೊಟಿದೇವ ಎಂಬ ಇನ್ನೊಂದು ಹೆಸರು ಇದ್ದ ರೀತಿಯಲ್ಲಿಯೇ, ಬೂತುಗನ ಮೊಮ್ಮಗನಾದ ಅರುಮುಳಿದೇವನಿಗೂ ಮರುಳ ಎಂಬ ಇನ್ನೊಂದು ಹೆಸರೂ ಇದ್ದಿತೆಂಬುದಾಗಿ ತಿಳಿದುಬರುತ್ತದೆ.

xiii) ಗುತ್ತಲಿನ ಈ ಹೊಸ ಶಾಸನದ ಆರಂಭದಲ್ಲಿ ಇರುವುದು ಅಪರೂಪದ ಸಂಸ್ಕೃತ ಶ್ಲೋಕ. ಜೈನಶಾಸನಗಳ ಪ್ರಾರಂಭದಲ್ಲಿ ಸಾಮಾನ್ಯವಾಗಿ 'ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ...' ಎಂಬ ಶ್ಲೋಕವಿರುತ್ತದೆ. ಇದರ ಜತೆಗೆ ಅಥವಾ ಇದರ ಬದಲಿಗೆ ಬೇರೆ ಜಿನಸ್ತುತಿ ಶ್ಲೋಕಗಳೂ ಜೈನ ಶಾಸನಗಳಲ್ಲಿವೆ. ಗುತ್ತಲಿನ ಶಾಸನಾರಂಭದ ಶ್ಲೋಕ ಅಂತಹ ವಿರಳ ರಚನೆ. ಇದುವರೆಗೆ ಈ ಶ್ಲೋಕ ಮೂರು ಶಾಸನಗಳಲ್ಲಿ ಮಾತ್ರ ಪ್ರಯೋಗವಾಗಿದೆ: S11. ix-i. 117. 1055 ಕೋಗಳಿ (ಬಳ್ಳಾರಿ ಜಿ/ಹಡಗಲಿ ತಾ) ಪು. 92 ಮತ್ತು ಅದೇ, xi-i. 111. 1071, ಸೊರಟೂರು (ಧಾ ಜಿ/ಗದಗ ತಾ) ಪು. 108. ನಗರ 42. ಹೊಂಬುಜ EC. VIII (BLR).

xiv) ಗುತ್ತಲಿನ ಹೊಸ ಶಾಸನ ಗಂಗ ಮನೆತನಕ್ಕೆ ಮಾತ್ರ ಅಲ್ಲದೆ ಪೊಂಬುಚ್ಚ ಪುರವರಾಧೀಶರಾದ ಸಾಂತರರ ಮನೆತನಕ್ಕೂ ಬೆಳಕು ಚೆಲ್ಲುವ ಮಹತ್ವದ ಶಾಸನವಾಗಿದೆ.

xv) (ಲೋಕ) ವಿದ್ಯಾಧರ (ರಾಜಾದಿತ್ಯ) ನ ರಾಜಾವಳಿಯ ರೇಖಾಚಿತ್ರವನ್ನು ಈಗ ನಿರ್ಧರಿಸುವುದಕ್ಕೆ ಆಧಾರಗಳು ಉಪಲಬ್ಧವಿವೆ.

ವಿದ್ಯಾಧರನ ವಂಶವೃಕ್ಷ

*ಗಂಗವಂಶದ ಬೂತುಗ ॥

- ಮರುಳ ॥ (–ಅರುಮೊಟಿದೇವ- –ಕಲಿಯುಗ ಭೀಮ- ನೀತಿ ಮಾರ್ಗ- ಗಂಗಚಕ್ರಾಯುಧ- ಗಂಗಮಾರ್ತಂಡ- ಪುಣುಸೆಯಗಂಗ)
- ಕುಂದಣ ಸೋಮಿದೇವಿ
  ಪತಿ. ರಾಚಾದಿತ್ಯ
- ಮಾರಸಿಂಹ ॥
- ರಾಜಮಲ್ಲ
- ನೀತಿಮಾರ್ಗ
  ಗೋವಿಂದರ ದೇವ ।
- ವಾಸವ
  (ಹೆಂ. ಕಂಚಲದೇವಿ ।)
  - ಗೋವಿಂದರ ದೇವ ॥ (ಸತ್ಯವಾಕ್ಯ–ರಕ್ಕಸಗಂಗ- ಪೆರ್ಮಾನಡಿ-ಗಂಗ ನಾರಾಯಣ ಗಂಗಚೂಡಾಮಣಿ, ವೀರಮಾರ್ತಣ್ಡ ದೇವ)
  - ಅರುಮುಳಿ ದೇವ ॥ (ಕೊಮರಂಕ ಭೀಮ- ನೀತಿಜ್ಞ- ನೀತಿ ಮಾರ್ಗ- ನೀತಿ ಮಹಾರಾಜ)
    ಹೆಂ. ಗಾವಬ್ಬರಸಿ
    - ಚಟ್ಟಲ ದೇವಿ
      ಪತಿ. ಕಾಡುವೆಟ್ಟಿ
    - ಕಂಚಲ ದೇವಿ
      (ಬೀರಲ ದೇವಿ)
      ಪತಿ, ತ್ರೈಲೋಕ್ಯಮಲ್ಲ- –ವೀರ ಶಾಂತರ ದೇವ
      (ಬೀರುಗ, ಬೀರಲದೇವ)
      - ತೈಲ
        (ಭುಜಬಲ ಸಾಂತರ)
      - ಗೋವಿಂದರ ದೇವ ।।।
        (ಗೊಗ್ಗಿಗನಂನಿಶಾಂತರ)
      - ಒಡ್ಡುಗ
        (ವಿಕ್ರಮ ಶಾಂತರ)
      - ಬಮ್ಮ
        (ಬ್ರಹ್ಮ)
    - ರಾಜ ವಿದ್ಯಾಧರ
      (ಲೋಕ ವಿದ್ಯಾಧರ- ರಾಜಾದಿತ್ಯ)

ವ್ಯಾಸನಿಗೂ ತೂಕಡಿಕೆ ?

ಡಾ. ಎಸ್. ಪಿ. ಪದ್ಮ ಪ್ರಸಾದ್

ಒಂದು ದೊಡ್ಡ ಕೃತಿಯನ್ನು ರಚಿಸುವಾಗ ಉಂಟಾಗುವ ಅಪಾರ ಶ್ರಮ ದೈತ್ಯ ಪ್ರತಿಭೆಗೂ ಆಗಾಗ ತುಸು ಬಳಲಿಕೆಯನ್ನುಂಟುಮಾಡಿ ಆ ಭಾರದಿಂದ ತುಸುಕಾಲ ಮಾನಸಿಕ ವಿಶ್ರಾಂತಿಯನ್ನು ಬಯಸುವಂತೆ ಮಾಡುತ್ತದೆ. ಮನಸ್ಸು ಇಂಥ ಸಡಲಿದ ಭಾವದಲ್ಲಿದ್ದಾಗ ಪ್ರತಿಭೆ ತನ್ನ ಎಚ್ಚರವನ್ನು ಕಳೆದುಕೊಂಡು ಕೊಂಚ ತೂಕಡಿಸುವು ದೆಂದು ಕಾಣುತ್ತದೆ. ಇದಕ್ಕೆ ಬಹುಶಃ ಜಗತ್ತಿನ ಎಲ್ಲ ಶ್ರೇಷ್ಠ ಕೃತಿಗಳಿಂದಲೂ ಉದಾಹರಣೆಗಳನ್ನು ಎತ್ತಿಕೊಡಬಹುದೇನೋ ! ಓದುಗರು ಇಂಥ ಪ್ರಸಂಗಗಳನ್ನು ಕೊಂಚ ಎಚ್ಚರದಿಂದ ಗಮನಿಸಿ ಮುಂದೆ ಹೋಗಬೇಕಾಗುತ್ತದೆ. ಇಲ್ಲದಿದ್ದರೆ ಕೃತಿಯ ಬಗ್ಗೆ, ಅಲ್ಲಿನ ಪಾತ್ರಗಳ ಬಗ್ಗೆ ಅತ್ಯುತ್ಸಾಹದ ಪ್ರತಿಕ್ರಿಯೆ ಹೊಮ್ಮುವ ಅಪಾಯವಿರುತ್ತದೆ.

ನಮ್ಮ ಹೆಮ್ಮೆಯ ಪ್ರಾಚೀನ ಕವಿಗಳಾದ ವ್ಯಾಸ, ವಾಲ್ಮೀಕಿ ಇವರ ಬಗೆಗೂ ಈ ಮಾತು ನಿಜ. ವಾಲ್ಮೀಕಿಯ ಇಂಥ ಪ್ರಸಂಗಗಳನ್ನು ಕನ್ನಡದ ಹಿರಿಯ ಲೇಖಕರೊಬ್ಬರು ಈಗಾಗಲೇ ಪತ್ತೆ ಹಚ್ಚಿದ್ದಾರೆ. (ಗೌರೀಶ ಕಾಯಿಕಿಣಿ–'ವಾಲ್ಮೀಕಿ ತೂಕಡಿಸಿದಾಗ', ಐ.ಬಿ.ಎಚ್. ಪ್ರಕಾಶನ) ಈ ತೂಕಡಿಕೆಗೆ ವ್ಯಾಸನೂ ಹೊರತಲ್ಲ. ಪಾತ್ರ ಚಿತ್ರಣದಲ್ಲಿ, ಕತೆಯನ್ನು ಬೆಳೆಸುವಲ್ಲಿ ಈ ಮಹರ್ಷಿಯೂ ಕೆಲವೆಡೆ ಸ್ವಲ್ಪ ಎಚ್ಚರ ತಪ್ಪುವುದು ಕಂಡುಬರುತ್ತದೆ. ಅಂಥ ಒಂದೆರಡು ಸನ್ನಿವೇಶಗಳನ್ನು ನಾವಿಲ್ಲಿ ಗಮನಿಸಬಹುದು.

1. ಏಕಲವ್ಯನ ಪ್ರಸಂಗ

ಅರ್ಜುನನ್ನು ಮೀರಿ ಏಕಲವ್ಯ ಬೆಳೆಯಬಾರದೆಂದೂ, ಹಾಗೆ ನೋಡಿಕೊಳ್ಳುವ ಮೂಲಕ ಅರ್ಜುನನೇ ಪ್ರಪಂಚದ ಏಕಮಾತ್ರ ಅತಿಶ್ರೇಷ್ಠ ಬಿಲ್ಗಾರನಾಗುವಂತೆ ಮಾಡುತ್ತೇನೆಂದಿದ್ದ ಮಾತನ್ನು ಉಳಿಸಿಕೊಳ್ಳಬೇಕೆಂದು ದ್ರೋಣ ಏಕಲವ್ಯನಿಂದ ಬೆರಳಿನ ಗುರುದಕ್ಷಿಣೆ ಕೇಳಿದ ಪ್ರಸಂಗ ವ್ಯಾಸ ಭಾರತದಲ್ಲೇ ಇದೆ. ಆದರೆ ಸ್ವಾರಸ್ಯ ವೆಂದರೆ ದ್ರೋಣ ಅರ್ಜುನನಿಗೆ ಆ ರೀತಿ ವಚನ ಕೊಟ್ಟೇ ಇರಲಿಲ್ಲ ! ಬಿಲ್ವಿದ್ಯೆ ಕಲಿಸುವ ಸಂದರ್ಭದಲ್ಲಿ ಅರ್ಜುನನ ಏಕಾಗ್ರತೆಯನ್ನು ಗಮನಿಸಿದ ದ್ರೋಣ ಅವನಿಗೆ ಹೇಳಿದ್ದೆಲ್ಲಾ—"ಮುಂದೆ ನಿನ್ನನ್ನು ಬಿಲ್ವಿದ್ಯೆಯಲ್ಲಿ ಅದ್ವಿತೀಯನನ್ನಾಗಿ ಮಾಡಲು

ಪ್ರಯುತ್ನಿಸುತ್ತೇನೆ" ಎಂದು. ಈ 'ಪ್ರಯತಿಷ್ಯತಿ' ಎಂಬ ಮಾತನ್ನು ವ್ಯಾಸನೇ ದ್ರೋಣನ ಬಾಯಿಂದ ಹೊರಡಿಸಿದ್ದಾನೆ. ಮುಂದೆ ಏಕಲವ್ಯನ ಬಗ್ಗೆ ಅರ್ಜುನ ಕೇಳಿದಾಗ ದ್ರೋಣ ಈ ತನ್ನ ಮಾತನ್ನು ಅವನಿಗೆ ನೆನಪು ಮಾಡಿಕೊಡಬೇಕಾದ್ದು ಸಹಜವಾಗಿತ್ತು. ಆದರೆ ಹಾಗಾಗದೆ, ದ್ರೋಣ 'ಅರ್ಜುನನ್ನು ಶ್ರೇಷ್ಠ ಬಿಲ್ಗಾರನಾಗಿ ಮಾಡುತ್ತೇನೆ ಎಂದೇ ವಚನ ಕೊಟ್ಟಿದ್ದೆ' ಎಂದು ಸ್ವಬಂಧನ ಹಾಕಿಕೊಳ್ಳುತ್ತಾನೆ. (ಆದಿ ಪರ್ವದ ಅಧ್ಯಾಯ 100–150ನ್ನು ಗಮನಿಸಿ). ಈ ರೀತಿ ದ್ರೋಣ ತನ್ನ ಹಿಂದಿನ ಮಾತನ್ನು ಮರೆತು, ಬೇರೆ ರೀತಿ ಯೋಚಿಸಿದನೆಂಬಂತೆ ಚಿತ್ರಿಸಿರುವುದು ದ್ರೋಣನ ವ್ಯಕ್ತಿತ್ವಕ್ಕೆ ಊನ ತಂದಿದೆ. ಏಕಲವ್ಯನ ಹೆಬ್ಬೆರಳಿನ ಪ್ರಸಂಗ ಮಹಾಭಾರತದ ಕತೆಗೇನೂ ಪೋಷಕವಾಗಿಲ್ಲ. (ಆ ರೀತಿ ಮುಖ್ಯ ಕತೆಗೆ ಪೋಷಕವಲ್ಲದ ಭಾಗಗಳು ಮಹಾಭಾರತದಲ್ಲಿ ಸಾಕಷ್ಟಿವೆ. ಆ ಮಾತು ಬೇರೆ.) ಆದ್ದರಿಂದ ದ್ರೋಣನ ವ್ಯಕ್ತಿತ್ವಕ್ಕೆ ಊನ ತರುವ ಬದಲು ಅವನು ಅರ್ಜುನನಿಗೆ ತನ್ನ ಮಾತನ್ನು ಯಥಾವತ್ತಾಗಿ ನೆನಪು ಮಾಡಿಕೊಟ್ಟು ಅವನ ಸಂಕುಚಿತತೆಯನ್ನು ದೂರ ಮಾಡಿದ್ದರೆ. ಅರ್ಜುನನ ಪಾತ್ರವೂ ಬೆಳೆಯುತ್ತಿತ್ತು. ಕವಿ ತಾನು ಹಿಂದೆ ದ್ರೋಣನ ಬಾಯಿಂದ ಹೇಳಿಸಿದ್ದ ಮಾತನ್ನು ಸ್ವಲ್ಪ ಮರೆತಿದ್ದರಿಂದ ಆ ಅವಕಾಶ ತಪ್ಪಿ ಹೋಗಿದೆ. ಪಾತ್ರ ಚಿತ್ರಣದಲ್ಲೂ ದೋಷ ಉಂಟಾಗಿದೆ.

2, ಅರ್ಜುನ ತೀರ್ಥಯಾತ್ರಾ ಪ್ರಸಂಗ

ದ್ರೌಪದಿ—ಧರ್ಮರಾಜರು ಏಕಾಂತದಲ್ಲಿರುವುದನ್ನು ನೋಡಿದ ತಪ್ಪಿಗೆ ಅರ್ಜುನ ಹನ್ನೆರಡು ವರ್ಷ ತೀರ್ಥಯಾತ್ರೆಗೆ ಹೋಗಿ ಬರುತ್ತಾನೆ. ಈ ಇಡೀ ಪ್ರಸಂಗದ ಚಿತ್ರಣದಲ್ಲಿ ಕವಿ ಸಾಕಷ್ಟು ಎಚ್ಚರಾಗಿಲ್ಲದಿರುವುದು ಕಂಡುಬರುತ್ತದೆ. ಇದರಿಂದಾಗಿ ಹಲವು ಅಸಂಗತತೆಗಳು ಉಂಟಾಗಿವೆ.

> ದ್ರೌಪದಿಯ ಬಗ್ಗೆ ಪಾಂಡವರು ಹಾಕಿಕೊಂಡಿದ್ದ ನಿಯಮ ಇದು—
> ದ್ರೌಪದ್ಯಾ ನಃ ಸಹಾಸೀನಾನನ್ಯೋಽನ್ಯಂ ಯೋಽಭಿದರ್ಶಯೇತ್ ।
> ಸ ನೋ ದ್ವಾದಶವರ್ಷಾಣಿ ಬ್ರಹ್ಮಚಾರಿ ವನೇ ವಸೇತ್ ॥
> (ಆದಿಪರ್ವ, ಅಧ್ಯಾಯ 208)

"ನಮ್ಮೈವರಲ್ಲಿ ಯಾರಾದರೊಬ್ಬರು ದ್ರೌಪದಿಯ ಜೊತೆಯುಲ್ಲಿ ಏಕಾಂತದಲ್ಲಿರುವಾಗ ಮತ್ತೊಬ್ಬರು ನೋಡಿದ್ದೇ ಆದರೆ, ನೋಡಿದವರು ಹನ್ನೆರಡು ವರ್ಷ ಬ್ರಹ್ಮಚರ್ಯವನ್ನು ಪಾಲಿಸುತ್ತಾ ಕಾಡಿನಲ್ಲಿ ವಾಸವಾಗಿರಬೇಕು."

ಈ ನಿಯಮದ ಬಳಿಕ ಒಮ್ಮೆ ಅರ್ಜುನ ಅನಿವಾರ್ಯವಾಗಿ ಧರ್ಮರಾಜ—ದ್ರೌಪದಿಯರು ಮಾತನಾಡುತ್ತಾ ಕೂತಿದ್ದಾಗ ಆ ಕೋಣೆಗೆ ಹೋಗಬೇಕಾಗುತ್ತದೆ. ಯಾಕೆಂದರೆ 'ಅದು ಶಸ್ತ್ರಾಸ್ತ್ರಗಳನ್ನಿಡುವ ಕೋಣೆಯೂ ಆಗಿತ್ತು' ಎನ್ನುತ್ತಾನೆ ವ್ಯಾಸ.

(ಇದು ಮತ್ತೊಂದು ತೂಕಡಿಕೆ. ಶಸ್ತ್ರಾಸ್ತ್ರಗಳನ್ನಿಡುವ ಕೋಣೆ ಏಕಾಂತದ
ಕೋಣೆಯೂ ಆಗುತ್ತದೆಯೇ ?) ಆ ತಪ್ಪಿಗಾಗಿ ಅವನು ಯಾರು ಸಮಾಧಾನಿಸಿದರೂ
ಕೇಳದೆ ವನವಾಸಕ್ಕೆ ಹೋಗುತ್ತಾನೆ.

ಅರ್ಜುನ ಆ ಕೋಣೆಗೆ ಹೋಗಬೇಕಾಗಿ ಬಂದದ್ದು—ಗೋವುಗಳ ಅಪಹರಣ
ವಾಗುತ್ತಿದೆ ಎಂಬ ಸುದ್ದಿ ಕೇಳಿ. ಅದನ್ನು ತಡೆಯಲು ಹೊರಡಲು ಶಸ್ತ್ರಾಸ್ತ್ರಗಳನ್ನು
ತೆಗೆದುಕೊಳ್ಳ ಬೇಕಾಗಿದ್ದರಿಂದ, ಆ ಸಂದರ್ಭದಲ್ಲಿ ಧರ್ಮರಾಜ ದ್ರೌಪದಿಯರು ಅಲ್ಲಿ
ಲೋಕಾಭಿರಾಮವಾಗಿ ಮಾತನಾಡುತ್ತಿದ್ದರೆಂಬ ರೀತಿಯ ಚಿತ್ರಣ ವ್ಯಾಸ
ಕೊಡುತ್ತಾನೆಯೇ ವಿನಃ, ಏಕಾಂತದ ಪ್ರಣಯ ಸಲ್ಲಾಪದಲ್ಲಿದ್ದರೆಂಬ ಸೂಚನೆ
ಎಳ್ಳಷ್ಟೂ ಇಲ್ಲ. ಆದ್ದರಿಂದ ನಿಯಮೋಲ್ಲಂಘನೆ ಆಗಿರಲಿಲ್ಲ. ಸ್ವತಃ ಧರ್ಮರಾಜನೇ
ಅವನನ್ನು ತಡೆದು ಹೇಳುತ್ತಾನೆ—"ಧರ್ಮದ ವಿಷಯದಲ್ಲಿ ನನ್ನ ಮಾತನ್ನು
ನಂಬಬಹುದಾದರೆ............." ಅರ್ಜುನನಿಂದ ನಿಯಮ ಭಂಗವಾಗಿಲ್ಲವೆಂದು,
ಆತ ವನವಾಸಕ್ಕೆ ಹೋಗಬೇಕಿಲ್ಲವೆಂದು (ಈ ಧರ್ಮರಾಜನ ಧರ್ಮಸೂಕ್ಷ್ಮಪ್ರಜ್ಞೆ
ಎಷ್ಟು ಉನ್ನತವಾದದ್ದೆಂದರೆ—ದ್ಯೂತ ಪ್ರಸಂಗದಲ್ಲಿ ದ್ರೌಪದಿ—'ತನ್ನನ್ನು
ಪಣವಾಗಿಟ್ಟು ಸೋಲುವ ಅಧಿಕಾರ ಧರ್ಮಜನಿಗಿದೆಯೇ ?'—ಎಂದು ಭೀಷ್ಮರನ್ನು
ತುಂಬಿದ ಸಭೆಯನ್ನೂ ಪ್ರಶ್ನಿಸಿದಾಗ, ಗಂಗಾಸುತನಾದ ಭೀಷ್ಮ—"ಇಂಥ ಧರ್ಮ
ಸೂಕ್ಷ್ಮ ವಿಷಯಗಳಲ್ಲಿ ನಿರ್ಣಯ ಕೊಡಲು ಇಲ್ಲಿ ಧರ್ಮರಾಜನೊಬ್ಬನೇ
ಸಮರ್ಥನು" ಎನ್ನುತ್ತಾನೆ). ಆದರೂ ಅರ್ಜುನ ತನ್ನಿಂದ ತಪ್ಪಾಗಿದೆಯೆಂದೂ
ನಿಯಮದಂತೆ ನಡೆದುಕೊಳ್ಳಬೇಕಾದ್ದು ತನ್ನ ಕರ್ತವ್ಯವೆಂದೂ ಹೇಳುತ್ತಾ
ವನವಾಸಕ್ಕೆ ಹೊರಟು ಹೋಗುತ್ತಾನೆ.

ಇಲ್ಲೇನೋ-'ಅರ್ಜುನ ಕಾನೂನಿನ ಅಕ್ಷರಗಳನ್ನು ಅನುಸರಿಸಿದನೇ ವಿನಃ ಅದರ
ಆತ್ಮವನ್ನಲ್ಲ' (Followed the letters of the law, instead of spirit) ಎನ್ನ
ಬಹುದು. 'ಇದು ವ್ಯಾಸನ ತೂಕಡಿಕೆಯಲ್ಲ, ಅರ್ಜುನನ ವ್ಯಕ್ತಿತ್ವದ ಆ ಮುಖವನ್ನು
ತೋರಿಸಲು ಉದ್ದೇಶ ಪೂರ್ವಕವಾಗಿ ಹಾಗೆ ಮಾಡಿರಬಹುದು' ಎಂದು ವಾದಿಸ
ಬಹುದು.

ಇರಬಹುದು. ಆದರೆ ಮುಂದೆ ಅರ್ಜುನ ನಡೆದದ್ದು ಕಾನೂನಿನ ಅಕ್ಷರ
ಗಳಿಗೂ ವಿರುದ್ಧವಾದ ರೀತಿಯಲ್ಲಿಯೇ ! ಬ್ರಹ್ಮಚಾರಿಯಾಗಿರಬೇಕೆಂದು ನಿಯಮ
ವಾಗಿದ್ದಾಗ, ಆತ ಈ ಅವಧಿಯಲ್ಲೇ ನಾಗಕನ್ಯೆ ಉಲೂಪಿಯ ಕಾಮಾತುರತೆಯನ್ನು
ಹೋಗಲಾಡಿಸಲು ಅವಳೊಂದಿಗೆ ರಮಿಸಿದ. 'ಅಂಥ ಕೋರಿಕೆಯನ್ನು ಈಡೇ
ಸುವುದೇ ಧರ್ಮ' ಎಂಬುದೂ, 'ದ್ರೌಪದಿಯ ಬಗ್ಗೆ ಮಾಡಿಕೊಂಡ ನಿಯಮ
ಬೇರೆಡೆಗೆ ಅನ್ವಯವಾಗುವುದಿಲ್ಲ' ಎಂಬ ಉಲೂಪಿಯ ಮಾತೂ ಅವನಿಗೆ ಆ
ಆಲಂಬನವಾಗಿಬಿಡುತ್ತವೆ! ಉಲೂಪಿಯ ಮಾತು—

ತದಿದಂ ದ್ರೌಪದೀ ಹೇತೋರನ್ಯಸ್ಯ ಪ್ರವಾಸನಮ್ ।
ಕೃತವಾಂಸ್ತತ್ರ ಧರ್ಮಾರ್ಥ ಮತ್ರ ಧರ್ಮೋನದುಷ್ಯತಿ ॥

(ಆದಿಪರ್ವ, ಅಧ್ಯಾಯ 214, ಶ್ಲೋಕ 216)

—ದ್ರೌಪದಿಯ ಕಾರಣಕ್ಕಾಗಿ ಮಾಡಿಕೊಂಡ ಇದು (ಪ್ರತಿಜ್ಞೆ) ಅಲ್ಲಿ ಧರ್ಮವಾಗುತ್ತದೆಯೇ ವಿನಾ ಇನ್ನೊಬ್ಬರೊಂದಿಗೆ ವ್ಯವಹರಿಸಿದರೆ ಅಲ್ಲಿ ಧರ್ಮದೂಷಣೆ ಆಗದು, ಮುಂದುವರೆದು ಹೇಳುತ್ತಾಳೆ–

ಪವಿತ್ರಾಣಂ ಚ ಕರ್ತವ್ಯಮಾರ್ತಾನಾಂ ಪೃಥುಲೋಚನ ।
ಕೃತ್ವಾ ಮಮ ಪರಿತ್ರಾಣಾಂ ತವ ಧರ್ಮೋ ನ ಲುಪ್ಯತೇ ॥

(ಶ್ಲೋಕ–217)

–'ವಿಶಾಲ ಲೋಚನ, ಆರ್ತರನ್ನು, ಕಷ್ಟದಲ್ಲಿರುವವರನ್ನೂ ರಕ್ಷಿಸುವುದೂ ಕರ್ತವ್ಯವೇ. ನನ್ನ ಕಷ್ಟವನ್ನು ಪರಿಹರಿಸುವುದರಿಂದ ನಿನ್ನ ಧರ್ಮ ಲುಪ್ತವಾಗದು,

ಅರ್ಜುನನಿಗೆ ಇದು ಪಥ್ಯವಾಗುತ್ತದೆ. ತಾನು ಶಸ್ತ್ರಾಸ್ತ್ರಗಳನ್ನು ಇಡುವ ಕೋಣೆಗೆ ಹೋಗಬೇಕಾಗಿ ಬಂದದ್ದೂ ಆರ್ತರನ್ನು ರಕ್ಷಿಸುವುದಕ್ಕಾಗಿಯೇ ಎಂಬುದು ಇವನಿಗೆ ನೆನಪಾಗುವುದಿಲ್ಲ. 'ಬ್ರಹ್ಮಚರ್ಯದಲ್ಲೇ ವನವಾಸ ಕಳೆಯಬೇಕು' ಎಂದು ತಾವು ಹಾಕಿಕೊಂಡ ನಿಬಂಧನೆಯಲ್ಲಿ ಇಂಥ ರಿಯಾಯಿತಿಗೆಲ್ಲ ಅವಕಾಶ ಇಲ್ಲ ಎಂಬುದೂ ಅವನಿಗೆ ನೆನಪಾಗುವುದಿಲ್ಲ. ನಿಯಮವನ್ನು ಈಗ ಹಿಗ್ಗಿಸಿ ಅರ್ಥೈಸುವ ಅರ್ಜುನ, ಇನ್ನೂ ಹೆಚ್ಚಿನ ಸಮರ್ಥನೆ ಇದ್ದ, ಈ ಮುನ್ನಿನ ಸನ್ನಿವೇಶದಲ್ಲಿ ನಿಯಮವನ್ನು ಸರಿಯಾಗಿ ಅರ್ಥೈಸಿಕೊಂಡು ಅಣ್ಣನ ಮಾತಿಗೆ ಒಪ್ಪಿ ಯಾಕೆ ಉಳಿಯಲಿಲ್ಲ? ಅವನ ವರ್ತನೆಯಿಂದ ಕುಟುಂಬಕ್ಕೊಬ್ಬ ಸಹಾಯಕ ತಪ್ಪಿದಂತಾಯಿತಲ್ಲದೆ ಧರ್ಮವಿವೇಚನೆಯಲ್ಲಿ ಧರ್ಮಜನ ಸಾಮರ್ಥ್ಯವನ್ನೇ ಅಲ್ಲಗಳೆದಂತಾಯ್ತಲ್ಲ?

ಇದು ಹೋಗಲಿ, ಉಲೂಪಿಯ ಕೋರಿಕೆಯನ್ನು ಈಡೇರಿಸಿದ್ದು ಧರ್ಮವೇ ಎಂದಿಟ್ಟುಕೊಳ್ಳೋಣ. ಆದರೆ ಅಲ್ಲಿಂದ ಮುಂದೆ ಹೊರಟ ಅರ್ಜುನ ಮಣಿಪುರದಲ್ಲಿ ಚಿತ್ರಾಂಗದೆಯನ್ನು ನೋಡಿ ಮೋಹಗೊಂಡು ತಾನಾಗೇ ಅವಳ ತಂದೆಯನ್ನು ಬೇಡಿ ಅವಳನ್ನು ಮದುವೆಯಾಗಿ ಮಗು ಪಡೆದನಲ್ಲ, ಆಗ ಯಾವ ಕೋರಿಕೆ, ಕರ್ತವ್ಯದ ಕರೆ ಇತ್ತು? ಅವನ ನಿಯಮದಲ್ಲಿದ್ದ ಬ್ರಹ್ಮಚರ್ಯದ ಗತಿ ಏನು? ಮುಂದೆ ಇದೇ ಅವಧಿಯಲ್ಲೇ ಸುಭದ್ರೆಯನ್ನು ನೋಡಿ ಮೋಹಗೊಂಡು ಅಪಹರಿಸಿದಾಗ ಯಾವ ಕರ್ತವ್ಯದ ಕರೆ ಇತ್ತು? ಅಪಹರಿಸಿ ತಂದು ಮದುವೆಯಾಗುವುದು ಒಪ್ಪಿತ ವೀರೋಚಿತಕಾರ್ಯವೇನೋ ಸರಿ. ಆದರೆ, ಅದಕ್ಕೆ ಆ ನಿಯಮದ ಕಠಿಣ ತಡೆ ಇತ್ತಲ್ಲ!

ಹಲವೆಡೆ ಅರ್ಜುನನ ಸಂಯಮವನ್ನು ಮೆಚ್ಚಿ ಹೊಗಳುವ ಮಾತುಗಳು, ಅದೇ ರೀತಿಯ ಸನ್ನಿವೇಶಗಳೂ ಕೂಡಾ (ಉದಾ: ಊರ್ವಶೀ ಪ್ರಸಂಗ, ತಪಸ್ಸಿನ ಸಂದರ್ಭ, ಇತ್ಯಾದಿ) ವ್ಯಾಸ ಭಾರತದಲ್ಲಿ ಬರುತ್ತವೆ. ಆದರೆ ಈ ಮೇಲಿನಂಥ 'ಮರೆವು'ಗಳು ಪಾತ್ರ ಚಿತ್ರಣ ಅಸಂಗತವಾಗುವಂತೆ ಮಾಡಿರುವುದೂ ಉಂಟು.

(ಟಿಪ್ಪಣಿ—ಈ ಲೇಖನವನ್ನು ಬರೆದಿಟ್ಟು ಸುಮಾರು ಐದಾರು ವರ್ಷಗಳಾಗಿವೆ. ಬರೆದ ಹೊಸದರಲ್ಲೊಮ್ಮೆ ಕಿ.ರಂ. ನಾಗರಾಜರೊಂದಿಗೆ ಮಾತಾನಾಡುತ್ತಾ ನಾನು ಈ ಲೇಖನದ ಅಂಶಗಳನ್ನು ಸ್ಥೂಲವಾಗಿ ಹೇಳಿದಾಗ ಅವರು ತಮಾಷೆಯಾಗಿ ನಕ್ಕು 'ವ್ಯಾಸನನ್ನೇನು ವಿಜಿಲೆನ್ಸ್ ಕಮಿಷನರ್ ಅಂದುಕೊಂಡಿದ್ದೀರಾ?' ಎಂದು ಕೇಳಿ ಅನಂತರ–'ಮಹಾಭಾರತ ಏಕಕರ್ತೃಕವಲ್ಲ, ಆದ್ದರಿಂದ ವ್ಯಾಸ ಹೀಗೆ ತಪ್ಪು ಮಾಡಿದ್ದಾನೆ ಎನ್ನಲಾಗುವುದಿಲ್ಲ' ಎಂದರು. ಆ ಮಾತಾಗಿ ಇಷ್ಟು ವರ್ಷಗಳ ನಂತರವೂ ನನ್ನ ಅಭಿಪ್ರಾಯಗಳನ್ನು ಬದಲಿಸಿಕೊಳ್ಳಲು ಸಮರ್ಥ ಕಾರಣ ಅದೆಂದೆನಿಸಲಿಲ್ಲ. ಮಹಾಭಾರತದಲ್ಲಿನ ಪ್ರಕ್ಷಿಪ್ತಗಳನ್ನು ಕೈಬಿಟ್ಟು, ಡಾ॥ ಸುಕ್ತಂಕರ್ ಅವರು ಸಂಪಾದಿಸಿರುವ ವ್ಯಾಸ ಭಾರತದಲ್ಲೇ ಮೇಲೆ ಉಲ್ಲೇಖಿಸಿರುವ ಮಾತುಗಳಿವೆ. ಅಲ್ಲದೆ, ನಮ್ಮ ದೃಷ್ಟಿ ಇಲ್ಲಿ–ಪಾತ್ರ ಚಿತ್ರಣದಲ್ಲಿ ಹೇಗೆ ಆಭಾಸ ಉಂಟಾಗಿದೆ ಎಂಬುದನ್ನು ತೋರಿಸುವುದಾಗಿದೆಯಾದ್ದರಿಂದ ವ್ಯಾಸೇತರರ ಕೈಚಳಕ ಇಲ್ಲಿ ಅಪ್ರಸ್ತುತ).

ಕಿನ್ನರಿಯ ಕನಸು

ಟಿ. ಯಲ್ಲಪ್ಪ

ಕಾಡು ಹಾದಿಯ ಪಕ್ಕ
ಹಾಡು ಹಾಯಿಸುವ ಓಣಿ
ಗೀತಾಂಬರಿಗಳ ಕೊರಳು, ಅರ್ಥವಾಗದ ಭಾಷೆ
ದೇವಲೋಕದ ಕಿನ್ನರಿ
ನುಡಿಸಿ ಹೋಗುವ ಜಾಣೆ
ದಿನರಾತ್ರಿ ಕನಸಲ್ಲಿ ಇವಳದೆಯೋ ಕಛೇರಿ

ನಾನು ತೆಪ್ಪ ನಡೆಸುವ ಹುಡುಗ
ಇವಳನ್ನು ಕರೆದದ್ದು ಅಂಬಿಗನೆಂದು
ನಾನವಳ ಕರೆದೆ
ಪಯಣಿಗರು ಯಾರಿಲ್ಲ ದೋಣಿ ಬರಿದು
ಪಯಣಿಗಳಾಗು ಬಾ ಎಂದು

ಅಂಬಿಗನು ನಾನು
ನಂಬಿ ಬಂದವಳ ನಡೆಸಬೇಕು
ಕನಸು ಕಡಿಯುವ ಸಮಯ
ನನ್ನ ತೆಪ್ಪ ಆ ಸಾಗರದಲ್ಲೆ
ಆ ಹುಡುಗಿ ಸಾಗರದಲ್ಲೇ
ನಾನು ಮಾತ್ರ ದಡ ಸೇರಿದ್ದೇನೆ
ಇದು ಹೇಗೆ ?!

ಸತ್ಯವಲ್ಲದ ಕನಸು
ಅದಕ್ಕೆ ಆದರದೇ ಅರ್ಥ
ಅರಿವಿಗಿಣುಕಿ ಮರೆಯಾಗುವುದು ನೂರು ಸತ್ಯ
"ನಾನು" ಎಂದಿಗೂ ಮಿಥ್ಯೆ

ಯಾಕೆಂದರೆ
ನನ್ನ ತೆಪ್ಪದಲ್ಲಿನ ರಂಧ್ರಗಳು
ನನಗೇ ಕಾಣುವುದಿಲ್ಲ

ಅದಕ್ಕೇ
ಆಗಾಗ ಬಂದು ದಡ ಸೇರಿಸಿ
ಹೋಗುವ ದೇವಲೋಕದ ಸುಂದರಿ
ಮತ್ತವಳ ಕಿನ್ನರಿಯೂ ಸತ್ಯ.

ಗಂಗವಾರದ ಅಭೂತಪೂರ್ವ ವೈಷ್ಣವಿಯ ವಿಗ್ರಹ

ಎಂ. ಜಿ. ಮಂಜುನಾಥ
ಕೆಂಗೇರಿ ಚಕ್ರಪಾಣಿ

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಗೆ ಸೇರಿದ ಗಂಗವಾರವು ಅಲ್ಲಿರುವ ಸೋಮೇಶ್ವರ ದೇವಾಲಯ ಹಾಗೂ ತಂಬ್ಲಿಗೇಶ್ವರ ದೇವಾಲಯಗಳಿಂದ ಪ್ರಸಿದ್ಧವಾಗಿವೆ. ಗಂಗವಾರವು ಶಾಸನಗಳಲ್ಲಿ ಗಂಗಪುರ ಎಂದು ಕರೆಯಲ್ಪಟ್ಟಿದೆ. ಅದಕ್ಕೆ ಪೂರಕವಾಗಿ ಅಲ್ಲಿನ ದೇವಾಲಯಗಳೂ ಸಹ ಗಂಗಶೈಲಿಯಲ್ಲಿ ನಿರ್ಮಿಸಲ್ಪಟ್ಟು ಗಂಗರ ಪ್ರಭಾವವನ್ನು ದೃಢಪಡಿಸುವಂತಿವೆ. ಈ ದೇವಾಲಯಗಳು ಮೂಲತಃ ಗಂಗಶೈಲಿಯಲ್ಲಿ ಕಟ್ಟಲಾಗಿದ್ದರೂ ತದನಂತರದ ಕಾಲದಲ್ಲಿ ನಡೆದ ಜೀರ್ಣೋದ್ಧಾರಗಳಿಂದ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಗಂಗ ಮತ್ತು ಚೋಳ ಶೈಲಿಗಳ ಸಮ್ಮಿಶ್ರಣ ರೂಪದಲ್ಲಿ ಇಂದು ಕಂಡುಬರುತ್ತಿದೆ. ಈ ದೇವಾಲಯಗಳ ಬಗ್ಗೆ ಹಲವಾರು ಮಂದಿ ವಿದ್ವಾಂಸರು ಅಧ್ಯಯನ ನಡೆಸಿ ತಮ್ಮ ಕೃತಿಗಳಲ್ಲಿ ಬರೆದಿದ್ದಾರೆ.[1] ಪುರಾತತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿಯೂ ಈ ದೇವಾಲಯಗಳ ಬಗ್ಗೆ ವಿವರವಾದ ಅಧ್ಯಯನದ ವರದಿಯಿದೆ.[2] ಆದರೆ ಗಂಗವಾರದಿಂದ ಬೂದಿಗೆರೆಯ ಕಡೆಗೆ ಹೋಗುವ ಮಾರ್ಗದಲ್ಲಿನ ಕೆರೆಯ ಏರಿಯ ಮೇಲಿರುವ ಒಂದು ಮಹತ್ವಪೂರ್ಣವಾದ, ಹಲವಾರು ದೃಷ್ಟಿಗಳಿಂದ ಅತ್ಯಂತ ವೈಶಿಷ್ಟ್ಯಪೂರ್ಣವಾದ ವಿಗ್ರಹವು ಯಾರ ಗಮನಕ್ಕೂ ಬಾರದೆ ಉಳಿದಿರುವುದು ಅತ್ಯಂತ ಆಶ್ಚರ್ಯಕರವಾಗಿದೆ.

ಮೂರು ಅಡಿ ಎತ್ತರದ ಈ ವಿಗ್ರಹವು ಸ್ತ್ರೀಯದ್ದಾಗಿದ್ದು, ಅದು ಹೊಂದಿರುವ ಲಾಂಛನಗಳು ಹಾಗೂ ಆಯುಧಗಳಿಂದ ಅದು ವೈಷ್ಣವಿಯ ವಿಗ್ರಹವೆಂದು ಗುರ್ತಿಸಬಹುದು. ಆ ವಿಗ್ರಹವು ಚತುರ್ಭುಜಗಳನ್ನು ಹೊಂದಿದ್ದು ಸ್ಥಾನಕ ಭಂಗಿಯಲ್ಲಿದೆ. (ಸಮಪಾದ ಭಂಗಿಯಲ್ಲಿದೆ). ಕಿರೀಟಮಕುಟ, ಕರ್ಣಕುಂಡಲ, ಕೊರಳಹಾರ, ಕೈಕಡಗ, ವಂಕಿ, ಮುಂತಾದ ಒಡವೆಗಳನ್ನು ಧರಿಸಿರುವ ದೇವಿಯು ಧರಿಸಿರುವ ವಸ್ತ್ರಗಳು ಹಾಗೂ ಯಜ್ಞೋಪವೀತವೂ ಸಹ ಸ್ಪಷ್ಟವಾಗಿ ಕಾಣುವಂತೆ ಶಿಲ್ಪಿಯು ಚಾತುರ್ಯದಿಂದ ಕಂಡರಿಸಿದ್ದಾನೆ. ದೇವಿಯು ತನ್ನ ಚತುರ್ಭುಜಗಳಲ್ಲಿ ಮೇಲಿನ

---

1. ಡಾ. ದೇವರ ಕೊಂಡಾರೆಡ್ಡಿ : ತಲಕಾಡಿನ ಗಂಗರ ದೇವಾಲಯಗಳು.
2. M. A. R. 1935. ಪುಟ 32.



ಗಂಗವಾರದ ವೈಷ್ಣವಿಯ ವಿಗ್ರಹ

ಬಲಗೈಯ್ಯಲ್ಲಿ ಪ್ರಯೋಗಚಕ್ರ ಹಾಗೂ ಎಡಗೈಯ್ಯಲ್ಲಿ ಶಂಖವನ್ನು ಧರಿಸಿದ್ದಾಳೆ. ಕೆಳ ಬಲಗೈಯಲ್ಲಿ ಕಮಲವನ್ನು ಹಿಡಿದಿದ್ದು, ಕೆಳ ಎಡಗೈಯುನ್ನು ತನ್ನ ಸಿಂಹ ಕಟಿಯ ಮೇಲಿಟ್ಟುಕೊಂಡಿದ್ದಾಳೆ. ಈ ವಿಗ್ರಹದಲ್ಲಿ ಕೇವಲ ಇವಿಷ್ಟೇ ಅಂಶಗಳು ಇದ್ದಿದ್ದರೆ ಇದು ಸಾಧಾರಣವಾದ ಒಂದು ವೈಷ್ಣವಿ ವಿಗ್ರಹವಾಗುತ್ತಿತ್ತು. ಆದರೆ ಈ ವೈಷ್ಣವಿಯ ಪಾದಗಳ ಬಳಿಯಲ್ಲಿರುವ ಇಬ್ಬರು ಭಕ್ತರ ವಿಗ್ರಹಗಳಿಂದಾಗಿ ಇದು ಅತ್ಯಂತ ಮಹತ್ವಪೂರ್ಣವಾದ, ಅತ್ಯಪೂರ್ವವಾದ ವಿಗ್ರಹಗಳಲ್ಲೊಂದೆನಿಸಿದೆಯೆಂದು ಹೇಳಬಹುದು.

ದೇವಿಯ ಪಾದಗಳ ಎಡಬಲಗಳಲ್ಲಿ ಇಬ್ಬರು ಭಕ್ತ ದಂಪತಿಗಳು ಮಂಡಿಯೂರಿ ಕುಳಿತ್ತಿದ್ದಾರೆ. ದೇವಿಯ ಬಲಗಡೆ ಸ್ತ್ರೀ ಹಾಗೂ ಎಡಗಡೆ ಪುರುಷರಿದ್ದಾರೆ. ಸ್ತ್ರೀಯು ತನ್ನ ಎಡಗೈಯ್ಯಲ್ಲಿ ತನ್ನ ಮುಡಿಯನ್ನು ಹಿಡಿದುಕೊಂಡು ಬಲಗೈಯಲ್ಲಿರುವ ತನ್ನ ಖಡ್ಗದಿಂದ ತನ್ನ ತಲೆಯನ್ನು ಛೇದಿಸಿಕೊಳ್ಳುತ್ತಿದ್ದಾಳೆ. ದೇವಿಯ ಎಡಭಾಗದಲ್ಲಿರುವ ಪುರುಷನು ತನ್ನ ಕಣ್ಣುಗಳನ್ನು ಬಗೆದು ತನ್ನ ಎರಡೂ ಕೈಗಳಲ್ಲಿ ಹಿಡಿದು ದೇವಿಗೆ ಅರ್ಪಿಸುತ್ತಿದ್ದಾನೆ. ಆ ಪುರುಷನ ಕಣ್ಣುಗಳಿರುವೆಡೆಯಲ್ಲಿ ಎರಡು ತೂತುಗಳಿರುವಂತೆ ಶಿಲ್ಪಿಯು ಕಂಡರಿಸಿದ್ದಾನೆ. ಈ ಶಿಲ್ಪಗಳನ್ನು ನೋಡಿದರೆ ನಮ್ಮ ಕಣ್ಣೆದುರಿನಲ್ಲಿಯೇ ಆ ದೇವಿಯ ಸನಿಹದಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುತ್ತಿರುವ ದಂಪತಿಗಳ ಚಿತ್ರ ಕಣ್ಣಿಗೆ ಕಟ್ಟುವಂತೆ ರೂಪಿಸುವಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆಂದು ಹೇಳಬಹುದು.

ಮೂರ್ತಿ ಶಿಲ್ಪದ ಲಕ್ಷಣಗಳ ಆಧಾರದಿಂದ ಗಂಗರ ಕಾಲಕ್ಕೆ ಅಂದರೆ ಕ್ರಿ. ಶ. 9–10ನೆಯ ಶತಮಾನಕ್ಕೆ ಈ ವಿಗ್ರಹ ಸೇರುತ್ತದೆಂದು ಹೇಳಬಹುದು.

ತಮ್ಮ ಇಷ್ಟದೇವತೆಗಳ ತೃಪ್ತಿಗಾಗಿ, ಮೋಕ್ಷಾಪೇಕ್ಷೆಗಳಾಗಿ ಅಥವಾ ತಾವು ಹೊತ್ತಿದ್ದ ಹರಕೆ ಫಲಿಸಿದಾಗ ತಾವು ಮೊದಲೇ ಹರಕೆ ಹೊತ್ತಿದಂತೆ ತಮ್ಮ ಇಷ್ಟ ದೇವರ ಮುಂದೆ ತಮ್ಮನ್ನು ತಾವೇ ಇರಿದುಕೊಂಡಾಗಲೀ ಅಥವಾ ಸಿಡಿದಲೆ ಹೊಂದಿಯಾಗಲೀ ಅಥವಾ ಮತ್ತೊಬ್ಬರ ಕೈಯಿಂದ ಬಲಿಯಾಗುತ್ತಿದ್ದುದಾಗಲೀ ಈ ಹಿಂದೆ ಪ್ರಚಲಿತವಾಗಿದ್ದುದು ಎಲ್ಲರಿಗೂ ತಿಳಿದ ವಿಷಯ. ಅದೇ ರೀತಿ ಕೆಲವೊಮ್ಮೆ ತಮ್ಮ ಇಷ್ಟದೇವರ ಪ್ರೀತ್ಯರ್ಥವಾಗಿ ಅಥವಾ ಕೆಲವು ದೇವತೆಗಳನ್ನು ವಶಪಡಿಸಿಕೊಳ್ಳಲು ತಮ್ಮ ಅಂಗಾಂಗಗಳನ್ನು, ಕೊನೆಗೆ ತಮ್ಮನ್ನೇ ತಾವು ಬಲಿಕೊಟ್ಟುಕೊಳ್ಳುವ ತಾಂತ್ರಿಕ ಆರಾಧಕರು ಹಿಂದೆ ಇದ್ದರು. ಇವರನ್ನು ವಾಮಾಚಾರಿಗಳು ಎಂದೂ ಕರೆಯುತ್ತಾರೆ. ಇವರು ತಮ್ಮ ಇಚ್ಛೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ, ಮಾನವಾತೀತ ಶಕ್ತಿಗಳನ್ನು ಪಡೆಯುವುದಕ್ಕಾಗಿ ಜನಸಾಮಾನ್ಯರಿಗೆ ಹೇಸಿಗೆಯನ್ನುಂಟುಮಾಡುವಂತಹ, ಭಯವನ್ನುಂಟುಮಾಡುವಂತಹ ವಿಧಾನಗಳಿಂದ ತಮ್ಮ ಇಷ್ಟದೈವವನ್ನು ಪೂಜಿಸುತ್ತಿದ್ದರು.

ಪ್ರಾಚೀನ ಕರ್ನಾಟಕದಲ್ಲಿ ತಾಂತ್ರಿಕಾಚರಣೆಗಳನ್ನು ಮಾಡುತ್ತಿದ್ದವರೆಂದು ಪ್ರಸಿದ್ಧರಾದವರೆಂದರೆ ಕಾಪಾಲಿಕರು ಹಾಗೂ ಕೌಳರು. ಕಾಪಾಲಿಕರು ಉಮಾ ಸಮೇತನಾದ ಶಿವನನ್ನು ತಮ್ಮ ತಾಂತ್ರಿಕ ಮಾರ್ಗಗಳಿಂದ ಆರಾಧಿಸಿ ತತ್ಫಲವಾದ ಪುಣ್ಯದಿಂದ ಕೈಲಾಸವನ್ನು ಸೇರಿ ಅಲ್ಲಿ ಉಮೆಯಷ್ಟೇ ಸುಂದರಿಯಾದ ಸ್ತ್ರೀಯರೊಡನೆ ವಿಹರಿಸುವುದನ್ನೇ ಗುರಿಯಾಗಿ ಹೊಂದಿದವರು. ಕಾಪಾಲಿಕರು ಶೈವರಾದರೆ ಕೌಳರು ಶಾಕ್ತರು. ಕೌಳರು ತಮ್ಮ ತಾಂತ್ರಿಕಾಚರಣೆಗಳ ವೇಳೆಯಲ್ಲಿ ಪಂಚಮಕಾರಗಳಾದ ಮದ್ಯ, ಮಾಂಸ, ಮತ್ಸ್ಯ, ಮಾನಿನಿ, ಮಧು ಮುಂತಾದವುಗಳನ್ನು ಪೂಜೆಯ ಒಂದು ಭಾಗವಾಗಿ ಭಾವಿಸಿ ಅನುಭವಿಸುತ್ತಿದ್ದರು. ಇವರ ಆರಾಧನೆಯ ಗುರಿಯೂ ಸಹ ಅಮಾನುಷವಾದ ಶಕ್ತಿ ಹಾಗೂ ಅಲೌಕಿಕವಾದ ಸುಖ ಇವುಗಳೇ ಆಗಿತ್ತು. ಅವು ಗಳನ್ನು ಹೊಂದಲು ಜನಸಾಮಾನ್ಯರಿಗೆ ನಿಲುಕದಂತಹ ರೀತಿಯಲ್ಲಿ ತಾಂತ್ರಿಕಾಚರಣೆ ಗಳನ್ನು ನಡೆಸುತ್ತಿದ್ದರು.

ಕಾಪಾಲಿಕರು ಹಾಗೂ ಕೌಳರು ಇಬ್ಬರೂ ಸಹ ಸ್ತ್ರೀದೇವತೆಯನ್ನೇ ಆರಾಧಿಸಿದರೂ ಸಹ ಉಮೆ, ಕಾಳಿ, ದುರ್ಗಿ, ಚಾಮುಂಡಿ, ಮಹಿಷಾಸುರಮರ್ಧಿನಿ, ಹೀಗೆ ಪಾರ್ವತಿಯ ಮತ್ತೊಂದು ರೂಪವನ್ನೇ ಆರಾಧಿಸುತ್ತಿದ್ದರು. (ಈಗಲೂ ಶಕ್ತಿ ದೇವತೆಯಾಗಿ ಯಾವುವೇ ಊರಿನಲ್ಲಾಗಲೀ ಆರಾಧಿಸುವುದು ಪಾರ್ವತಿಯ ಬೇರೆ ರೂಪಗಳಾದ ದುರ್ಗಿ, ಚಾಮುಂಡಿ, ಮಹಿಷಾಸುರಮರ್ಧಿನಿ, ಕಾಳಿ, ಮಾರಮ್ಮ, ಯಲ್ಲಮ್ಮ, ಚೌಡೇಶ್ವರಿ ಇತ್ಯಾದಿ) ಆದರೆ ಪ್ರಸ್ತುತ ದೊರೆತಿರುವ ಗಂಗವಾರದ ವೈಷ್ಣವಿಯ ವಿಗ್ರಹ ಆತ್ಮಬಲಿಯ ಶಿಲ್ಪಗಳುಳ್ಳ ಮೊತ್ತ ಮೊದಲನೆಯ ವೈಷ್ಣವಿಯ ವಿಗ್ರಹವಾಗಿದೆ. ವೈಷ್ಣವಿ/ಲಕ್ಷ್ಮಿಯ ವಿಗ್ರಹದ ಮುಂದೆ ಈ ರೀತಿಯಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವಂತಹ ವಿಗ್ರಹ ಇದುವರೆಗೂ ದೊರೆತ ಉದಾಹರಣೆಗಳಿಲ್ಲದಿರುವುದ ರಿಂದ ಈ ವಿಗ್ರಹ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಗಳಿಸಿದೆ.

ಈಗಲೂ ಸಹ ಪ್ರತೀ ಮಂಗಳವಾರ/ಶುಕ್ರವಾರ ಗಂಗವಾರದಲ್ಲಿ ಈ ವೈಷ್ಣವಿಯ ವಿಗ್ರಹದ ಬಳಿ ನೂರಾರು ಕೋಳಿ ಕುರಿಗಳ ಬಲಿಕೊಡಲಾಗುತ್ತಿದೆ.

ಪ್ರಾಯಃ ಹಿಂದೆ ಈ ವಿಗ್ರಹದ ಬಳಿ ನರಬಲಿಯೇ ನಡೆದಿದ್ದರೂ ಆಶ್ಚರ್ಯ ವಿಲ್ಲ. ಅವರೆ ಮಾನವರೇ ಸ್ವತಃ ತಮ್ಮ ಆತ್ಮಬಲಿಯನ್ನಂತೂ ಮಾಡಿಕೊಂಡಿರುವು ದಕ್ಕೆ ಆ ಶಿಲ್ಪವೇ ಪ್ರತ್ಯಕ್ಷ ಸಾಕ್ಷಿಯಾಗಿದೆ. ಅಂದಿನ ಕಾಲದ ನಂಬಿಕೆಗಳಿಗೆ ಹಾಗೂ ಆಚರಣೆಗೆ ಸಾಕ್ಷಿಪ್ರಜ್ಞೆಯಾಗಿ ನಿಂತಿದೆ.[1]

---

1. ಗಂಗವಾರದ ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಜಿ. ಎ. ಮಂಜುನಾಥ್ ಅವರಿಗೆ ವಂದನೆಗಳು.

ಶಾಸನಗಳಲ್ಲಿ ಬಸದಿಗಳು : ಪಕ್ಷಿನೋಟ

ಡಾ. ಹಂಪ ನಾಗರಾಜಯ್ಯ

ಪ್ರಪ್ರಾಚೀನ ಜೈನಾಗಮ ಗ್ರಂಥಗಳಲ್ಲಿ, ಜಿನಬಿಂಬಗಳ–ಜಿನಾಲಯಗಳ ಉಲ್ಲೇಖಗಳು ಅಪರೂಪ. ಜೈನಧರ್ಮದ ಪ್ರಾರಂಭದ ಘಟ್ಟಗಳಲ್ಲಿ ಬಸದಿ ಕಟ್ಟಿಸುವ, ಜಿನಮೂರ್ತಿಗಳನ್ನು ಮಾಡಿಸುವ ಪದ್ಧತಿ ಇರಲಿಲ್ಲ. ತೀರ್ಥಂಕರ ಮೂರ್ತಿಗಳನ್ನು ಮಾಡಿಸುವ, ಬಸದಿಗಳನ್ನು ಕಟ್ಟಿಸುವ ಈ ಪದ್ಧತಿಯು ಆಗಮೋತ್ತರಕಾಲೀನ ಸಂಪ್ರದಾಯ. ಈ ಸಂಪ್ರದಾಯವು ಮೌರ್ಯರ ಆಳಿಕೆಯ ಕಾಲದಲ್ಲಿ ಪ್ರಚಲಿತಗೊಂಡಿತು. ಕ್ರಿ.ಪೂ. ಮುನ್ನೂರರ ಆಸುಪಾಸಿನಲ್ಲಿ ಮಹಾವೀರರನ್ನು ವೈಭವೀಕರಿಸಿ ದೈವತ್ವದ ನೆಲೆಗೆ ಒಯ್ಯಲಾಯಿತು. ಇಂದಿನ ಒರಿಸ್ಸಾ ಆಗಿರುವ ಪ್ರಾಚೀನ ಕಳಿಂಗ ದೇಶದ ಸಾಮ್ರಾಟನಾದ ಖಾರವೇಲನು (ಕ್ರಿ.ಪೂ. 150), ತನಗಿಂತ ಹಿಂದೆ ನಂದ ವಂಶೀಯರು ಕೊಂಡೊಯ್ದಿದ್ದ ಅನಂತನಾಥ ಜಿನನ (14ನೆಯ ತೀರ್ಥಂಕರ) ಮೂರ್ತಿಯನ್ನು ಹಿಂತಿರುಗಿ ಪಡೆಯಲು ಯುದ್ಧ ಮಾಡಿದನು; ನಂದರಾಜನೀತಂ ಕಾಲಿಂಗಜಿನಂ ಸಂನಿವೇಸಂ......ಚ ನಯತಿ. ಅದರಿಂದ, ನಂದರ ಆಳಿಕೆಯ ವೇಳೆಗೆ, ಕ್ರಿ.ಪೂ. 5-4 ನೆಯ ಶತಮಾನದಲ್ಲಿ, ಜಿನಮೂರ್ತಿ ಪೂಜೆಯ ಸಂಪ್ರದಾಯ ಪ್ರಾರಂಭವಾಯಿತು.

ಜೈನ ಆಚಾರ್ಯರು ಏಕಾಂತ ಸ್ಥಳಗಳಲ್ಲಿ, ಬೆಟ್ಟ, ಗುಹೆ, ಪೊಟರೆ, ಸ್ಮಶಾನಗಳಲ್ಲಿ ಇರುತ್ತಿದ್ದರು. ಪ್ರಾಕೃತಿಕ ಗುಹೆಗಳು ಅವರ ತಪೋಭೂಮಿಗಳು. ಮಹಾರಾಷ್ಟ್ರದ ಉಸ್ಮಾನಾಬಾದಿನ ಪೂರ್ವೋತ್ತರದಲ್ಲಿರುವ ಪರ್ವತದಲ್ಲಿ ಗುಹೆಗಳ ಸಮೂಹವೇ ಇದೆ. ಈ ಜೈನ ಗುಹೆಗಳು ಕ್ರಿ.ಪೂ. ಆರನೆಯ ಶತಮಾನಕ್ಕೆ ಸೇರಿವೆ. ಬಿಹಾರ ಪ್ರಾಂತ್ಯದ ಗಯೆಯ ಸಮೀಪದ ಬರಾಬರ ಮತ್ತು ನಾಗಾರ್ಜುನೀ ಗುಡ್ಡದ ಗುಹೆಗಳು ಅಶೋಕ ಮತ್ತು ಅವನ ಮೊಮ್ಮಗ ದಶರಥನಿಂದ ನಿರ್ಮಿತವಾಗಿವೆ. ಒರಿಸ್ಸಾದ ಉದಯಗಿರಿ–ಖಂಡಗಿರಿಯ (ಹಾಥೀ ಗುಫಾ) ಜೈನ ಗುಹೆಗಳು, ಕ್ರಿ.ಪೂ. ಎರಡನೆಯ ಶತಮಾನದವು. ಶ್ರವಣಬೆಳಗೊಳದ ಚಂದ್ರಗಿರಿಯ ಭದ್ರಬಾಹುಗುಹೆಯೂ ಕ್ರಿ.ಪೂ. ಮೂರನೆಯ ಶತಮಾನಕ್ಕೂ ಹಿಂದಿನದು. ಈ ಮಾದರಿಯ ಇನ್ನೂ ಹಲವು ಪ್ರಾಚೀನತಮ ಜೈನಗುಹೆಗಳು ಜಿನಮುನಿಗಳ ಏಕಾಂತವಾಸದ ಸ್ಥಳಗಳಾಗಿದ್ದುವು. ಜೈನ ಯತಿಗಳ ಧ್ಯಾನ ಮತ್ತು ವಂದನಾಭಕ್ತಿಗೆ ಈ ಬಗೆಯ ಗುಹೆಗಳಲ್ಲಿಯೇ ಜಿನ ಮೂರ್ತಿಗಳನ್ನು ರಚಿಸುವುದು ಕ್ರಮೇಣ ಅಭ್ಯಾಸವಾಯಿತು. ಮೊಟ್ಟಮೊದಲಿಗೆ ಜೈನಪರಂಪರೆಯಲ್ಲಿ ಮೃತಾಚಾರ್ಯರ ಪಾದಚಿಹ್ನೆಗಳನ್ನು (ಟೋಂಕ್, ಚರಣ) ಕೆತ್ತಿ

ಅದನ್ನು ಪೂಜಿಸುವ ಪರಿಪಾಟಿಯೊಂದು ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿ ಇತ್ತು. ಸಮ್ಮೇದಗಿರಿ (ಶಿಖರಜಿ: ಬಿಹಾರ್ ಪ್ರಾಂತ್ಯ), ಶ್ರವಣಬೆಳುಗೊಳ, ಕೊಪ್ಪಳ— ಮೊದಲಾದ ಸ್ಥಳಗಳಲ್ಲಿ ಪ್ರಾಚೀನ ಗುರುಗಳ ಪಾದಚಿಹ್ನೆಗಳು ಇಂದಿಗೂ ಉಳಿದುವೆ ಬಂದಿವೆ. ಇದು ಬಸದಿಗಳ ಮತ್ತು ಜಿನಮೂರ್ತಿಗಳ ರಚನೆಗೂ ಪೂರ್ವದಲ್ಲಿದ್ದ ಆರಾಧನಾ ಪದ್ಧತಿಯ ಪಳೆಯುಳಿಕೆ.

ಅನಂತರ ಬಂದದ್ದು ಗುಹೆಗಳಲ್ಲಿಯೇ ಜಿನಮೂರ್ತಿಗಳನ್ನು ನಿರ್ಮಿಸುವ ವಿಧಾನ; ಇದು ಎರಡನೆಯ ಘಟ್ಟ. ಈ ಹಂತದಲ್ಲಿ ಗುಹೆಗಳೇ ಜಿನಾಲಯುಗಳಾದುವು. ಬೆಟ್ಟಗಳ ಮೇಲೆ, ನಡುವೆ, ಕೆಳಗೆ ನೈಸರ್ಗಿಕವಾಗಿ, ಸಹಜವಾಗಿ, ಅಕೃತ್ರಿಮವಾಗಿ ಇದ್ದ ಗುಹೆಗಳು ಚೈತ್ಯಾಲಯಗಳಾದುವು; ಇವೇ ಅಕೃತ್ರಿಮ ಚೈತ್ಯಾಲಯಗಳು. ಎಲ್ಲೋರ, ಕಟ್ವಪ್ರ, ಐಹೊಳೆ, ಬಾದಾಮಿ ಮೊದಲಾದೆಡೆಗಳಲ್ಲಿ ಗುಹೆಗಳು ಗುಹಾಂತರ ದೇವಾಲಯಗಳಾದವು. ಕರ್ನಾಟಕಕ್ಕೆ ಅಧಿಕೃತವಾಗಿ ಜಿನಧರ್ಮವನ್ನು ತಂದ ಧರ್ಮದೂತ ಶ್ರುತಕೇವಲಿ ಭದ್ರಬಾಹುಮುನಿ. ಕನ್ನಡ ನಾಡಿನಲ್ಲಿ ಸಲ್ಲೇಖನ ವಿಧಿಯಿಂದ ಮುಡಿಪಿದ ಮೊತ್ತಮೊದಲಿಗರೂ ಅವರೇ. ಕ್ರಿ.ಪೂ. 297ರಲ್ಲಿ, ತಮ್ಮ 76ನೆಯ ವಯಸ್ಸಿನಲ್ಲಿ, ಶ್ರುತಕೇವಲಿ ಭದ್ರಬಾಹು ಮಹಾಪುರುಷನು ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿ (ಕಟ್ವಪ್ರ, ಕಟವಪ್ರ, ಚಂದ್ರಗಿರಿ, ಇಂದ್ರಗಿರಿ) ಸಮಾಧಿಮರಣ ಪಡೆದರು. ಅವರು ಮುಡಿಪಿದೆಡೆಯೇ ಭದ್ರಬಾಹು ಗುಹೆ. ಆ ಗುಹೆಯೊಳಗಿರುವ ಪಾದಚಿಹ್ನೆಗಳೇ ಅವರ ಸ್ಮಾರಕವಾಗಿ ಕೆತ್ತಿದ ನಿಸಿದಿಗೆ.

ಜೈನ ಪೂಜಾಸ್ಥಾನ ಮತ್ತು ಪೂಜಾಮಂದಿರಗಳ ಬೆಳವಣಿಗೆಯಲ್ಲಿ ನಿಸಿದಿಗೆಗೆ ವಿಶೇಷ ಸ್ಥಾನವಿದೆ, ಐತಿಹಾಸಿಕ ಮಹತ್ವವಿದೆ. ನಿಸಿದಿಗೆಗಳೂ ಬಸದಿಗಳಿಗೆ ದಾರಿ ತೆರೆದುವು; ನಿಸದಿಗಳು ಮುಂದೆ ಬಸದಿಯ ಭಾಗವಾಗಿ ಉಳಿದುವು. ಭದ್ರಬಾಹು ಮುನಿಯ ವ್ಯಕ್ತಿತ್ವಪ್ರಭಾವ ಮಹಿಮೆಯಿಂದ ಅವರು ತಪವೆಸಗಿದ ಗುಹೆ ಮತ್ತು ಸ್ಥಳ ಅತಿಶಯ ಕ್ಷೇತ್ರವಾಯಿತು. ಹೀಗೆ ಗುಹೆಗಳೇ ಬಸದಿಗಳಾದುವು; ಗುಹೆಯೊಳಗಿನ ಚೆಲುವು ಚರಿತ್ರಾರ್ಹವಾಯಿತು. ಗುಹೆಗಳಿಂದ ಬಸದಿಗಳು ಬೆಟ್ಟದ ಬಯಲಿಗೆ ಬಂದುವು, ಬೆಟ್ಟಗಳೇ ಗಟ್ಟಿ ಬಸದಿಗಳಾದುವು. ಶ್ರವಣಬೆಳಗೊಳದಲ್ಲಿ ಚಿಕ್ಕಬೆಟ್ಟಕ್ಕೆ ಬಸದಿಗಳೇ ಹೊದಿಕೆ, ದೊಡ್ಡಬೆಟ್ಟಕ್ಕೂ ಜಿನಾಲಯಗಳೇ ಕವಚ.

ಪ್ರಾರಂಭದ ಹಂತದಲ್ಲಿ ಪರ್ವತ ಗುಹೆಗಳು ಅಕೃತ್ರಿಮ ಚೈತ್ಯಾಲಯಗಳಾಗಿದ್ದುವು, ಜೈನಯತಿಗಳು ಜಂಗಮ ಜಿನಾಲಯವಾಗಿದ್ದರು. ಜಂಗಮ ಬಸದಿಗಳ ಜತೆಗೆ ಸ್ಥಾವರ ಬಸದಿಗಳೂ ಬಂದುವು. ಸ್ಥಾವರ ಬಸದಿಗಳ ನಿರ್ಮಾಣಕ್ಕೆ ಕಾಲಕ್ರಮದಲ್ಲಿ ನಾಂದಿ ಹಾಡಿದವರು ಗಂಗರು. ಭದ್ರಬುನಾದಿ ಕಟ್ಟಿದವರು ಆದಿ

ಕದಂಬರು. ಇವರ ಸಮಕಾಲೀನರಾದ ಬದಾಮಿ ಚಾಳುಕ್ಯರು, ಅವರನ್ನು ಕೆಳಕ್ಕೆ ತಳ್ಳಿ ಬಂದ ರಾಷ್ಟ್ರಕೂಟರು, ಗಂಗರನ್ನೂ ರಟ್ಟರನ್ನೂ ಒಟ್ಟಿಗೆ ಸೋಲಿಸಿ ಗದ್ದುಗೆ ಹತ್ತಿದ ಕಲ್ಯಾಣಿ ಚಾಳುಕ್ಯರು, ಕಳಚುರ್ಯರು, ಹೊಯ್ಸಳರು, ಸೇವುಣರು–ಹೀಗೆ ಒಬ್ಬರಾದ ಮೇಲೆ ಒಬ್ಬರು ಬಂದರು, ಬಸದಿಗಳ ಪರಂಪರೆಗೆ ಜೀವ ತುಂಬಿದರು, ವೈಭವ ತಂದರು. ರಾಜ ಮಹಾರಾಜರಿಂದ ಹಿಡಿದು, ಎಲ್ಲ ಶ್ರೇಣಿಯ ಅಧಿಕಾರಿಗಳು ಮೊದಲುಗೊಂಡು ಸಾಮಾನ್ಯ ಪ್ರಜೆಯವರೆಗೆ ಜಿನರ ಪೂಜೆ ಮತ್ತು ಜಿನಮಂದಿರಗಳ ನಿರ್ಮಾಣವು ಹೀಗೆ ಅಖಂಡವಾಗಿ ಅಧಿಕಾಧಿಕ ಸಂಖ್ಯೆಯಲ್ಲಿ ವೃದ್ಧಿಗೊಳ್ಳಲು ಇದ್ದ ಪ್ರೇರಣಗಳಲ್ಲಿ ಒಂದು :

ಯಸ್ಮಿನ್ ಜಿನೇನ್ದ್ರ ಪೂಜಾ ಪ್ರವರ್ತ್ತತೇ
ತತ್ರತತ್ರ ದೇಶ ಪರಿವೃದ್ಧಿಃ
ನಗರಾಣಾಂ ನಿರ್ಭಯತಾ ತದ್ದೇಶ
ಸ್ವಾಮಿನಾಂಚೋರ್ಜ್ಜ । ನಮೋ ನಮಃ ॥

[Corpus of Kannadā Inscriptions (1985) No. 24. ಅತೇದಿ. (ಕ್ರಿ.ಶ. 5 ಶ.) ಹಲಸಿ. ಪು. 95]

[ಜಿನೇಂದ್ರರ ಪೂಜೆ ನಡೆಯುವ ದೇಶವು ವೃದ್ಧಿಸುವುದು, ನಗರಗಳು ನಿರ್ಭಯ ದಿಂದ ಇರುವುವು, ರಾಜನು ಊರ್ಜಿತವಾಗುವನು]

ಜಿನೇಂದ್ರ ಭವನೋದ್ಧಾರಂ ಪುಸ್ತಕಂ ತಥಾ
ಸಂಘಶ್ಚತುರ್ವಿಧಶ್ಚೇತಿ ಸಂಪ್ರೋಕ್ತಂ ಕ್ಷೇತ್ರ ಸಪ್ತಕಂ ॥

[ಜಿನಚೈತ್ಯಾಲಯ ಜೀರ್ಣೋದ್ಧಾರ, ಜಿನಪ್ರತಿಮೆ ಮಾಡಿಸುವುದು, ಶಾಸ್ತ್ರ ಗ್ರಂಥ ಪ್ರಕಟಿಸುವುದು, ಋಷಿ ಆರ್ಜಿಕಾ ಶ್ರಾವಿಕಾ ಶ್ರಾವಕ ಎಂಬ ನಾಲ್ಕು ಸಂಘ ಗಳಿಗೆ ಆಹಾರಾದಿ ದಾನ ಮಾಡುವುದು-ಈ ಏಳು ಕ್ಷೇತ್ರಗಳಲ್ಲಿ ಶ್ರಾವಕನು ತನ್ನ ನ್ಯಾಯಾರ್ಜಿತ ಸಂಪತ್ತನ್ನು ವ್ಯಯ ಮಾಡುತ್ತಾ ಆತ್ಮ ಕಲ್ಯಾಣಕ್ಕೆ ಹಾದಿಯನ್ನು ತೆರೆದುಕೊಳ್ಳಬೇಕು.]

ಜೈನ ಶ್ರಾವಕ (ಗೃಹಸ್ಥ)ರ ದಿನನಿತ್ಯದ ಧಾರ್ಮಿಕ ಪ್ರೇರಣೆ, ಆಚರಣೆ ಯೆಂದರೆ ಗೃಹಸ್ಥರಿಗಾಗಿ ನಿಯೋಜಿಸಿದ ಪವಿತ್ರ ಕರ್ತವ್ಯ ಪಾಲನೆ ; ಅದು ಆಗಮ ವಾಚನ ಮತ್ತು ಶಾಸ್ತ್ರ ಶ್ರವಣ. ಅದರ ಪರಿಣಾಮ ಧರ್ಮಾನುರಾಗ ಮತ್ತು ಧರ್ಮಕಾರ್ಯಗಳಲ್ಲಿ ಆಸಕ್ತಿ. ಸ್ತ್ರೀ-ಪುರುಷ ತಾರತಮ್ಯವಿಲ್ಲದೆ ಈ ಚಟುವಟಿಕೆ ಕೈಗೊಂಡರು :

ಕೆಱೆ ಬಾವಿ ಬಸದಿ ದೇಗುಲ
ಮಱುವಂಟಿಗೆ ತೀರ್ತ್ಥಶತ್ರಮಾರವೆ ಮೊದಲಾ
ಗಱುಕೆಯ ಧರ್ಮ್ಮಾದಿಗಳಂ
ನೆಱೆಮಾಡಿಸಿ ನೋಳ್ಪಳೆಸಕೆ ಚಟ್ಟಲದೇವಿ ॥

[EC. VIII-ii. ನಗರ 35. 1077. ಹೊಂಬುಜ–ಹುಂಚ (ಶಿವಮೊಗ್ಗ ಜಿ./ ನಗರತಾ) ಪು. 360 ಸಾಲು : 64-65]. ಏಕೆಂದರೆ ಎಲ್ಲದಕ್ಕೂ ಮೊದಲು ಶ್ರಾವಕರು ಧರ್ಮವನ್ನು ಚಿಂತಿಸಬೇಕೆಂಬ ಆಗಮೋಕ್ತಿಯ ಮೇಲ್ಪಂಕ್ತಿಯಿತ್ತು : ಧರ್ಮ್ಮಂ ಪ್ರಾಗೇವ ಚಿಂತೇತ್ ಎಂಬ ವಾಕ್ಯಾರ್ಥಮಂ ಭಾವಿಸಿ ತಮಗೆ ಶ್ರೇಯೋ ನಿಬಂಧನಾರ್ತ್ಥಮ್ ಉರ್ವ್ವೀತಿಳಕಮೆನಿಸಿದ ಪಂಚಬಸದಿಯಂ ಮಹಾಪ್ರ್ವದ್ಯೋಗ ಮನೆತ್ತಿಕೊಂಡಳು. [ಅದೇ : ನಗರ 36. 1077. ಸಾಲು : 89-92]. ಜೈನ ಸಮಾಜದ ಚತುಸ್ಸಂಘದಲ್ಲಿ ಶ್ರಾವಕ-ಶ್ರಾವಕಿಯರು ತಳೆದಿದ್ದ ಆದರ್ಶಜೀವನದ ಪರಿಕಲ್ಪನೆ ಹರಳುಗೊಂಡಿರುವ ನೂರಾರು ಶಾಸನಗಳಿವೆ. ಇದೇ ಪದ್ಯದ ಮಾದರಿ ಯನ್ನು ಮುಂದುವರಿಸಿದ ಇನ್ನೊಂದು ಉದಾಹರಣೆಯಿದೆ :

ಕೆಱೆ ಬಾವಿ ಬಸದಿ ದೇಗುಲ
ಮಱುವಟ್ಟಿಗೆ ಸತ್ರಮೆಂಬ ಧರ್ಮ್ಮಮವಿನಿತುಂ
ನೆಱೆದವು ಮುಗುಂದ ಮೂವ
ತ್ತಱ ವಿಭು ಚಾವುಂಡರಾಯನಿಂದಂ ಜಗದೊಳ್ ॥

[SII. XI-ii. 177. 1125. ಮುಗದ (ಧಾರವಾಡ ಜಿ/ತಾ) ಪು. 231-36, ಸಾಲು : 16-17 : BKI. I-ii. 177. 1125. ನಾಗಾರ್ಜುನ ಪಂಡಿತ ಕವಿಯ ಶಾಸನ ಪದ್ಯ.] ಸಂದ ಸಾಂತಳಿಗೆ ನಾಡೊಳಪೂರ್ವ್ವ ಮೆನಲ್ಕೆ ದೇಗುಲಂ ಬಸದಿ ಯಗ್ರಹಾರಮನೆ ಮಾಡಿಸಿದಂ ಸಲೆಗೋನ ಭೂಭುಜಂ [EC. VIII-ii. ಸಾಗರ. 109 (B). 1042. ಸಾಲು : 56.]. ಬಸದಿಗಳನ್ನು ಕಟ್ಟಿಸುವುದು ಧರ್ಮ ಕಾರ್ಯಗಳಲ್ಲಿ ಶ್ರೇಷ್ಠ ಹಾಗೂ ಶ್ಲಾಘ್ಯವೆನಿಸಿದರೆ, ಅವುಗಳನ್ನು ಹಾಳುಮಾಡುವುದು ಅಧರ್ಮಗಳಲ್ಲಿ ಅಧಮವಾದದ್ದೆನಿಸಿತು : (ಬಸದಿಯನ್ನು) ಇದನಱಿದುಣ್ಡೋನುಂ ಕೊಣ್ಡೋನುಂ ಕೆಱೆಯುಂ ಆರಮೆಯುಂ ಅೞಿದೊಂ ಪಞ್ಚ ಮಹಾಪಾತಕಂ [EC. VI (1977) ಪಾಂಡವಪುರ 16 (111 ಶ್ರೀ ಪ 147) 9-10 ಶ. ಕ್ಯಾತನಹಳ್ಳಿ (ಮಂಡ್ಯ ಜಿ/ಪಾಂಡವಪುರ ತಾ) ಪು. 114].

ಈ ರೀತಿಯಲ್ಲಿ ಜೈನ ಸಮಾಜದಲ್ಲಿಯೂ, ಹಿಂದೂಗಳಲ್ಲಿ ಇರುವಂತೆ ತಮ್ಮ ಧರ್ಮದ ದೇವಾಲಯಗಳನ್ನು ಕಟ್ಟಿಸುವ ಧಾರ್ಮಿಕ ಪ್ರೇರಣೆ ಬಲವಾಗಿ ಬೇರೂ ರಿತು, ತತ್ಪರಿಣಾಮವಾಗಿ ಅವರವರ ಶಕ್ತಿ-ಭಕ್ತಿಗಳಿಗೆ ಅನುಗುಣವಾಗಿ ಬಸದಿಗಳನ್ನು ನಿರ್ಮಿಸಿದರು. ಹೆಂಗಸರು-ಗಂಡಸರೆಂಬ ಲಿಂಗಭೇದವಿಲ್ಲದೆ, ರಾಜ-ಪ್ರಜೆ ತಾರತಮ್ಯ

ವಿರದೆ, ಅಧಿಕಾರಿ-ವರ್ತಕರೆಂಬ ವ್ಯತ್ಯಾಸಗಳಿಲ್ಲದೆ ಬಸದಿ ಕಟ್ಟಿಸಿದರು. ಕೆಲವರು ಒಂದೋ ಎರಡೋ ಬಸದಿಗಳನ್ನು ಮಾಡಿಸಿದರೆ, ಕೆಲವರು ನೂರಾರು ಬಸದಿ ಕಟ್ಟಿಸಿದರು. ಇದುವರೆಗೆ ತಿಳಿದು ಬಂದಿರುವ ಪ್ರಕಾರ, ಅತ್ಯಂತ ಹೆಚ್ಚಿನ ಬಸದಿಗಳನ್ನು ನಿರ್ಮಿಸಿದ ಮುರಿಯಲಾಗದ ದಾಖಲೆ ಇರುವುದು ಅತ್ತಿಮಬ್ಬೆಯ ಹೆಸರಲ್ಲಿ :

ಆ ಸತಿ ಮುವ್ಮಾಡಿಸಿದಾ
ಸಾಸಿರದಯ್ನೂಱು ಬಸದಿಗಿದು ಕಳಶಮೆನ
ಲ್ಭಾಸುರ ಮಾಯ್ತು ಜಿನೇಂದ್ರಾ
ವಾಸಂ ತೊಳಗುವ ಸುವರ್ಣ್ನ ಕಳಶೋನ್ನತಿಯಿಂ ॥

[SII.XI-i. 52.1007. ಲಕ್ಕುಂಡಿ (ಧಾರವಾಡಜಿ/ಗದಗ ತಾ) ಪು.39-43] ದಾನಚಿಂತಾಮಣಿ ಅತ್ತಿಮಬ್ಬೆಯು 1501 ಬಸದಿಗಳನ್ನು ಮಾಡಿಸಿದ್ದು ಊಹಾತೀತ ಅದ್ಭುತ ಸಾಧನೆ. ಅದು ಉತ್ಪ್ರೇಕ್ಷೆಯಲ್ಲ ಎಂಬುದಕ್ಕೆ ಅನ್ಯಾನ್ಯ ಪುರಾವೆಗಳಿವೆ. ಮರಿಯಾನೆ ದಂಡನಾಥನ ತಮ್ಮನಾದ ಭರತಮಯ್ಯ ದಂಡನಾಯಕನು ಅತ್ತಿಮಬ್ಬೆಯ ಆದರ್ಶಗಳನ್ನು ಮುನ್ನಡೆಸಿದನು :

ಗಂಗವಾಡಿ ನಾಡೊಳಲ್ಲಿಗಲ್ಲಿಗೆಲ್ಲಿ ನೋರ್ಪಡಂ

ಪ್ರಕಟಯಶೋವಿಭುವೆಣ್ಬ
ತ್ತು ಕನ್ನೆವಸದಿಗಳನೊಸೆದು ಜೀರ್ಣೋದ್ಧಾರ
ಪ್ರಕರಮನಿನ್ನೂಱನಲೌ
ಕಿಕ ಧೃತಿ ಮಾಡಿಸಿದನೆಸೆಯೆ ಭರತ ಚಮೂಪಂ ॥

[EC.II. 373 (267) 12 ಶ. ಪು. 240.] ಇದೇ ಪರಂಪರೆಯಲ್ಲಿ, ಹೊಯ್ಸಳರ ಮಹಾವೀರ ದಂಡನಾಯಕ ಗಂಗಚಮೂಪನ ಚಾರಿತ್ರಿಕ ಮಹತ್ಸಾಧನೆಗಳ ವೀರ ಶಾಸನಗಳಿರುವಂತೆ, ಧಾರ್ಮಿಕ ವಿಕ್ರಮಗಳ ಚಾಗದ ಕಂಬಗಳನ್ನೂ ನಿರ್ಮಿಸಲಾಗಿದೆ :

ಮತ್ತಿನ ಮಾತವನ್ತಿರಲಿ ಜೀರ್ಣ್ನ ಜಿನಾಲಯ ಕೋಟಿಯಂ ಕ್ರಮಂ
ಬೆತ್ತಿರೆ ಮುಂಸಿನಂತೆ ಪಲ ಮಾರ್ಗದೊಳಂ ನೆಱೆ ಮಾಡಿಸುತ್ತ ವ
ತ್ಯುತ್ತಮ ಪಾತ್ರದಾನದೊದವಂ ಮೆಱೆವುತ್ತಿರೆ ಗಂಗವಾಡಿ ತೊಂ
ಬತ್ತಱು ಸಾಸಿರಂ ಕೊಪಣಮಾದುದು ಗಂಗಣ ದಂಡನಾಥನಿಂ ॥

[EC. IX (1990) ಬೇ 389. 1133. ಪು. 353-57] ಅತ್ತಿಮಬ್ಬೆ, ಗಂಗರು ನಿರ್ಮಿಸಿದ ಹೆದ್ದಾರಿಯಲ್ಲಿ ಹೊರಟು, ಚಾಳುಕ್ಯ ಸಾಮ್ರಾಜ್ಯದಲ್ಲಿ ಧ್ರುವತಾರೆಯಾದಳು. ಆ ಮಾರ್ಗದಲ್ಲಿ ಕ್ರಮಿಸಿದ ಗಂಗರಾಜನಂತೆಯೇ ಹೊಯ್ಸಳರ ಹುಳ್ಳ ದಂಡಾಧಿಪನೂ ಬಸದಿಗಳನ್ನು ಕಟ್ಟಿಸಿದ ಅಗ್ರಜರ ಸಾಲಿನಲ್ಲಿ ಎದ್ದು ಕಾಣುತ್ತಾನೆ :

ಆ ಕೆಲ್ಲಂಗೆಱೆಯಾದಿ ತೀರ್ತ್ಥಮದು ಮುನ್ನಂ ಗಂಗರಿಂ ನಿರ್ಮ್ಮಿತಂ
ಲೋಕ ಪ್ರಸ್ತುತಮಾಯ್ತು ಕಾಲವಶದಿಂ ನಾಮಾವಶೇಷಂ ಬಳಿ
ಕ್ಕಾ ಕಲ್ಪಸ್ಥಿರ ಮಾಗೆ ಮಾಡಿಸಿದನೀ ಭಾಸ್ವಚ್ಚಿನಾಗಾರ ಮಂ
ಶ್ರೀಕಾನ್ತಂ ತಳದಿನ್ದಮೊಪ್ಪೆ ಕಳಸಂ ಶ್ರೀಹುಳ್ಳ ದಂಡಾಧಿ ಪಂ ॥

[EC. II (1973) 476 (345) 1159. ಪು. 289.] ಬೆಳ್ಳಿಯ ಬೆಟ್ಟಂಗಳ ನಿಱಿಪ ಜೈನ ನಿಳಯಂಗಳಂ ಮಾಡಿಸಿದ ರಟ್ಟರ ಮೇರು ಶಂಕರ ಗಂಡನು 'ಜಯಧೀರ' ಬಿರುದಾಂಕಿತನು. ಈತನು ನೇರಿಲ, ರೇಪುಂಡಿ (ನಲ್ಗೊಂಡ ಜಿಲ್ಲೆ ; ತುಮ್ಮಲಗುಡೆಂ ಆಂಧ್ರ, ಕೊಪಣಾಚಲ- ಮೊದಲಾದ ಸ್ಥಳಗಳಲ್ಲಿ ಬಸದಿಗಳನ್ನು ಕಟ್ಟಿಸಿದನು. [APGARE 1965, B-279, A. D. 964. ARIE 1973-74, B-19 : IAP. Wg. 3. 960. : ARIE 1961-62. B-93. 1067.]

ಪೆರ್ಗ್ಗಡೆ ನೊಕ್ಕಯ್ಯನು ಮಂಡಲಿ ಸಾಸಿರದ ಮತ್ತು ಸಾಂತಳಿಗೆ ಸಾಸಿರದ ವ್ಯಾಪ್ತಿಯೊಳಗೆ ಬರುವ ತಟ್ಟಿಕೆರೆ, ಹರಿಗೆ, ನೆಲ್ಲವತ್ತಿ (ಇಂದಿನ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾ॥ ನ್ಯಾಮತಿ) ಮುಂತಾದ ಕಡೆಗಳಲ್ಲಿ ಒಟ್ಟು ಆರು ಬಸದಿಗಳನ್ನು ಮಾಡಿಸಿದನು [EC. VII. ಶಿಮೊಗ್ಗ 10. 1085]. ಕದಂಬಕುಲ ಕೀರ್ತಿದೇವನ ಅಗ್ರಮಹಿಷಿ ಮಾಳಲದೇವಿಯು ಕುಪ್ಪಟೂರಲ್ಲಿ (ಶಿವಮೊಗ್ಗ ಜಿ॥ ಸೊರಬ ತಾ॥) ಮಾಡಿಸಿದ ಬ್ರಹ್ಮಜಿನಾಲಯ (ಪಾರ್ಶ್ವನಾಥ ಜಿನಾಲಯ) ವಂತೂ ಅತ್ತಿಮಬ್ಬೆ ಕಟ್ಟಿಸಿದ ಬ್ರಹ್ಮಜಿನಾಲಯದಂತೆ ಕೀರ್ತಿಶಾಲಿಯಾದುದು [EC. VIII-ii. ಸೊರಬ. 262. 1077]. ಕನಕಿಯಬ್ಬರಸಿಯು ಬಸದಿ ಇಲ್ಲದೆಡೆ ಬಸದಿಗಳನ್ನು ಕಟ್ಟಿಸಿದಳು, ರಿಷಿಮುನಿ ಆರ್ಜಿಕೆಯರ ಆಹಾರ ದಾನಕ್ಕೆ ದಾನಮಾಡಿದಳು [ಅದೇ : ಸೊರಬ. 233, 1139].

ಆಂಧ್ರದಲ್ಲಿಯೂ ಇದೇ ಹುರುಪಿನಿಂದ, ಧರ್ಮವತ್ಸಲತೆಯಿಂದ ನೂರಾರು ಬಸದಿಗಳು ನಿರ್ಮಾಣವಾದುವು.ಅವುಗಳಲ್ಲಿ ಕನ್ನಡಿಗರು ಕಟ್ಟಿಸಿದ ಕೆಲವು ಬಸದಿಗಳನ್ನು ಹೆಸರಿಸುತ್ತೇನೆ (ಅಧ್ಯಯನಕ್ಕೆ ಅನುಕೂಲವಾಗುವಂತೆ ಅಕಾರಾದಿಯಾಗಿ ಕೊಡುತ್ತೇನೆ) ಅಕ್ಕಬಸದಿ [ARIE. 1961-62. B-92 : APGAS. III. Ng. 43, 45, 1125]. ಕಟಕಾಭರಣಜಿನಾಲಯ [EI. IX. 6. P. 47], ಕದಲಾಲಯ ಬಸದಿ [IAP. Wg. 22. 1117] ಕಮ್ಮರಚೇಡು ಜಿನಾಲಯ, ಕೀರ್ತಿ ವಿಳಾಸ ಶಾನ್ತಿ ಜಿನಾಲಯ, ಜಯಧೀರ ಜಿನಾಲಯ [APGARE. 1965. B-279] ತಾಡಪತ್ರಿ ಚಂದ್ರಪ್ರಭ ಬಸದಿ, ತ್ರಿಭುವನತಿಲಕ [SII. VI. 798. 1208]. ಕ್ರಿ.ಶ. ಎಂಟನೆಯ ಶತಮಾನದಷ್ಟು ಪ್ರಾಚೀನವಾದ (ವಿಜಯವಾಡದಲ್ಲಿ ಕಟ್ಟಲಾದ) ನಡುಂಬಿ ವಸತಿ [ARSIE 1916-17. A-9. 715 A.D.], ಪಲ್ಲವಜಿನಾಲಯ [EI. XL-ii. 1087 : APGAS. III

ಮೆಹಬೂಬ್‌ನಗರ 58. ನಂ. 33. 1087] ಬಿಟ್ಟಿ ಕುಳತಿಳಕ ಜಿನಾಲಯ [IAP. ವಾರಂಗಲ್. 18.1108] ಯುದ್ಧ ಮಲ್ಲಜಿನಾಲಯ [IAP. ಕರೀಂನಗರ. 14. 1051], ವೀರಕಮಲ ಜಿನಾಲಯ [EA. I. 10. 1082], ವೈದ್ಯರತ್ನಾಕರ ಜಿನಾಲಯ [JSI. ಪು. 8] ವಿಜಯುವಾಡದ [ವಿಜಯವಾಟಿಕಾ, ಬೆಜವಾಡ], ಇನ್ನೆರಡು ಜಿನಾಲಯುಗಳು [EI. XXIV. 38. 950. ಪು. 268–82], ಸರ್ವ ಲೋಕಾಶ್ರಯ ಜಿನಭವನ [EI. VII. P. 177] ಮೊದಲಾದವು ಶಾಸನಗಳಲ್ಲಿ ವರ್ಣಿತವಾಗಿವೆ. ಇವುಗಳಲ್ಲಿ ಕದಲಾಲಯ ಬಸದಿಯು ಹನುಮಕೊಂಡ ಗುಡ್ಡದ ಪದ್ಮಾಕ್ಷಿ ದೇವಾಲಯವು ಜೈನ ಜಿನಶಾಸನ ದೇವಿಯ ಪ್ರಭಾವ ಬೀರುವ ದೇವಾಲಯ. ಜೈನ ಯಕ್ಷಿಯನ್ನು ಇಲ್ಲೀಗ 'ದುರ್ಗಿ' ಎಂದು, ಹಿಂದೂ ದೇವತೆಯೆಂದು ಪೂಜಿಸಲಾಗುತ್ತಿದೆ. ಸಚಿವ ಗಂಗಾಧರನು ಈ ಗುಡಿಯನ್ನು ಖಣ್ಡಸ್ಫುಟಿತ ಜೀರ್ಣೋದ್ಧಾರಗೊಳಿಸಿದ್ದು ದಾಖಲಾಗಿದೆ. [EI,IX.P.257: JAHRS.XXXVI–i.Pp. 58-62]. ಕೊಲನುಪಾಕದ ಚೇನಿಂಚಿ ಬಸದಿಯನ್ನೂ ಇಲ್ಲಿ ಉಲ್ಲೇಖಿಸಬಹುದು [ARIE. 1961–62, B–65]. ಕರ್ನಾಟಕದಲ್ಲಿ ನೂರಾರು ಜಿನಗೃಹಗಳ ನಿರ್ಮಾಣಕ್ಕೆ ಕಾರಣರಾದ ಗಂಗರು, ಆಂಧ್ರದ ಪೇರೂರಿನಿಂದ ಬಂದವರೆಂಬುದನ್ನು ಇಲ್ಲಿ ನೆನೆಯಬಹುದು. ತಮಿಳುನಾಡಿನಲ್ಲಿ ನಡೆದಂತೆ ಆಂಧ್ರದಲ್ಲಿಯೂ ಜಿನಮಂದಿರಗಳ ನಾಶ ಹಾಗೂ ಪರಿವರ್ತನೆಯ ಕೆಲಸ ಬಹಳ ಹಿಂದೆಯೇ ನಡೆಯಿತು. ಆಂಧ್ರದಲ್ಲಿಯಂತೂ ಈ ಕೆಲಸ, ಬಸದಿಗಳ ವಿಧ್ವಂಸನ, ಎಷ್ಟು ವ್ಯವಸ್ಥಿತವಾಗಿ ಮತ್ತು ವ್ಯಾಪಕವಾಗಿ ನಡೆಯಿತೆಂದರೆ ಇಂದು ಅಲ್ಲಿ ಜೈನರ ಕುರುಹುಗಳನ್ನು, ಹಗಲಲ್ಲಿ ಪಂಜು ಹಾಕಿಯೇ ಹುಡುಕಬೇಕು.

ತಮಿಳು ನಾಡಿನ ಧಾರ್ಮಿಕ ಚರಿತ್ರೆಯಲ್ಲೂ ಜೈನ ಮತ-ಧರ್ಮವು ಶೈವ ವೈಷ್ಣವರ ಆಕ್ರಮಣದಲ್ಲಿ ನುಚ್ಚುನೂರು ಆದದ್ದು ಶಾಸನಗಳಲ್ಲಿ ಲಿಖಿತವಾಗಿದೆ. ವೇದಬಾಹ್ಯಗಳಾದ ಜೈನ-ಬೌದ್ಧ ಧರ್ಮಗಳ ಮುನ್ನಡೆಯನ್ನು ನಿಯಂತ್ರಿಸಲೂ, ಜನಪದರನ್ನು ತನ್ನತ್ತ ಸೆಳೆಯಲೂ ವೈದಿಕ ಪರಂಪರೆಯ ಶಾಖೆಗಳು ಭಕ್ತಿಚಳವಳಿಯನ್ನು ವ್ಯಾಪಕಗೊಳಿಸ್ಸಿದುವು. ತೇವಾರಂ, ದಿವ್ಯಪ್ರಬಂಧಂ, ಪೆರಿಯ ಪುರಾಣಂ–ಮೊದಲಾದುವು ಜೈನ ವಿರೋಧಿಯೂ ಬ್ರಾಹ್ಮಣ ಪರವೂ ಆದ ನಿಲುವನ್ನು ನಿನದಿಸಿವೆ. ಜೈನರ ಆಚಾರ ವಿಚಾರಗಳನ್ನು ವಿಡಂಬಿಸಿ ಖಂಡಿಸಲಾಗಿ, ಇಡೀ ತಮಿಳು ನಾಡಿನಲ್ಲಿ ಮತೀಯ ಕಲಹಗಳಾದುವು. ಮದುರೈ, ತಿರುವೊತ್ತೂರು, ತಿರುವಾರೂರು, ತಿರುಪ್ಪಾತಿರಿಪುಲಿಯೂರು ಮೊದಲಾದ ಸ್ಥಳಗಳಲ್ಲಿ ನಡೆದ ಮತಗಳ ನಡುವಣ ಈ ಜಗಳದ ಪರಿಣಾಮವಾಗಿ ಜೈನರಮೇಲೆ ದಾಳಿಗಳಾದುವು, ಕೊಲೆಗಳು ಆದುವು; ಜೈನ ಬಸದಿಗಳು ಪುಡಿ ಪುಡಿಯಾದುವು ಇಲ್ಲವೇ ಪರಿವರ್ತಿತವಾದುವು.

ಅಹಿಂಸಾರಾಧಕರೂ ಅಲ್ಪಸಂಖ್ಯಾಕರೂ ಆದ ಜೈನರು ಉಗ್ರತೆಗಾಗಲೀ, ಪ್ರತೀಕಾರಕ್ಕಾಗಲೀ. ಹಿಂದೂ ದೇವಾಲಯಗಳ ನಾಶಕ್ಕಾಗಲೀ ತೊಡಗಲಿಲ್ಲ : The Jaina adherents, true to their faith, had not resorted any violent means to counteract the antagonistic attitude of brahmanical followes. Instead, they assimilated many elements from brahmanism and accommodated them suitably in their own religion. Changes had been acceped in the mode of worship and iconographic forms of the sasana devatas... The Jains resorting to conversion of Hindu temples is unheard in their religious history" [A. Ekambaranathan, Religious conflicts and conversion of Jain tempels in Tamilnadu, 'JAIN JOURNAL', April 1994. pp. 161-68]. ಹಿಂದೂಗಳ ಹಿಂಸಾತ್ಮಕ ಆಕ್ರಮಣಗಳಿಂದ ತಮಗಾದ ನೋವು ಮತ್ತು ಆತಂಕಗಳನ್ನು ಜೈನರು ತಮ್ಮ ಕಥೆಗಳಲ್ಲಿ, ಪುರಾಣಗಳಲ್ಲಿ ತೋಡಿ ಕೊಂಡಿದ್ದಾರೆ.

ಶೈವಗುರು ದಂಡಿ ಅಡಿಗಳ್ ಎಂಬುವರು ತಿರುವಾರೂರಿನಲ್ಲಿ ಶಿವಾಲಯದ ಕೆರೆಯನ್ನು ವಿಸ್ತರಿಸುವ ನೆಪದಲ್ಲಿ ಅಲ್ಲಿದ್ದ ಜೈನ ಮನೆ ಮಠ ಮಂದಿರಗಳನ್ನು ನೆಲಸಮ ಮಾಡಿದರು. ಶಿವಮಹಿಮಾ ಸ್ತೋತ್ರಗಳಿಂದ ಜನಸಾಮಾನ್ಯರಲ್ಲಿ ಜೈನರ ವಿರುದ್ಧದ ಭಾವನೆಗಳನ್ನು ಬಿತ್ತುತ್ತ ಸಂಬಂದರ್ ತಮಿಳುನಾಡಿನ ಉದ್ದಗಲಗಳಲ್ಲಿ ಸಂಚರಿಸಿದರು. ಮದುರೈಗೆ ಬಂದಾಗ ಅಲ್ಲಿನ ರಾಜನಾದ ಕೂನಪಾಂಡ್ಯನ ಹೊಟ್ಟೆ ನೋವನ್ನು ಹೋಗಲಾಡಿಸಿದರು. ಜೈನ ಸನ್ಯಾಸಿಗಳು ಗುಣಪಡಿಸಲಾಗದ ಉದರ ಶೂಲೆಯನ್ನು ಶೈವಗುರು ಸಂಬಂದರ್ ವಾಸಿ ಮಾಡಿದ್ದರಿಂದ, ರಾಜ ಕೂನಪಾಂಡ್ಯನು ಜೈನಧರ್ಮವನ್ನು ತೊರೆದು ಶೈವನಾಗಿ ಮತಾಂತರ ಮಾಡಿದನು. [ಇದರ ಆಧಾರ ದಿಂದ ಸ್ಫೂರ್ತಿಗೊಂಡು ಹುಟ್ಟಿದ ಕಟ್ಟು ಕಥೆಯೇ ಹೊಯ್ಸಳ ಬಿಟ್ಟಿದೇವನು, ರಾಮಾನುಜರು ತನ್ನ ಮಗಳ ಕಾಹಿಲೆಯನ್ನು ಗುಣಪಡಿಸಿದರೆಂದು, ಜೈನಧರ್ಮ ತೊರೆದು ವೈಷ್ಣವನಾದ ಎಂಬುದು. ಇದಕ್ಕೆ ಯಾವ ಶಾಸನಾಧಾರಗಳ ಬೆಂಬಲವೂ ಇಲ್ಲ].

ಜೈನಮತದಿಂದ ಶೈವಮತಕ್ಕೆ ಮತಾಂತರ ಮಾಡಿದ ಕೂನಪಾಂಡ್ಯನು ಜೈನರಿಗೆ ಚಿತ್ರಹಿಂಸೆ ಕೊಟ್ಟನು : ಸಂಬಂಧರರ ಆದೇಶದಂತೆ ಎಂಟು ಸಾವಿರ ಜೈನ ಮುನಿಗಳಿಗೆ ಉಪದ್ರವ ಕೊಟ್ಟನು. ಮದುರೈನಲ್ಲೇ ಅಲ್ಲದೆ ಇದೇರೀತಿ ತಿರುವೋತ್ತೂರು, ಪನತಗೈ ಎಂಬಲ್ಲೂ ಧಾರ್ಮಿಕ ಕಾರಣಕ್ಕಾಗಿ ಸಂಬಂದರ್ ಮುನಿಗಳ ಉಪದೇಶದಿಂದ ಪ್ರೇರಣೆಗೊಂಡು ಜೈನರ ಗುರು ವೃಂದವನ್ನೂ ಶ್ರಾವಕ ಸಮುದಾಯವನ್ನೂ ಹಿಂಸೆಗೆ ಗುರಿಪಡಿಸಲಾಯಿತು, ಶೂಲಕ್ಕೇರಿಸಲಾಯಿತು.

ಈ ಅಟ್ಟುಳಿಯನ್ನು ಪೆರಿಯ ಪುರಾಣದಲ್ಲಿ ವರ್ಣಿಸಿದೆ [ಪೆರಿಯ ಪುರಾಣಮ್ : ದಂಡಿ ಅಡಿಗಳ್ ಪುರಾಣಮ್ 15-24 ; ಸಂಬಂಧರ್ ಪುರಾಣಮ್ 600-850] ದೇವಾಲಯ ಶಿಲ್ಪಗಳಲ್ಲೂ ಚಿತ್ರಗಳ ಮೂಲಕ ಜೈನರಿಗಾದ ಅಪಮಾನಕರ ಚಿತ್ರಹಿಂಸೆಗಳನ್ನು ತೋರಿಸಲಾಗಿದೆ.

ಕಾಂಚಿಯ ರಾಜನಾದ ಒಂದನೆಯ ಮಹೇಂದ್ರವರ್ಮನು ಅಪ್ಪಟ ಜೈನನಾಗಿದ್ದನು (ಕ್ರಿ.ಶ. 600-630). ಶೈವಾಚಾರ್ಯ ಅಪ್ಪರ್ ಅವರ ಪ್ರಭಾವದಿಂದ ಜೈನ ಧರ್ಮವನ್ನು ತೊರೆದು ಶೈವನಾದನು. ಸ್ವಯಂ ಅಪ್ಪರ್ ಅವರೇ ಮೊದಲಿಗೆ ಜೈನ ಸನ್ಯಾಸಿ ಆಗಿದ್ದರು ; ಅವರು ಆರಂಭದಲ್ಲಿ ತಿರುಪ್ಪಾತಿರಿ ಪುಲಿಯೂರ್ ಎಂಬಲ್ಲಿದ್ದ ಜೈನ ಮಠದ ಪಟ್ಟಾಚಾರ್ಯರೂ ಆಗಿದ್ದರು. ಕಾಲಾಂತರದಲ್ಲಿ ಜೈನಧರ್ಮವನ್ನು ತೊರೆದು ಶಿವಜ್ಞಾನಿಯಾಗಿ ಶೈವಮತಕ್ಕೆ ಮತಾಂತರಗೊಂಡರು. ಶೈವ ಅಪ್ಪರರ ವರ್ಚಸ್ಸಿನಿಂದ ಜೈನ ಮಹೇಂದ್ರವರ್ಮನು ಶೈವನಾದನು ; ಮಹೇಂದ್ರ ಪಲ್ಲವ ರಾಜನು ತಾನು ಬಿಟ್ಟು ಬಂದ ಜೈನ ಧರ್ಮದ ಬಸದಿಗಳನ್ನು ಹಾಳುಗೆಡವಿದನು. ಅಲ್ಲದೆ ಜಿನಾಲಯಗಳನ್ನು ಕೆಡವಿ ಅದರ ಇಟ್ಟಿಗೆ ಕಲ್ಲುಗಳಿಂದಲೇ ತಿರುವತಿಗೈ ಎಂಬಲ್ಲಿ ಶಿವಾಲಯ ಕಟ್ಟಿಸಿದನು [ಪೆರಿಯ ಪುರಾಣಮ್ : ತಿರುನಾವುಕ್ಕರಸರ್ ಪುರಾಣಮ್, 145-146]

ಆದರೆ ಚರಿತ್ರಕಾರರು ಈ ಸಂಗತಿಯನ್ನು ಸಂಶಯದಿಂದ ಕಂಡಿದ್ದಾರೆ. ಮಹೇಂದ್ರ ಪಲ್ಲವ ರಾಜನು ಜೈನ ಮತವನ್ನು ತೊರೆದು ಶೈವನಾದುದನ್ನು ಇತಿಹಾಸಕಾರರು ಒಪ್ಪಿದ್ದಾರೆಯೇ ಹೊರತು, ಅನಂತರ ಆ ರಾಜನು ಜೈನರನ್ನು ಉಗ್ರತರವಾಗಿ ಶಿಕ್ಷಿಸಿ ತೊಂದರೆ ಕೊಟ್ಟುದನ್ನೂ, ಜಿನಾಲಯಗಳನ್ನು ಕೆಡವಿದನೆಂಬುದನ್ನೂ ಅನುಮೋದಿಸಿಲ್ಲ [S11.1.33.p.29]. ಕುಂಬಕೋಣಂ ಸಮೀಪದ ಪಲಯಾಡೈನಲ್ಲಿದ್ದ ಜಿನಗೃಹವನ್ನು ಅಪ್ಪರ್ ಶಿವಮಂದಿರವಾಗಿ ಮಾರ್ಪಾಡಿಸಿದರು [ಪೆರಿಯ ಪುರಾಣಮ್ : ತಿರುನಾವುಕ್ಕರಸರ್ ಪುರಾಣಮ್, 294-95]. ಒಂಬತ್ತನೆಯ ಶತಮಾನದ ಕಳಗುಮಲೈ ಶಾಸನದ ಆಧಾರದಿಂದ ಪಲಯಾಡೈ ಜೈನ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ [SII.V.No.320.C.9th C.A.D].

ತಿರುಪ್ಪುಗಲೂರಿನ ವರ್ಧಮಾನೇಶ್ವರ ಶಿವಾಲಯವು ಮೂಲತಃ ವರ್ಧಮಾನ ಮಹಾವೀರನ ಜಿನಾಲಯ [ಮಯಿಲಿ ಸೀನಿ ವೆಂಕಟಸ್ವಾಮಿ, 'ಜೈನಿಸಂ ಅಂಡ್ ತಮಿಳ್', ಪು. 140]. ವಿಲುಪ್ಪುರಂ ಹತ್ತಿರದ ಕೂಲಿಯನೂರ್, ಮೈಲಾಪುರ ಎಂಬ ನಗರಗಳಲ್ಲಿದ್ದ ಜಿನಾಲಯಗಳನ್ನು ಮತಕಲಹದಿಂದ ನಾಶಪಡಿಸಲಾಯಿತು [Mackenzie Manuscripts, No. 13:7]

ಕ್ರಿ.ಶ. ಹದಿನೈದನೆಯ ಶತಮಾನದಲ್ಲಿ ವಿಜಯನಗರದ ಪ್ರತಿನಿಧಿಯಾಗಿ ಜಿಂಜೀ ಎಂಬಲ್ಲಿದ ವೆಂಕಟಪತಿನಾಯಕನಿಗೆ ಜೈನ ಸಮಾಜದವರು ಹೆಣ್ಣು ಕೊಡಲು ನಿರಾಕರಿಸಿದರು. ಆತನು ಕುಪಿತನಾದನು, ಜೈನರನ್ನು ಸಂಹರಿಸತೊಡಗಿದನು. ಇದರಿಂದ ಹೆದರಿದ ಜೈನರು ಜಿಂಜೀ, ದಿಂಡಿವನಮ್ ಎಂಬ ಊರುಗಳಿಂದ ಪಲಾಯನ ಮಾಡಿದರು. ಅಲ್ಲೇ ಉಳಿದುಕೊಂಡವರು ಹಿಂದೂಗಳಾಗಿ ಮತಾಂತರಿಸಿದರು. ಇನ್ನು ಕೆಲವರು ಗುಪ್ತವಾಗಿ ಜೈನರಾಗಿದ್ದರು [ಮೆಕೆಂಜೀ ಮಾನುಸ್ಕ್ರಿಪ್ಟ್ಸ್, ಸಂ. 11:2] ಮದರಾಸು ಮಹಾನಗರದ ನಡುವೆ ಇರುವ ಬಡಾವಣೆ ಮೈಲಾಪುರದಲ್ಲಿಯೂ ಒಂದು ಪ್ರಾಚೀನ ನೇಮಿನಾಥ ಬಸದಿಯಿತ್ತು. ಚೋಳದೇಶದ ಬ್ರಾಹ್ಮಣರು ಮೈಲಾಪುರವಾಸಿಗಳಾದ ಜೈನರನ್ನು ಮತಾಂತರ ಮಾಡಿ ಬಸದಿಗಳಲ್ಲಿ ಶಿವಲಿಂಗ ಸ್ಥಾಪಿಸಿದರು. [ಅದೇ : ನಂ. 13:2]. ಮೈಲಾಪುರದಲ್ಲಿ ನೇಮಿನಾಥ ಬಸದಿ ಇದ್ದುದಕ್ಕೆ ಶಾಸನ ಮತ್ತು ಸಾಹಿತ್ಯ ದಾಖಲೆಯ ಅನ್ಯಾನ್ಯ ಪೋಷಕ ಆಧಾರಗಳೂ ಸಹ ಉಪಲಬ್ಧವಾಗಿವೆ. [H. Hosten, 'Antiques from Santhome and Mylapore', P.74 : ಅವಿರೋತಿ ಆಳ್ವಾರ್, ತಿರುನೂಟ್ರಂತಾತಿ, ಪದ್ಯ 40ರಿಂದ 60]. ಇಲ್ಲಿದ್ದ ಶಿಲೆ ಮತ್ತು ಲೋಹದ ನೇಮಿನಾಥ ಮೂರ್ತಿಗಳನ್ನು. ಈ ಬಸದಿಯು ನಾಶವಾದಾಗ, ಚಿತ್ತಾಮೂರಿಗೂ ಎಳಂಗಾಡಿಗೂ ಸಾಗಿಸಲಾಗಿದೆ [A, Ekambaranathan, History of Chittamur, 'Mukkudai'- January 1975, P.42]

ತಿರುನೆಲ್ವೇಲಿಜಿಲ್ಲೆಯ ಮಲೈಯಡಿಕ್ಕುರುಚ್ಚಿ ಎಂಬ ಊರಿನಲ್ಲಿರುವ ಪಾಂಡ್ಯ ಸೇಂದನ್ ಮಾರನ್ (ಕ್ರಿ.ಶ. 644-95) ಕಾಲದ ಜೈನ ಗುಹಾಂತರ ದೇವಾಲಯವು ಶೈವದೇವಾಲಯವಾಗಿದೆ. ಜೈನಮತದಿಂದ ಶೈವಮತಕ್ಕೆ ಕೂನಪಾಂಡ್ಯನು ಮತಾಂತರ ಮಾಡಿದ್ದರ ಪರಿಣಾಮವಾಗಿ ಈ ಬಂಡೆ ಬಸದಿಯು ಶಿವಮಂದಿರವಾಯಿತು [A. Ghosh(ed), 'Jaina art and architecture'', Vol.II.p.208] ಇದೇ ಮತೀಯ ವೈಷಮ್ಯದಿಂದಾಗಿ ಮಲೈಯಡಿಕ್ಕುರಿಚ್ಚಿಗೆ ಹತ್ತಿರವಿರುವ ಚೊಕ್ಕಂಪಟ್ಟಿಯ ಜೈನ ಶಿಲಾಗುಹೆಯೂ ಏಳನೆಯ ಶತಮಾನದಲ್ಲಿ ಅಪೂರ್ಣವಾಗಿ ನಿಂತುಹೋಯಿತು.

ಕನ್ಯಾಕುಮಾರಿ ಜಿಲ್ಲೆಯ ಚಿತರಾಲ್–ತಿರುಚ್ಚಾರಣತ್ತುಮಲೈ ಎಂಬುದು ಪ್ರಾಚೀನ ಜೈನ ಕೇಂದ್ರ. ಇಲ್ಲಿನ ನೈಸರ್ಗಿಕ ಗುಹೆಯಲ್ಲಿ ಎರಡು ಸಾಲು ಜೈನ ಮೂರ್ತಿಗಳನ್ನು ಕೊರೆಯಲಾಗಿದೆ. ಒಂದು ಸಾಲಿನಲ್ಲಿ ಹನ್ನೆರಡು ತೀರ್ಥಂಕರ ಮೂರ್ತಿಗಳೂ, ಇನ್ನೊಂದರಲ್ಲಿ ಆದಿನಾಥ ಪಾರ್ಶ್ವನಾಥ ಮಹಾವೀರ ತೀರ್ಥಂಕರರ ಮತ್ತು ಅಂಬಿಕಾ ಯಕ್ಷಿಯ ಮೂರ್ತಿಗಳೂ ಇವೆ. ಗುಹೆಯೊಳಗೆ ಗೂಡುಗಳನ್ನು ಕೊರೆಯಲಾಗಿದ್ದು, ಅದರೊಳಗೆ ಪದ್ಮಾವತಿ ಯಕ್ಷಿಯ ಹಾಗೂ ಪಾರ್ಶ್ವನಾಥ ಮತ್ತು

ಮಹಾವೀರ ತೀರ್ಥಂಕರರ ವಿಗ್ರಹಗಳಿವೆ. ಇಲ್ಲಿರುವ ಪದ್ಮಾವತೀ ಯಕ್ಷಿಯ ಮಹಿಮೆ ಇಂದಿಗೂ ಹಿಂದೂಗಳಲ್ಲಿ ಮುಂದುವರಿದಿದೆ. [ಆಂಧ್ರದ ಹನುಮಕೊಂಡದಲ್ಲಿ 'ದುರ್ಗಿ' ಹೆಸರಿನಿಂದಲೂ, ಕರ್ನಾಟಕದ ಸೌದತ್ತಿಗುಡ್ಡದಲ್ಲಿ 'ಎಲ್ಲಮ್ಮ' ಹೆಸರಿನಿಂದಲೂ ಪದ್ಮಾವತೀದೇವಿಯು ಲಕ್ಷಾಂತರ ಹಿಂದೂಗಳ ಆರಾಧನೆಯ ಮೂರ್ತಿಯಾಗಿ ರಾರಾಜಿಸುತ್ತಿದ್ದಾಳೆ]. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿಯೇ ಮುತ್ತುವಾಲ ಕುರತ್ತಿಯಾರ್ ಮತ್ತು ಗುಣಂತಾಂಗಿ ಕಂತಿಯರು ಸುವರ್ಣ ಆಭರಣ ಹಾಗೂ ಇತರ ಕೊಡುಗೆಗಳನ್ನು ಪದ್ಮಾವತೀ ಜಿನಶಾಸನ ದೇವಿಗೆ ನೀಡಿದ್ದರು. ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿ ಈ ಪದ್ಮಾವತಿ ಯಕ್ಷಿಗೆ ಸುತ್ತ ಗಾರೆಯಿಂದ ಬಂದೋಬಸ್ತುಮಾಡಿ 'ಭಗವತೀ' ಎಂಬ ಹಿಂದೂ ಹೆಸರಿತ್ತು, ಆ ಜೈನ ಸಮಾಜವೂ ಭಕ್ತಿಯಿಂದ ಆರಾಧಿಸುತ್ತಿದೆ. ಅಲ್ಲದೆ ಈ ಗುಹೆಯಲ್ಲಿರುವ ಇತರ ಯಾವ ತೀರ್ಥಂಕರ ಮೂರ್ತಿಗೂ ಮುಕ್ಕಾಗಿಲ್ಲವೆಂಬುದು ಗಮನಿಸಬೇಕಾದ ಅಂಶ. ಒಂದು ಕಡೆ ವಿಧ್ವಂಸನ ನಡೆದಿದ್ದರೆ ಅದಕ್ಕೆ ಸಮಾನಾಂತರವಾಗಿ ಇನ್ನೊಂದೆಡೆ ಸಂರಕ್ಷಣೆಯೂ ಆಗಿದೆ ಎಂಬುದಕ್ಕೆ ಇದೊಂದು ಜ್ವಲಂತ ಸಾಕ್ಷಿ.

ಕನ್ಯಾಕುಮಾರಿಯ ನಾಗರಕೋಯಿಲ್ ನಗರ ಕ್ರಿ.ಶ. 8 ರಿಂದ 16ನೆಯ ಶತಮಾನದವರೆಗೆ ಪವಿತ್ರ ಜೈನ ಕೇಂದ್ರವಾಗಿ ಖ್ಯಾತಿ ಪಡೆದಿತ್ತು. ಇಲ್ಲಿರುವ ಈಗಿನ ಹೆಸರಾಂತ ನಾಗರಾಜ ದೇವಾಲಯವು ಹಿಂದೆ ಜೈನ ಬಸದಿಯಾಗಿದ್ದುದಕ್ಕೆ ಶಾಸನ ಹಾಗೂ ವಾಸ್ತುಶಿಲ್ಪದ ಆಧಾರಗಳಿವೆ. ಇಲ್ಲಿ ನಡುವಣ ಗುಡಿಯ ಮಂಡಪದಲ್ಲಿ ಪಾರ್ಶ್ವಜಿನ, ಮಹಾವೀರ ಮತ್ತು ಪದ್ಮಾವತಿಯರ ಸಂಕೇತಗಳಿವೆ. ಮುಖ್ಯ ದ್ವಾರದಲ್ಲಿರುವ ಐದು ಹೆಡೆಯ ಹಾವುಗಳು ಧರಣೇಂದ್ರ-ಪದ್ಮಾವತಿ ಜಿನಶಾಸನ ದೇವ-ದೇವಿಯರವು. ಇಲ್ಲಿ ಜೈನ ಅರ್ಚಕರಾಗಿದ್ದ ಕಮಲವಾಹನ ಮತ್ತು ಗುಣವೀರರಿಗೆ ತಿರುವಾಂಕೂರು ಮಹಾರಾಜನು ಪಳ್ಳಿಚ್ಚಂದಮ್ ಹೊಲವನ್ನು ನೀಡಿದ್ದಕ್ಕೆ ಶಾಸನ ದಾಖಲೆಯಿದೆ. 1588ರಲ್ಲಿ ಈ ಜಿನಾಲಯದಲ್ಲಿ ಆದಿಶೇಷ ನನ್ನು-ತಿರುವನನಂತಾಳ್ವಾರ್ ನಾಗನನ್ನು ಸ್ಥಾಪಿಸಿ ಇಡೀ ಬಸದಿಯನ್ನು ಹಿಂದೂ ದೇವಾಲಯವನ್ನಾಗಿ ಪರಿವರ್ತಿಸಲಾಗಿದೆ.

ಪುದುಕೋಟ್ಟೈ ಬಳಿಯ ನಾರ್ತ್ತಾ ಮಲೈನಲ್ಲಿ ಇದ್ದ ಪ್ರಾಚೀನ ಜೈನ ಗುಡ್ಡದ ಗುಡಿಯನ್ನು ಕ್ರಿ. ಶ. 1228 ರಲ್ಲಿ ವಿಷ್ಣುಮೂರ್ತಿಗಳನ್ನಿಟ್ಟು ವೈಷ್ಣವ ದೇವಾಲಯ ವನ್ನಾಗಿ ಬದಲಾಯಿಸಲಾಗಿದೆ. ಈಗ ಇದರ ಹೆಸರು 'ಪದಿನೆಣ್ ಭೂಮಿ ವಿಣ್ಣಗರ್ ದೇವಾಲಯ'- ಎಂದು. ಚಿದಂಬರನಾರ್ ಜಿಲ್ಲೆಯ ಕಲುಗುಮಲೈ ಕೂಡ ವಿಖ್ಯಾತ ಜೈನ ಕೇಂದ್ರ. ಇಲ್ಲಿನ ಬೆಟ್ಟದ ಗುಹೆಯಲ್ಲಿ ಮೂರು ಸಾಲು ಜಿನಮೂರ್ತಿಗಳಿವೆ. ಪಾಂಡ್ಯರ ಆಳಿಕೆಯ ಅವಧಿಗೆ ಸೇರಿದ, ಕ್ರಿ.ಶ. 7-8ನೆಯ ಶತಮಾನದ ಆದಿನಾಥ

ಪಾರ್ಶ್ವನಾಥ ಮಹಾವೀರ ಜಿನರ, ಬಾಹುಬಲಿಯ, ಅಂಬಿಕಾ ಪದ್ಮಾವತೀ ಯಕ್ಷಿಯರ ಮೂರ್ತಿಗಳಿವೆ, ಕ್ರಿ.ಶ. 11-1 ನೆಯ ಶತಮಾನದಿಂದ ಈಚೆಗೆ ಐಯನಾರ್ ಹಿಂದೂ ಗುಡಿಯಾಗಿದೆ. [A Ekambaranathan 'Jaina Vestiges of Kalagumalai', pp. 52–54].

ತಮಿಳು ನಾಡು, ಕನ್ನಡ ನಾಡು ಮತ್ತು ಆಂಧ್ರಗಳಲ್ಲಿ ಜೈನ ಪ್ರಭಾವ ಮತ್ತು ಬಸದಿ ನಿರ್ಮಾಣ ಪರಂಪರೆ ವ್ಯಾಪಕವಾಗಿ ಗಟ್ಟಿಗೊಂಡು ಬೆಳೆದ ಅವಧಿಗಿಂತ ಕೊಂಚ ತಡವಾಗಿ ಕೇರಳದಲ್ಲಿ ನೆಲೆಯೂರಿತು. ಕ್ರಿ.ಶ. ಎಂಟು–ಒಂಬತ್ತನೆಯ ಶತಮಾನದಿಂದ ಕೇರಳದಲ್ಲಿ ಅರ್ಹದಾಯತನದ ನಿರ್ಮಾಣ ಕಂಡುಬರುತ್ತದೆಂದು ಸೂಚಿಸಿರುವ ಎಂ.ಆರ್. ರಾಘವವಾರಿಯರರು ಕೆಲವು ಮಾಹಿತಿಗಳನ್ನು, ಮುಖ್ಯವಾಗಿ ಶಾಸನಗಳ ಆಧಾರದಿಂದ ಒದಗಿಸಿದ್ದಾರೆ. [M R Raghava Varier, Socio-Economic Functions of the Jain Temples in Kerala, 'Svasti Sri, (1984) pp. 173-85] ತಿರಂಚ್ಚಾರಣತ್ತು ಮಲೈ ಶಾಸನಾಧಾರದಿಂದ ಕೇರಳದಲ್ಲಿ ಯಕ್ಷ ಪೂಜೆಯ ಸಂಪ್ರದಾಯ 8-9 ಶ. ದ ವೇಳೆಗೆ ಆರಂಭವಾಗಿತ್ತೆಂದು ಹೇಳಬಹುದು ; ನೇಮಿನಾಥ ಜಿನರ ಯಕ್ಷಿ ಅಂಬಿಕಾಳ ಮೂರ್ತಿಯನ್ನು ಅಜ್ಜಣಂದಿಯು ಮಾಡಿಸಿದನು.

ಅಲ್ಲದೆ ಕಲ್ಲಿಲ್ ಎಂಬಲ್ಲಿ ಮಹಾವೀರ ಜಿನರ ಯಕ್ಷಿ ಸಿದ್ಧಾಯಿಕಾಳ ಮೂರ್ತಿಯಿದೆ. ಪಾಲ್ಘಾಟ್ ಜಿಲ್ಲೆಯ ಪರವಶ್ಶೇರಿಯಲ್ಲಿ ಚಂದ್ರಪ್ರಭ ತೀರ್ಥಂಕರ ಮೂರ್ತಿಯು ಈಗ ಐಯ್ಯಪ್ಪ (ಶಾಸ್ತ) ನಾಗಿ ಪೂಜೆಗೊಳ್ಳುತ್ತಿದೆ ; ಚಂದ್ರಪ್ರಭರ ಯಕ್ಷಿ ಜ್ವಾಲಾಮಾಲಿನಿಯು 'ಭಗವತೀ' ಎಂಬುದಾಗಿ ಪೂಜಿತಳಾಗಿದ್ದಾಳೆ. ಕೊಟ್ಟಾಯಮ್ ಜಿಲ್ಲೆಯ ನೀಲಂ ಪೆರೂರಲ್ಲಿ ಪಳ್ಳಿಭಗವತಿ ಗುಡಿಯಲ್ಲಿ ವಿರಾಜಮಾನವಾಗಿರುವ ಯಕ್ಷಿಯನ್ನು ಕಾಣಬಹುದು. ಕಲ್ಲಿಲ್ ದೇವಾಲಯದಲ್ಲಿ ಇರುವ ಸಿದ್ಧಾಯಿಕಾ ಜಿನ ಶಾಸನದೇವಿಯನ್ನು ಸ್ಥಳೀಯ ಹಿಂದುಗಳು ಭಗವತೀ (ದುರ್ಗಾಮಾತೆ) ಎಂದು ಪೂಜಿಸುವರು ; ಕೊಚ್ಚಿನ್ ಮತ್ತು ಅಲ್ಲೆಪ್ಪೈ ಕಡೆಗಳಿಂದ ಜೈನರು ಇಂದಿಗೂ ಈ ಯಕ್ಷಿಯನ್ನು ಪೂಜಿಸುತ್ತಾರೆ. ಕೇರಳದ ಕೆಲವು ಹಿಂದೂ ದೇವಾಲಯಗಳ ಮೇಲೆ ಯಕ್ಷಾರಾಧನೆ ಪ್ರಭಾವದಿಂದ ಯಕ್ಷಿಯರ ಮೂರ್ತಿಗಳನ್ನು ಹೊರಸುತ್ತಾಲಯ-ಪ್ರಾಂಗಣದ ದೇವಕೋಷ್ಠದಲ್ಲಿ ಇಡಲಾಗಿದೆ ; ಕೊಚ್ಚಿನ್, ಮಧ್ಯತಿರುವಾಂಕೂರು, ತಿರುವಲ್ಲ ದೇವಾಲಯಗಳಲ್ಲಿ ಇದನ್ನು ನೋಡಬಹುದು. [TAS. Vol. I p. 193 : ಅದೇ : Vol. II part II p 125. : ಅದೇ : Vol. II part III. p. 163]

ಕೇರಳದ ಜೈನ ದೇವಾಲಯಗಳ ಮತ್ತು ಅಲ್ಲಿ ನಡೆಯುತ್ತಿದ್ದ ಪೂಜಾ ಕ್ರಮದ ವಿವರಗಳೂ ಶಾಸನಗಳಿಂದ ತಿಳಿದು ಬರುತ್ತದೆ. ತಾಳಕ್ಕಾವು (ದಕ್ಷಿಣ ವೈನಾಡು ಜಿಲ್ಲೆ) ಮತ್ತು ಕಿಣಾಲೂರು ಶಾಸನಗಳು ಕ್ರಿ. ಶ. ಒಂಬತ್ತನೆಯ ಶತಮಾನಕ್ಕೆ ಸೇರಿದ್ದು,

ಬಸದಿಗಳ ದೀಪಾರಾಧನೆಗೆ ದಾನ ಪಡೆದದ್ದನ್ನು ಹೇಳುತ್ತವೆ. ವೈನಾಡಿನ-ಬಸದಿಯು ಶಾಸನವು, ದಕ್ಷಿಣಕನ್ನಡ ಜಿಲ್ಲೆಯ ಕಾರ್ಕಳದ ಜೈನ ಮುಖಂಡರು ನೀಡಿವ ದಾನವನ್ನು ತಿಳಿಸುತ್ತದೆ. ನಾಗರಕೋಯಿಲ್ ಎಂಬಲ್ಲಿ ಇದ್ದ ಜೈನ ಮಠ ಮಂದಿರಗಳಿಗೆ 16ನೆಯ ಶ.ದ ಆರಂಭದಲ್ಲಿ ರಾಜನು ನೀಡಿದ ಕೊಡುಗೆಯನ್ನು ಭೂತಲವೀರ ಉದಯಮಾರ್ತಂಡ ವರ್ಮನ ಶಾಸನ ವಿವರಿಸಿದೆ ; ಬೆಳಗ್ಗೆ ಪಾಯಸ, ಮಧ್ಯಾಹ್ನ ದೀಪ ಬೆಳಗಿಸಿ ಚರು (ನೈವೇದ್ಯ) ಅರ್ಪಿಸುವುದಲ್ಲದೆ ಮತ್ತೆ ಸಂಜೆ ಮತ್ತೆ ದೀಪ ಹಚ್ಚಿ ಪುಷ್ಪಗಂಧ ಧೂಪ ಅರ್ಚನೆ ಮಾಡಲು ದೇಣಿಗೆ ನೀಡಲಾಗಿದೆ [TAS. Vl. pt. I. p. 153 157–59] ಕಲ್ಲಿಕೋಟೆ ಜಿಲ್ಲೆಯ ಕಿಣಾಲೂರು ಶಾಸನವು ಬಸದಿಯಲ್ಲಿ ಕೂತ್ತು (ಕುಣಿತ = ನೃತ್ಯ) ಏರ್ಪಾಟಿಗಾಗಿ ನಿರ್ದಿಷ್ಟ ಪ್ರಮಾಣದ ಭತ್ತವನ್ನು ಮೀಸಲಾಗಿ ಇಡಲಾಗಿತ್ತು. ಪೆರುಂಬಾವೂರಿಗೆ ನಟುವಾಂಗದ ಕೂತ್ತನ್ ಕೋಮನ್ ಎಂಬಾತನಿಗೆ ಒಂದು ಬಿಂಬವನ್ನು ಮಾಡಿಕೊಡಲು ತಿರುಚ್ಚಾರಣತ್ತು ಕುರತ್ತಿಕಲ್ ಮಾಡಿದುದನ್ನು ಕುಟುಗುಮಲೈ (ತಿರುನೆಲ್ವೇಲಿ ಜಿಲ್ಲೆ) ಶಾಸನ ತಿಳಿಸುತ್ತದೆ. ಹೀಗಾಗಿ ಕೇರಳದಲ್ಲಿಯೂ ಜೈನಧರ್ಮದ ಪ್ರಭಾವದೊಂದಿಗೆ ಜಿನ ಶಾಸನ ದೇವತೆಗಳ ಪ್ರಭಾವವೂ ಕಂಡು ಬರುತ್ತದೆ, ಆದರೆ ಹದಿನೇಳನೆಯ ಶತಮಾನದಿಂದ ಈಚೆಗೆ ಅಲ್ಲಿ ಜೈನರ ಸಂಖ್ಯೆ ಅತಿ ವಿರಳಗೊಂಡು, ವೈನಾಡಿನ ಕಲ್ಪತ್ತ ಪ್ರದೇಶದ ಕೆಲವೇ ಕುಟುಂಬಗಳಿಗೆ ಸೀಮಿತವಾಯಿತು.

ಬಸದಿಗಳ ನಿರ್ಮಾಣಪೂರ್ವದಲ್ಲಿ ಕೆಲವು ಕಾಲ ಪ್ರಚಲಿತವಾಗಿದ್ದ ಇನ್ನೊಂದು ವಾಸ್ತು (ಕಟ್ಟಡ) ನಿರ್ಮಾಣ ಪದ್ಧತಿಯನ್ನೂ ಪರಿಚಯಿಸಿಕೊಳ್ಳುವುದು ಅಗತ್ಯ. ಜೈನಾಲಯಗಳಲ್ಲಿ ಸ್ತೂಪ ನಿರ್ಮಾಣ ಪರಂಪರೆಯ ಉಲ್ಲೇಖಗಳು ಸಿಗುತ್ತವೆ. ನಿರ್ವಾಣ ಹೊಂದಿದ ತೀರ್ಥಂಕರರಿಗೆ ಸ್ತೂಪ, ಚೈತ್ಯ, ಜಿನಗೃಹಗಳನ್ನು ನಿರ್ಮಾಣ ಮಾಡುವುದನ್ನು ಆವಶ್ಯಕ ನಿರ್ಯುಕ್ತಿಯು (ಗಾಥಾ. 435) ದಾಖಲಿಸಿದೆ. ಜಂಬೂ ದೀವ ಪಣ್ಣತ್ತಿಯಲ್ಲಿಯೂ (2.33) ನಿರ್ವಾಣ ಪಡೆದ ಜಿನರಿಗೆ ಶರೀರ ಸಂಸ್ಕಾರ, ಚೈತ್ಯ-ಸ್ತೂಪದ ನಿರ್ಮಾಣವನ್ನು ವರ್ಣಿಸಲಾಗಿದೆ. ಆವಶ್ಯಕ ಚೂರ್ಣಿಯಲ್ಲಿ (ಜಿನಸಾದಕೃತ), ಮುನಿಸುವ್ರತ ತೀರ್ಥಂಕರರ ನೆನಪಿಗಾಗಿ ವೈಶಾಲಿಯಲ್ಲಿ ಸ್ತೂಪ ಕಟ್ಟಲಾಯಿತೆಂದು ಹೇಳಿದೆ. ವಿವಿಧ ತೀರ್ಥ ಕಲ್ಪದಲ್ಲಿಯೂ (ಜಿನಪ್ರಭಸೂರಿ) ಮಥುರೆಯ ಸ್ತೂಪದ ಮಾಹಿತಿಯಿದೆ. ಜೈನ ಸ್ತೂಪವೊಂದರ ಭಗ್ನಾವಶೇಷ ಸಿಕ್ಕಿದೆ. ಇದರ ಉಲ್ಲೇಖವು ಕ್ರಿ.ಶ. 157ರಲ್ಲಿ ರಚಿತವಾದ ಮಥುರಾದ ಶಾಸನದಲ್ಲಿದೆ.

ಮಥುರೆಯಲ್ಲಿ ಸುಪಾರ್ಶ್ವ ತೀರ್ಥಂಕರ ಸ್ಮೃತಿಸ್ಮಾರಕವಾಗಿ ದೇವನಿರ್ಮಿತ ಸ್ತೂಪವಿದ್ದಿತು. ಆ ಪ್ರಾಚೀನವಾದ ಸ್ತೂಪವು ಶಿಥಿಲವಾದಾಗ ಮುಂದೆ ಪಾರ್ಶ್ವನಾಥ ತೀರ್ಥಂಕರರು ಕ್ರಿ.ಪೂ. ಒಂಬತ್ತನೆಯ ಶತಮಾನದಲ್ಲಿ ಜೀರ್ಣೋದ್ಧಾರ ಮಾಡಿದರು.

ಆಮೇಲೆ ಇದೇ ಪುರಾತನ ಸ್ತೂಪವನ್ನು ಕ್ರಿ.ಶ. ಒಂದನೆಯ ಶತಮಾನದಲ್ಲಿ ಬಪ್ಪಭಟ್ಟಿಸೂರಿಯು ಪುನರ್ನಿರ್ಮಾಣಗೊಳಿಸಿದನು. ಮಥುರೆಯ ಸ್ತೂಪವನ್ನು ಕುರಿತು ಹರಿಭದ್ರಸೂರಿಯ ಆವಶ್ಯಕ ನಿರ್ಯುಕ್ತಿ ವೃತ್ತಿಯಲ್ಲಿಯೂ, ಸೋಮದೇವಸೂರಿಯ ಯಶಸ್ತಿಲಕ ಚಂಪೂದಲ್ಲಿಯೂ ಪ್ರಸ್ತಾಪ ಬಂದಿದೆ. ಸೋಮದೇವ ಸೂರಿಯು– 'ಈಗಲೂ ಈ ಸ್ತೂಪವು ದೇವನಿರ್ಮಿತವೆಂಬ ಪ್ರತೀತಿಯಿದೆ' ಎಂದಿದ್ದಾನೆ– ಅತ ಏವಾದ್ಯಾಪಿ ತತ್ ತೀರ್ಥಂ ದೇವನಿರ್ಮಿತಾಖ್ಯಾಯಾ ಪ್ರಥತೇ (ಯಶಸ್ತಿಲಕ ಚಂಪೂ, ಉಪಾಸಕಾಧ್ಯಯನ : 92-93). ಬಂಗಾಲದ ಪಹಾಡಪುರದಲ್ಲಿ ಸಿಕ್ಕಿರುವ ಗುಹನಂದಿ ಆಚಾರ್ಯರ ಕ್ರಿ.ಶ. ಐದನೆಯ ಶತಮಾನದ ತಾಮ್ರಪತ್ರದಲ್ಲಿ ಪಂಚ ಸ್ತೂಪಾನ್ವಯವನ್ನು ಹೇಳಿದೆ. ಆಚಾರ್ಯ ವೀರಸೇನರೂ, ಜಿನಸೇನರೂ ಪಂಚ ಸ್ತೂಪಾನ್ವಯಕ್ಕೆ ಸೇರಿದವರು. ಹರಿಷೇಣನ ಬೃಹತ್ಕಥಾಕೋಶದಲ್ಲಿ (12, 132) ಐದು ಸ್ತೂಪಗಳ ಉಲ್ಲೇಖವಿದೆ. ಈ ಪಂಚಸ್ತೂಪ ಅನ್ವಯವು ಮುಂದೆ ಸೇನ ಅನ್ವಯವಾಗಿ ಪರಿವರ್ತಿತವಾಯಿತು.

ಮಥುರೆಯ ಜೀರ್ಣವಾಗಿದ್ದ 515 ಸ್ತೂಪಗಳನ್ನು, ಅಕ್ಬರನ ಕಾಲದಲ್ಲಿ, ತೋಡರ ಮಲ್ಲನು ಜೀರ್ಣೋದ್ಧರಿಸಿದನು. ಆಂಧ್ರದ ವಡ್ಡಮಾನು ಎಂಬಲ್ಲಿಯೂ ಎರಡು ಸಾವಿರ ವರ್ಷಗಳ ಹಿಂದಿನ ಜೈನ ಸ್ತೂಪವೊಂದರ ಅವಶೇಷ ಆಧಾರಗಳು ದೊರೆತಿವೆ [Kasturibai, M., Select Inscriptions from Vaddamanu. 'Sri Ramachandira (ed) A. V. N. Murthy, I. K. Sharma, Delhi (1993)] ಜೈನಸ್ತೂಪಗಳ ವಾಸ್ತುರಚನೆಯನ್ನು ಡಾ. ಹೀರಾಲಾಲ್ ಜೈನ ಆಧಾರ ಸಹಿತವಾಗಿ ವರ್ಣಿಸಿದ್ದಾರೆ [ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ. ಕನ್ನಡ ಅನುವಾದ-ಮಿರ್ಜಿಅಣ್ಣಾರಾಯ (1971) : ಪು. 374-77] ಈ ಸ್ತೂಪ ಸಂಪ್ರದಾಯವು ಜೈನರಲ್ಲೂ ಬೌದ್ಧರಲ್ಲೂ ಏಕಕಾಲದಲ್ಲಿ ಪ್ರಾರಂಭವಾಗಿ ಪ್ರಚಲಿತ ವಾಗಿದ್ದರೂ ಕ್ರಮೇಣ ಜೈನಪರಂಪರೆಯಿಂದ ಅದು ದೂರ ಸರಿಯಿತೆನ್ನಬಹುದು [Buhler, G., A Legend of the Jaina Stupa at Mathura. I.A., XXVII.pp. 49-54 (1898)].

ಬಸದಿಗಳನ್ನು ಕಟ್ಟುವ ಮಾರ್ಗವೊಂದು ರೂಢಿಗೆ ಬಂದ ಮೇಲೆ ಮೊದಲಿಗೆ ಮರದ ಮತ್ತು ಮಣ್ಣಿನ ಕಟ್ಟಡಗಳಿದ್ದುವು. ಅನಂತರ ಅವನ್ನು ಕಲ್ಲಿನ ರಚನೆಗೆ ಬದಲಾಯಿಸಲಾಯಿತು. ಮರವೆಸನಾಗಿ ಮಾಡಿಸಿ ಮಣ್ಣಲಿ ಸಾಸಿರವೆಡೆದೊಱೆ ಯೆಪ್ಪತ್ತಱ ಬಸದಿಗಳಿನ್ದಪ್ಪುವ ಮಣ್ಡಲಿಯ ಪಟ್ಟದ ತೀರ್ಥದ ಬಸದಿಯಂ ಕಲುವೆಸ ನಾಗಿ ಮಾಡಿಸಿದ ಪಟ್ಟದ ಬಸದಿ [EC. VII. (BLR) ಶಿವಮೊಗ್ಗ, 4. 1121–22, ಪು. 10–15] ಕುರಿತ ವಿವರಗಳಿವೆ. ಇದು ಗಂಗಾನ್ವಯದವರು ಮಂಡಲಿಯ ಬೆಟ್ಟದ ಕ್ರಿ.ಶ. 4-5 ನೆಯ ಶ.ದಲ್ಲಿ ಮಾಧವದಡಿಗರ ಕಾಲದಲ್ಲಿ ಮಾಡಿಸಿದ್ದ ಬಸದಿ

ಯನ್ನು ಪಡಿಸಲಿಸುತ್ತ ಬಂದು ತದನಂತರ ಮರವೆಸನಾಗಿಯೂ, ಅಲ್ಲಿಂದ ಮುಂದೆ ಕಲುವೆಸನಾಗಿಯೂ ಮಾರ್ಪಡಿಸುತ್ತ ಬಂದ ಚಾರಿತ್ರಿಕ ಬೆಳವಣಿಗೆಯನ್ನು ತಿಳಿಸುತ್ತದೆ: ಪೆರ್ಮಾಡಿಯು ಕಟ್ಟಿಸಿದ ಕಲ್ಲ ಬಸದಿ [EC. III ಶ್ರೀ ಪ. 147, ಕ್ರಿ.ಶ. 900], ಪಾಳಿಯಕ್ಕಳು ಮಾಡಿಸಿದ ಕಲ್ಲ ಬಸದಿ [EC. VIII-ii, ನಗರ. 45, ಸು. 1000, ಹುಂಚ. ಸಾಲು : 7] ಮೊದಲಾದ ಶಾಸನಗಳನ್ನು ಗಮನಿಸಬಹುದು.

ಮರವಾದರೇನು, ಮಣ್ಣಾದರೇನು, ಕಲ್ಲಾದರೇನು, ಲೋಹವಾದರೆ ತಾನೆ ಏನು–ಎಲ್ಲವೂ ಸಂಸ್ಕಾರದಿಂದ, ಭಾವನಾತ್ಮಕವಾದ ಬೆಸುಗೆಯ ಸಂಬಂಧದಿಂದ, ಶಿಲ್ಪಿಯ ನಿಪುಣತೆಯ ಮಾಟದಿಂದ ದೇವರಾಗುತ್ತದೆ: ಬಸದಿಯು ಸಂಸ್ಕೃತಿಯ ಕೇಂದ್ರವಾಗುತ್ತದೆ, ಭವಿಷ್ಯದ ಬೆಳಕಾಗುತ್ತದೆ. ಅದರಂತೆ ಬಸದಿಗಳು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಕೆಲವೊಮ್ಮೆ ರಾಜಕೀಯ ಚಟುವಟಿಕೆಗಳ ಕೇಂದ್ರಗಳಾಗಿವೆ. ಬಸದಿಗಳು ಕರ್ನಾಟಕದ ಚರಿತ್ರೆಯಲ್ಲಿ ಮಹತ್ತರವಾದ ಪಾತ್ರವನ್ನು ಹೇಗೆ ನಿರ್ವಹಿಸಿವೆ ಎಂಬುದು ಸುದೀರ್ಘವಾದ, ಅಷ್ಟೇ ಬೃಹತ್ ಪ್ರಮಾಣದ ಅಧ್ಯಯನ ಬಯಸುವ ಗಂಭೀರ ವಿಷಯ. ಈ ಬಗೆಯ ಅಧ್ಯಯನಕ್ಕೆ ಇರುವ ಹಲವು ಆಯಾಮಗಳಲ್ಲಿ ಕೆಲವನ್ನು ಅತಿ ಸಂಗ್ರಹವಾಗಿ ಸೂಚಿಸುತ್ತೇನೆ.

ಜಿನಧರ್ಮಾವಾಸವಾದ ಈ ಕನ್ನಡ ನಾಡಿನ ಉದ್ದಗಲಗಳಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಅಲ್ಲಲ್ಲಿ ಅನೇಕ ಜೈನ ಕೇಂದ್ರಗಳಿದ್ದು ಅವು ಹಲವು ಬಸದಿಗಳ ನಿವಾಸವಾಗಿದ್ದುದು ದಿಟ. ಅಂಥವುಗಳಲ್ಲಿ ಕೆಲವು ಕ್ರಿ.ಪೂ.ಕ್ಕೂ ಸೇರಿದ್ದು ತುಂಬ ಪ್ರಾಚೀನ ಎಡೆಗಳಾಗಿವೆ: ಕಟ್ವಪ್ಪು (ಶ್ರವಣಬೆಳುಗೊಳ), ಕೊಪಣ (ಕೊಪ್ಪಳ), ಕಿತ್ತೂರು (ಕೀರ್ತಿಪುರ), ಬನವಾಸಿ (ವೈಜಯಂತಿಪುರ),–ಇತ್ಯಾದಿ. ಇನ್ನು ಕೆಲವು ಊರುಗಳು ಕ್ರಿ.ಶ. ಆರನೆಯ ಶತಮಾನದ ವೇಳೆಗಾಗಲೇನೆ ಜೈನ ಬಸದಿಗಳ ಬೀಡುಗಳೆಂದು ಹೆಸರಾಗಿದ್ದುವು ; ಎಲ್ಲೋರ, ಒಂಕುಂದ (ಒಕ್ಕುಂದ), ಕಿಸುವೊಳಲ್ (ಪಟ್ಟದಕಲ್ಲು), ಕುವಳಾಲಪುರ (ಕೋಳಾಲ), ಕೆಲ್ಲಂಗೆಱೆ ಕೋಗಳಿ, ಗುಡ್ನಾಪುರ, ತಲವನಪುರ, ನಂದಗಿರಿ, ಪೊಂಬುಚ್ಚ (ಹೊಂಬುಜ-ಹುಂಚ), ಪುಲಿಗೆಱೆ (ಲಕ್ಷ್ಮೇಶ್ವರ), ಬಂದಳಿಕೆ, ಬಳ್ಳಿಗಾವೆ, ಬಾದಾಮಿ, ಮಂಡಲಿತೀರ್ಥ, ಮಂಣೆ (ಮಾನ್ಯಪುರ), ಮಳಖೇಡ (ಮಾನ್ಯಖೇಟ), ಯರಬಳ್ಳಿ (ಬಳ್ಳಾರಿ ಜಿಲ್ಲೆ), ಶ್ರೀಪುರ (ನೆಲಮಂಗಲ ತಾ.), ಸವದತ್ತಿ (ಸವಣದತ್ತಿ-ಸೌಂದತ್ತಿ-ಸೌದತ್ತಿ-ಸುಗಂಧವರ್ತಿ), ಹಲಸಿ (ಪಲಸಿ-ಪಲಾಶಿಕಾ) –ಮುಂತಾದುವು.

ಎಲ್ಲೋರ, ಪಟ್ಟದಕಲ್ಲು (ಕಿಸುವೊಳಲು), ಬದಾಮಿ, ಪುಲಿಗೆರೆ ನಗರಗಳನ್ನು ಬಾದಾಮಿ ಚಾಳುಕ್ಯರು ಜಿನವಿಹಾರವಾಗಿಸಿದರು. ಕುವಲಾಲಪುರ, ಕೆಲ್ಲಂಗೆರೆ, ಕೋಗಳಿ, ತಲವನಪುರ, ನಂದಗಿರಿ, ಮಣ್ಣೆ, ಮಂಡಲಿ ಮೊದಲಾದುವನ್ನು ಗಂಗರು

ಜಿನಧರ್ಮಕ್ಕೆ ತೊಟ್ಟಿಲಾಗಿಸಿದರು. ಕೊಪಣ, ಪೊಟ್ಟಲಕೆರೆ, ಬಂಕಾಪುರ, ಮಳಖೇಡ ಮೊದಲಾದ ಸ್ಥಳಗಳನ್ನು ರಾಷ್ಟ್ರಕೂಟರು ಪೋಷಿಸಿದರು. ಹೊಂಬುಜ ಪ್ರದೇಶವನ್ನು ಸಾಂತಾರರೂ, ಸವದತ್ತಿಯ ಮೈಳಾಪ ತೀರ್ಥವನ್ನು ರಟ್ಟರೂ ಅಭಿವೃದ್ಧಿಪಡಿಸಿದರು [ನಾಗರಾಜಯ್ಯ, ಹಂಪ; ಮೈಳಾಪತೀರ್ಥ–ಶಾಸನಗಳ ಆಧಾರ, 'ಸಮ್ಮಿಲನ' (1994) ಪು. 17-20] ಹಲಸಿ (ಪಲಾಶಿಕಾ) ನಗರವನ್ನು ಜೈನಗೃಹ ಕೇಂದ್ರವಾಗಿಸಿದವರು ಬನವಾಸಿಯ ಆದಿಕದಂಬರು.

ಕದಂಬರ ಕರ್ಮಭೂಮಿ ಬನವಾಸಿ. ಜೈನರಿಗೆ ಬನವಾಸಿ ಬಹಳ ಹಿಂದಿನಿಂದ ಕೇಂದ್ರವಾಗಿತ್ತು. ಆಚಾರ್ಯ ಶಿವಾರ್ಯನು ಅಲ್ಲಿ ಜಿನರ ಪ್ರಾಸಾದವನ್ನು ಮಾಡಿಸಿದ್ದನು. ಕ್ರಿ.ಶ. ಮೂರನೆಯ ಶ.ದಲ್ಲಿಯೇ ಬನವಾಸಿಯಲ್ಲಿ ಚಂದ್ರಪ್ರಭ ತೀರ್ಥಂಕರರ ಪ್ರಾಚೀನ ಚೈತ್ಯಾಲಯವಿತ್ತು. ಈ ಚೈತ್ಯಗೃಹದಲ್ಲಿ ಸಮಂತಭದ್ರಾಚಾರ್ಯರು ಆರಾಧನೆ ನಡಸಿದ್ದರು. ಅಲ್ಲದೆ ಅವರು ಈ ಚಂದ್ರಪ್ರಭನಾಥಸ್ವಾಮಿಯ ಹೆಸರಿಂದ ಚಂದ್ರಕುಲ–ಅನ್ವಯವನ್ನೂ, ಬನವಾಸಿಗಚ್ಛವನ್ನೂ ಮೊದಲು ಮಾಡಿದ್ದರು. ಪ್ರಾಚೀನ ಜೈನ ಕೃತಿಗಳಲ್ಲಿ ಬನವಾಸಿಯು ಜೈನರಿಗೆ ಮುಖ್ಯ ಸ್ಥಳವಾಗಿತ್ತು. ಜೈನ ಕವಿ ಪಂಪನು ಬನವಾಸಿಯನ್ನು ನೆನೆದಿದ್ದಾನೆ.

ಹೀಗೆ ಜೈನರ ಆಡುಂಬೊಲವಾಗಿದ್ದ ಬನವಾಸಿ ಮಂಡಲದಲ್ಲಿ ಅಂಕುರಿಸಿದ ಕದಂಬಕುಲದವರು ಸಹಜವಾಗಿಯೇ ಜೈನ ಧರ್ಮದ ಪ್ರಭಾವಕ್ಕೆ ಪಕ್ಕಾಗಿದ್ದರು. ಕಾಕುಸ್ಥವರ್ಮ (405-30), ಶಾಂತಿವರ್ಮ (430-55), ಮೃಗೇಶವರ್ಮ(455-80), ರವಿವರ್ಮ (485-519), ಹರಿವರ್ಮ (519-30)-ಇವರೆಲ್ಲ ಜೈನ ಮತವನ್ನು ಅನುಸರಿಸಿದರೂ ಉಳಿದ ಮತಗಳಿಗೆ ಉದಾರಿಗಳಾಗಿದ್ದರು. ಕಾಕುಸ್ಥವರ್ಮನನ್ನು ಕಾಪಾಡಿದ ಕಾರಣಕ್ಕಾಗಿ ಸೇನಾಪತಿ ಶ್ರುತಕೀರ್ತಿಗೆ ಕಾಕುಸ್ಥವರ್ಮನು ಬಳೋವರವನ್ನು ದಾನವಿತ್ತನು [CKI (1985) ಪು. 9] ಬಳೋವರ ಕ್ಷೇತ್ರವು ಜೈನ ಮುನಿಗಳ ಇರ್ಕೆದಾಣವೆನಿಸಿದ ಬೇಟ ಗ್ರಾಮಕ್ಕೆ ಸೇರಿತ್ತು; ಈಗಿನ ಹಲಸಿಯಲ್ಲಿರುವ 'ಬೊಡಕೆ ಟೆಂಬೆ' ಎಂಬುದೇ ಬಳೋವರ. ಶ್ರುತಕೀರ್ತಿಯನ್ನು ಹಲಸಿಯ ಶಾಸನದಲ್ಲಿ 'ಭೋಜ'ನೆನ್ನಲಾಗಿದೆ.

ಕಾಕುಸ್ಥವರ್ಮನ ಪಲ್ಮಿಡಿ ಶಾಸನವೇ ಈಗ ಕನ್ನಡ ಭಾಷೆಯ ಉಪಲಬ್ಧ ಶಾಸನಗಳಲ್ಲಿ ಮೊಟ್ಟ ಮೊದಲನೆಯದು ಎನ್ನಲಾಗಿದೆ. ಕನ್ನಡದ ಮೊತ್ತ ಮೊದಲನೆಯ ಶಾಸನವಿತ್ತ ಕಾಕುಸ್ಥವರ್ಮನೇ ಜೈನಚಮೂಪನೊಬ್ಬನಿಂದ ರಕ್ಷಿಸಲ್ಪಟ್ಟವನೆಂಬುದೂ, ಜೈನ ಶ್ರುತಕೀರ್ತಿಗೆ ದಾನ ನೀಡಿದ್ದೂ, ಕನ್ನಡದ ಆದಿ ಜೈನದಾನ ಶಾಸನದ ಕರ್ತೃವೆಂಬುದೂ ಐತಿಹಾಸಿಕ ಮಹತ್ವದ್ದಾಗಿದೆ. ಕಾಕುಸ್ಥವರ್ಮನ ಮೊಮ್ಮಗ ಮೃಗೇಶವರ್ಮನೂ ಸಹ, ಚಮೂಪ ಶ್ರುತಕೀರ್ತಿಯ ಮಗ ದಾಮಕೀರ್ತಿ

ಯನ್ನು ಕ್ರಿ.ಶ. 463ರಲ್ಲಿ ಭೋಜಕನನ್ನಾಗಿಸಿದನು [CKI : 1985 : ಪು. 51] : ಭೋಜಕರು ಪೌರೋಹಿತ್ಯದವರೊ, ಧರ್ಮಾಧಿಕಾರಿಗಳೊ, ಹೆಗ್ಗಡೆಗಳೊ ಆಗಿರಬೇಕು. ಶ್ರುತಕೀರ್ತಿಯ ಮೊಮ್ಮಗನೂ, ದಾಮಕೀರ್ತಿಯ ಮಗನೂ ಆದ ಜಯಕೀರ್ತಿಯೂ ಮೃಗೇಶವರ್ಮನ ಮಗನಾದ ರವಿವರ್ಮನ ಆಶ್ರಿತನಾಗಿದ್ದನು [CKI:1985:ಪು.93] ರವಿವರ್ಮನು ಪ್ರತಿವರ್ಷ ಕಾರ್ತಿಕ ಹುಣ್ಣಿಮೆಯ ಜೈನ ಅಷ್ಟಾಹ್ನಿಕ ಪರ್ವವನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸಲು, ಜಿನೇಂದ್ರ ಮಹಿಮಾ ಕಾರ್ಯದಲ್ಲಿ ತೊಡಗಲು ರಾಜಾಜ್ಞೆ ಮಾಡಿದನು.

ಶ್ರುತಕೀರ್ತಿಗೆ ಕಾಕುಸ್ಥವರ್ಮನು ಕೊಟ್ಟ ದಾನವನ್ನು ಶಾಂತಿವರ್ಮ, ಮೃಗೇಶ ವರ್ಮ, ರವಿವರ್ಮರು ಪುನರುಜ್ಜೀವಿಸಿದರು. ಇವರ ಕಾಲದಲ್ಲಿ ಜೈನಯತಿಗಳದೇ ಒಂದು ಗ್ರಾಮ, 'ಖೇಟ' ಎಂಬುದು ಕ್ರಿ.ಶ. 400ರ ವೇಳೆಗಾಗಲೆ ಹಲಸಿಯ ಹತ್ತಿರವೇ ಇದ್ದಿತೆಂಬುದು ಗಮನಾರ್ಹ. ಈ ಖೇಟ (ಖೇಡ)ದಿಂದ ಒಂದು ಭಾಗವನ್ನು ಪಡೆದು ಕಾಕುಸ್ಥವರ್ಮನು ಹಲಸಿಯ ಜಿನಾಲಯಕ್ಕೆ, ಅದರ ಮೇಲ್ವಿಚಾರಕ ಮತ್ತು ತನ್ನ ಪ್ರಾಣರಕ್ಷಕ ದಂಡನಾಯಕ ಶ್ರುತಕೀರ್ತಿಗೆ ಕೊಟ್ಟನು. ಗುಡ್ನಾಪುರದ ಕಾಮಜಿನಾಲಯ ಮೊದಲುಗೊಂಡು ಹಲವು ಬಸದಿಗಳು ಈ ಕದಂಬರಾಜರ ಆಳ್ವಿಕೆಯ ಅವಧಿಯಲ್ಲಿ, ಕ್ರಿ.ಶ. 4-5-6ನೆಯ ಶತಮಾನಗಳಲ್ಲಿ ನಿರ್ಮಾಣವಾದುವು. ಕರ್ನಾಟಕದ ಬಸದಿಗಳ ಇತಿಹಾಸದಲ್ಲಿ ಈ ಬಸದಿಗಳು ಪ್ರಾಚೀನವಾಗಿದ್ದು ವಿಶೇಷ ಗಮನಿಕೆಗೆ ಅರ್ಹವಾಗಿವೆ. ಈ ಬಸದಿಗಳು, ಇವುಗಳಲ್ಲಿದ್ದ ಜೈನ ಆಚಾರ್ಯರು, ದಿಗಂಬರ ಶ್ವೇತಪಟ ಮತ್ತು ಯಾಪನೀಯ ಶಾಖೆಗಳು ಕದಂಬರ ಉದಾರ ಪೋಷಣೆ ಪಡೆದುವು.

ಬಸದಿಗಳಿಗೆ ಬಳಕೆಯಾಗಿರುವ ಬೇರೆ ಬೇರೆ ಸಮಾನಾರ್ಥಕ ಶಬ್ದರೂಪಗಳು ಎಲ್ಲವೂ ಸಂಸ್ಕೃತ ಶಬ್ದಗಳೇ ಆಗಿವೆ ಯಾದರೂ 'ಕೊಯಿಲ್ ವಸದಿ' ಎಂಬುದೊಂದು ಅಪವಾದವಾಗಿದೆ: ದುಗ್ಗಮಾರ ಕೊಯಿಲ್ವಸದಿ [EC. III(1974) ಹೆ ಕೋ. 63 (MAR 1932-58) 9 ಶ. ಹೆಬ್ಬಲಗುಪ್ಪೆ (ಮೈಸೂರು ಜಿ/ಹೆಕೋ ತಾ) ಪು. 468]. ಇದರಲ್ಲೂ ಕೊಯಿಲ್ ಎಂಬುದು (=ದೇವರಮನೆ) ದ್ರಾವಿಡ ಮೂಲದ ಮಾತಾ ದರೂ, ವಸದಿ ಎಂಬುದು ಸಂಸ್ಕೃತದ ವಸತಿಯ ತದ್ಭವ ರೂಪ; ಇದರ ಮುಂದಿನ ಬೆಳವಣಿಗೆಯೇ ಬಸದಿ. ಜಿನಾಲಯ ಎಂಬ ಶಬ್ದದ ಬಳಕೆ ಬಹಳವಾಗಿ ಕಾಣುತ್ತದೆ [EC.VI. ಕಡೂರು 36. 1205 ಬಕ್ಕಲಗೆರೆ. : EC.II. 573 13 ಶ. ಕಾಂತರಾಜ ಪುರ. : EC.V. ಬೇ 131. 1257. ಹಿರೇಹಳ್ಳಿ] ಅರ್ಹಗೇಹ [EC.VII (1979) ನಾಮಂ. 26 (IV ನಾಮಂ. 20) 1168. ಕಂಬದಹಳ್ಳಿ(ಮಂಡ್ಯ ಜಿ/ನಾಮಂ ತಾ)]. ಅರ್ಹತ್ ದೇವಾಯತನ [MAR 1938. ಪು. 80. ಹೊಸಕೋಟೆ (ಬೆಂಜಿ/)] ಅರ್ಹತ್ ಪರಮೇಷ್ಠಿ ಚೈತ್ಯಾಲಯ [EC.X. ಚಿಕ್ಕಬಳ್ಳಾಪುರ. 29. ಕ್ರಿ.ಶ. 750. ನಂದಿ (ಬೆಂ ಜಿ/)] ಜಿನಗೃಹ [EC.V. ಅರಕಲಗೂಡು 97. 1095. ಸೋಮವಾರ

(ಹಾಸನ ಜಿಲ್ಲೆ)], ಚೆದಿಅ [EC.IV (1975) 347(ರಿ 1925-106) ಕುಲಗಾಣ (ಮೈಜಿ/ಚಾಮರಾಜನಗರತಾ)], ಚೇದಿಯ [IA.XI. ಪು. 68, ಸು. ಕ್ರಿ. ಶ.560. : KI.I. 3. ಸು. 750. : SII.XI-i. 5. ಇತ್ಯಾದಿ], ಜಿನಗೇಹ [EC. VII. ಶಿ 136. 1068: EC.VII (1979) ನಾಮಂ. 64], ಜಿನನಾಥಾವಾಸ [EC. VII (BLR) ಶಿ. 136. 1068] ಜಿನನಿಳಯ [ಅದೇ :], ಜಿನಭವನ [EC. VIII-ii (1902) ಸೊರಬ 233, 1138. ವೃದ್ರಿ (ಶಿಜಿ/ಸೊರಬತಾ)], ಜಿನಮಂದಿರ [ಅದೇ :] ತೀರ್ಥೇಶ ವಾಸಂ [EC. VII. ಶಿ. 136. 1068] ವಸದಿ [EC.VII (1979) ನಾಮಂ 32 ಮತ್ತು 72] ಬಸದಿ [EC.II (1973) 140 (415) 9 ಶ. ಪು. 86]—ಮುಂತಾದ ಸಂವಾದಿ ಅಥವಾ ಸಮಾನಾರ್ಥಕ ಪರ್ಯಾಯ ಶಬ್ದಗಳನ್ನು ಶಾಸನಕಾರರು ಬಳಸಿದ್ದಾರೆ. ಸಂಸ್ಕೃತ ಭಾಷೆಯ ಚೈತ್ಯ ಶಬ್ದವು ಪಾಳಿಯಲ್ಲಿ ಚೇತಿಯ ಎಂದೂ, ಪ್ರಾಕೃತದಲ್ಲಿ ಚೇಇಅ ಎಂದೂ ವ್ಯತ್ಯಾಸಗೊಂಡಿದೆ. ಪ್ರಾಕೃತ ರೂಪವು ಕನ್ನಡಕ್ಕೆ ಬಂದು ಚೇದಿಯ ಎಂದಾಗಿದೆ. ಕನ್ನಡ ಕಾವ್ಯಗಳಲ್ಲಿ ಇನ್ನೂ ಕೆಲವು ಶಬ್ದಗಳನ್ನು ಕವಿಗಳು ಪ್ರಯೋಗಿಸಿದ್ದಾರೆ. ಚೈತ್ಯಾಳಯಃ [ಪಂಪ, ಆದಿಪು. 15-13ವ ; ರನ್ನ, ಅಜಿಪು. 4-67ವ] ಮತ್ತು ಚೈತ್ಯಾಲಯ—ಇವು ಕವಿಗಳಂತೆ ಶಾಸನ ಕವಿಗಳಿಗೂ ಇಷ್ಟವಾದ ಶಬ್ದ [EC. VII (1979) ನಾಮಂ. 92,93,94. : IA. XIX. 273. 1054.: Kannada Inscriptions of Andhra Pradesh, (1961), 72. 1008. ಸಾಲು : 8-10]. ಕ್ರಿ.ಶ. 1-2 ನೆಯ ಶ. ದ ಕುಂದ ಕುಂದ ಆಚಾರ್ಯರ 'ಬೋಧ ಪಾಹುಡ'ವೆಂಬ ಪ್ರಾಕೃತ ಕೃತಿಯಲ್ಲಿ ಆಯತನ, ಚೈತ್ಯಗೃಹ, ಪ್ರತಿಮಾ, ದರ್ಶನ, ಬಿಂಬ, ಜಿನ ಮುದ್ರಾ, ಜ್ಞಾನ, ದೇವ, ತೀರ್ಥ, ಅರ್ಹತ್ ಮತ್ತು ಪ್ರವ್ರಜ್ಯಾ—ಎಂಬ ಈ ಹನ್ನೊಂದರ ಸ್ವರೂಪವನ್ನು ಪರಿಚಯಿಸಲಾಗಿದೆ.

ಕರ್ನಾಟಕದಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಬಸದಿಗಳಿದ್ದುವು. ಅವುಗಳಲ್ಲಿ ಕೆಲವು ಮಾತ್ರ ಇಂದಿಗೂ ಉಳಿದು ಬಂದಿವೆ. ಮತದ್ವೇಷದ ದಳ್ಳುರಿಯಲ್ಲಿ ನಾಶವಾದ ಸಾವಿರಾರು ಪ್ರಾಚೀನ ಬಸದಿಗಳಲ್ಲಿ ಸುಮಾರು ಒಂದು ಸಾವಿರ ಬಸದಿಗಳ ವಿವರಗಳು ಶಾಸನಗಳಿಂದಲೇ ದೊರೆಯುತ್ತವೆ. ಅವುಗಳಲ್ಲಿ, ಕೇವಲ ದಿಗ್ದರ್ಶನಕ್ಕಾಗಿ, ಹತ್ತನೆಯ ಶತಮಾನಕ್ಕೂ ಹಿಂದೆ ಇದ್ದ ಕೆಲವು ಬಸದಿಗಳನ್ನು ಶಾಸನದ ಆಧಾರ ಸಹಿತ ಹೆಸರಿಸುತ್ತೇನೆ: ಪೆಬ್ಬೊರ್ಳಲ ಜಿನಾಲಯ [EC. X. ಮಾಲೂರು 73. A.D. 370. ಪು. 172-73] ಕಾಮಜಿನಾಲಯ [ಕ್ರಿ.ಶ. 5 ಶ.: CKI (1985)] ಉರನೂರ ಅರ್ಹತ್ ಮಂದಿರ [EC. X. ಮಾಲೂರು 72. ಸು. ಕ್ರಿ. ಶ. 425. ನೊಣಮಂಗಳ] ಪರಲೂರ ಚೇದಿಯ [CKI (1985). 8. ಕ್ರಿ. ಶ. 458-59. ದೇವಗಿರಿ ತಾಮ್ರಪಟ. ಪು. 29-33. ಸಾಲು : 9-13.; KI.I. 3. ಸು. 750. ಆಡೂರು] ಮೇಘುಟೀ ಜಿನಮಂದಿರ ಮತ್ತು ಮೇಣ ಬಸದಿ [ಸು. ಕ್ರಿ. ಶ. 650] ಕುಡಲೂರ ಪೂರ್ವೀಯ ಜಿನಾಲಯ [MAR 1909. ಪು. 14. ಸು. 7-8 ನೆಯ ಶ.] ಅರ್ಹತ್ ಪರಮೇಷ್ಠಿ ಚೈತ್ಯಾಲಯ

[ಸು. 750. ನಂದಿ] ಅರ್ಹದಾಯುಕನ ವರ್ಧಮಾನ ಜಿನಾಲಯು [CKI (1985) : ಕ್ರಿ. ಶ. 6 ಶ.; ಪು. 108] ಹೊಸಕೋಟೆ ಬಸದಿ–ಅರ್ಹತ್ ದೇವಾಯತನ MAR. 1938. ಕ್ರಿ.ಶ. 6 ಶ. (ಸು. 520) ಪು. 80] ಶ್ರೀಪುರ ಲೋಕ ತಿಲಕ ಜಿನಾಲಯು [EC. VII (1979) ನಾಮಂ. 149. 776] ತಲವನ ನಗರ ಶ್ರೀವಿಜಯು ಜಿನಾಲಯು [MAR 1927. 808. ಪು. 112] ಲೋಕಾಪುರ ಬಸದಿ [KRI, 1942–43, 31. 9 ಶ.] ಪೆಣ್ಣೆಗಡಂಗದ ಸತ್ಯವಾಕ್ಯ ಜಿನಾಲಯು EC. I. ವೀರರಾಜಪೇಟೆ, 96. 888.] ಕೊಪ್ಪಳ ಬಸದಿ [ARIE 1954-55.159.890. ಪು. 41] ಸೌದತ್ತಿ [JBBRAS.X.875. ಪು. 194-98]. ಪುಲಿಗೆರಿಯ ಶಂಖಜಿನಾಲಯು [S 11. XX. 3. A. D. 630] ರಾಣಿಬೆನ್ನೂರ ನಾಗುಳಬಸದಿ [S 11. XVIII. 315. 859-60 : K1. 11.5.859]. ಕೊಣ್ಣೂರ (ಕೊಳಲೂರ) ಬಸದಿ [El. VI. 860. ಪು. 25-38] ಕಮ್ಮಡವಾಡಕಲ್ಬಾವಿ ಜಿನಾಯು [1A. XVIII. 800. ಪು. 309-13] ಕಡಬದಜಿನ ಮಂದಿರ [E 1. 41. 812. ಪು. 340-45] ಪೆರ್ಮನಡಿ ಕಲ್ಲು ಬಸದಿ [EC. VI. ಪಾಂಡವಪುರ. 16. ಸು. 900. ಕ್ಯಾತನಹಳ್ಳಿ] ಮಂಣೆಯು ಸೇನಾಪತಿ ಶ್ರೀ ವಿಜಯಜಿನಾಲಯು [EC. IX. ನೆ ಮಂ. 60. 797] ಮುಳ್ಗುಂದದಜಿನ ಮಂದಿರ [1 A. XIII. 903. ಪು. 192-94. ರಾಷ್ಟ್ರಕೂಟ ಕೃಷ್ಣ 11] ಬಂದಳಿಕೆ ಬಸದಿ [MAR. 1911.902. ಪು. 38: EC. VII ಶಿಕಾರಿಪುರ 219. 918. ಶಾಂತಿನಾಥ ಬಸದಿ] ಬಂಕಾಪುರ ಧೋರಜಿನಾಲಯು [S 11. 11. 905. ಪು. 20] ಕೂಲಿಗೆರೆ ಕನಕ ತೀರ್ಥದ ಬಸದಿ [EC. VII ಮದ್ದೂರು 100. (111 ಮನ 30) 916-17] ಸೂಡಿಯು ಬಸದಿ [E 1. 111. 25. 938] ನರೇಗಲ್ ಬಸದಿ [S 11. XI. 38. 950] ಕಾದಲೂರು ಬಸದಿ [E 1. 36. 962. ಪು. 97-110] ಅಸುಂಡಿಜಿನಾಲಯು [S 11. 11. 925. ಪು. 20] ಯೆಡರಾವಿ ಬರ್ಮದೇವ ಮಂದಿರ [ARIE 1963-64. 356. 979] ಕುಂಸಿ ಬಸದಿ [EC. VII. ಶಿ. 114. 950] ಪೆರ್ಗ ದೂರು ಬಸದಿ [EC. 1. ವೀರರಾಜಪೇಟೆ 98. 978] ಗಂಗ ಕಂದರ್ಪಜಿನಾಲಯು [ARIE 1950-51. 15. 965 ಬಡ್ಲಿ (ಬೆಳಗಾವಿಜಿ/)] ಬೆಳವತ್ತಿ (ಬೆಳ್ಳಟ್ಟಿ) ಬಸದಿ [ARIE 1953-54. 204. 990. ಪು. 38] ಇತ್ಯಾದಿ ಇನ್ನೂ ಹಲವು ಜಿನಾಲಯುಗಳು. ದಾನಚಿಂತಾಮಣಿ ಅತ್ತಿಮಬ್ಬೆ ಕಟ್ಟಿಸಿದ 1500 ಜಿನಾಲಯುಗಳೆಲ್ಲ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿತವಾಗಿವೆ. ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಮಹಾಮಂಡಲೇಶ್ವರ ಗಂಗಬೂತುಗ ಪೆರ್ಮಾಡಿಯು ಮೂವರು ಮಡದಿಯ ರಲ್ಲಿ ದೀವಳಾಂಬಳು ಸೂಡಿಯಲ್ಲೂ (ಕ್ರಿ. ಶ. 938), ಪದ್ಮಬ್ಬರಸಿಯು ನರೇಗಲ್ಲಿ ನಲ್ಲೂ (ಕ್ರಿ. ಶ. 950), ಕಲ್ಲಬ್ಬರಸಿಯು ಕಾದಲೂರಿನಲ್ಲೂ (ಕ್ರಿ. ಶ. 962) ಒಂದೊಂದು ಬಸದಿ ಮಾಡಿಸಿ ದತ್ತಿಗಳನ್ನಿತ್ತರೆಂಬುದು ಚರಿತ್ರಾರ್ಹ ದಾಖಲೆ ಯೆನಿಸಿದೆ.

ಬಸದಿಗಳ ಇರುವಿಕೆಯಿಂದಾಗಿ ಅನೇಕ ಊರುಗಳು ಜೈನತೀರ್ಥ ಸ್ಥಳಗಳಾಗಿ ಪ್ರಸಿದ್ಧಿ ಪಡಿದಿವೆ. ಇಂಥ ಹಲವು ತೀರ್ಥ ಕ್ಷೇತ್ರಗಳ ಉಲ್ಲೇಖಗಳು ಶಾಸನಗಳಲ್ಲಿವೆ. ಶಾಸನೋಕ್ತ ಜೈನ ತೀರ್ಥಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ಪ್ರಭಾವ, ಸಾಧನೆ ಕುರಿತು ಪಿಎಚ್.ಡಿ ಮಹಾಪ್ರಬಂಧವನ್ನು ಸಿದ್ಧಪಡಿಸಬಹುದು. ನಿದರ್ಶನಾರ್ಥವಾಗಿ ಕೆಲವು ಜೈನ ತೀರ್ಥಗಳನ್ನು ಹೆಸರಿಸಬಹುದು : ಮುಂದಿನ ವಿಶೇಷ ಸಂಶೋಧನೆಗೆ ಸಹಾಯವಾಗಲೆಂದು ಅಕಾರ ಅನುಕ್ರಮಣಿಕೆಯಲ್ಲಿ ಅಳವಡಿಸಿದೆ ; ಇಂಗಳೇಶ್ವರ ತೀರ್ಥ (SII. XV. 598. 12. ಶ. ತಮ್ಮಡಿಡ್ಡಿ], ಕಂಬದ ಹಳ್ಳಿ ತೀರ್ಥ [EC. VII (1979) ನಾಮಂ 26. (IV ನಾಮಂ 20) 1168], ಕಡ(ಳ) ಸತವಾದಿ ತೀರ್ಥ [EC. 11 (1973) 520 (484) ಮತ್ತು 521 (485) 11 ಶ.], ಕನಕಗಿರಿ ತೀರ್ಥ [EC. VII. ಮದ್ದೂರು 100 (111 ಮವ 30) 916-17. ಕೂಲಿಗೆರೆ. ಪು 313], ಕಲ್ಲುಕೆಱೆ[3] ತೀರ್ಥ [SII. XX. 202. 1244. ಕಲಕೇರಿ. ಪು. 252], ಕಟ್ವಪ್ಪು ತೀರ್ಥ [EC. 11. 86 (76) ಕ್ರಿ. ಶ. ಏಳನೆಯ ಶ. ಪು. 67] ಕಾರ್ತಿಕಸ್ವಾಮಿ ತೀರ್ಥ [ಭ್ರಾಜಿಷ್ಣು; 'ವಡ್ಡಾರಾಧನೆ' (ಸಂ) ನಾಗರಾಜಯ್ಯ, ಹಂಪ., (1993)]. ಕುರುಳಿಯ ತೀರ್ಥ [EC. VII-i (1902) ಶಿವಮೊಗ್ಗ 64. 1067 ಮತ್ತು 1112. ಪುರಲೆ. ಪು. 63-69], ಕೆಲ್ಲಂಗೆಱೆ[3] ತೀರ್ಥ [EC IX (1990) ಬೇ. 388 (V ಬೇ 123) 954, ಬಸ್ತಿಹಳ್ಳಿ], ಕೊಂಡಕುಂದೆಯ ತೀರ್ಥ [SII. IX-i. 150. 1081. ಕೊನಕೊಂಡ್ಲ] ಕೊಪಣ ಮಹಾ ತೀರ್ಥ [EC. II. 220 (475) 10 ಶ.] ಕೋಗಳಿತೀರ್ಥ [SII. IX-i. 117. 1055. ಕೋಗಳಿ. ಪು. 92], ಗೊಂಮಟದೇವರ ತೀರ್ಥ EC. 11-374. [EC. VII (1979) (268) [118 ಪು. 241], ತಿಪ್ಪೂರು ತೀರ್ಥ EC VII (1979) ಮದ್ದೂರು 54. (111 ಮವ 31) 117. ತಿಪ್ಪೂರು. ಪು. 282-84], ದಾನವುಲಪಾಡು ತೀರ್ಥ [ARSIE. 1905-06. ಪು. 120-27] ಮತ್ತು [EI. X. 150. 915. : IAP. Cd. 1.168. 915. ; SII. X. 28. 948[, ಪೊಸವೂರ ತೀರ್ಥ [SII. XI-i. 65. 1028. ಹೊಸೂರು. ಪು. 55-57], ಬಂಕಾಪುರ ತೀರ್ಥ [EC. II. 64 (59) 10 ಶ. ಪು. 23. : EC. VII (1902) ಶಿಕಾರಿಪುರ 219. 918], ಬಂದಳಿಕೆ ತೀರ್ಥ [ಅದೇ : ಶಿಕಾರಿಪುರ 219. 912. ಬಂದಳಿಕೆ. ಪು. 298] ಬಿಂಡಿಗೆ ನವಿಲೆ ತೀರ್ಥ [EC. VII (1979) ನಾ ಮಂ. 26. (VI ನಾ ಮಂ 20) 1168. ಕಂಬದಹಳ್ಳಿ ಪು. 17], ಬೆಳ್ಗೊಳ ತೀರ್ಥ [EC. II. 476 (345) 1159. ಪು. 290], ಬೋಧನ ತೀರ್ಥ [ಅದೇ : 336 (234) 12 ಶ. ಪು. 186], ಮಂಡಳಿ ತೀರ್ಥ [EC. VII (BLR) ಶಿ. 4. 1122. ಪು. 10-15], ಮುಕ್ಕುಂದ ತೀರ್ಥ [SII. XI:i. 177. 1125. ಮುಗದ. : ಅದೇ : 78. 1045. ಪು 71-72], ಮುಳ್ಗುಂದ ತೀರ್ಥ [EI. XIII. 192. 902. : SII. XI-i. 47. 994], ಮೈದುವೊಳಲದಿವ್ಯ ತೀರ್ಥ [EC. XII. ತುಂಕೂರು. 38. 1160], ಮೈಳಾಪ ತೀರ್ಥ [JBBRS. XXX. Vol. X. No. 2, A.D. 876. ಪು. 194.], ಮೈಳಾಪ ತೀರ್ಥ-

ಶಾಸನಗಳ ಆಧಾರ [ನಾಗರಾಜಯ್ಯ, ಹಂಪ., 'ಸಮ್ಮಿಲನ' (ಸಂ) ಜಯಚಂದ್ರ (1994)] ವೃಷಭಗಿರಿ ತೀರ್ಥ [IAP. ಕರೀಂ ನಗರ. 3. ಸು. 950] ಶ್ರೀ ಪರ್ವತ ತೀರ್ಥ [ಬ್ರಹ್ಮ ಶಿವ, 'ಸಮಯ ಪರೀಕ್ಷೆ' 2-52 (೯)], ಸಿವಗಂಗೆಯ ತೀರ್ಥ [EC. II. 176 (143) 1131. ಪು. 131]. ಈ ತೀರ್ಥಗಳೆಲ್ಲ ಬಸದಿಗಳ ಹೊಂಗಳಶಗಳಿಂದ ಕಂಗೊಳಿಸುತ್ತ ಭವ್ಯರನ್ನು ತಣಿಸಿದ ಸಾಂಸ್ಕೃತಿಕ ಕೇಂದ್ರಗಳಾಗಿದ್ದುವು.

ಅನೇಕ ಬಸದಿಗಳು, ಅವು ಇರುವ ಊರು ಕೇರಿಗಳನ್ನು ಬಿಟ್ಟು ಅದಕ್ಕಿಂತಲೂ ದೂರದ ಊರಿನ, ಇನ್ನೂ ದೊಡ್ಡ ಪ್ರತಿಷ್ಠಿತ (ಪ್ರಮುಖ ಆಚಾರ್ಯರಿರುವ) ಬಸದಿಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನಕ್ಕೆ ಒಳಪಟ್ಟಿದ್ದುವು. ಈ ಬಗೆಯ ಅಧೀನ ಬಸದಿಗಳನ್ನು 'ಪ್ರತಿಬದ್ಧ'ಜಿನಾಲಯಗಳು ಎನ್ನಲಾಗಿದೆ. ಶಾಸನಗಳಿಂದ ಕೆಲವು ದೃಷ್ಟಾಂತಗಳನ್ನು ಕೊಡುತ್ತೇನೆ : [EC.VII (BLR)ಶಿ.4.1121-22.ಪು. 10–15: EC·VIII–ii (1902) ಸೊರಬ 262 1077 : ಅದೇ, ಸೊರಬ 233 1038–39 ವಧ್ರಿ ಪು 97–98 : EC II 526 (380) 13 ಶ. ಪು. 325 KI V 98 1181 ಇತ್ಯಾದಿ]

ಪ್ರತಿಬದ್ಧ ಬಸದಿಗಳಿಗಿಂತ ಭಿನ್ನವಾದ ಆಶಯದಿಂದ ಕಟ್ಟಲಾದ ಬಸದಿಗಳು ಪರೋಕ್ಷ ವಿನಯದ ಚೈತ್ಯಾಲಯಗಳು, ಗುರುಗಳೊ ಬಂಧುಗಳೊ ಆತ್ಮಿಯರೊ ಆದವರ ಮತ್ತು ಪೂಜ್ಯ ವ್ಯಕ್ತಿಗಳ ಮರಣಾನಂತರದಲ್ಲಿ ಅಂತಹವರ ನೆನಪಿಗಾಗಿ ಸಲ್ಲಿಸುವ ಗೌರವದ ಸಂಕೇತವಾಗಿ ಜಿನನಿಳಯಗಳನ್ನು ಮಾಡಿಸುವ ವಾಡಿಕೆ ಜೈನ ಸಮಾಜದಲ್ಲಿದೆ. ಪರೋಕ್ಷ ವಿನಯಾರ್ಥವಾಗಿ ಕೇವಲ ಗೌರವ ತೋರಿಸಬಹುದು [EC XII ಗುಬ್ಬಿ 57, 979], ನಿಸಿಧಿಗೆಯನ್ನು ನಿಲ್ಲಿಸಬಹುದು [EC. IV (R) ಹುಣಸೂರು 43 1013] ಕಲ್ಲನ್ನು ನಿಲ್ಲಿಸಬಹುದು [EC VIII (1902) ಸೊರಬ 175, 1156] ಭೂಮಿದಾನ ಮಾಡಬಹುದು [EC III (R) ಗುಂಡ್ಲುಪೇಟೆ 56 1049] ಅಥವಾ ಬಸದಿಯನ್ನು ಕಟ್ಟಿಸಬಹುದು. ಪೆರ್ಗಡೆ ನೊಕ್ಕಯ್ಯನು ತನ್ನ ಹಿರಿಯಮಗ ಸತ್ಯಾಗ ಪುತ್ರನ ಪರೋಕ್ಷ ವಿನಯಕ್ಕಾಗಿ ಬಸದಿ ಕಟ್ಟಿಸಿದನು [EC VII (R) ಶಿ 10 1085[ಮಹಾಸಾಮಂತ ಗೂಳಿಯ ಬಾಚಿದೇವನು ಮಹಾ ಸೌಭಾಗ್ಯ ಶೀಲ ಸಂಪನ್ನೆಯಹಾದ ತನ್ನ ಮಡದಿ ಭೀಮನಾಯಕಿತಿಯರ್ಗೆ ಪರೋಕ್ಷ ವಿನೆಯವಾಗಿ ಭೀಮಜಿನಾಲಯಮೆನ್ನು ಬಸದಿಯಂ ಮಾಡಿಸಿಯುಂ·ಭೀಮ ಸಮುದ್ರಮೆಂದು ಕಂನೆಗೆಱೆಯಂ ಕಟ್ಟಿಸಿಯುಂ' ಹೊಲಗದ್ದೆಗಳ ದಾನವಿತ್ತನು [EC XII ತುಂಕೂರು 9. 1151 ಪು 13-15] ಇದಕ್ಕೆ ತದ್ವಿರುದ್ಧವಾದ ನಿದರ್ಶನ ನಾಲಿಕಬ್ಬೆಯದು. ಆಕೆ ತನ್ನ ಗಂಡನ ನೆನಪಿಗೆಂದು ಪರೋಕ್ಷ ವಿನೆಯದಿಂದ ಕೊಂಡಕುಂದೆಯ ತೀರ್ಥದಲ್ಲಿ ಚಟ್ಟಜಿನಾಲಯವನ್ನು ಕಟ್ಟಿಸಿದಳು [SII. IX i. 151 1081]ತಮ್ಮ ಗುರುಗಳ ಸ್ಮರಣಾರ್ಥ ಶಿಷ್ಯರು ಕಟ್ಟಿಸಿದ ಪರೋಕ್ಷ ವಿನೆಯದ ಬಸದಿಗಳೂ ಉಂಟು.

ಕರ್ನಾಟಕದಲ್ಲಿ ಬಸದಿಗಳನ್ನು ಕಟ್ಟಿಸುವ ಪರಂಪರೆಗೆ ಜೀವ ತುಂಬಿದವರು ಯಾಪನೀಯರು. ಲಭ್ಯ ಆಧಾರಗಳನ್ನು ಪರಿಶೀಲಿಸಿದರೆ, ಈಗ ಖಚಿತವಾಗಿ ತಿಳಿದು ಬಂದಿರುವ ಪ್ರಾಚೀನ ಬಸದಿಗಳಲ್ಲಿ ಅರ್ಧಕ್ಕೂ ಹೆಚ್ಚಿನ ಪ್ರಮಾಣದ ಬಸದಿಗಳು ಯಾಪನೀಯ ಸಂಘಕ್ಕೆ ಸೇರಿವೆ. ಬಸದಿಗಳಲ್ಲಿಯೂ ವಿವಿಧ ಗಣ-ಗಚ್ಛ ಮತ್ತು ಸಂಘ ಶಾಖೆಗೆ ಸೇರಿದ ಮಾಹಿತಿಗಳು ದೊರೆತಿವೆ. ಕಂಡೂರು ಗಣದ ಬಸದಿ [SII XV 539 11 ಶ. ಹುಲ್ಲೂರು ಪು. 364]ಕಾಣೂರ್ಗಣದ ಬಸದಿ [EC. VII (1979 ನಾಮಂ 68 (ರಿ 1940-33) 1132 ದಡಗ ಪು 52] ದೇಸೀಯ ಗಣದ ಬಸದಿ [ಅದೇ :ಸಾಲು: 33-34] ಪುಸ್ತಕ ಗಚ್ಛದ ಬಸದಿ [EC V (1976) ಕೃಷ್ಣರಾಜನಗರ 21 (IV ಯ 22) ಸು.11 ಶ. ಚಿಕ್ಕಹನಸೋಗೆ ಪು. 14] ಬಲಾತ್ಕಾರ ಗಣದಜಿನಾಲಯ [EC IX (1990) ಬೇ 322 13ಶ. ಪು 303] ದ್ರವಿಳ ಸಂಘ ಪಲ್ಲದಜಿನಾಲಯ [APGAS III Mb 58] ಬಸದಿಗಳಿಗೆ ಪ್ರತ್ಯೇಕ ಹೆಸರುಗಳೂ ಇರುತ್ತಿದ್ದುವು. ಆಯಾ ಬಸದಿಯ ಗರ್ಭಗುಡಿಯಲ್ಲಿ ಇರುವ ಮೂಲ ನಾಯಕ ಸ್ವಾಮಿಯ ಹೆಸರಿನಿಂದಲೇ ಬಸದಿಯ ಹೆಸರೂ ಬಳಕೆಯಾಗುವುದು ಸಾಮಾನ್ಯ ವಾಡಿಕೆ: ಕುಂಥುನಾಥ ಚೈತ್ಯಾಲಯ [ARSIE 1935-36 B-336 ಸು 1395] ಅನಂತನಾಥ ಬಸದಿ (ಅಕ್ಕಿರಾಂಪುರ ಮತ್ತು ಮೂಲ್ಕಿ), ಪಾರ್ಶ್ವನಾಥ ಬಸದಿ [ARSIE) 1905-06 ಪು 120-27 : SII XVIII 109 1112 : ARSIE 1920 No 3261 No 326] ಮಲ್ಲಿನಾಥ ಬಸದಿ [SII XV 544 1160 ಪು 366 67] ಶಾಂತಿಜಿನಾಲಯ [EC IX (1990) ಬೇ 407 (XV ಬೇ 334) 1256 ಬಸ್ತಿಹಳ್ಳಿ ಪು 374] ಆದರೆ ಅನೇಕ ಬಸದಿಗಳನ್ನು ಅವುಗಳಿರುವ ಊರಿನ ಹೆಸರಿನೊಂದಿಗೆ ಕೂಡಿಸಿ ಹೇಳಲಾಗುತ್ತಿತ್ತು: ಅಗರಖೇಡ ಬಸದಿ [SII XX 915 1248] ಅಣಂಪೂರು ಬಸದಿ. ಅಣಿಲವಾಡ ಬಸದಿ, ಚಾಕನಹಳ್ಳಿ ಬಸದಿ [EC IV ನಾಮಂ 32 1184] ಕೆಲ್ಲಂಗೆರೆ ಬಸದಿ [EC IX (1990) ಚೇ 323 13 ಶ] ಕೂಲಿಗೆರೆ ಬಸದಿ [EC VII ಮದ್ದೂರು 100 916 17 ಪು 313]

ಇನ್ನೂ ಕೆಲವು ಬಸದಿಗಳಿಗೆ ಅವುಗಳನ್ನು ಕಟ್ಟಿಸಿದ ವ್ಯಕ್ತಿಗಳ ಹೆಸರನ್ನು, ಅಂಥವರ ಬಿರುದನ್ನು ಅನ್ವಯಿಸಿ ಕರೆಯಲಾಗುತ್ತಿತ್ತು: ಅದಟರಾದಿತ್ಯಜಿನಾಲಯ [EC VIII (1984) 133 1079-80 ಪು 186] ಎಜುಗ ಜಿನಾಲಯ [EC VIII ii ಸೊರಬ 140 1198 ಪು 60] ಕಟಕಾಭರಣಜಿನಾಲಯ [EI IX 6 945 ಪು 47] ಕನಕಜಿನಾಲಯ [EC II 476 (345) 1159 ಪು 289] ಕೇತಿಸೆಟ್ಟಿ ಬಸದಿ [EC VIII ii ಸೊರಬ 140 1198] ಗಂಗ ಕಂದರ್ಪ ಬ್ರಹ್ಮಜಿನಾಲಯ [KI 1, 29 12-13 ಶ ಬಾಡ್ತಿ] ಗಂಗಜಿನಾಲಯ [EC VII-i (1902 1067 ಮತ್ತು 1132 ಪುರಲೆಗ್ರಾಮ ಪು 63-69] ಗಂಗ ಪೆರ್ಮಾಡಿ ಚೈತ್ಯಾಳಯ (IA VII 38 ಪು 101-02] ಗಿರಿಗೋಟೆಮಲ್ಲಜಿನಾಲಯ [EA II ಪು 96 ದದ್ದಲ] ಘಟಾಂತಿಕೆಯ ಬಸದಿ [SII XV 121 1174 ಪು 161-63 EC III 146 1337 ಪು 226] ಚಾಳುಕ್ಯ ಕುಳತಿಳಕ ಬಸದಿ [APGAS III ನಲ್ಗೊಂಡ 43 ನಂ. 45 1125 ಕೊಲನುಪಾಕ] ಜಯಧೀರಜಿನಾಲಯ [ARIE 1965 964 ಬೆಟಗೇರಿ ಪು 10] ಧೋರಜಿನಾಲಯ [ARIE 1942 E-15 1060 ಚಬ್ಬಿ : SII 11 905 ಪು 20] ನಿರವದ್ಯಜಿನಾಲಯ [EC

VI ಚಿಕ್ಕಮಗಳೂರು 75 ಕಡವಣೆ ಪು 185] ಪಟ್ಟಣಸ್ವಾಮಿಜಿನಾಲಯ [EC VII (1902) ನಗರ 58 1062 ಹುಂಚ ಪು 386] ಬೊಪ್ಪದೇವ ದಣ್ನಾಯಕ ಬಸದಿ [EC IX (1990) ಬೇ 390 1254 ಬಸ್ತಿಹಳ್ಳಿ]

ಕೆಲವೊಮ್ಮೆ ಬಸದಿಗಳಿಗೆ ಅವುಗಳ ವಾಸ್ತುಶಿಲ್ಪ ಆಕಾರವನ್ನು ಅವಲಂಬಿಸಿದ ನಾಮಕರಣ ಆಗಿರುತ್ತದೆ: ಅಭಿನವ ಶಾಂತಿನಾಥ ಬಸದಿ, ಅಭಿನವ ಶಾಂತಿನಾಥ ದೇವರ ಭವ್ಯಜಿನಾಲಯ [EC. VIII (1984) ಆಲೂರು 17-1191. ಸೋಂಪುರ. ಪು. 445)] ಅರೆಗಲ್ಲು ಬಸದಿ [EC.11.531.1120. ಜಿನನಾಥಪುರ] ಆನೆಸೆಜ್ಜೆಯ ಬಸದಿ, ಉತ್ತುಂಗ ಚೈತ್ಯಾಲಯ [E.C.V. ಅರಸೀಕೆರೆ 1, ಬಂದೂರು] ಪಂಚಕೂಟ ಬಸದಿ [EC.VIII–ii. ನಗರ 36.1077. ಹುಂಚ] ಎಕ್ಕೋಟಿ ಜಿನಾಲಯ [EC.VI. ಕಡೂರು 36.1205. ಬಕ್ಕಲಗೆರೆ] ತೀರ್ತ್ಥದ ಬಸದಿ [EC.VII· (1979) ಮದ್ದೂರು 100.916-17. ಕೂಲಿಗೆರೆ] ಕಲ್ಲಬಸದಿ [EC.VIII–ii (1902) ನಗರ 45.ಸು.1000. ಹುಂಚ] ಚತುರ್ಮುಖ ಬಸದಿ [ಗೇರುಸೊಪ್ಪೆ ಮತ್ತು ಕಾರ್ಕಳ] ಚೌವ್ವೀಸ ತೀರ್ಥಂಕರ ಬಸದಿ [EC.II. 422 (313) 1648. ಪು. 261] ಜ್ವಾಳಿನೀ ದೇವಿ ಬಸದಿ [SII.XV. 637.12 ಶ. ಜಾವೂರು] ಜಿನೋನ್ನತಭವನ [FI.XVI. 9.1053. ಮುಳ್ಗುಂದ] ತ್ರಿಕೂಟ ಜಿನಗೇಹ [EC.VII (1979) ನಾಮಂ.64.1165. ಯಲ್ಲಾದಹಳ್ಳಿ ಪು. 45-49] ತ್ರಿಕೂಟ ಬಸದಿ [EC·IV (1975) 1116] ತ್ರಿಕೂಟ ರತ್ನತ್ರಯ ಶಾಂತಿನಾಥ ಜಿನಾಲಯ [EC.IX (1990) 321.1265. ಹಳೇಬೀಡು] ತ್ರಿಭುವನತಿಲಕಬಸದಿ [IA.XIX.190.1054. ಪೊನ್ನವಾಡ. ಪು. 268-75] ಪಂಚಕೂಟ ಬಸದಿ [EC VIII–ii.ನಗರ 35.1077. ಹುಂಚ] ಪದ್ಮಾಕ್ಷಿ ದೇವಾಲಯ [EI·IX. 35.1117] ರತ್ನತ್ರಯ ಬಸದಿ [AR KRI.1939-40, 88-89. ಬಿಳಗಿ]. ಸರ್ವತೋಭದ್ರ ಚತುರ್ಮುಖ ರತ್ನತ್ರಯ ರೂಪ ತ್ರಿಭುವನ ತಿಲಕ ಜಿನ ಚೈತ್ಯಾಲಯ [ಕಾರ್ಕಳ;1589] ಕೆಲವು ಬಸದಿಗಳಿಗೆ ಒಂದಕ್ಕಿಂತಲೂ ಹೆಚ್ಚು ಹೆಸರುಗಳುಂಟು, ಹಂಪಿಯ ಕುಂಥುನಾಥ ಜಿನಾಲಯಕ್ಕೆ ಗಾಣಗಿತ್ತಿ ದೇವಾಲಯವೆಂಬ ಹೆಸರಿದೆ [EI.III.19.1399.: SII.I. ಪು. 156] ಕೊಲ್ಲಾಪುರದ ತ್ರಿಭುವನ ತಿಲಕ ಬಸದಿಗೆ ತೀರ್ತ್ಥದ ಬಸದಿ, ಚಂದ್ರನಾಥ ಬಸದಿ ಎಂದೂ ಹೆಸರುಂಟು [ಹೇರಿಳಿಗೆ-ಹೇರ್ಲೆ ಶಾಸನ.1118] ಕರ್ಣಪಾರ್ಯಕವಿ (ಸು. 1140) ತನ್ನ ನೇಮಿನಾಥ ಪುರಾಣದಲ್ಲಿ [(ಸಂ) ನಾಗರಾಜಯ್ಯ, ಹಂಪ. ಮತ್ತು ಕುಲಕರ್ಣಿ, ಆರ್.ವಿ.(1982) : 1-14] ತ್ರಿಭುವನ ತಿಳಕ ಎಂಬ ಹೆಸರಿನ ಕೊಲ್ಲಾಪುರ ಬಸದಿಯನ್ನುಸ್ತುತಿಸಿದ್ದಾನೆ.

ಕೆಲವು ತೀರ್ತ್ಥದ ಬಸದಿಗಳು ಶಾಸನಗಳಲ್ಲಿ ಕೀರ್ತಿತವಾಗಿವೆ [EC.XII, ತುಂಕೂರು. 38.1160. ಮಂದರಗಿರಿಬೆಟ್ಟ. : EC.VII(R) ಶಿ.4.1122. :ಅದೇ,

ಶಿ.6.1060. : EC.V (1976) ಕೆ.ಆರ್. ನಗರ 22,24,25,26] ಇದೇ ರೀತಿಯಾಗಿ ಪಟ್ಟದ ಬಸದಿಗಳ ಉಲ್ಲೇಖಗಳೂ ಶಾಸನಗಳಲ್ಲಿ ಸಿಗುತ್ತವೆ [EC.VII(R) ಶಿ.4.1122 : ಅದೇ,ಶಿ.6.1060 : ECVIII (1984) 133 (V ಅಗೊ99)1079-80] ಬಸದಿಗಳನ್ನು ಕಟ್ಟಿಸಿದ್ದು ಆದಮೇಲೆ, ಅವುಗಳಿಗೆ ಪೂಜಾದಿಕಾರ್ಯಗಳು ಯಾವ ಅಡೆತಡೆಯೂ ಇಲ್ಲದೆ ನಿರಾತಂಕವಾಗಿ, ನಿರಂತರವಾಗಿ ನಡೆಯಲೆಂದು ಬಯಸಿ ಹಲವು ಹೊಲಗದ್ದೆ ತೋಟ ಮನೆ ಗಾಣ ನಿವೇಶನ ಮೊದಲಾದುವನ್ನು ಅಕರವಾಗಿಸಿ (ತೆರಿಗೆ ರಹಿತವಮಾಡಿ) ದಾನದತ್ತಿ ಕೊಡುತ್ತಿದ್ದರು, ಇಡೀ ಗ್ರಾಮವನ್ನೇ ದಾನವಾಗಿ ಬಿಟ್ಟುಕೊಡುತ್ತಿದ್ದುದೂ ಉಂಟು [APGAS.III. ನಲ್ಗೊಂಡ 43.ನಂ.45.1125. ಕೊಲನುಪಾಕ. : EC·VIII (1984) 5. (V ಅಗೊ 102) 10 ಶ. ಪು. 104-05]

ಹೀಗೆ ಹೊಸದಾಗಿ ಮಾಡಿಸಿದ ಬಸದಿಗಳನ್ನು ತಮ್ಮ ಮನೆತನದ (ಕುಲ) ಗುರುಗಳಿಗೊ, ಆಯಾ ಭಾಗದ ಮುಖ್ಯ ಧರ್ಮ ಗುರುಗಳಿಗೊ, ಮಂಡಲಾಚಾರ್ಯರಿಗೊ, ಸ್ಥಾನದ ಆಚಾರ್ಯರಿಗೊ ಒಪ್ಪಿಸುವುದು ಕ್ರಮ : ಹೀಗೆ ಗುರುಗಳಿಗೆ ಅರ್ಪಿಸುವಾಗ, ಅವರ ಕಾಲು ತೊಳೆದು, ಬಸದಿಯ ಒಡೆತನ ಕಟ್ಟಿಸಿದವರಿಗೆ ಬೇಡವೆಂದು, ಮಠಾಚಾರ್ಯರ ಮೇಲ್ವಿಚಾರಣೆಯಲ್ಲೇ ಅದು ನಡೆಯಬೇಕೆಂದು, ಪೂರ್ಣಾಧಿಕಾರವನ್ನು ಬಿಟ್ಟು ಧಾರೆಯೆರೆದು ಕೊಡುತ್ತಿದ್ದರು. ಈ ಬಗೆಯ ನೂರಾರು ಶಾಸನಗಳು ಇವೆ. ಒಂದು ದೃಷ್ಟಾಂತ ಕೊಡಬಹುದು : ಚಾಂಡಾಡಿ ನಾಮಧೇಯ ನೊಳಂಬಿ ಸೆಟ್ಟಿಯು ತದ್ವಲ್ಲಭೆ ದೇವಿಕಬ್ಬೆಯುಂ ತ್ರಿಕೂಟ ಜಿನಾಲಯಮಂ ಮಾಡಿಸಿ ಶ್ರೀ ಮೂಲ ಸಂಘದ ದೇಸಿಗ ಗಣದ ಪುಸ್ತಕ ಗಚ್ಛದ ಶ್ರೀಕೊಣ್ಡಕುನ್ದಾನ್ವಯದ ಶ್ರೀ ಕುಕ್ಕುಟಾಸನ ಮಲಧಾರಿ ದೇವರ ಶಿಷ್ಯರಪ್ಪ ತಮ್ಮ ಗುರುಗಳು ಶ್ರೀ ಸುಭಚನ್ದ್ರ ಸಿದ್ಧಾನ್ತದೇವರ್ಗ್ಗೆ ಕೊಟ್ಟಬಸದಿ [EC·VIII-ii. ಕೃಪೇ,3 (IV ಕೃಪೇ 3) 1118. ಹೊಸ ಹೊಳಲು (ಮಂಡ್ಯ ಜಿ/ಕೃಪೇ ತಾ) ಪು. 4-5]. ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕ ಶಾಲೆಯಂ ಮಾಡಿಸಿದ ಮೊಮ್ಮಕ್ಕಳೂ ಇದ್ದಾರೆ [SII.XI-i. 78.1045. ಮುಗದ. ಪು. 72.]

ಬಸದಿಗಳು ಜೈನ ಆರಾಧನಾ ಕೇಂದ್ರವಾಗಿರುವಂತೆ ಮುಖ್ಯ ಸಾಂಸ್ಕೃತಿಕ ಕೇಂದ್ರವೂ ಹೌದು. ನೋಂಪಿಗಳು, ಉದ್ಯಾಪನೆ, ಅನಂತ ಚತುರ್ದಶಿ, ಪಂಚ ಕಲ್ಯಾಣ, ನಿತ್ಯಾಭಿಷೇಕ-ಹೀಗೆ ನಿತ್ಯೋತ್ಸವ ನಡೆದೇ ಇರುತ್ತದೆ. ಒಂದು ಬಸದಿಯ ಹೆಸರೇ ನೋಂಪಿಯ ಬಸದಿ [SII.XV.67.1185. ಲಕ್ಕುಂಡಿ] ಎಂದಿಡಲಾಗಿದೆ. ಜೈನರಿಷಿಗಳು, ಕಂತಿಯರು ಅವರ ಧರ್ಮವಿಹಾರ, ಕಾಲುನಡಿಗೆ ಸಂಚಾರ ಕಾಲದಲ್ಲಿ,

ಚಾತುರ್ಮಾಸ (ವರ್ಷಾಕಾಲ)ದಲ್ಲಿ ಬಸದಿಗಳಲ್ಲಿ ಇಳಿದುಕೊಳ್ಳುತ್ತಿದ್ದರು. ಧರ್ಮ ಪ್ರವಚನ, ಆಗಮಗ್ರಂಥ ವಾಚನ ನಡೆಯುತ್ತಿತ್ತು. ಮರಣೋನ್ಮುಖರಾದ ಯತಿಗಳು, ಆರ್ಯಿಕೆಯರು ಸಲ್ಲೇಖನವ್ರತ ಸ್ವೀಕರಿಸುತ್ತಿದ್ದರು. ಅನೇಕ ಬಸದಿಗಳ ಆವರಣದಲ್ಲಿ ಈ ರೀತಿ ಸಮಾಧಿ ಮರಣ ಪಡೆದ ಮುನಿಗಳ, ಕಂತಿಯರ ಸಾವಿನ ಸ್ಮಾರಕವಾಗಿ ನಿಲ್ಲಿಸಿದ ನಿಸದಿಗಳನ್ನು ಕಾಣಬಹುದು; ಪುಲಿಗೆರೆಯ ಬಸದಿ ಮೊದಲಾದುವನ್ನು ಹೆಸರಿಸಬಹುದು. ಕಾರ್ಕಳದಲ್ಲಿ ಒಂದು ಬಸದಿಯ ಹೆಸರೇ 'ನಿಸದಿ ಬಸದಿ' ಎಂದಿದೆ.

ಊರಿನ ಗಡಿಗಳನ್ನು, ದೇವಾಲಯಗಳಿಗೆ ಕೊಡಲಾದ ದಾನಧರ್ಮಗಳ ಮೇರೆಗಳನ್ನು ಗುರುತಿಸುವುದು ಇಂದಿಗೂ ಪ್ರಚಲಿತ ವಿರುವ ಪದ್ಧತಿ, ಅದರಂತೆ ಸೀಮಾರೇಖೆಯನ್ನು ದಾಖಲಿಸಿರುವ ಕೆಲವು ವಿವರಗಳಲ್ಲಿ ಬಸದಿಯನ್ನು ಮೇರೆಯಾಗಿ ಹೆಸರಿಸಿರುವುದು ಕಂಡುಬರುತ್ತದೆ [SII.XX.74.1112. ಪು. 91. : SII. XV. 59. 1184.: EC.VIII-ii (1902) ಸೊರಬ. 140.1198. ಪು. 60.] ಕೊಡುಗೆಯ ಹೊಲ ಮೇರೆ ಸೀಮಾಕ್ರಮವನ್ನು ಗುರುತಿಸುವಾಗ ಜೈನಬಸದಿಗಳನ್ನೇ ಅಲ್ಲದೆ, ಜೈನ ಲಾಂಛನವಾದ ಮುಕ್ಕೊಡೆ ಕಲ್ಲುಗಳನ್ನೂ [JSI (1957) ಪು. 135 ಅ.ಟಿ., ಕೊಪ್ಪಳ ಶಾಸನ ಸಂಖ್ಯೆ, 28], ಜೈನ ಯಕ್ಷಿ-ಜಿನ ಶಾಸನ ದೇವಿ ಪದ್ಮಾವತಿಯ ಕಲ್ಲನ್ನೂ [EI.XVI.56.1053. ಮುಳ್ಗುಂದ] ನಮೂದಿಸಿರುವುದು ವಿಶಿಷ್ಟವಾಗಿದೆ.

ಇದೇ ರೀತಿಯಾಗಿ ಈ ಅಧ್ಯಯನವನ್ನು ಮುಂದುವರಿಸಿದಾಗ ಕಂಡುಬರುವ ಇನ್ನೊಂದು ವೈಶಿಷ್ಟ್ಯವಿದೆ ; ಕೆಲವು ಗ್ರಾಮಗಳಿಗೆ ಬಸದಿಯೇ ವಿಶೇಷಣವಾಗಿ ಸೇರಿದೆ. ಪಾರ್ಶ್ವನಾಥಪುರ [EC. VII. ನಾಮಂ 64, 1145, ಯಲ್ಲಾದಹಳ್ಳಿ ಮಂಡ್ಯಜಿ/] ಶ್ರವಣನಹಳ್ಳಿ [EC. VI (1977) ಕೃಪೇ. 21.1140. (ಮಂಡ್ಯಜಿ/)] ಶ್ರವಣಪ್ಪನದಿಣ್ಣೆ [EC.IX. ಬೆಂಗಳೂರು 82.1426. ಬೇಗೂರು] ಸವಣ್ಗೆರೆ [SII.XI.78.1045. ಮುಗದ] ಸವಣನಕೆರೆ [EC.VIII-I (R). 57. 1115-16. ನಿದಿಗಿ ಬಸ್ತಿಯ ತಿಪ್ಪೂರು [EC.VIII (1979) ಮದ್ದೂರು. 51. 14-15 ಶ.] ಬಸ್ತಿಮಾದಳಿ ಗ್ರಾಮ [EC. IV(1975) ಹು 32 (IV ಹು 139) 1669, ತರೀಕಲ್ಲು] ಬಸ್ತಿಗದ್ದೆ [EO. VI (1977) 16 (III ಶ್ರೀಪ 147) 9-10 ಶ. ಕ್ಯಾತನಹಳ್ಳಿ. ಪು. 113.] ಬಸ್ತಿಹಳ್ಳಿ [EC. VI. 23. 1664. ಪು. 351] ಸವಣನಬೀಲು [EC. VIII-ii. ಸೊರಬ. 233. 1139. ಪುದ್ರಿ] ಮಾಣಿಕ್ಯಪೊಟಿಲ್-ಬಸ್ತಿ [EC. VI (1977) 106 (V ಕೃಪೇ 36) 1165. ಬಸ್ತಿ (ಮಂಡ್ಯಜಿ/)] ಜಿನನಹಳ್ಳಿ-ಜಿನ್ನಹಳ್ಳಿ[EC. III (1974) ಪು. 447-48 (ಮೈಜಿ/)]–ಇದೇ ರೀತಿ ಬಸ್ತಿಪುರ, ದೊಡ್ಡಬಸ್ತಿ, ಚಿಕ್ಕಬಸ್ತಿ, ಬಸ್ತಿಉಲ್ಲಾಳ ಸವಣೂರು ಮೊದಲಾದ ಸ್ಥಳನಾಮಗಳನ್ನು ಗಮನಿಸಬಹುದು.

ಬಸದಿಗಳ ಅಧ್ಯಯನದ ಕಕ್ಷೆಯಲ್ಲಿ ಪ್ರಸ್ತಾಪಿಸಬೇಕಾದ ಮೌಲಿಕವಾದ ಇನ್ನೊಂದು ಅಂಶವಿದೆ. ದೇವಾಲಯ ಮತ್ತು ದಾನ ಧರ್ಮಗಳನ್ನು ಅಪಹರಣಕಾರರಿಂದ ಸಂರಕ್ಷಿಸಲು ಒಂದು ಧರ್ಮಭೀತಿ ಇರಲೆಂದು ಹಿಂದಿನವರು ಆಲೋಚಿಸಿದ್ದರು. ಯಾವುದೇ ಪವಿತ್ರವಾದ ಪದಾರ್ಥವನ್ನು ಕದಿಯಬಾರದು, ಪರಭಾರೆ ಮಾಡಬಾರದು-ಎಂಬ ನೀತಿ ಸಂಹಿತಿಯಿದೆ. ಶಾಸನಗಳ ಕಟ್ಟ ಕಡೆಯಲ್ಲಿ ಬರುವ ಭಾಗವೆಂದರೆ ಶಾಪಾಶಯ. ಧರ್ಮದ ಉಲ್ಲಂಘನೆ ಮಾಡಿದವರು ಯಾವ ಬಗೆಯ ಪಾಪಕ್ಕೆ ಒಳಗಾಗುವರು ಎಂಬುದನ್ನು ಶಾಸನಾಂತ್ಯದಲ್ಲಿ ಸೂಚಿಸುತ್ತಾರೆ. ಅದರಂತೆ ಬಸದಿಗಳನ್ನು ನಾಶಪಡಿಸಿದವರು, ಜೈನಮುನಿ (ರಿಷಿ) ಗಳನ್ನು ಕೊಂದ ಪಾಪಕ್ಕೆ ಗುರಿಯಾಗುವರೆಂಬ ಮಾತುಗಳು ಕೆಲವು ಶಾಸನಗಳಲ್ಲಿವೆ. ಕೆಲವು ಉದಾಹರಣೆಗಳು :

1. ಇದನಟಿದೊಂ ಪ್ರಯಾಗೆಯುಮಂ ಕುರುಕ್ಷೇತ್ರವುವಂ
   ಬಾಣರಾಗಿಯುಮಂ ಕಟ್ವಿಪ್ಪವಂ ಸಾಸಿರ ಕವಿಲೆಯುಮಂ
   ಸಾಸಿರ್ಬ್ಬರ್ಪ್ಪಾರ್ವ್ವರುಮಂ ಸಾಸಿರ್ಬ್ಬರ್ ರಿಷಿಯರು
   ವನಟಿದ ಪಾತಕನು ಬ್ರಹ್ಮಾತಿಕಾರನುಮಕ್ಕುಂ ॥
   [SII·IX-i·77·992. ಕೋಗಳಿ ಪು. 49]

2. ಇದರಕ್ಷಿಸಿ ನೆಗಟ್ದೊಪಗೆ ಅಪ್ಪ ಸಪ್ತಿ ತೀರ್ತ್ಥವಿನ್ದ
   ಫಲಮಕ್ಕುಂ ಸ್ವರ್ಗಾಪವರ್ಗ ಮೋಕ್ಷವ ಪಡೆಗು
   [SII·IX-i·71·972. ಬಾಗಳಿ (ಬಳ್ಳಾರಿ ಜಿ/ಹರಗನಹಳ್ಳಿ ತಾ) ಪು. 44]

3. ಇದನಟಿದಂ ಮಂಗಪಟ್ಟೆಯೊಳಯ್ನೂರ್ವ್ವರು ರಿಶಿಯರನಳಿದ
   ಮಹಾಪಾತಕನಕ್ಕುಂ । ದೇಶ ಕಾಲಸ್ಥಿತಿಯಿಂ ದಾನಮಂತಟಿಸಿದೊಡೀ
   ಯರ್ತ್ಥಂ ನಗರಜಿನಾಲಯದೊಡವೆ ॥
   [SII·XI-i·94·1059. ಹಂಬಳ (ಧಾಜಿ/ಮುಂಡರಗಿ ತಾ) ಪು. 90]

ಜೈನ ಪರಂಪರೆಯ ಅರಿವಿಗೆ, ಪುನಾರಚನೆಗೆ ನೆರವಾಗುವ ಅಧ್ಯಯನ ಸಾಮಗ್ರಿಯಲ್ಲಿ ಬಸದಿಗಳಿಗೆ ವಿಶೇಷ ಆದ್ಯತೆಯಿದೆ. ಜೈನ ಪರಂಪರೆ ಗರ್ಭೀಕರಿಸಿದ ಸಾಂಸ್ಕೃತಿಕ ಅಭಿವ್ಯಕ್ತಿಯ ಪಲ್ಲಟ ಮತ್ತು ಪರಿಣಾಮಗಳನ್ನು ಗುರುತಿಸಲೂ, ಜೈನಧರ್ಮ ಸಂಬಂಧದ ವಾಗ್ವಾದಗಳ ಪರಿಚಯ ಪಡೆಯಲೂ ಬಸದಿಗಳು ಆಕರವಾಗಿವೆ. ಬಸದಿಗಳು ಗತಕಾಲದ ಇತಿಹಾಸಕ್ಕೆ, ಶ್ರುತಭಂಡಾರಕ್ಕೆ ತೆರೆದ ಮಹಾ ಬಾಗಿಲು. ಬಸದಿಗಳ ಬಾಗಿಲು ತೆರೆಯುವುದೆಂದರೆ ಜ್ಞಾನಕೋಶವನ್ನು ಅನಾವರಣಗೊಳಿಸಿದಂತೆ. ಉದಾತ್ತ ಅಮರತತ್ತ್ವ ಕಿರಣಗಳನ್ನು ಜೀವಕೋಟಿಗೆ ಬೀರಿದ ಅರಿವಿನ ಅರವಂಟಿಗೆಗಳು ಬಸದಿಗಳು. ಜಿನಮಂದಿರಗಳು ವಿದ್ಯಾದಾನ ಮಂದಿರಗಳೂ ಹೌದು. ಶ್ರಾವಕ ವರ್ಗಕ್ಕೆ ತಕ್ಕ ಮಾರ್ಗದರ್ಶನ ಬಸದಿಗಳಲ್ಲಿ ಸಿಗುತ್ತಿತ್ತು. ಅಲ್ಲಿಗೆ ಬಂದವರಿಗೆ ಮಾನಸಿಕ ನೆಮ್ಮದಿಯಂತೂ ಇದ್ದೇ ಇದೆ. ಆತ್ಮ ಸಂತೃಪ್ತಿಯೊಂದಿಗೆ ಜ್ಞಾನಾರ್ಜನೆಗೂ ಅವಕಾಶವಿತ್ತು. ಜತೆಗೆ ಬಸದಿಗಳು ಸಾರ್ವಜನಿಕ ಹಿತದ ಸಾಂಸ್ಕೃತಿಕ ಚಟುವಟಿಕೆಗಳ ತವರುಮನೆ ಎನಿಸಿದ್ದುವು.

ಬಸದಿಗಳು ಜೈನ ಧರ್ಮದ ಸಂಘಟನೆಯಲ್ಲಿ ಗಣನೀಯ ಪಾತ್ರವನ್ನು ವಹಿಸಿವೆ ಜೈನ ಸಮಾಜಕ್ಕೆ ಸಾಂಘಿಕ-ಸಾಂಸ್ಥಿಕ ಸ್ವರೂಪವನ್ನು ಕೊಡುವುದರಲ್ಲಿ ಈ ಚೈತ್ಯಾಲಯಗಳು ಪ್ರಮುಖ ಕಾರ್ಯ ನಿರ್ವಹಿಸಿವೆ. ಪ್ರಸಿದ್ಧ ಧಾರ್ಮಿಕ ಆಚಾರ್ಯರು, ಆಚಾರ್ಯ ಮುನಿ ಸಂಘ ಚಾತುರ್ಮಾಸಕ್ಕೆಂದು ಇಲ್ಲಿ ನೆಲೆ ನಿಂತಾಗಲಂತೂ ಬಸದಿಗಳು ಚಟುವಟಿಕೆಯ ಜೇನುಗೂಡುಗಳಾಗುತ್ತಿದ್ದವು. ಪೂಜಾ ಸಂಪ್ರದಾಯದ ಉಗಮಕ್ಕೂ ಬಸದಿಗಳೇ ಜನ್ಮಸ್ಥಳ. ದಾನದತ್ತಿಗಳಿಂದ ಬಸದಿಗಳು ಬಾಳಿದುವು, ಬೆಳೆದುವು. ಬೆಳಗಿದುವು. ರಕ್ಷಿತರ ರಕ್ಷಣೆ ಇಲ್ಲದಾಗ ಸೊರಗಿದುವು, ಪಾಳುದೇಗುಲಗಳಾದುವು, ಧರ್ಮಾಂಧರ ಮತದ ಸೇಡಿನ ದಳ್ಳುರಿಗೆ ಈಡಾದುವು, ಮತದ್ವೇಷದ ಫಲವಾಗಿ ಅನ್ಯಧರ್ಮೀಯರ ಆಕ್ರಮಣಕ್ಕೆ ತುತ್ತಾದುವು. ಅಳಿದುಳಿದ ಕೆಲವು ಜಿನಾಲಯಗಳು ಶಿವಾಲಯಗಳಾಗಿ, ವೈಷ್ಣವ ಮಂದಿರಗಳಾಗಿ, ಮಸೀದಿಗಳಾಗಿ ಪರಿವರ್ತಿತವಾದುವು. ಬಸದಿಗಳ ಇತಿಹಾಸದಲ್ಲಿಯೂ ಅನೇಕ ಏಳುಬೀಳುಗಳಿವೆ.

ಈ ಹುಚ್ಚು ನಗೆಯೇಕೆ?

ಟಿ. ಡಿ. ರಾಜಣ್ಣ

ಬಾಳ ಬೆಚ್ಚಿದೆಯಲಿ ಹುಚ್ಚು
ಹಿಡಿಯುವಂತಾದರೂ, ಎದೆಯಲಿ ನೂರು
ಈಟಿ, ಭರ್ಜಿಗಳ ಇರಿತಗಳು ಇರಿದು, ಹೃದಯ
ಛಿದ್ರ ಛಿದ್ರವಾಗುತ್ತಿದ್ದರೂ
ಜಗಮೆಚ್ಚಿಸಲೋಸುಗ ನೀ ಹೊರಗೆಡಹುತ್ತಿರುವ
...ಈ ಹುಚ್ಚು ನಗೆಯೇಕೆ ?

ನಿನ್ನೊಡಲಲ್ಲುರಿಯುವ ಆ ನೋವ ಜ್ವಾಲೆ
ಕರುಳ ಕರಟಿ ಬೆಂದು
ಮಸಿಯಾಗಿ ಹೊಟ್ಟೆಯೆಲ್ಲಾ ಹಿಂಗಿ
ಬೆನ್ನಕಚ್ಚಿದರೂ ಅನ್ಯರಿಗದನು ತಿಳಿಸದೆ
ತನ್ನೊಡಲಲ್ಲೆ ಹುದುಗಿಸಿ ನೀ ತೋರುವ
...ಈ ಹುಚ್ಚು ನಗೆಯೇಕೆ ?

ಮನದೊಳಗೆ ನೂರಾರು ದುಃಖಗಳಿದ್ದು
ನೂರು ಆರ್ತನಾದ ಉದಿಸುತ್ತಿದ್ದರೂ
ಆ ಅಳಲ ಬದುಕನೆಲ್ಲವ ಸಹಿಸಿ
ಮುಂದೆ ಸಾಗಿಸುತ್ತಾ ತನ್ನ
ಕೆಚ್ಚೆದೆಯನು ಎಲ್ಲರ ಮುಂದೆ ತೋರಿಸುತ್ತಾ
ನೀ ದುಃಖದ ಮೌನವ ಮುರಿದು ತೋರುವ
...ಈ ಹುಚ್ಚು ನಗೆಯೇಕೆ ?

ರಂಗು ರಂಗಿನ ಬದುಕಿಗೆಣೆಕೊಡದ
ಭಂಡ ಬಾಳನೆಂದೂ ಬಾಳದೆ ತನ್ನದೇ ಆದ
ಸುಪ್ತ ಚೇತನಗಳ ತೆರೆಗಳ ಸರಿಸಿ
ಅಂಗ ಚಾಪಲ್ಯಕ್ಕಿಳಿಯದೇ
ಸ್ನೇಹಪರತೆಯಲ್ಲೇ ನಲಿವು ಕಾಣುವ ನೀ

ನಿನ್ನ ಭೂತ ಜೀವನವ ನೆನೆದು ಕಣ್ಣಂಚಿನಲ್ಲಿ
ಅಶ್ರುಬಿಂದುಗಳುದರಿದರೂ
ತುಟಿಯ ಮೇಲಿನ
...ಈ ಹುಚ್ಚು ನಗೆಯೇಕೆ ?

ಅಂತರಾಳದಲ್ಲಿ ಇಷ್ಟೊಂದಳಲಡಗಿದ್ದರೂ
ನಗುವ ಮನಸೇಕೆ ?
ಮನಸ್ಫೂರ್ತಿ ಅತ್ತುಬಿಡು
ಹೃದಯ ಹಗುರಾಗಲಿ,
ಒಮ್ಮೆ ಸ್ನೇಹದೊಡನೆ
ನಿನ್ನೊಡಲಿನುರಿಯನೆಲ್ಲವ ತೋಡಿಟ್ಟು ಆಗು
...ನೀ ಬಿಚ್ಚು ಮನಸಿನಾಕೆ !

ಮೂರು ಜೈನ ಪುರಾಣಗಳು : ಸಮೀಕ್ಷೆ

ಡಾ|| ಕಮಲಾ ಹಂಪನಾ

ಕರ್ಣಪಾರ್ಯನ ನೇಮಿನಾಥ ಪುರಾಣಂ

ಕನ್ನಡ ಸಾಹಿತ್ಯದ ಭಾಷಾತ್ಮಕ ಸ್ಥಿತ್ಯಂತರ ಘಟ್ಟಗಳಲ್ಲಿ ಮೌಲಿಕವಾದ ಕಾವ್ಯ ರಚಿಸಿದ ಕವಿಗಳಲ್ಲಿ ಕರ್ಣಪಾರ್ಯನೂ ಒಬ್ಬನಾಗಿದ್ದಾನೆ. ಹಳಗನ್ನಡ ಭಾಷೆಯ ವ್ಯವಹಾರಿಕ ಬಳಕೆ ನಿಲ್ಲುವುದಕ್ಕೆ ತೊಡಗಿ ನಡುಗನ್ನಡದ ಹೆಜ್ಜೆಗಳು ಮೂಡ ತೊಡಗಿದ್ದ ಕಾಲ ಘಟ್ಟದಲ್ಲಿ ಕರ್ಣಪಾರ್ಯ, ಬಂಧುವರ್ಮ, ಆಚಣ್ಣ, ಬ್ರಹ್ಮಶಿವ, ನೇಮಿಚಂದ್ರ, ಪಾರ್ಶ್ವಪಂಡಿತ, ಇಮ್ಮಡಿ ಗುಣವರ್ಮ — ಮೊದಲಾದ ಕವಿಗಳು ಕಾವ್ಯ ರಚಿಸಿದ್ದಾರೆ. ಇವರ ಕೃತಿಗಳೆಲ್ಲ ಹಳಗನ್ನಡದಲ್ಲಿಯೇ ರಚಿತವಾಗಿವೆಯಾದರೂ ಅಲ್ಲಲ್ಲಿ ಸಹಜವಾಗಿಯೇ ನಡುಗನ್ನಡದ ಚಹರೆಗಳು ಕಾಣುತ್ತವೆ.

ಮದರಾಸು ವಿಶ್ವವಿದ್ಯಾನಿಲಯ ಕರ್ನಾಟಕದ ಈಗಿನ ಎಲ್ಲ ವಿಶ್ವವಿದ್ಯಾಲಯಗಳಿಗಿಂತಲೂ ಹಳೆಯದು; ಮುಂಬಯಿ ವಿಶ್ವವಿದ್ಯಾಲಯವೂ ಅಷ್ಟೆ. ಅತ್ತ ಬಡಗಣಕ್ಕೆ ಮುಂಬಯಿ ವಿಶ್ವವಿದ್ಯಾಲಯದಿಂದಲೂ, ಇತ್ತ ತೆಂಕಣಕ್ಕೆ ಮದರಾಸು ವಿಶ್ವವಿದ್ಯಾಲಯದಿಂದಲೂ ಕನ್ನಡ ಕಲಿಕೆಗೆ ಉತ್ತೇಜನವಿತ್ತು. ಆದರೆ ಕನ್ನಡವನ್ನು ಪ್ರಧಾನ ವಿಷಯವಾಗಿ ಬೋಧಿಸುವ ಅಚ್ಚುಕಟ್ಟಾದ ಕೆಲಸ ಬಹಳ ವರ್ಷಗಳವರೆಗೆ ನಡೆದದ್ದು ಮದರಾಸು ವಿಶ್ವವಿದ್ಯಾಲಯದ ಆಶ್ರಯದಲ್ಲಿ. ಇಲ್ಲಿನ ಇನ್ನೊಂದು ವಿಶೇಷವೆಂದರೆ ಪ್ರಾಚೀನ ಕನ್ನಡ ಸಾಹಿತ್ಯದ ಮಹತ್ವದ ಆಕರಸ್ವರೂಪಿ ಕಾವ್ಯಗಳನ್ನೂ ಶಾಸ್ತ್ರ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದು. ಈ ರೀತಿ ಹೊರತಂದ ಹಳಗನ್ನಡ ಕಾವ್ಯಗಳಲ್ಲಿ ಕರ್ಣಪಾರ್ಯನ ನೇಮಿನಾಥ ಪುರಾಣವೂ ಸೇರಿದೆ.

ಮದ್ರಾಸ್ ಯೂನಿವರ್ಸಿಟಿ ಕರ್ಣಾಟಕ ಗ್ರಂಥಮಾಲಾದಲ್ಲಿ (ಸಂಖ್ಯೆ — 8) ಕರ್ಣಪಾರ್ಯವಿರಚಿತ ನೇಮಿನಾಥ ಪುರಾಣಂ (ಹರಿವಂಶ ಪುರಾಣಂ) ಕಾವ್ಯವನ್ನು 1940ರಲ್ಲಿ, ಮದರಾಸಿನ 'ದಿ ಮಾಡೆಲ್ ಪ್ರೆಸ್'ನಲ್ಲಿಯೇ ಮುದ್ರಿಸಿ ಹೊರತರಲಾಯಿತೆಂಬುದನ್ನು ವಿಶೇಷವಾಗಿ ಉಲ್ಲೇಖಿಸಬೇಕು. ಇದರ ಸಂಪಾದಕರು ಎಚ್. ಶೇಷ ಅಯ್ಯಂಗಾರ್ ಡೆಮ್ಮಿ $\frac{1}{8}$ ಆಕಾರದಲ್ಲಿ ಆರುನೂರ ಅರವತ್ತು ಪುಟಗಳ (660) ಈ ಕಾವ್ಯಕ್ಕೆ ಆಗಿನ ಬೆಲೆ ಐದು ರೂಪಾಯಿ.

ಸಂಪಾದಕರು ಈ ಕಾವ್ಯವನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಕಾರ್ಯವನ್ನು ನಿರ್ವಹಿಸಿದ್ದಾರೆ. (ಕ) ಪ್ರತಿಯನ್ನು ಮೈಸೂರಿನ ಬೊಮ್ಮರಸಪಂಡಿತರಿಂದಲೂ (ಗ) ಪ್ರತಿಯನ್ನೂ ಮೂಡಬಿದ್ರಿಯ ಶ್ರೀ ವೀರವಾಣೀ ವಿಲಾಸ ಜೈನ ಸಿದ್ಧಾಂತ ಭವನದ ಕಾರ್ಯದರ್ಶಿ ಲೋಕನಾಥಶಾಸ್ತ್ರಿ ಅವರಿಂದಲೂ (ಘ) ಪ್ರತಿಯನ್ನು ಅದೇ ಮೂಡಬಿದ್ರಿಯ ದಾನಶಾಲಾ ಜೈನ ಮಠದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯರ ಕಡೆಯಿಂದಲೂ ತರಿಸಿಕೊಂಡುದಾಗಿ ಸಂಪಾದಕರು ಅರಿಕೆಯಲ್ಲಿ ನಿವೇದಿಸಿಕೊಂಡಿದ್ದಾರೆ, ಹೀಗೆ ತಾಳಪತ್ರಾತ್ಮಕಗಳಾದ ನಾಲ್ಕು ಹಸ್ತಲಿಖಿತ ಪ್ರತಿಗಳ ಆಧಾರದಿಂದ ನೇಮಿನಾಥ ಪುರಾಣವನ್ನು ಸಿದ್ಧಪಡಿಸುವಾಗಲೂ ಅವುಗಳಲ್ಲಿ ಸಂಪ್ರತಿಕಾರರ ಭ್ರಮ ಪ್ರಮಾದಿಗಳಿಂದ ಸಂಭವಿಸಿರುವ ಅಕ್ಷರ ಪದಪಂಕ್ತಿಗಳ ಸ್ಖಾಲಿತ್ಯ, ವೈಪರೀತ್ಯಾದಿ ದೋಷಗಳನ್ನು ಸರಿಪಡಿಸಿರುತ್ತಾರೆ. ಇದು ಶ್ರಮ ಸಹಿಷ್ಣುತೆಯಿಂದ ಮಾತ್ರ ಸಾಧ್ಯವಾಗುವ ಕೆಲಸ. ಏಕೆಂದರೆ ಇವರು ಬಳಸಿದ ಪ್ರತಿಗಳಲ್ಲಿ ಕೆಲವು ಓಲೆಗಳು ಜೀರ್ಣವಾಗಿವೆ, ತ್ರುಟಿತವಾಗಿವೆ, ಓಲೆಗಳ ಎರಡು ಪಕ್ಕಗಳೂ ಗೆದ್ದಲಿಗೆ ತುತ್ತಾಗಿವೆ, ಱಕಾರ ೞಕಾರ ಸರಿಯಾಗಿ ನಮೂದಾಗಿಲ್ಲ, ಕೆಲವು ಓಲೆಗಳು ಲುಪ್ತವಾಗಿವೆ, ಪದ್ಯ ಸಂಖ್ಯೆಯಲ್ಲಿ ವ್ಯತ್ಯಾಸಗಳಿವೆ. ಈ ಸಂಬಂಧದಲ್ಲಿ ಸಂಪಾದಕರ ವಿಜ್ಞಾಪನೆ ಇಂತಿದೆ :

"ಇದುವರೆಗೆ ಮುದ್ರಿತವಾಗಿರುವ ಚಂಪೂರೂಪದ ಕರ್ನಾಟಕ ಪ್ರಾಚೀನ ಜೈನ ಪುರಾಣಗಳೆಲ್ಲವೂ ಅಲ್ಪಸ್ವಲ್ಪವಾದರೂ ಗ್ರಂಥಪಾತವಿಲ್ಲದೆ ಮುದ್ರಿತವಾಗಿಲ್ಲದಿರುವಾಗ ಈ ಮೇಲೆ ಹೇಳಿದ ನಾಲ್ಕು ಪ್ರತಿಗಳ ಸಹಾಯದಿಂದ ಮಾತ್ರವೇ ಮುದ್ರಿತವಾಗಿರುವ ಈ ಗ್ರಂಥದಲ್ಲಿ ಗ್ರಂಥಪಾತವಿಲ್ಲದಿರುವುದು ಒಂದು ಸಂತೋಷಕರವಾದ ಸುದ್ದಿಯೆ ಆಗಿದ್ದರೂ ನಾಲ್ಕಾರು ಕಡೆಗಳಲ್ಲಿ ಇಷ್ಟು ಹಸ್ತಲಿಖಿತ ಪ್ರತಿಗಳಿಂದಲೂ ಶುದ್ಧ ಪಾಠವು ದೊರಕದಿರುವುದು ತುಂಬಾ ಆಶ್ಚರ್ಯಕರವಾದ ಸಂಗತಿಯೇ ಆಗಿರುವುದು. ಆದರೂ ಈಗ ಮುದ್ರಿತವಾಗಿರುವ ಎಲ್ಲ ಪ್ರಾಚೀನ ಪುರಾಣಗಳಿಗಿಂತಲೂ ಇದು ತಕ್ಕಷ್ಟು ಶುದ್ಧ ಪಾಠಗಳಿಂದ ತೃಪ್ತಿಕರವಾಗಿಯೇ ಮುದ್ರಿತವಾಗಿರುವುದೆಂಬುದು ವಾಚಕರಿಗೇ ಸ್ಪಷ್ಟ ಪಡುವುದರಿಂದ ಅದನ್ನು ಮತ್ತೆ ಈಗ ಒತ್ತಿ ಹೇಳಬೇಕಾಗಿಲ್ಲ"

"ಈ ಗ್ರಂಥದಲ್ಲಿ ಪ್ರತಿಯೊಂದು ಪುಟದಲ್ಲಿಯೂ ರೇಖೆಯ ಕೆಳಗೆ ಭಿನ್ನಪಾಠಗಳನ್ನು ಕೊಟ್ಟು ಕೆಲವು ಕಡೆ ಆ ಪಾಠಗಳ ವಿಷಯದಲ್ಲಿ ಸಂಪಾದಕರ ಅಭಿಪ್ರಾಯವನ್ನೂ ತಿಳಿಸಿದೆ. ಈ ಭಿನ್ನ ಪಾಠಗಳಲ್ಲಿ ಅಸಾಧುಸಾಧು ಪಾಠಗಳೆರಡನ್ನೂ ಕೊಟ್ಟಿರುವ ಉದ್ದೇಶವು ಮುಖ್ಯವಾಗಿ ಎರಡು. ಹಸ್ತಲಿಖಿತ ಪ್ರತಿಗಳ ಸ್ವರೂಪವು ತಿಳಿಯ ಬರುವುದರಿಂದ ಸಂಪಾದಕರ ಉತ್ತರವಾದಿತ್ವವು ಎಷ್ಟರ ಮಟ್ಟಿನದೆಂಬುದನ್ನು ವಾಚಕರಿಗೆ ತಿಳಿಯಪಡಿಸಬೇಕೆಂಬುದು ಮೊದಲನೆಯದು. ಕೆಲವು ವೇಳೆಗಳಲ್ಲಿ ಅಸಾಧುಪಾಠಗಳು ಕೂಡ ಸಾಧುಪಾಠಗಳ ಸೂಚನೆಗೆ ಎಷ್ಟರ ಮಟ್ಟಿನ ಸಹಾಯವನ್ನು ಮಾಡುವುದು ಎಂಬುದನ್ನು ತಿಳಿಯಪಡಿಸಬೇಕೆಂಬುದು ಎರಡನೆಯದು.

ಎಚ್. ಶೇಷ ಅಯ್ಯಂಗಾರ್ ಅವರು ಈ ಮುದ್ರಣದಲ್ಲಿ ಗ್ರಂಥ ಶರೀರದೊಡನೆ ವಿಮರ್ಶಾತ್ಮಕವಾಗಿರುವ ಸಂಗ್ರಹವಾದ ಮುನ್ನುಡಿಯನ್ನೂ, ಮತ್ತು ಗ್ರಂಥದ ಕೊನೆಯಲ್ಲಿ ಆಯ್ದು ಪರಿಶಿಷ್ಟಗಳನ್ನೂ ಕೊಟ್ಟಿದ್ದಾರೆ. 1. ಪದ್ಯಗಳ ಅಕಾರಾದಿ ಪಟ್ಟಿ 2. ಚಾವುಂಡರಾಯ ಪುರಾಣ (ಕನ್ನಡ) ಉತ್ತರ ಪುರಾಣ (ಸಂಸ್ಕೃತ—ಗುಣಭದ್ರಾಚಾರ್ಯ)— ಇವೆರಡರಲ್ಲೂ ಇರುವ ಪ್ರಸ್ತುತ ಕಾವ್ಯ ವಸ್ತುವಿಗೆ ಸಂವಾದಿಯಹಾಗಿರುವ ಕಥಾ ಭಾಗದ ಸಂಗ್ರಹ 3. ಘಪ್ರತಿಯ ಭಿನ್ನಪಾಠಗಳ ಪಟ್ಟಿ 4. ತ್ರಿಷಷ್ಟಿಶಲಾಕಪುರುಷ ನಾಮಹಾವಳಿ, ಜನ್ಮಸ್ಥಳಾದಿ ಕೋಷ್ಟಕ 5. ವೃತ್ತಜಾತಿಗಳ ಹೆಸರು—ಸಂಖ್ಯೆಗಳ ಪಟ್ಟಿಕೆ.

ಸಂಪಾದಕರು ಸುಮಾರು ಅಯ್ವತ್ತು ಪುಟ ಪ್ರಮಾಣದ ಕವಿಕಾವ್ಯವಿಚಾರ ಜಿಜ್ಞಾಸೆಯಲ್ಲಿ ಕರ್ಣಪಾರ್ಯನ ಕಾಲ, ಆಶ್ರಯದಾತರು, ಸ್ಥಳ, ಸಾಹಿತ್ಯ ಪರಿಸರ, ಕಾವ್ಯವಸ್ತು ವಿಶೇಷಗಳನ್ನು ವಿಸ್ತಾರವಾಗಿ ಪರಾಮರ್ಶಿಸಿದ್ದಾರೆ. ಕ್ರಿ.ಶ. 1040 ಕ್ಕಿಂತಲೂ ಹಿಂದೆ, ದುರ್ಗಸಿಂಹಕವಿಗಿಂತಲೂ ಹಿಂದೆ, ಮಾಳತೀಮಾಧವವೆಂಬ ಕೃತಿಯ ಕರ್ತೃವಾದ ಇನ್ನೊಬ್ಬ ಕರ್ಣಪಾರ್ಯನು ಇದ್ದನು ಆತನನ್ನು ಒಂದನೆಯ ಕರ್ಣಪಾರ್ಯನೆನ್ನಬಹುದು ; ನೇಮಿನಾಥ ಪುರಾಣವನ್ನು ಬರೆದ ಕರ್ಣಪಾರ್ಯ ಕರ್ಣಪ್ಪ, ಕನ್ನಮಯ್ಯ, ಕಣ್ಣಮಯ್ಯ, ಕಣ್ಣಪ್ಪಯ್ಯ, ಕಣ್ಣಮ ಎಂಬ ನಾಮಹಾಂತರ — ರೂಪಾಂತರಗಳ ಈ) ಕವಿಯನ್ನು ಎರಡನೆಯ ಕರ್ಣಪಾರ್ಯನೆಂದು ಕರೆಯಬಹುದು.

ಚಂದ್ರಪ್ರಭ ಸಾಂಗತ್ಯವೆಂಬ ದೊಡ್ಡ ಕಾವ್ಯವನ್ನು ರಚಿಸಿರುವ ದೊಡ್ಡಯ್ಯ (1550) ಕವಿಯು ಈ ಕಣ್ಣಪನನ್ನು ಸುತಿಸೂಕ್ತ ನೇಮಿನಾಥ ಚರಿತೆ ಮತ್ತು ಸ್ಮರಹರವೀರೇಶ ಚರಿತೆ (ವರ್ಧಮಾನ ಪುರಾಣ) ಕ್ಕಾವ್ಯಗಳನ್ನೂ ಬರೆದಿದ್ದಾನೆಂದು ಸೂಚನೆ ಕೊಟ್ಟಿದ್ದಾನೆ. ಇದರಿಂದ ಪ್ರತೀತವಾಗುವಂತೆ ಕರ್ಣಪಾರ್ಯನು ಎರಡು (ಚಂಪೂ)ಕಾವ್ಯಗಳನ್ನು ಬರೆದಿರುತ್ತಾನೆ, ಆದರೆ ಈಗ ಉಪಲಬ್ಧವಾಗಿರುವುದು ನೇಮಿನಾಥ ಚರಿತೆಯೊಂದೇ ಅಲ್ಲದೆ ಮೂರನೆಯ ಮಂಗರಸ ಕವಿಯೂ ಸಹ ದೊಡ್ಡಯ್ಯನ ಹೇಳಿಕೆಯನ್ನು ಪುಷ್ಟೀಕರಿಸಿರುವುದರಿಂದ ಕಣ್ಣಪ್ಪನು ಅಂಗಜರಿಪು ವೀರೇಶ ಚರಿತವ ಪೊಂಗಿಪೇಟ್ಟಿ-ಪೊಗೆಟ್ಟಿ ಕವಿಯೆಂದು ಸ್ಥಾಪಿತವಾಗುತ್ತದೆ, ದೊಡ್ಡಯ್ಯನೂ – ಮಂಗರಸನೂ ಆ ವೀರೇಶಚರಿತೆ (ಮಹಾವೀರ ಪುರಾಣ) ಕಾವ್ಯವನ್ನು ನೋಡಿರುವುದರಿಂದ 16 ನೆಯ ಶತಮಾನದವರೆಗೂ ಅದರ ಪ್ರತಿಗಳು ಉಪಲಬ್ಧವಿದ್ದುವೆಂದು ಹೇಳಬಹುದು.

ಈ ಇಮ್ಮಡಿ ಕರ್ಣಪಾರ್ಯನು ಪಂಪ ಪೊನ್ನರನ್ನ ನಾಗಚಂದ್ರ ಕವಿಗಳನ್ನು ಮಾತ್ರ ಸ್ತುತಿಸಿರುತ್ತಾನೆ. ಪ್ರಸ್ತುತ ಕಾವ್ಯದ ಸಂಪಾದಕರು ಅಭಿನವ ಪಂಪನೆನಿಸಿದ ನಾಗಚಂದ್ರ ಕವಿಯನ್ನು ಕುರಿತು ಕರ್ಣಪಾರ್ಯ ; ಕವಿ ಪ್ರಯೋಗಿಸಿರುವ 'ಅದ್ಯತನ'

ನೆಂಬ ಶಬ್ದವನ್ನು ಹಿಡಿದು, ಅದರ ಪೂರ್ವಪದ ಹಿನ್ನೆಲೆ ಕುರಿತು ಹನ್ನೆರಡು – ಹದಿಮೂರು ಪುಟಗಳಷ್ಟು (ಪುಟ. 10 ರಿಂದ 23) ಚರ್ಚೆ ಬೆಳಸಿದ್ದಾರೆ. ಅಲ್ಲದೆ ಅದರ ಸಂಬಂಧವಾಗಿ ಕಂತಿ – ಹಂಪರ ವಿಚಾರ, ದುರ್ಗಸಿಂಹನ ಹೇಳಿಕೆ, ಕವಿಚರಿತ್ರೆ ಕಾರರ ಮತ್ತು ಅಯ್ಯನವರ ವಾಗ್ವಾದಗಳು – ಇವೆಲ್ಲವನ್ನು ಉಲ್ಲೇಖಿಸಿದ್ದಾರೆ ; ಈ ಬಗ್ಗೆ ಪ್ರಸ್ತುತ ವಿವೇಚನೆಗೆ ಅಷ್ಟು ದೀರ್ಘವಾದ ಚರ್ಚೆ ಇಂದಿಗೆ ಅಪ್ರಸ್ತುತ ವೆನಿಸುತ್ತದೆ.

ಅನಂತರ ಸಂಪಾದಕರು ಕರ್ಣಪಾರ್ಯಕವಿಗೆ ಆಸರೆಯನ್ನು ನೀಡಿದವರ ಮನೆ ತನದ ಮಾಹಿತಿಗಳನ್ನೆಲ್ಲ ಕಲೆ ಹಾಕಿ, ಆಧಾರ ಸಹಿತವಾಗಿ ಚರ್ಚಿಸಿದ್ದಾರೆ, ಒಬ್ಬ ಕವಿಯ ಇತಿವೃತ್ತವನ್ನು ಹುಡುಕಿ ಕಟ್ಟಲು ಲಭ್ಯಮಾಹಿತಿಗಳನ್ನು ಹೇಗೆ ಜಾಲಾಡಬೇಕೊ ಹಾಗೆ ಈ ಸಂಪಾದಕರೂ ಸಹ ಒಂದು ವ್ಯವಸ್ಥೆಗೆ ಬದ್ಧರಾಗಿ ವಸ್ತು ನಿಷ್ಠತೆಯಿಂದ ಉಪಲಬ್ಧ ಸಾಮಗ್ರಿಯನ್ನು ಜರಡಿ ಹಿಡಿದಿರುವುದು ಅನುಕರಣೀಯ ಯೋಗ್ಯ ಪ್ರಯತ್ನವಾಗಿದೆ.

ತರುವಾಯ ನೇಮಿನಾಥ ಪುರಾಣದ ಕಾವ್ಯ ವಿಚಾರ ಕುರಿತು ಪರಿಶೀಲನೆಗೆ ತೊಡಗಿ, ಕಾವ್ಯದ ವಸ್ತು ಜೈನ ಪುರಾಣವಾದ್ದರಿಂದ ಜೈನ ಪುರಾಣಗಳ ಲಕ್ಷಣವನ್ನು ಪ್ರಸಿದ್ಧ ಜೈನಾಚಾರ್ಯರ ನಿರೂಪಣೆಯನ್ನು ಅವಲಂಭಿಸಿ ಚರ್ಚಿಸಿದ್ದಾರೆ ಮತ್ತು ಈ ಜೈನ ಪುರಾಣ ಲಕ್ಷಣಗಳು ಕರ್ಣಪಾರ್ಯನ ಕಾವ್ಯದಲ್ಲಿ ಎಲ್ಲೆಲ್ಲಿ ಅಳವಟ್ಟಿವೆಯೆಂಬುದನ್ನು ಕೂಲಂಕಷವಾಗಿ ಪ್ರತಿಪಾದಿಸಿದ್ದಾರೆ.

ಕರ್ಣಪಾರ್ಯನ ಕಾವ್ಯದಲ್ಲಿರುವ ರಸ ಪ್ರತೀತಿ, ಶೈಲಿ, ಅಲಂಕಾರ, ಸಂಸ್ಕೃತ ವ್ಯಾವಹಾರಿಕ ವಾಕ್ಯಗಳು, ನಾಣ್ಣುಡಿಗಳು, ಪ್ರಾಚೀನ ವ್ಯಾಕರಣ ಮರ್ಯಾದೆ, ಪ್ರಾಸದ ವಿಷಯ, ಕಥಾ ಸಾರಾಂಶ, ವಿಮರ್ಶೆ – ಇಷ್ಟನ್ನೂ ಆರೇಳು ಪುಟಗಳಲ್ಲಿ ಅಡಕವಾಗಿ ವಿವರಿಸಿದ್ದಾರೆ, ವಿವೇಚಿಸಿದ್ದಾರೆ. ಆಮೇಲೆ ಆಶ್ವಾಸಗಳ ಪ್ರಕಾರ ವಿಷಯ ಸೂಚಿಕೆಯನ್ನು ಪರಿಚಯಾತ್ಮಕವಾಗಿರುವಂತೆ ಸಂಯೋಜಿಸಿದ್ದಾರೆ ; ಅಂದರೆ ಪ್ರತಿಯೊಂದು ಆಶ್ವಾಸದಲ್ಲಿಯೂ ಯಾವಯಾವ ಕಥಾಭಾಗ ಮತ್ತು ಪ್ರಮುಖ ಪಾತ್ರ - ಘಟನೆ ಬರುತ್ತದೆಂಬುದನ್ನು ಆಯಾ ಪುಟಗಳ ಪ್ರಕಾರ ವಿಂಗಡಿಸಿ ಸೂಚಿಸಿದ್ದಾರೆ. ಇದು ಓದುಗರಿಗೆ ಉಪಯುಕ್ತವಾಗಿರುವ ಏರ್ಪಾಟು. ಅಕ್ಷರ ಸ್ಖಾಲಿತ್ಯಗಳು ತೀರ ಕಡಮೆಯಿದ್ದು ಮುದ್ರಣ ವಿನ್ಯಾಸ ಪ್ರಶಂಸನೀಯವಾಗಿ ಬಂದಿದೆ.

ನೇಮಿನಾಥ ಪುರಾಣ ಮತ್ತು ಹರಿವಂಶ ಪುರಾಣಗಳು ಸಮಾನ ವಸ್ತುವಿರುವ ಜೈನಪುರಾಣಗಳು. ಇದರಲ್ಲಿ 22ನೆಯ ತೀರ್ಥಂಕರನಾದ ನೇಮಿನಾಥನ ಮತ್ತು ಆತನ ಸೋದರ ಪುತ್ರರಾದ ಕೃಷ್ಣ ಬಲರಾಮರ ಕಥೆಯೂ ಹೆಣೆದುಕೊಂಡಿದೆ. ಜೈನ

ಭಾರತಗಳ ಸ್ವರೂಪವು ಈ ಕಾವ್ಯಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಕನ್ನಡದಲ್ಲಿ ಯಾಂತೂ ಬೇರೆ ಯಾವ ತೀರ್ಥಂಕರ ಚರಿತೆಯೂ ಈ ನೇಮಿನಾಥ ಪುರಾಣದಷ್ಟು (ಕವಿ) ಜನಪ್ರಿಯವಾಗಿಲ್ಲ. ಪ್ರಾಕೃತದಲ್ಲಿದ್ದ ಈ ಪುರಾಣ ಕಥೆಯನ್ನು ಒಂದು ಸ್ವತಂತ್ರ ಮಹಾಕಾವ್ಯವಾಗಿ ಸಂಸ್ಕೃತದಲ್ಲಿ ರಚಿಸಿದವನು ಪುನ್ನಾಟ ಸಂಘದ ಜಿನ ಸೇನಾಚಾರ್ಯನು ; ಆತನ ಮಹಾಕಾವ್ಯದ ಹೆಸರೇ 'ಹರಿವಂಶ ಪುರಾಣ' ಅದರ ಆಧಾರದಿಂದ ಆದಿಗುಣವರ್ಮನು ಕನ್ನಡದಲ್ಲಿ ಪಂಪನಿಗಿಂತಲೂ 30 ವರ್ಷ ಮೊದಲು, 'ಹರಿವಂಶ' ಕಾವ್ಯವನ್ನೂ ರಚಿಸಿದ್ದಾನೆ. ಈ ಆದಿ ಗುಣವರ್ಮನ ಹರಿವಂಶವಾಗಲೀ, ಇನ್ನೊಂದು ಕಾವ್ಯವಾದ ಶೂದ್ರಕವಾಗಲೀ ಉಪಲಬ್ಧವಿಲ್ಲ ; ಆದರೆ ಆ ಎರಡೂ ಕಾವ್ಯಗಳಿಗೆ ಸೇರಿದ ಕೆಲವು ಬಿಡಿ ಪದ್ಯಗಳು ಅಲ್ಲಲ್ಲಿ ಶಾಸ್ತ್ರ ಮತ್ತು ಸಂಕಲನ ಕೃತಿಗಳಲ್ಲಿ ಉದಾಹೃತಗೊಂಡು ದೊರೆತಿವೆ. ನೇಮಿನಾಥ ಪುರಾಣಗಳ ಪರಂಪರೆಯಲ್ಲಿ ಈಗ ಕನ್ನಡದಲ್ಲಿ ಪೂರ್ತಿಯಾಗಿ ಇಡೀ ಕಾವ್ಯ ದೊರೆತು ಪ್ರಕಟವಾಗಿರುವುದರಲ್ಲಿ ಕರ್ಣಪಾರ್ಯನ ಕಾವ್ಯವೇ ಮೊದಲಿನದು. ಅದರಿಂದ ಈ "ನೇಮಿನಾಥ ಪುರಾಣಂ" ಚಂಪೂ ಕಾವ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ ಮತ್ತು ಐತಿಹಾಸಿಕ ಮಹತ್ವವಿದೆ. ಕರ್ಣಪಾರ್ಯನು ಪಂಪರನ್ನ ಪೊನ್ನಾದಿ ಪ್ರಾಚೀನ ಕನ್ನಡ ಕವಿಗಳ ಮಾನಸಪುತ್ರ. ಜೈನ ಭಾರತವನ್ನು ಬರೆಯುವಾಗಲೂ ಅಜೈನ ಭಾರತಗಳ ಕಥಾಂಶವನ್ನೂ ಸೇರಿಸಿಕೊಂಡಿದ್ದಾನೆ. ಅದರ ವಿಸ್ತಾರವಾದ ಚರ್ಚೆಗೆ ಈ ಪ್ರಬಂಧದಲ್ಲಿ ಎಡೆಯಿಲ್ಲ.

ಕರ್ಣಪಾರ್ಯನ ತರುವಾಯ ಮಾರ್ಗ ಮಾರ್ಗ ಮತ್ತು ದೇಸಿ ಕಾವ್ಯಪಂಥಗಳಲ್ಲಿ ನೇಮಿನಾಥನ ಕಥೆ ಬೆಳೆದು ಬಂದಿದೆ. ವಸ್ತುಕವೆನಿಸಬಲ್ಲ ಕಾವ್ಯಗಳನ್ನು ಬಂಧುವರ್ಮ (ಹರಿವಂಶಾಭ್ಯುದಯ) ನೇಮಿಚಂದ್ರ (ಅರ್ಧನೇಮಿಪುರಾಣ) ಮಹಾಬಲಕವಿ (ನೇಮಿನಾಥ ಪುರಾಣಂ) ಇವರು ರಚಿಸಿದ್ದಾರೆ ; ವರ್ಣಕವೆನಿಸುವ ಹಾಡುಗಬ್ಬಗಳನ್ನು ಸಾಳ್ವಕವಿ(ಸಾಳ್ವಭಾರತ - ನೇಮಿನಾಥ ಚರಿತೆ), ಮಂಗರಸನ(ನೇಮಿಜಿನೇಶ ಸಂಗತಿ)- ಇತ್ಯಾದಿ. ಹೀಗೆ ಈ ವಸ್ತು ಕನ್ನಡದಲ್ಲಿ ಬೆಳೆದು ಬಂದಿರುವುದಕ್ಕೆ ಕರ್ಣಪಾರ್ಯನೂ ಪ್ರೇರಣೆ ನೀಡಿದ್ದಾನೆ. 14 ಆಶ್ವಾಸಗಳ ಬೃಹತ್ ಕಾವ್ಯವನ್ನು ರಚಿಸಿದ್ದಾನೆ. ಅವನ ಕಾವ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಗದ್ಯಾನುವಾದ. ಸಹಿತವಾಗಿ ಎರಡು ಸಂಪುಟಗಳಲ್ಲಿ ಪ್ರೊ. ಹಂಪ, ನಾಗರಾಜಯ್ಯ ಮತ್ತು ಆರ್. ವಿ. ಕುಲಕರ್ಣಿ ಸಂಪಾದಿಸಿದ್ದು ಹೊರಬಂದಿದೆ. ಆದರೆ ಮೊಟ್ಟ ಮೊದಲನೆಯ ಸಲ ಕರ್ಣ ಪಾರ್ಯನ ಕಾವ್ಯವನ್ನು ಅಚ್ಚುಕಟ್ಟಾಗಿ ಪ್ರಕಟಿಸಿದ ಶ್ರೇಯಸ್ಸು ಮದರಾಸು ವಿಶ್ವವಿದ್ಯಾ ನಿಲಯಕ್ಕೇನೆ ಸಲ್ಲಬೇಕು. ಸುಮಾರು 54 ವರ್ಷಗಳ ಹಿಂದೆ ಅಲ್ಲಿ ಕನ್ನಡಕ್ಕೆ ಇದ್ದ ಮಾನ್ಯತೆಗೆ ಇದು ಪ್ರತೀಕವಾಗಿ ನಿಂತಿದೆ: ಗ್ರಂಥ ಸಂಪಾದನೆಯ ಕ್ಷೇತ್ರದಲ್ಲಿಯೂ ಇದಕ್ಕೊಂದು ಚಾರಿತ್ರಿಕ ಮಹತ್ವವಿದೆ.

2

ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣಂ

ಹಳಗನ್ನಡ ಚಂಪೂಕಾವ್ಯಗಳಲ್ಲಿ ಉಪೇಕ್ಷೆಯಿಂದಾಗಿ ಕೆಲವಕ್ಕೆ ಸಲ್ಲಬೇಕಾದ ಕಾವ್ಯವಿಮರ್ಶೆ ಸಂದಿಲ್ಲ. ಈ ಬಗೆಯ ನಿರ್ಲಕ್ಷಿತ ಚಂಪೂಕಾವ್ಯಗಳಲ್ಲಿ ಪಾರ್ಶ್ವಪಂಡಿತ ಕವಿಯ ಪಾರ್ಶ್ವನಾಥ ಪುರಾಣಂ ಕಾವ್ಯವೂ ಒಂದು.

ಪಾರ್ಶ್ವ ಪಂಡಿತನು 13ನೆಯ ಶತಮಾನವನ್ನು ಉದ್ಘಾಟಿಸಿದ ಕವಿ. ರನ್ನನಂತೆ ಜೀವನವನ್ನು ಕಟ್ಟಿಕೊಂಡವನು: ಬೆಳಗಾವಿ ಜಿಲ್ಲೆಯ ಪ್ರೌಢ ಚಂಪೂ ಕವಿಯಾದ ಪಾರ್ಶ್ವಪಂಡಿತನು ತನ್ನ ತುಂಬು ಪ್ರಾಯದಲ್ಲಿ ಶಿಲಾಶಾಸನವನ್ನು ಬರೆದವನು. ಗೋಕಾಕ ತಾಲೂಕಿಕ ಕಲ್ಹೊಳೆ (ಕಲ್ಹೊಳೆ) ಶಾಸನವೆಂದು ವಿಖ್ಯಾತವಾಗಿರುವ ಸುದೀರ್ಘ ಶಾಸನವನ್ನು ಕ್ರಿ.ಶ. 1205 ರಲ್ಲಿ ರಚಿಸಿದವನು ಪಾರ್ಶ್ವಪಂಡಿತ ಕವಿ :

ಲಲಿತ ಪದಾರ್ಥಾಲಂಕೃತಿ
ಗಳಿನೊಸರ್ವ ರಸಂಗಳಿಂದೆ ಬುಧರೊಳ್ಪುಳಕಾ
ವಳಿ ಸಸ್ಯಮೊಗೆಯ ಕವಿಕುಳ
ತಿಳಕಂ ಶಾಸನಮನೊಲ್ದು ಪೇಟ್ದಂ ಪಾರ್ಶ್ವಂ :

ಕಲ್ಹೊಳೆಯ ಶಾಸನ ಒಂದು ಸೊಗಸಾದ ಪುಟ್ಟ ಚಂಪೂಕಾವ್ಯ : 29 ವೃತ್ತ ಪದ್ಯಗಳು : ಕಂದ ಪದ್ಯಗಳೂ, ಗದ್ಯವೂ ಈ ಶಾಸನದಲ್ಲಿವೆ. ಕಲ್ಯಾಣ ಚಾಳುಕ್ಯರ ಆಶ್ರಯದಲ್ಲಿ ಆಳಿದ ಸವದತ್ತಿಯ (ಸವಣದತ್ತಿ) ರಟ್ಟರ ರಾಜಪೀಳಿಗೆಯೊಂದಿಗೆ ಆ ರಟ್ಟರ ಅಧೀನದಲ್ಲಿದ್ದ ಯದುಕುಲದ ಹಗರಟಗೆ ನಾಡಿನ ಕುಪಣಪುರವರಾಧೀಶ್ವರರ ವಂಶವೃಕ್ಷವನ್ನೂ ಈ ಕಲ್ಹೊಳೆ ಶಾಸನದಲ್ಲಿ ಪರಿಚಯಿಸಿದೆ. ಇಷ್ಟು ಐತಿಹಾಸಿಕ ವಿವರಗಳಿಂದ ಇಡಿಕಿರಿದ ಮಹತ್ವದ ಶಾಸನದಲ್ಲಿ ಸಿಂದನ ಕಲ್ಹೊಳೆಯೊಳಗೆ ಹಗರಟಗೆ ಯದುಕುಲಾಂಬರದ್ಯುಮಣಿ ಇಮ್ಮಡಿ ರಾಜನು ಕಟ್ಟಿಸಿದ ಬಸದಿಗೆ ಎಲ್ಲ ತೆರಿಗೆಗಳನ್ನೂ ಬಿಟ್ಟುಕೊಟ್ಟ ದಾಖಲೆಯಿದೆ, ಈ ಬಸದಿಗೆ ಕೊಂಡಿ ಮೂರುಸಾವಿರದ ರಾಜನಾದ ಕಾರ್ತ ವೀರ್ಯನೂ ಸಹ ದತ್ತಿಯಿತ್ತನು. ಆ ಪ್ರಸಂಗದಲ್ಲಿ ರಾಜನಿಗೆ ಪಾರ್ಶ್ವಪಂಡಿತನ ಕಾವ್ಯ ಶಕ್ತಿ ಮೆಚ್ಚುಗೆಯಾಗಿ ತನ್ನ ಆಸ್ಥಾನ ಕವಿಯನ್ನಾಗಿ ಸ್ವೀಕರಿಸಿದನು. ಶಾಸನಕವಿ ಪಾರ್ಶ್ವನು ಮುಂದೆ ರಾಜನ ಒಡ್ಡೋಲಗದಲ್ಲಿ 16 ಆಶ್ವಾಸಗಳ ಪ್ರೌಢ ಚಂಪೂ ಕಾವ್ಯವಾದ ಪಾರ್ಶ್ವನಾಥ ಪುರಾಣವನ್ನು ರಚಿಸಿದನು. ಈ ಕಾವ್ಯವನ್ನು ಮದರಾಸು ವಿಶ್ವವಿದ್ಯಾಲಯ ಅತ್ಯಂತ ಸುಂದರವಾಗಿ ಪ್ರಕಟಿಸಿದೆ (1954). ಅದನ್ನು ಸಂಪಾದಿಸಿ ಕೊಟ್ಟವರು ಪ್ರೊ. ಎಂ. ಮರಿಯಪ್ಪ ಭಟ್ಟ ಮತ್ತು ಎಂ. ಗೋವಿಂದರಾವ್, ಸಂಪಾದಕದ್ವಯರ ಪರಿಶ್ರಮವು ಪ್ರಶಂಸನೀಯವಾಗಿದೆ, ಅನುಕರಣೀಯ ಯೋಗ್ಯ ವಾಗಿದೆ. ಇಪ್ಪತ್ತೆರಡು ಪುಟಗಳ ಉಪೋದ್ಘಾತವು ಇಂಗ್ಲಿಷ್–ಕನ್ನಡ ಎರಡೂ

ಭಾಷೆಗಳಲ್ಲಿದ್ದು ಸಂಶೋಧಕರಿಗೆ ಆಕರ ಸ್ವರೂಪಿಯರಾಗಬಲ್ಲ ಮಾಹಿತಿಗಳನ್ನು ಸಂಗ್ರಹಿಸಿಕೊಟ್ಟಿದೆ. ಕವಿ ಕಾವ್ಯವಿಚಾರ, ಮನೆತನ, ಕಾಲಜಿಜ್ಞಾಸೆ, ಶಾಸನ ರಚನೆ, ಅಂದಿನ ಸಾಹಿತ್ಯ ಪರಿಸರ–ಇವಿಷ್ಟನ್ನೂ ಸಂಗ್ರಹವಾಗಿ, ಸಮರ್ಪಕವಾಗಿ ಪ್ರತಿಪಾದನೆ ಮಾಡಿದ್ದಾರೆ.

ಸಂಪಾದಕರು ಈ ಕಾವ್ಯದ ಐತಿಹಾಸಿಕ ಹಿನ್ನೆಲೆಯನ್ನೂ ತಿಳಿಸಿ ಉಪಕರಿಸಿದ್ದಾರೆ. ಸವದತ್ತಿಯ ರಟ್ಟಕುಲದ ರಾಜ–ರಾಣಿಯರ ವಂಶಾವಳಿಯನಿತ್ತು, ಅವರಲ್ಲಿ ಪಾರ್ಶ್ವ ಪಂಡಿತನ ಪೋಷಕರನ್ನು ಗುರುಗಳನ್ನು ತಿಳಿಸಿರುತ್ತಾರೆ. ಅಲ್ಲದೆ ಇದೇ ರಾಜವಂಶದ ಪ್ರಸಿದ್ಧ ಮತ್ತು ಪ್ರೌಢ ಚಂಪೂ ಕವಿಶ್ರೇಷ್ಠನಾದ ನೇಮಿಚಂದ್ರನಿಗೆ ಆಶ್ರಯ ಕೊಟ್ಟು ಲೀಲಾವತಿಯೆಂಬ ಶೃಂಗಾರ ಕಾವ್ಯವನ್ನು ರಚಿಸಲು ನೀಡಿದ ಪ್ರೇರಣೆಯನ್ನೂ ಸಂಪಾದಕರು ಪ್ರಸಂಗೋಚಿತವಾಗಿ ಪ್ರಸ್ತಾಪಿಸಿದ್ದಾರೆ. ಮರೆಯದೆ ಹೇಳಬೇಕಾದ ದ್ದೆಂದರೆ, ಕಾವ್ಯದ ಮುಖ್ಯ ಪಾತ್ರದೊಂದಿಗೆ ಆಶ್ರಯದಾತರನ್ನೂ ಸಮೀಕರಿಸಿ ಅಭೇದ ಭಾವದಿಂದ ವರ್ಣನೆ ಮಾಡಿರುವುದನ್ನು ಸಂಪಾದಕರು ತೋರಿಸಿಕೊಟ್ಟಿರುತ್ತಾರೆ. ನಾಗಚಂದ್ರನ ಜೀವನ ಮತ್ತು ಕಾವ್ಯಮಾರ್ಗವನ್ನು ಪಾರ್ಶ್ವಪಂಡಿತನು ಮಾದರಿಯಾಗಿ ಸ್ವೀಕರಿಸಿ ಹೇಗೆ ಅನುಸರಿಸಿದ್ದಾನೆಂಬುದನ್ನು ಉದಾಹರಣೆ ಸಹಿತ ಸೂಚಿಸಿದ್ದಾರೆ. ನಾಗಚಂದ್ರನೂ ಚಾಳುಕ್ಯರ ಆಶ್ರಯದ ಮಹಾಕವಿ; ಅದೇ ಚಾಳುಕ್ಯರ ಮಂಡಲೇಶ್ವರರ ಮನೆತನವಾಗಿದ್ದುದು ಪಾರ್ಶ್ವಕವಿ ಇದ್ದ ಸವದತ್ತಿಯ ರಟ್ಟರದು. ಕಾವ್ಯದ ವರ್ಣನೆಗಳಲ್ಲಿ ಈ ಕವಿಗೆ ನಾಗಚಂದ್ರನ ಪ್ರಭಾವ ಮತ್ತು ಪ್ರೇರಣೆ ನೀಡಿದೆಯೆಂಬುದನ್ನು ತೌಲನಿಕವಾಗಿ ಸಂಪಾದಕರು ಗುರುತಿಸಿರುತ್ತಾರೆ.

ಪಾರ್ಶ್ವಪಂಡಿತನ ಹೆಚ್ಚುಗಳಗಳಲ್ಲಿ ಇನ್ನೊಂದನ್ನೂ ಇಲ್ಲಿ ಹೆಸರಿಸಬೇಕು. ಕವಿಗೆ ಕವಿ ಮುನಿವಂ– ಎಂಬೊಂದು ಪ್ರಯೋಗವನ್ನು ವೈಯಾಕರಣ ಕೇಶಿರಾಜನು ಉದಾಹರಿಸಿದ್ದಾನೆ. ಆದರೆ ಎಲ್ಲ ಕವಿಗಳೂ ಪರಸ್ಪರ ದ್ವೇಷಿಗಳೆಂದು ಸಾರಾಸಗಟು ತೀರ್ಮಾನಿಸುವುದು ಅನ್ಯಾಯ ಮಾಡಿದಂತೆ. ಕವಿಗೆ ಕವಿ ಒಲಿವಂ-ಎಂದೂ ಹೇಳಬಹುದಾದಂತಹ ಮೇಲ್ಪಂಕ್ತಿಯಾಗಿ ನಿಂತ ಸುಜನೋತ್ತಂಸ ನಂತಹ ಕವಿಗಳೂ ಇದ್ದಾರೆ. ಪಾರ್ಶ್ವ ಪಂಡಿತನು ಇಂಥ ಅಮತ್ಸರಿ ಕವಿ. ರನ್ನನು ಶ್ರೀಯುತರು ಉದಾರಿಗಳೂ, ಪಾರ್ಶ್ವ ಶ್ರೀಯುತರು ಅಮತ್ಸರಿಗಳೂ ಆಗಬೇಕೆಂದಿದ್ದಾನೆ. ಪಾರ್ಶ್ವಪಂಡಿತನು ಅಸೂಯೆಯಿಲ್ಲದ ವಾತ್ಸಲ್ಯನಾದ ಹೃದಯವಂತ ಕವಿ. ಕನ್ನಡದ ಅನೇಕ ಪ್ರಾಚೀನ ಕವಿಗಳಿಗೆ ತನ್ನ ಪದ್ಯಪುಷ್ಪಗಳನ್ನು ಕಟ್ಟಿ ಪದ್ಯಪುಷ್ಪಾಂಜಲಿಯನ್ನು ಅರ್ಪಿಸಿದ್ದಾನೆ. ಪಂಪ ಪೊನ್ನ ರನ್ನ ಆದಿಗುಣವರ್ಮ ಮೊದಲಾದ ಹಳೆಯ ಕವಿಗಳಿಗೆ ಕೈಮುಗಿಯುವುದು ವಾಡಿಕೆಯೇ ಆಗಿದೆ. ಆದರೆ ಪಾರ್ಶ್ವನು ಪುರಾತನ ಕವಿಗಳೊಡನೆ ನೂತನ ಕವಿಗಳನ್ನೂ, ತನ್ನ ಸಮಕಾಲೀನ ಜತೆಗಾರರಾದ ಕವಿಗಳನ್ನು ಸೇರಿಸಿ ಅವರೊಳಗೆ ಯಾವ ಭೇದವೂ ಇಲ್ಲದೆ ಸ್ತುತಿಸಿದ್ದಾನೆ; ಇದು ಆತನ ಮನೋವೈಶಾಲ್ಯವನ್ನು ತೋರಿಸುತ್ತದೆ.

ಪಾರ್ಶ್ವ ಪಂಡಿತನಂತೆ ಪೂರ್ವಕವಿಗಳ ಕಾವ್ಯ ವಿಮರ್ಶೆಯನ್ನು ಮಾಡಿದ ಕವಿಗಳು ಪ್ರಾಯಃ ಬೇರೆ ಯಾರೂ ಇರಲಾರರು – ಎಂದು ಸಂಪಾದಕರು ಅಭಿಪ್ರಾಯ ಪಟ್ಟಿರುವುದು ಸಮಂಜಸವಾಗಿದೆ.

ಪಾರ್ಶ್ವನಾಥ ಪುರಾಣದ ಕಥಾಸಾರವನ್ನು ಅಚ್ಚುಕಟ್ಟಾಗಿ ಎರಡೇ ಪುಟಗಳಲ್ಲಿ ಸಂಗ್ರಹಿಸಿದ್ದಾರೆ. ಅನಂತರ ಈ ಕಥೆಯಲ್ಲಿ ಕವಿ ಮಾಡಿಕೊಂಡಿರುವ ಮಾರ್ಪಾಟುಗಳು ಯಾವುವು ಎಂಬುದನ್ನು ಎತ್ತಿತೋರಿಸಿದ್ದಾರೆ. ತರುವಾಯ ಪಾರ್ಶ್ವಕವಿಯ ವರ್ಣನಾ ಸಾಮರ್ಥ್ಯ ಎಂತಹುದು ಎಂಬುದಕ್ಕೆ ತಕ್ಕ ದೃಷ್ಟಾಂತಗಳನ್ನಿತ್ತು ತೋರ್ಪಡಿಸಿದ್ದಾರೆ. ಲವಣಸಮುದ್ರ, ಸೂರ್ಯೋದಯ ವರ್ಣನೆ, ಮಂದಮಾರುತ, ಗುಣದ ಉನ್ನತಿ, ಶೃಂಗಾರರಸ ಪೋಷಣೆ, ಲತೆ – ಲತಾಂಗಿ ಸಾದೃಶ್ಯ ಕಲ್ಪನೆ, ಸಂಗೀತ – ನೃತ್ಯ, ವಿರಹ – ವಿಯೋಗ, ಶರತ್ಕಾಲ, ಮಳೆಗಾಲ, ಶಿಶಿರ ಋತುವರ್ಣನೆ – ಹೀಗೆ ಪಾರ್ಶ್ವ ಕವಿಯ ವರ್ಣನೆಯ ಮಾದರಿಗಳನ್ನು ಉದಾಹರಿಸಿದ್ದಾರೆ: ಕವಿಯ ವರ್ಣನಾ ಸಾಮರ್ಥ್ಯದ ಸ್ವೋಪಜ್ಞತೆ ಹೊಸತನ ಬೆರಗು ಚಮತ್ಕಾರ ಚಿತ್ತಾಕರ್ಷಣೆ ಇವನ್ನು ಸ್ಪಷ್ಟ ಪಡಿಸಿದ್ದಾರೆ. ನಾಗಚಂದ್ರ ಮತ್ತು ರನ್ನಾದಿಗಳ ಪ್ರಭಾವವಿರುವ ಭಾಗಗಳನ್ನೂ ಸಹ ಸಂಪಾದಕರು ವಸ್ತುನಿಷ್ಠರಾಗಿ ವಿವೇಚಿಸಿದ್ದಾರೆ :

ವಾರಿಯ ಬಟ್ಟೆಯನೆ ಸವತಿಯ
ತೋರಿದವನಿಸಿರ್ದ ಮೊಲೆಯ ಮೇಲಧಿಪನ ಕ
ಣ್ನೀರಂತೆ ಪರಿದು ನೆಲಸಿರೆ
ನೀರೊಳಗಿರ್ದುಂ ಬೆಮರ್ತಳೊರ್ವಳೆ ಮುಳಿಸಿಂ : (9–131)

ಎಂಬ ಪದ್ಯವು ರನ್ನನು ಹೇಳುವ ನೀರೊಳಗಿದ್ದುಂ ಬೆಮರ್ತ್ತನುರಗ ಪತಾಕಂ ಎಂಬ ಕಲ್ಪನೆಯ ಅನುರಣನೆಯೆಂದಿದ್ದಾರೆ. ಸರಿಯೆ ; ಆದರೆ ಪಾರ್ಶ್ವನ ಕಲ್ಪನೆಯಲ್ಲಿ ಮನೋಜ್ಞತೆಯಿದ್ದು ರಸಿಕರೂ, ಕಾವ್ಯಪ್ರೇಮಿಗಳೂ ಮತ್ತೆ ಮತ್ತೆ ಮೆಲಕು ಹಾಕಬಹುದಾಗಿದೆ.

ಕಳಮಕಣಿಶಂಗಳಂ ಬ
ಲ್ಗಿಳಿಗಳ್ ನಸುಗರ್ಜಡಿಯೆ ಪಾಮರಿಯುಮರ್ಗಂ
ದಳಿಸಿ ನಭದಲ್ಲಿ ತಳೆದವು
ನಳಯಾಕೃತಿವೆತ್ತ ಶಕ್ರಚಾಪದ ಚೆಲ್ವಂ ; :

ಎಂಬ ಪದ್ಯವನ್ನು ಉದಾಹರಿಸಿ ಸಂಪಾದಕರು : ಹಸುರು ಬಣ್ಣದ ಗಿಳಿಗಳು ಕೆಂಪಾದ ಚಂಚುಗಳಲ್ಲಿ ಹಳದಿ ಬಣ್ಣದ ತೆನೆಗಳನ್ನು ಹೊತ್ತುಕೊಂಡು ಮಂಡಲಾಕಾರವಾಗಿ ಗಗನದಲ್ಲಿ ಚಲಿಸುತ್ತ ಕಾಮನ ಬಿಲ್ಲನ್ನು ಹೋಲುವ ಈ ಚಿತ್ರವು ಎಷ್ಟು ಮನೋಹರವಾಗಿದೆ. ಇದನ್ನು ಇಷ್ಟು ಸುಂದರವಾಗಿ ವರ್ಣಿಸಿರುವ ಕವಿಯ ಜಾಣ್ಮೆಯನ್ನು

ಎಷ್ಟು ಹೊಗಳಿದರೂ ಸಾಲದು–ಎಂದು ಆಶ್ಚರ್ಯೋದ್ಗಾರಗಳನ್ನು ಹೊಮ್ಮಿಸಿದ್ದಾರೆ. ಆದರೆ ಇದೂ ಸಹ ಸಂಪೂರ್ಣವಾಗಿ ರನ್ನನು ಅಜಿತಪುರಾಣದಲ್ಲಿ (6-12) ಕೊಟ್ಟಿರುವ ಇಂತಹುದೇ ಮತ್ತು ಇದಕ್ಕಿಂತಲೂ ಸುಂದರ ತರವಾದ ಕಂದ ಪದ್ಯದ ವರ್ಣನೆಯ ಛಾಯಾನುವರ್ತಿಯಾಗಿದೆಯೆಂಬುದನ್ನು ನೋಡಬಹುದು :

ಅವಿರಳ ತಮಾಳ ಭೂರುಹ
ನಿವಹದ ಮೇಲೋಳಿವಟ್ಟು ಪಾಱುವ ಗಿಳಿ ಪೋ
ಲ್ತುವು ಕಱಿಯ ಮುಗಿಲ ಮೇಲೊ
ಪ್ಪುವ ರುಂದ್ರ ಸುರೇಂದ್ರ ಚಾಪರುಚಿರ ಶ್ರೀಯಂ : : 6–12

ಇದೇ ರೀತಿಯಾಗಿ ನಾಗಚಂದ್ರನು ರಾಮಚಂದ್ರಚರಿತ ಪುರಾಣದಲ್ಲಿ ರಚಿಸಿರುವ

ಗುಣಹಾನಿಯಿಂಧೋಗತಿ
ಗುಣದಿಂ ಸ್ವರ್ಗಾಪವರ್ಗಸುಖಮಕ್ಕುಮೆನಲ್
ಗುಣಹೀನನ ಸಿರಿಯಿಂದಂ,
ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೇ ॥

ಎಂಬ ಕಂದ ಪದ್ಯದ ಭಾವಾನುವಾದವನ್ನು ಪಾರ್ಶ್ವಪಂಡಿತನು

ಗುಣಹೀನನೆನಿಪ ಕಮಠನ
ಪಣಮುಂ ಕುಲಮುಂ ಮಹೋನ್ನತಿಯುನಿಂತೇಕ
ಕ್ಷಣಮಿರಿಸಲಾರವದ ಱಿಂ
ಗುಣಮೆ ಮಹೋನ್ನತಿಗೆ ಕಾರಣಂ ಪೆಱತುಂಟೆ : :

ಎಂಬುದಾಗಿ ಪ್ರತಿಧ್ವನಿಸಿರಬಹುದೆಂದಿದ್ದಾರೆ. ಆದರೆ ಸಮಾನವಾದ ಅಭಿಪ್ರಾಯ ಮತ್ತು ಅಭಿವ್ಯಕ್ತಿಗಳು ಕಂಡು ಬಂದೊಡನೆ ಹಳೆಯ ಕವಿಯಿಂದ ಹೊಸಕವಿ ಸ್ವೀಕರಿಸ ಬೇಕೆಂದು ತೀರ್ಮಾನಿಸುವುದೂ ಕಷ್ಟದ ಕೆಲಸ. ಒಂದೇ ಬಗೆಯ ಕಲ್ಪನೆ ಚಿಂತನೆ ವರ್ಣನೆ ನಿರೂಪಣೆಗಳೂ, ಆಕಸ್ಮಿಕ ಸಾದೃಶ್ಯಗಳೂ ಆಗಿರುವ ಸಾಧ್ಯತೆಯನ್ನು ತಳ್ಳಿ ಹಾಕಲು ಬರುವುದಿಲ್ಲ. ಪಾರ್ಶ್ವಪಂಡಿತನು ಕೇವಲ ಮುಚ್ಚಿಪೋದ ಕವಿಯಂತಿರೆ ಗೂಡಾರದ ಕವಿಯಲ್ಲ, ಗುಹಾಧ್ವಸಿಯಲ್ಲ. ಪಾರ್ಶ್ವನು ಸ್ವತಂತ್ರನೂ ಸಮರ್ಥನೂ ಆದ ಕವಿ. ಪಾರ್ಶ್ವನಾಥ ಪುರಾಣದಲ್ಲಿ ಸಾದ್ಯಂತವಾಗಿ ಆತನ ಸೃಜನ ಸಾಮರ್ಥ್ಯ ವಿಶೇಷ ಪ್ರಮಾಣದಲ್ಲಿ ಕೆನೆ ಕಟ್ಟಿದೆ. ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಆತನಿಗಿರುವ ಪಾಂಡಿತ್ಯದಿಂದಾಗಿಯೋ (ಪಾರ್ಶ್ವ) ಪಂಡಿತ ಎಂಬ ಹೆಸರು ರೂಢಿಗೆ ಬಂದಿದೆ, ಕನ್ನಡಕ್ಕೆ ಸಮುದಂಡಿಯಾದ ಸಂಸ್ಕೃತ ಭಾಷಾ ಪ್ರಾಬಲ್ಯವನ್ನು ಪ್ರಕಟಿಸುವ ಕಾವ್ಯಭಾಗಗಳನ್ನು ಪ್ರತಿಯೊಂದು ಆಶ್ವಾಸದಲ್ಲಿಯೂ ಮನಗಾಣಬಹುದು. ಉತ್ತರ ಪುರಾಣದಲ್ಲಿ ಗುಣಭದ್ರಾಚಾರ್ಯನು 170 ಶ್ಲೋಕಗಳಲ್ಲೂ, ಚಾವುಂಡರಾಯನು ಕೇವಲ 170 ಪಂಕ್ತಿಗಳಲ್ಲೂ ಪಾರ್ಶ್ವನಾಥನ ಕಥೆಯನ್ನು ಸಂಕ್ಷಿಪಿಸಿದ್ದಾರೆ : ಅದನ್ನು ಈ ಕನ್ನಡ ಕವಿ ದೀರ್ಘವಾಗಿ 16 ಆಶ್ವಾಸಗಳಿಗೆ ಲಂಬಿಸಿದ್ದಾನೆ.

ಸಂಪಾದಕರ ಉವಾಚ : "ಮತ್ತೊಂದು ನೂತನ ವಿಷಯುವನ್ನು ಇಲ್ಲಿ ಹೇಳುವುದು ಸುಸಂಗತವೆನಿಸುತ್ತದೆ., ಮಿಕ್ಕಿನ ದ್ರಾವಿಡ ಭಾಷೆಗಳಲ್ಲಿ ಮಣಿ ಪ್ರವಾಳ ಶೈಲಿಯಲ್ಲಿ ಬರೆದ ಗ್ರಂಥಗಳು ವಿಪುಲವಾಗಿದೆ. ಆದರೆ ಪಾರ್ಶ್ವನ ಗ್ರಂಥವು ದೊರೆಯುವವರೆಗೆ ಕನ್ನಡದಲ್ಲಿ ಈ ರೀತಿಯ ಗ್ರಂಥವು ಇಲ್ಲವೆಂದೇ ವಿದ್ವಾಂಸರ ಅಭಿಪ್ರಾಯವಿತ್ತು. ಕನ್ನಡದಲ್ಲಿಯೂ ಮಣಿಪ್ರವಾಳ ಶೈಲಿಯ ಗ್ರಂಥವು ಇತ್ತೆಂಬುದನ್ನು ತೋರಿಸಿಕೊಟ್ಟ ಕೀರ್ತಿಯು ಪಾರ್ಶ್ವಪಂಡಿತನಿಗೆ ಸಲ್ಲುವುದು. ಈ ರೀತಿಯಲ್ಲಿ ಗ್ರಂಥ ನಿರ್ವಾಣ ಮಾಡಿ ಅಗ್ಗಳನೆನಿಸಿಕೊಂಡವನು ಕವಿಅಗ್ಗಳನು; ಈ ವಿಚಾರವಾಗಿ ಪಾರ್ಶ್ವಕವಿಯು ಹೀಗೆ ಹೇಳಿದ್ದಾನೆ.

ವಾಸ್ತವ ಭಕ್ತಿಯುತಂ ರೂ
ಪಸ್ತವನ ಮಣಿ ಪ್ರವಾಳಮಂ ಜಿನನಾಥ
ಸ್ತಾಸ್ತವನ ಮನೊದವಿಸಿ ಭುವ
ನಸ್ತುತನಾದಗ್ಗಳಂಗಮಗ್ಗಳರೊಳರೇ : : (1–62)

ನಮಗೆ ತಿಳಿದಿರುವಂತೆ ಅಗ್ಗಳನ ಪ್ರಸಿದ್ಧ ಗ್ರಂಥವು ಚಂದ್ರಪ್ರಭ ಪುರಾಣವು, ಅವನ ರೂಪಸ್ತವನ ಮಣಿಪ್ರವಾಳವಾಗಲಿ, ಜಿನನಾಥಸ್ತಾಸ್ತವನವಾಗಲಿ ಕಾಲನ ಕರಾಳವಾದ ದವಡೆಯೊಳಗೆ ಸೇರಿಕೊಂಡಿರುವುದರಿಂದ ಅವುಗಳ ಬೆಲೆಯನ್ನರಿಯುವ ಭಾಗ್ಯವು ನಮಗೆ ಇಲ್ಲದಂತಾಗಿದೆ. ಅವನ ಜಿನವೃಂದಸ್ತವನವನ್ನು ಕವಿಯು ಮತ್ತೊಂದು ಪದ್ಯದಲ್ಲಿ (1-67) ಹೊಗಳಿರುವುದನ್ನು ನೋಡಿದರೆ ಅದು ಬಹಳ ಪ್ರಸಿದ್ಧವಾದ ಗ್ರಂಥವಾಗಿದ್ದಿರಬೇಕೆಂದು ತೋರುವುದು."

ಒಟ್ಟಾರೆಯಾಗಿ ಪರಿಶೀಲಿಸಿ ಹೇಳಬೇಕಾದ ಅಭಿಪ್ರಾಯೋಕ್ತಿಎಂದರೆ ಪ್ರೊ. ಮರಿಯಪ್ಪಭಟ್ ಮತ್ತು ಎಂ. ಗೋವಿಂದರಾವ್ ಅವರು ಈ ಪಾರ್ಶ್ವನಾಥ ಕವಿಗೆ ಸುಯೋಗ್ಯವಾದ ವಿಮರ್ಶೆಗೆ ಬೇಕಾದ ಭೂಮಿಕೆಯನ್ನು ದಿಗ್ದರ್ಶನ ಮಾತ್ರದಿಂದ ಸಿದ್ಧಪಡಿಸಿದ್ದಾರೆ. ತಾವು ಈ ಕಾವ್ಯವನ್ನು ಸಂಪಾದಿಸುವ ವೇಳೆಗೆ ಕವಿಕಾವ್ಯ ಜಿಜ್ಞಾಸೆ ಸಂಬಂಧವಾಗಿ ಲಭ್ಯವಾಗಿದ್ದ ಸಂಶೋಧನ ಸಾಮಗ್ರಿಯನ್ನು, ಅಂಗೈಮೇಲಣ ನೆಲ್ಲಿಕಾಯಿಯಂತೆ, ಪೂರ್ತಿಯಾಗಿ ಅವಲೋಕಿಸಿದ್ದಾರೆಂಬ ವಾಸ್ತವ ವಿಚಾರವನ್ನು ಸ್ತುತಿಸಲೇಬೇಕು. "ಅಂತೂ ಕವಿಯು ಈ ಗ್ರಂಥವನ್ನು ಉತ್ತಮವಾದ ಭಾಷಾ ಶೈಲಿಯಲ್ಲಿ ರಚಿಸಿದ್ದಾನೆ. ಈ ಕಾವ್ಯದ ಹಲವು ಪದ್ಯಗಳು ಮಧುರವಾಯೂ, ಲಲಿತವಾಗಿಯೂ ಇವೆಸೆಂಬುದನ್ನು ಹಿಂದಿನ ಕೆಲವು ದೃಷ್ಟಾಂತಗಳಿಂದ ತಿಳಿಯಬಹುದು. ಆದುದರಿಂದ ಪಾರ್ಶ್ವನು ಪ್ರೌಢಕವಿಯೆನ್ನುವುದಕ್ಕೆ ಯಾವ ಅಡ್ಡಿಯೂ ಇಲ್ಲ"—ಎಂಬ ತೀರ್ಮಾನಕ್ಕೆ ತಲುಪುವುದಕ್ಕೆ ಮೊದಲು ಸಂಪಾದಕರು ವಹಿಸಿರುವ ಎಚ್ಚರವು ಮೆಚ್ಚತಕ್ಕದ್ದಾಗಿದೆ. ಅಪ್ರಕಟಿತವಾದ ಪ್ರಾಚೀನ

ಕನ್ನಡ ಗ್ರಂಥಗಳನ್ನು ಸಾಧ್ಯವಾದ ಮಟ್ಟಿಗೆ ಪ್ರಕಾಶಪಡಿಸುವ ಸದುದ್ದೇಶವನ್ನಿಟ್ಟು ಕೊಂಡು ಪ್ರಸ್ತುತ ಕಾರ್ಯವನ್ನುಪಕ್ರಮಿಸಿದೆವು. 13ನೆಯ ಶತಮಾನದ ಪೂರ್ವಾರ್ಧ ದಲ್ಲಿ ಬಾಳಿ ಕನ್ನಡದಲ್ಲಿ ಪ್ರಸಿದ್ಧ ಕವಿಯೆನಿಸಿದ್ದ ಪಾರ್ಶ್ವಪಂಡಿತನ ಈ ಪಾರ್ಶ್ವನಾಥ ಪುರಾಣವನ್ನು ಈಗ ಪ್ರಕಟಿಸುವುದಕ್ಕೆ ಸಂತೋಷಪಡುವೆವಾದರೂ ಇದರಲ್ಲಿ ಕೆಲವು ಲೋಪದೋಷಗಳು ಅನಿವಾರ್ಯವಾಗಿ ನುಸುಳಿಕೊಂಡಿವೆಯೆಂದು ಹೇಳುವುದಕ್ಕೆ ಸಂಕೋಚಪಡುತ್ತೇವೆ. ಇದಕ್ಕೆ ನಮ್ಮ ಔದಾಸೀನ್ಯವು ಕಾರಣವಲ್ಲ ವೆಂಬುದನ್ನು ಬಿನ್ನವಿಸಿಕೊಳ್ಳುತ್ತೇವೆ. ಈ ಮಹಾಕಾವ್ಯದ ಪ್ರತಿಯು ಎಲ್ಲೆಲ್ಲಿ ದೊರೆಯಬಹುದು ಎಂಬ ಆಸೆಯಿತ್ತೋ ಅಲ್ಲಲ್ಲಿಗೆ ಪತ್ರ ಬರೆದೆವು. ಮೂಡಬಿದರೆ ಜೈನ ಮಠಕ್ಕೆ ಬರೆದೆವು. ಅರಾ ಲೈಬ್ರರಿಯವರೊಡನೆ ಪತ್ರ ವ್ಯವಹಾರವನ್ನು ನಡೆಸಿದೆವು ; ಮೈಸೂರಿನ ಹಾಗೂ ಮದ್ರಾಸಿನ ಪ್ರಾಚ್ಯಹಸ್ತಲಿಖಿತ ಗ್ರಂಥ ಭಂಡಾರಗಳಲ್ಲಿ ಹುಡುಕಿದೆವು ; ಇನ್ನು ಕೆಲವು ಸನ್ಮಿತ್ರ ವಿದ್ವಾಂಸರ ಒಡನೆಯೂ ವಿಚಾರಿಸಿದೆವು''– ಎಂಬ ಸಂಪಾದಕರ ಆತ್ಮ ನಿವೇದನೆ ವ್ಯಾಖ್ಯಾನ ನಿರಪೇಕ್ಷಕರವಾಗಿದೆ. ಸಂಪಾದನಕಾರ್ಯ ಕೈಗೊಂಡ ವಿದ್ವಾಂಸರ ಪರಿಶ್ರಮ ಇದರಿಂದ ಸುವೇದ್ಯವಾಗುತ್ತದೆ ; ಅವರ ವಿನಯ ಗುಣವೂ ಬಿಂಬಿತವಾಗಿದೆ.

ದೊರೆತ ಒಂದೇ ಒಂದು ಪ್ರತಿಯ ಸಹಾಯದಿಂದ ಈ ಕಾವ್ಯವನ್ನು ಹೊರ ತಂದಿರುವುದು ಸ್ವಾಗತಾರ್ಹವಾದುದು, "ಬೇರೆಲ್ಲಿಂದಲೂ ನಮಗೆ ಗ್ರಂಥದ ಪ್ರತಿ ಯಾಗಲೀ ತತ್ಸಂಬಂಧ ಸಹಕಾರವಾಗಲೀ ದೊರೆಯದುದಕ್ಕೆ ವಿಷಾದ ಪಡುತ್ತೇವೆ. ಆದುದರಿಂದ–ಪ್ರಾಚೀನ ಗ್ರಂಥಗಳ ಸಂಶೋಧನೆಗೆ, ಅವು ಶುದ್ಧವಾಗಿ ಶಾಸ್ತ್ರೀಯ ವಾಗಿ ಸಂಶೋಧಿತವಾಗಬೇಕಾದರೆ–ಆದಷ್ಟು ಪ್ರತಿಗಳನ್ನು ಶೇಖರಿಸಿಯೇ ತೀರಬೇಕು ಎಂಬ ವಿಮರ್ಶಕರ ನಿಯಮೋಲ್ಲಂಘನೆಯನ್ನು ನಾವು ಗತ್ಯಂತರವಿಲ್ಲದೆ ಮಾಡ ಬೇಕಾಗಿದೆ. ನಮಗೆ ಲಭಿಸಿದ ಪ್ರತಿಯಲ್ಲಿ ಗ್ರಂಥಪಾತ ಸ್ಖಾಲಿತ್ಯಾದಿ ದೋಷಗಳುಂಟು. ಆದರೂ ಯದೃಚ್ಛೈಲಾಭ ಸಂತುಷ್ಟಂ ಎಂಬಂತೆ ನಾವೀ ಉದ್ಯಮವನ್ನು ಸಾಧಿಸಿದ್ದೇವೆ. ಸಹೃದಯರಾದ ವಿಮರ್ಶಕರು ಗುಣಗ್ರಾಹಿಗಳಾಗಿ ಇದುನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುವೆವು'' : ಸಂಪಾದಕರ ವಿನಮ್ರ ನಿವೇದನೆ ಸಾಧು ವಾದುದಾಗಿದೆ. ಅವರು ಅಂದು ಮನಸ್ಸುಮಾಡದಿದ್ದಲ್ಲಿ ನಮಗೆ ಇಂದು ಈ ಕಾವ್ಯದ ಮುದ್ರಣಪ್ರತಿ ದುರ್ಲಭವಾಗುತ್ತಿತ್ತು. ಜೀರ್ಣವಾಗಿ ಹೋಗುತ್ತಿದ್ದ ಒಂದು ಹಳಗನ್ನಡ ಕಾವ್ಯವನ್ನು ಕನ್ನಡಿಗರಿಗಾಗಿ ಉಳಿಸಿಕೊಟ್ಟ ಸಂಪಾದಕರು ಹೃತ್ಪೂರ್ವಕ ವಾದ ಅಭಿನಂದನೆಗಳಿಗೂ, ಕೃತಜ್ಞತೆಗಳಿಗೂ ಪಾತ್ರರು.

ಇಮ್ಮಡಿ ಗುಣವರ್ಮನ ಪುಷ್ಪದಂತ ಪುರಾಣಂ :

ಅನುಗುಣವಾಗಿ ಕೂಡೆ ಗುಣವರ್ಮನ ಮೆಯ್ಸಿರಿ ಪಂಪನೋಜೆ ಪೊ
ನ್ನನ ಪೊಸದೇಸೆ ರನ್ನನ ಗುಣೋನ್ನತಿಯುಗ್ಗಳನೊಳ್ಪು ನಾಗ
ವರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂಪು ನಾಗ
ಚಂದ್ರನ ರಸವೃತ್ತಿ ರಂಜಿಸುಗೆ ನಿರ್ಣಯಮೆನ್ನಯ ನವ್ಯ ಕಾವ್ಯದೊಳ್

ಇದು ಎರಡನೆಯ ಗುಣವರ್ಮನ ಪುಷ್ಪದಂತ ಪುರಾಣ ಕಾವ್ಯದಲ್ಲಿನ ಪದ್ಯ. ಸುಮಾರು 1215ರಲ್ಲಿ ತನ್ನ ಈ ಚಂಪೂ ಕಾವ್ಯವನ್ನು ರಚಿಸಿರುವ ಇಮ್ಮಡಿ ಗುಣವರ್ಮನು ತನಗಿಂತ ಹಿಂದಣ ಕವಿಗಳಾದ ಒಂದನೆಯ ಆದಿಗುಣವರ್ಮ, ಆದಿಪಂಪ, ಪೊನ್ನ, ರನ್ನ, ನಾಗವರ್ಮ, ನೇಮಿಚಂದ್ರರನ್ನು ಸ್ಮರಿಸಿರುವುದರಲ್ಲಿ ಅಂಥ ಹೇಳಿಕೊಳ್ಳುವಂತಹ ಹೆಚ್ಚುಗಾರಿಕೆಯೇನಿಲ್ಲ. ಆದರೆ ತನ್ನ ಸಮಕಾಲೀನನಾದ ಜನ್ನ (ಜನ್ನಿಗ) ಕವಿಯನ್ನು ಹೆಸರಿಸಿ ಕೊಂಡಾಡಿರುವುದು ಮೆಚ್ಚಬೇಕಾದ ಅಂಶವೆನಿಸಿದೆ. ಜನ್ನನು ಕ್ರಿ.ಶ. 1190 ರಲ್ಲಿ ಚೆನ್ನರಾಯ ಪಟ್ಟಣ 179ನೆಯ ಶಾಸನವನ್ನೂ, 1197ರಲ್ಲಿ ತರೀಕೆರೆ 45ನೆಯ ಶಾಸನವನ್ನೂ, ಯಶೋಧರ ಚರಿತೆಯನ್ನು 1209ರಲ್ಲೂ, ಅನಂತನಾಥ ಪುರಾಣ ವನ್ನು 1230ರಲ್ಲಿಯೂ ರಚಿಸಿದನು. ಅಂದರೆ ಅವನ ಬರವಣಿಗೆಯು 40 ವರ್ಷಗಳ ವರೆಗೆ ಸಾಗಿರುವುದು ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೇ ಒಂದು ಅಪೂರ್ವವಾದ ದಾಖಲೆಯಾಗಿದೆ.

ಜನ್ನನು ಇದ್ದದ್ದು ಹೊಯ್ಸಳ ಸಾಮ್ರಾಜ್ಯದಲ್ಲಿ, ವೀರಬಲ್ಲಾಳ ಚಕ್ರವರ್ತಿಯ ಆಸ್ಥಾನದಲ್ಲಿ. ಆದರೆ ಇಮ್ಮಡಿ ಗುಣವರ್ಮನು ಇದ್ದದ್ದು ದೋರಸಮುದ್ರಕ್ಕೆ 500 ಕಿ.ಮೀ. ದೂರದಲ್ಲಿದ್ದ ಸವದತ್ತಿಯ ರಟ್ಟರ ಆಶ್ರಯದಲ್ಲಿ. ಕ್ರಿ.ಶ.ಸು. 878 ರಿಂದ 1229ರ ವರೆಗೆ ಈಗಿನ ಬೆಳಗಾವಿ (ವೇಣುಗ್ರಾಮ) ಸುತ್ತಮುತ್ತಣ ಪ್ರದೇಶ ವನ್ನು ಆಳಿದವರು ಸವದತ್ತಿಯ (ಸವಣದತ್ತಿ) ರಟ್ಟರು. ಇವರು ಮೊದಲು ತಮ್ಮ ಜ್ಞಾತಿಗಳಾದ ಒಂದೇ ಮೂಲದ ಮಳಖೇಡ (ಮಾನ್ಯಖೇಟ)ದ ರಾಷ್ಟ್ರಕೂಟರ ಚಕ್ರವರ್ತಿಗಳಲ್ಲಿ ಅಧೀನರಾಗಿ ಮಹಾ ಸಾಮಂತರಾಗಿದ್ದರು. ಅನಂತರ ಕ್ರಿ.ಶ. 980 ರಿಂದ ಚಾಳುಕ್ಯರ ಕೈಕೆಳಗೆ ಮಹಾಸಾಮಂತರಾಗಿ, ಮಹಾಮಂಡಳೇಶ್ವರರಾಗಿ ಆಳ್ವಿಕೆ ನಡೆಸಿದರು. ಚಾಳುಕ್ಯ ಸಾಮ್ರಾಜ್ಯ ಅಸ್ತಂಗತವಾದೊಡನೆ ಕ್ರಿ.ಶ. 1200 ರಿಂದ ಕಾರ್ತವೀರ್ಯ IV ರಾಜನ ಯಜಮಾನ್ಯತೆಯಲ್ಲಿ ಸ್ವತಂತ್ರರಾಗಿ ಪ್ರಭುತ್ವ ಮೆರೆದರು. ಪ್ರಸ್ತುತ ವಿವೇಚನೆಗೆ ಕೇಂದ್ರ ವ್ಯಕ್ತಿಯಾಗಿರುವ ಇಮ್ಮಡಿ ಗುಣವರ್ಮನು ನಾಲ್ಮಡಿ ಕಾರ್ತವೀರ್ಯ ರಾಜನ ಆಶ್ರಯದಲ್ಲಿ ಬಾಳಿ ಬೆಳಗಿದವನು. ಕಾರ್ತವೀರ್ಯನ ಕೈಯಕೆಳಗೆ ಸಾಳ್ವಪ್ರಭುವಾಗಿದ್ದ ಶಾಂತಿವರ್ಮನು (ಶಾಂತಿನಾಥ) ಈ ಕವಿಯಿಂದ ಜೈನರ 24 ಜನ ತೀರ್ಥಂಕರರ 9ನೆಯವನಾದ ಪುಷ್ಪದಂತನ

ಚರಿತೆಯನ್ನು ಬರೆಸಿದನು. ಶಾಂತಿವರ್ಮನ ಯಶೋಲತೆಗೆ ಆಲಂಬನವಾಗಿ ತಾನು 14 ಆಶ್ವಾಸಗಳ ಚಂಪೂಕಾವ್ಯ 'ಪುಷ್ಪದಂತ ಪುರಾಣ'ವನ್ನು ಬರೆದು ಸಮರ್ಪಿಸಿ ರುವುದಾಗಿ ಗುಣವರ್ಮಕವಿ ನಿವೇದಿಸಿಕೊಂಡಿದ್ದಾನೆ. ತನ್ನ ಪುರಾಣಕಾವ್ಯವನ್ನು ವಾಡಿಕೆಯ ಮಾದರಿಯಲ್ಲಿಯೇ ಆರಂಭಿಸಿ ಬೆಳೆಸಿ ಮುನ್ನಡೆಸಿರುವ ಗುಣವರ್ಮ ಕವಿಯು ಕನ್ನಡದ ಪೂರ್ವಕವಿ ಸ್ತವನ ಮಾಲಿಕೆಯಲ್ಲಿ ನೆನೆದಿರುವ ಕವಿಗಳ ಪಟ್ಟಿಯಲ್ಲಿ ಜನ್ನನನ್ನೂ ಸ್ಮರಿಸಿದ್ದಾನೆಂದು ಈ ಲೇಖನದ ಆರಂಭದಲ್ಲಿ ಪ್ರಸ್ತಾಪಿಸಲಾಯಿತು. ಸಾರಾಂಶವೇನಂದರೆ ಜನ್ನನು ತನ್ನ ರಾಜನ ಆಸ್ಥಾನ—ಆಶ್ರಯಗಳಲ್ಲಿ ಇದ್ದ ಕವಿಯೂ ಇಲ್ಲ, ತನಗಿಂತಲೂ ಪ್ರಾಚೀನನಾದವನೂ ಅಲ್ಲ. ಜೊತೆಗೆ ಜನ್ನನು ಎರಡು ಶಾಸನ ಮತ್ತು ಒಂದು ಕಾವ್ಯವನ್ನು (ಯಶೋಧರ ಚರಿತೆ) ಬರೆದಿದ್ದು ಆತ ಇನ್ನೂ ಒಂದು ಚಂಪೂ ಕಾವ್ಯವನ್ನೂ (ಅನಂತನಾಥ ಪುರಾಣವನ್ನು) 1230ರಲ್ಲಿ ಬರೆಯುವುದಕ್ಕೂ ಮೊದಲೇ ಗುಣವರ್ಮನು 1215 ರಲ್ಲಿಯೇ ಜನ್ನನನ್ನು ಮನಸಾರೆ ನೆನೆದಿದ್ದಾನೆ. ಇದು ಗುಣವರ್ಮ ಕವಿಯ ಅಮತ್ಸರತ್ವವನ್ನೂ, ತನ್ನ ಧರ್ಮದ ಮೇಲ್ಮೆಯನ್ನು ಪ್ರತಿಪಾದಿಸಿದ ಸಮಕಾಲೀನ ಕವಿ ಎಲ್ಲೇ, ಎಷ್ಟೇ ದೂರದಲ್ಲಿ, ಬೇರೆ ರಾಜರ ಆಸ್ಥಾನ ದಲ್ಲಿ ಇದ್ದರೂ ಮಮತೆಯಿಂದ ಹೆಸರಿಸುವ ಹೃದಯ ವೈಶಾಲ್ಯವನ್ನೂ ಪ್ರತಿಬಿಂಬಿಸು ತ್ತದೆ.

ಅಲ್ಲದೆ ಇಲ್ಲಿಯೇ ಸಂದರ್ಭೋಚಿತ ಔಚಿತ್ಯಕ್ಕಾಗಿ ಹೇಳಬೇಕಾದ ಮಾತೊಂದಿದೆ : ಮೊದಲಿನಿಂದಲೂ ಸವದತ್ತಿಯರಟ್ಟರಿಗೂ ಗಂಗರಿಗೂ ಮಳಖೇಡದ ರಾಷ್ಟ್ರಕೂಟರಿಗೂ ಧಾರ್ಮಿಕ ಬಾಂಧವ್ಯವಿದ್ದು ಜೈನಮತ ಧರ್ಮ ಪ್ರಸಾರದ ನಿಮಿತ್ತ ಸೌಹಾರ್ದ ಏರ್ಪಟ್ಟಿತ್ತು. ರನ್ನಕವಿಯನ್ನು ಪೃಥ್ವೀರಾಮನು ತನ್ನ ಅಧೀನತ್ವದಿಂದ ಗಂಗರ ಕಡೆಗೆ ಕ್ರಿ.ಶ.970 ರಲ್ಲಿ ಕಳಿಸಿಕೊಟ್ಟಿದ್ದನು. ಇದೇ ರೀತಿಯಲ್ಲಿ ನೇಮಿಚಂದ್ರ ಕವಿಯೂ ಸವಣದತ್ತಿಯ ರಟ್ಟರಾಜನಾದ ಮುಮ್ಮಡಿ ಕಾರ್ತವೀರ್ಯನ ಮಗನಾದ ಲಕ್ಷ್ಮಣ (ಲಕ್ಷ್ಮೀಧರ) ರಾಜನ ಆಶ್ರಯ ಪಡೆದು ಲೀಲಾವತಿ ಕಾವ್ಯವನ್ನು ಬರೆದನು ; ಅನಂತರ ಆ ರಾಜ್ಯದಿಂದ ಹೊಯ್ಸಳ ರಾಜ್ಯಕ್ಕೆ ಬಂದು ವೀರಬಲ್ಲಾಳ ರಾಜನ ಪ್ರಧಾನನಾದ ಸೆಜ್ಜೆವಳ್ಳ ಪದ್ಮನಾಭನಿಗಾಗಿ ನೇಮಿನಾಥ ಪುರಾಣವನ್ನು ಬರೆದನು. ಹೀಗೆ ಉಭಯ ರಾಜ್ಯ—ರಾಜರ ನಡುವೆ ಧಾರ್ಮಿಕ ಮೈತ್ರಿಯಿದ್ದುದರಿಂದ ಗುಣ ವರ್ಮನೂ ಸಹ ಆ ಹಿನ್ನೆಲೆಯನ್ನು ಮನಗಂಡು ಜನ್ನನನ್ನು ಸ್ಮರಿಸಿದ್ದಾನೆಂಬ ಔಚಿತ್ಯವನ್ನು ಮನಗಾಣಬಹುದು.

ಗುಣವರ್ಮನು ರಚಿಸಿರುವ ಚತುರ್ದಶ ಅಶ್ವಾಸನೆಗಳ ಪುಷ್ಪದಂತ ಪುರಾಣ ವೊಂದೇ ಕನ್ನಡದಲ್ಲಿ ರಚಿತವಾಗಿರುವ ಪ್ರಥಮ ಹಾಗೂ ಅಂತಿಮ ಕಾವ್ಯ : ಈ ಕಾರಣಕ್ಕಾಗಿಯೂ ಗುಣವರ್ಮ ಕವಿಯ ಕಾವ್ಯ ಪ್ರಯತ್ನವು ಪರಿಭಾವಿಸಲು ಅರ್ಹವಾಗಿದೆ. ಈ ಕಾವ್ಯದ ಪ್ರಾರಂಭದಲ್ಲಿ ಪಿಂಛ ಪ್ರಧಾನರಾದ ಗೃಧ್ರಪಿಂಛ,

ಬಳಾಕ ಪಿಂಛ ಮತ್ತು ಮಯೂರ ಪಿಂಛರೆಂಬ ಜೈನ ಗುರುಗಳಿಗೆ ಪುಷ್ಪಾಂಜಲಿ ಅರ್ಪಿಸಿದ್ದಾನೆ. ಆಮೇಲೆ ದಿಗಂಬರಕುಲಚಂದ್ರರಾದಂತಯೋಗೀಂದ್ರ ದೇವ ಚಂದ್ರರನ್ನೂ, ಸ್ವಗುರು ಮುನಿಚಂದ್ರರನ್ನೂ ಸ್ಮರಿಸಿದ್ದಾನೆ. ಇವರಲ್ಲಿ ಶ್ರೀನಂದಿ ಯೋಗೀಂದ್ರರು ಅಚಣ್ಣ ಕವಿಯ ನೇರ ಗುರುಗಳೆಂಬುದನ್ನು ಗಮನಿಸಬೇಕು. ಅಚಣ್ಣ ಕವಿಯೂ ತನ್ನ ವರ್ಧಮಾನ ಪುರಾಣದಲ್ಲಿ ನಂದಿಯೋಗೀಶ್ವರರನ್ನು ಪದ್ಯದಲ್ಲಿಯೂ ಆಶ್ವಾಸಾಂತ್ಯ ಗದ್ಯದಲ್ಲಿಯೂ ಸ್ತುತಿಸಿದ್ದಾನೆ. ಅಚಣ್ಣನ ಆಶ್ರಯದಾತನಾದ ರೇಚಣ ಚಮೂಪ ಮತ್ತು ಸಚಿವನು ಕಲಚೂರ್ಯರಲ್ಲೂ, ಅನಂತರ ಹೊಯ್ಸಳ ವೀರ ಬಲ್ಲಾಳ ನಲ್ಲೂ ಅಧಿಕಾರಿಯಾಗಿದ್ದನು. ಸು. 1195ರಲ್ಲಿ ಇದ್ದ ಆಚಣ್ಣನೂ, ಗುಣವರ್ಮನೂ. ಪಾರ್ಶ್ವಪಂಡಿತನೂ, ಅಗ್ಗಳನೂ, ನೇಮಿಚಂದ್ರನೂ, ಬಾಳಚಂದ್ರ ಕವಿ ಕಂದರ್ಪನೂ. ದೇವಚಂದ್ರ (ಕಮಲಭವ)ನೂ, ಜನ್ನನೂ ಸಮಕಾಲಿಕರಾದ ಜೈನಕವಿಗಳೆಂಬುದನ್ನೂ ಇವರೆಲ್ಲ ಪರಸ್ಪರ ಪರಿಚಯ ಸ್ನೇಹ ಸಂಪರ್ಕ ಇದ್ದ ಕವಿಗಳೆಂಬುದನ್ನೂ ವಿಶೇಷವಾಗಿ ಗಮನಿಸತಕ್ಕದ್ದಾಗಿದೆ ; ಅಂದಿನ ಸಾಹಿತ್ಯ ಪರಿಸರದ ಒಂದು ಮುಖ ತಿಳಿದು ಬರುತ್ತದೆ. ಇಷ್ಟು ಮಹತ್ವದ ಪುಷ್ಪದಂತ ಪುರಾಣ ಕಾವ್ಯವನ್ನು ಸಂಪಾದಿಸಿದವರು ಎ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್, ಪ್ರಕಟಿಸಿದ್ದು ಮದರಾಸು ವಿಶ್ವವಿದ್ಯಾಲಯ (1933). ಪುಷ್ಪದಂತಪುರಾಣವಲ್ಲದೆ ಈ ಕವಿ ಚಂದ್ರನಾಥ ಅಷ್ಟಕವನ್ನೂ ಸಹ ರಚಿಸಿದ್ದಾನೆ. ಸಂಪಾದಕರು ಎರಡನೆಯ ಗುಣವರ್ಮ ಕವಿಯ ಕಾಲ, ದೇಶ, ಆಶ್ರಯ ಕುರಿತ ವಿಚಾರಗಳನ್ನು ಸಂಪ್ರದಾಯದಂತೆ ಸರಿಯಾಗಿಯೇ ಸಂಗ್ರಹಿಸಿಕೊಟ್ಟಿದ್ದಾರೆ. ಕವಿ ತಿಲಕ. ಗುಣಾಬ್ಜವನ ಕಲಹಂಸ, ಕಾವ್ಯ ಸತ್ಯಾರ್ಣವ ಮೃಗಲಕ್ಷ್ಮ, ಸರಸ್ವತೀಕರ್ಣಪುರ, ಸಹಜ ಕವಿ ಸರೋವರಹಂಸ—ಮೊದಲಾದ ಬಿರುದಾಂಕಿತನಾದ ಗುಣವರ್ಮ ಕವಿಯ ಕಾಲ ಕುರಿತು ನಡೆದಿರುವ ವಾಗ್ವಾದಗಳನ್ನು ಸಂಪಾದಕರು ಸಮೀಕ್ಷಿಸಿ 1220 ರಿಂದ 1230ರ ಅವಧಿಯಲ್ಲಿ ಈ ಪುಷ್ಪದಂತ ಪುರಾಣದ ರಚನೆ ಆಗಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಸಂಪಾದಕರು ಕಾರ್ತವೀರ್ಯನೂ ವಜ್ರದೇವನೂ ಪ್ರತ್ಯೇಕರೆಂದೂ ; ಕಾರ್ತವೀರ್ಯ ರಾಜನು ಸವ ದತ್ತಿಯ ಪಟ್ಟರಾಜನೆಂದೂ, ವಜ್ರದೇವನು (EC. VI ಹಾಸನ 106) ಹಾಸನದ ಶಾಸನೋಕ್ತ ಅದೇ ಹೆಸರಿನವನೆಂದೂ ಪ್ರತಿಪಾದಿಸಿರುತ್ತಾರೆ. ಆದರೆ ಇದನ್ನು ತರುವಾಯದ ವಿದ್ವಾಂಸರು ಅನುಮೋದಿಸಿಲ್ಲ : ಕಾರ್ತವೀರ್ಯ—ವಜ್ರದೇವ ಅಭಿನ್ನ ರೆಂದೂ, ಒಬ್ಬನೇ ರಾಜನ ಎರಡು ಹೆಸರುಗಳೆಂದೂ ತಿಳಿಯಲಾಗಿದೆ. ಅಲ್ಲದೆ ಗುಣವರ್ಮ ಕವಿಯ ಗುರುವು ಈ ನಾಲ್ಮಡಿ ಕಾರ್ತವೀರ್ಯ ರಾಜನಿಗೆ ಮಂತ್ರಿಯೂ ರಾಜ ಗುರುವೂ ಆಗಿದ್ದ ಮುನಿಚಂದ್ರರೇ ಆಗಿದ್ದಾರೆ. ಈ ಮುನಿಚಂದ್ರರು ರಟ್ಟರಾಜ್ಯನಿಸ್ತಾರಕರಾಗಿದ್ದರು, ರಟ್ಟೋರ್ವಿಪ ಪ್ರತಿಷ್ಠಾಚಾರ್ಯರಾಗಿದ್ದರು. ರಟ್ಟರಾಜಗುರುಮುನಿಚಂದ್ರ ಪಂಡಿತರಲ್ಲಿ ಮಂತ್ರಿಗಳಾಗಿ ಕರಣಕಾಗ್ರಣಿ ಶಾಂತಿವರ್ಮ,

ಕೊಂಡಿಯ ನಾಗ ಮತ್ತು ಮಲ್ಲಿಕಾರ್ಜುನ — ಎಂಬ ಮೂವರು ಇದ್ದರು. ಇವರಲ್ಲಿ ಶಾಂತಿವರ್ಮನು ಈ ಪುಷ್ಪದಂತ ಪುರಾಣ ಕಾವ್ಯದ ಕರ್ತೃ ಗುಣವರ್ಮನಿಗೆ ಪೋಷಕನಾಗಿದ್ದನು.

ಸಂಸ್ಕೃತ ಮಹಾ ಪುರಾಣದಲ್ಲಿ ಕಡೆಯ ಅರ್ಧಭಾಗವಾದ ಉತ್ತರ ಪುರಾಣದಲ್ಲಿ ಗುಣಭದ್ರಾಚಾರ್ಯರು ಕೇವಲ 62 ಶ್ಲೋಕಗಳಲ್ಲಿ ಪುಷ್ಪದಂತ ತೀರ್ಥಂಕರನ ಚರಿತೆಯನ್ನು ಭಟ್ಟಿಯಿಳಿಸಿದ್ದಾರೆ. ಕನ್ನಡದಲ್ಲಿ ಚಾವುಂಡರಾಯ ಪುರಾಣದಲ್ಲಿ ಎರಡೇ ಎರಡು ಪುಟಗಳಲ್ಲಿ ಪುಷ್ಪದಂತನ ಕಥೆಯನ್ನು ಸಂಗ್ರಹಿಸಲಾಗಿದೆ. (ಸಂ: ಡಾ: ಕಮಲಾ ಹಂಪನಾ, ಕನ್ನಡ ಸಾಹಿತ್ಯ ಪರಿಷತ್ತು, ಪುಟ: 121-122). ಆದರೆ ಇದನ್ನು ಗುಣವರ್ಮನು 14 ಆಶ್ವಾಸಗಳಿಗೆ ವಿಸ್ತರಿಸಿದ್ದಾನೆಂದಮೇಲೆ ಕಾವ್ಯದ ವ್ಯಾಪ್ತಿಯನ್ನು ಕವಿ ಹೇಗೆ ಕಲ್ಪಿಸಿರಬೇಕೆಂಬುದನ್ನು ಚಿಂತಿಸಬೇಕು. ಮದರಾಸು ಆವೃತ್ತಿಯ ಸಂಪಾದಕರು ಸಾಹೇತುಕವಾಗಿಯೂ, ಸೋದಾಹರಣವಾಗಿಯೂ ಗುಣವರ್ಮ ಕವಿಯ ಕಥಾಸಾರದೊಂದಿಗೆ ಕವಿಯ ಕಾರಯತ್ರೀ ಪ್ರತಿಭೆಯ ಸೃಜನ ಸಾಮರ್ಥ್ಯವನ್ನು ಪುಷ್ಟೀಕರಿಸಿದ್ದಾರೆ; ವರ್ಣನೆಗಳಲ್ಲಿ ಗುಣವರ್ಮನ ಪರಿಣತಿ ಪ್ರತಿಭೆ ಕಲ್ಪನೆಗಳು ಕೆಲಸ ಮಾಡಿವೆಯೆಂದು ಪ್ರಶಂಸಿದ್ದಾರೆ. ಕಾವ್ಯದ ರಸವತ್ತಾದ ಆರ್ದ್ರವಾದ ಕೆಲವು ಭಾಗಗಳನ್ನು ಉದಾಹರಿಸಿ ತಮ್ಮ ಹೇಳಿಕೆಯನ್ನು ಬೆಂಬಲಿಸಿದ್ದಾರೆ.

ಗ್ರಂಥ ಸಂಪಾದನೆಯೂ ಸಹ ಉತ್ಕೃಷ್ಟವಾಗಿದೆ. ಪಾಠ ಶೋಧನೆ, ಪಾಠ ಪರಿಷ್ಕರಣ, ಯೋಗ್ಯಪಾಠ ನಿರ್ಣಯ, ಸಂಭಾವ್ಯ ಕವಿಪಾಠವನ್ನು ಗುರುತುಸುವಿಕೆ– ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಇಂದಿಗೆ ಸುಮಾರು 60 ವರ್ಷಗಳ ಹಿಂದೆ ಈ ಗ್ರಂಥ ಸಂಪಾದನೆಯ ಕಾರ್ಯವನ್ನು ಪ್ರಾಮಾಣಿಕತೆಯಿಂದಲೂ ಪರಿಶ್ರಮ ದಿಂದಲೂ ಪಾಂಡಿತ್ಯದಿಂದಲೂ ನಿರ್ವಹಿಸಿರುವ ಇಬ್ಬರು ಸಂಪಾದಕರೂ ಹಳಗನ್ನಡ ಸಾಹಿತ್ಯ ಪ್ರೇಮಿಗಳ ಕೃತಜ್ಞತೆಗೆ ಅರ್ಹರಾಗಿರುತ್ತಾರೆ.

ಇನ್ನು ಸಂಪಾದಕರ ಸಂಪಾದನ ಕಾರ್ಯಕ್ಕೆ ಪೂರಕವಾಗಿ ನಿಲ್ಲುವ ಕೆಲವು ಹೊಸ ವಿಚಾರಗಳನ್ನೂ ಇಲ್ಲಿಯೇ ನಾನು ಪ್ರಸ್ತಾಪಿಸುವುದು ಅನೌಚಿತ್ಯವಾಗಲಾರದು. ಗುಣವರ್ಮ ಕವಿಯನ್ನು ಕುರಿತು ನಡೆಯಬೇಕಾಗಿದ್ದ ಪ್ರಮಾಣದಲ್ಲಿ ಸಂಶೋದನೆ ಮತ್ತು ಕಾವ್ಯವಿಮರ್ಶೆ ನಡೆದಿಲ್ಲ. ಆದಿಗುಣವರ್ಮ, ಪಂಪ, ರನ್ನ, ಪೊನ್ನರು ನಿರ್ಮಿಸಿದ ಕಾವ್ಯಪಥ ಮತ್ತು ಪದ್ಧತಿಯನ್ನು ಅನುಸರಿಸಿ ಗುಣವರ್ಮನೂ ಮುಂದು ವರಿಸಿದ್ದಾನೆ. ಈ ಕೆಲಸವನ್ನು ಗುಣವರ್ಮನ ಸಮಕಾಲೀನ ಹಿರಿಯ ಕಿರಿಯ ಕವಿಗಳೂ ತಕ್ಕಮಟ್ಟಿಗೆ ಕೈಗೂಡಿಸಿದ್ದಾರೆ; ನೇಮಿಚಂದ್ರ, (ನಾಗಚಂದ್ರನೂ ಸಹ), ಪಾರ್ಶ್ವಪಂಡಿತರೂ ಹೀಗೆ ಮಾಡಿದ್ದಾರೆ. ಹಳಗನ್ನಡ ಜೈನ ಕವಿಗಳ ಕವಿ-ರಾಜ-ಮಾರ್ಗವನ್ನು ಹಿಡಿದು ಹೊರಟಿರುವ ಗುಣವರ್ಮನ ಕರ್ತೃತ್ವ ಶಕ್ತಿ ಹರಳು ಗೊಂಡಿರುವ ಮಡುಗಟ್ಟಿರುವ ಕಾವ್ಯ ಭಾಗ, ಸಂದರ್ಭ, ಸನ್ನಿವೇಶಗಳನ್ನು ತನಿಯಾಗಿ

ಉದಾಹರಿಸಿ ವಿವೇಚಿಸುವುದಕ್ಕೆ ಈ ಲೇಖನದಲ್ಲಿ ಅವಕಾಶವಿಲ್ಲ. ಆದರೆ ಒಟ್ಟಾರೆಯಾಗಿ ಸಮೀಕಾತ್ಮಕವಾಗಿ ಹೇಳಬೇಕಾದರೆ, ಗುಣವರ್ಮನು ತೀರ ಸಾಧಾರಣನಾದ ಕಳಪೆ ಕವಿಗಳ ಗುಂಪಿಗೆ ಸೇರುವುದಿಲ್ಲ. ಆತನ ಸಾಧನೆ ದೊಡ್ಡದು, ಆತ ಕಾವ್ಯವನ್ನು ನಡೆಸುವ ಬಗೆಯೂ ಶ್ಲಾಘನೀಯವಾಗಿದೆ. ಹಳಗನ್ನಡ ಚಂಪೂ ಕಾವ್ಯಗಳ ಯುಗ ಮುಗಿಯುತ್ತ ಬಂದಿದ್ದ ಕಾಲಘಟ್ಟದಲ್ಲಿ ಆ ರೂಪದಲ್ಲಿ ಗುಣವರ್ಮ ಕವಿ ಹೇಗೆ ವಿಜೃಂಭಿಸಿ ಚಂಪುವಿನ ಸತ್ವವನ್ನು ಪುನರುಜ್ಜೀವಿಸುವ ಕಾವ್ಯ ಪ್ರಯತ್ನವನ್ನು ನಡೆಸಿದ್ದಾನೆ–ಎಂಬ ನೇತ್ರ ಸೂತ್ರದಿಂದ ಮರು ಪರಿಶೀಲನೆ ಕೈಗೊಳ್ಳುವುದು ಅಗತ್ಯವಿದೆ. ಪಂಪರನ್ನರ ಎತ್ತರದಲ್ಲಿ ಶ್ರೇಣಿಯಲ್ಲಿ ಈತ ನಿಲ್ಲದಿರಬಹುದು. ಆದರೆ ಅದ್ವಿತೀಯರ ಹಿಂದೆ ದ್ವಿತೀಯ ಶ್ರೇಣಿಯೊಂದು ಸಜ್ಜಾಗಿರುತ್ತದೆ–ಇದನ್ನು ಜಗತ್ತಿನ ಯಾವುದೇ ಸಾಹಿತ್ಯ ಚರಿತ್ರೆಯಲ್ಲಿ ಕಾಣಬಹುದಾಗಿದೆ. ಪಾರ್ಶ್ವಪಂಡಿತ, ಗುಣವರ್ಮ, ಅಗ್ಗಳ, ಅಚಣ್ಣರು ಆ ಎರಡನೆಯ ಸಾಲಿನ ಸಮರ್ಥ ಪ್ರತಿನಿಧಿಗಳು.

ಗುಣವರ್ಮ ಮತ್ತು ಪಾರ್ಶ್ವ ಪಂಡಿತರ ಕಾವ್ಯಗಳನ್ನು ಮದರಾಸು ವಿಶ್ವ ವಿದ್ಯಾನಿಲಯ ಪ್ರಕಟಿಸುವ ಪೂರ್ವದಲ್ಲಿಯೇ ಅಚ್ಚಾಗಿದ್ದುದು ಕವಿಚರಿತೆಯ ಮೊದಲ ನೆಯ ಸಂಪುಟ (1907), ಅದರ ಎರಡನೆಯ ಪರಿಷ್ಕೃತ ಆವೃತ್ತಿಯೂ 1924 ರಲ್ಲಿಯೇ ಹೊರಬಂದಿದೆ. ಕವಿಚರಿತೆಯಲ್ಲಿಯೂ (ಪರಿಶೋಧಿತ ಮುದ್ರಣ 1961) ಮತ್ತು ಮದರಾಸು ಮುದ್ರಣ ಆವೃತ್ತಿಗಳಲ್ಲಿಯೂ ಗುಣವರ್ಮನ ಕಾಲವನ್ನು ಸು. 1215, 1220–1230 ಎಂದೂ ಪಾರ್ಶ್ವ ಪಂಡಿತ ಕವಿಯ ಕಾಲವನ್ನು ಸು. 1205 (ಕವಿಚರಿತೆ), 1222 ಎಂದೂ ನಿರೂಪಿಸಲಾಗಿದೆ.

ಆದರೆ ಈ ವಿಚಾರದಲ್ಲಿ ಮರುಪರಿಶೀಲನೆ ಆಗಬೇಕಾದ್ದಿದೆ. ಏಕೆಂದರೆ ಪಾರ್ಶ್ವ ಪಂಡಿತನು ಪೂರ್ವಕವಿಗಳನ್ನು ನೆನೆಯುವ ಪದ್ಯವನ್ನು ಮತ್ತೆಓದಿದರೆ ಬೇರೆಯೇ ಅರ್ಥ ಮತ್ತು ವಿವರಣೆಯನ್ನು ಪೂರೈಸಬೇಕಾದ್ದಿದೆ:

> ಪಂಪನ ನುಣ್ಪುವೆತ್ತ ನುಡಿ ಪೊನ್ನನ ಬಿನ್ನಣದೋಜೆ ರನ್ನನೊ
> ಳ್ಪಂ ಪುದಿದಿರ್ದಲಕ್ಷಣ ವಿಚಕ್ಷಣತೋನ್ನತಿ ಕಣ್ಣಮಯ್ಯನಿಂ
> ಪಂ ಪುದಿದಿರ್ದ ಗೌರವಗುಣಂ ಗುಣವರ್ಮರ್ದ ದೇಸೆವೆತ್ತ ಮಾ
> ತೇಂ ಪರಿಕಿಪ್ಪೊಡೀಕೃತಿಯೊಳುಂಚೆನೆ ಪೇಮ್ಪಿದು ಪೇವಿಲೊಲ್ದವಂ ॥

ಇಲ್ಲಿ ಪಾರ್ಶ್ವ ಪಂಡಿತ ಕವಿಯು ಕಾಲಕ್ರಮವಾಗಿ ಹಿಂದಣ ಕವಿಗಳನ್ನು ಸ್ಮರಿಸಿದ್ದಾ ನೆಂಬುದು ಸೂರ್ಯ ಪ್ರಕಾಶದಷ್ಟು ಸ್ವಯಂ ಸ್ಪಷ್ಟವೇ ಇದೆ: ಪಂಪ (941), ಪೊನ್ನ (960), ರನ್ನ (993), ಕಣ್ಣಮಯ್ಯ (ಕರ್ಣಪಾರ್ಯ) (1140) ಮತ್ತು ಕಡೆಯು ದಾಗಿ ಗುಣವರ್ಮ. ಕವಿಚರಿತೆಕಾರರಾದಿಯಾಗಿ, ಮದರಾಸು ಆವೃತ್ತಿಗಳ ಸಂಪಾಕದ ರಿಂದ ತೊಡಗಿ, ನಾನಾ ವ್ಯಕ್ತಿ ಮತ್ತು ಸಾಂಸ್ಥಿಕ ಸಾಹಿತ್ಯಚರಿತ್ರೆಗಳಿಂದ ಹಿಡಿದು

ನಾನಾ ಸಂಶೋಧಕರವರೆಗೆ ಒಂದೇ ಜಾಡಿನ ಏಕಮುಖಿಯಾದ ಗುಹಾಧ್ವನಿ ಅನುರಣನವಾಗಿದೆ: ಅದೇನೆಂದರೆ ಪಾರ್ಶ್ವ ಪಂಡಿತನು ಪಾರ್ಶ್ವನಾಥ ಪುರಾಣದ ಈ ಪದ್ಯದಲ್ಲಿ ಸ್ಮರಿಸಿರುವ ಗುಣವರ್ಮನು ಶೂದ್ರಕ–ಹರಿವಂಶ ಕಾವ್ಯಗಳ ಕರ್ತೃವಾದ ಸು. 900 ರಲ್ಲಿ ಇದ್ದ ಆದಿಗುಣವರ್ಮನೆಂಬುದು.

ಆದರೆ ಮೇಲೆ ಉದಾಹರಿಸಿರುವ ಪದ್ಯದ ಸಂದರ್ಭ, ರಚನೆ, ಅರ್ಥಪ್ರತೀತಿ, ಕಾಲಾನುಕ್ರಮಣಿಕೆಯ ಧಾಟಿ ಮೊದಲಾದುವನ್ನು ಅನುಸಂಧಾನಿಸಿ ಒಳಹೊಕ್ಕು ನೋಡಬೇಕು. ನಮ್ಮ ತಲೆಯತುಂಬ ಮೊದಲೇ ಆದಿಗುಣವರ್ಮನನ್ನು ತುಂಬಿಕೊಂಡು, ಈ ಪದ್ಯದಲ್ಲಿಯೂ ಅವನನ್ನೇ ಹುಡುಕಿ ಕಾಣುವುದು ಪೂರ್ವಾಗ್ರಹವಾಗುತ್ತದೆ. ಅಂಥ ಸಿದ್ಧಬುದ್ಧಿಯ ನಿಶ್ಚಿತಗಳಿಲ್ಲದೆ ಪಾರ್ಶ್ವಪಂಡಿತನ ಪದ್ಯ, ಅದು ಬಿಚ್ಚುವ ಅರ್ಥದ ಜಾಡುಹಿಡಿದು ಹೊರಟರೆ ನಿಶ್ಚಿತವಾಗಿಯೂ ಅಲ್ಲಿ ಕವಿ ಸ್ಮರಿಸಿರುವ ಗುಣವರ್ಮನು ಆದಿಗುಣವರ್ಮನಲ್ಲ. ಒಂದು ವೇಳೆ ಕವಿಯ ಉದ್ದೇಶವು ಕ್ರಿ.ಶ. 900 ರಲ್ಲಿ ಇದ್ದ ಒಂದನೆಯ ಗುಣವರ್ಮನನ್ನು ನೆನೆಯುವುದಾಗಿದ್ದರೆ ಆಗ ಆ ಪದ್ಯದ ಆರಂಭದಲ್ಲಿಯೇ ಆ ಹೆಸರನ್ನು ತರುತ್ತಿದ್ದನು: ಅಂದರೆ, ಗುಣವರ್ಮ ಪಂಪ ಪೊನ್ನ ರನ್ನ ಎಂಬ ಕ್ರಮದಲ್ಲಿ ರಚಿಸುತ್ತಿದ್ದನು; 1140ರ ಕರ್ಣಪಾರ್ಯನಾದ ಮೇಲೆ ಮತ್ತೆ 900ರ ಗುಣವರ್ಮನನ್ನು ಹೆಸರಿಸುತ್ತಿರಲಿಲ್ಲ. ಆದ್ದರಿಂದ ಇಲ್ಲಿ ಪಾರ್ಶ್ವಪಂಡಿತ ಕವಿ ಹೇಳುತ್ತಿರುವುದು ಆ ಮೊದಲನೆಯ ಗುಣವರ್ಮನನ್ನು ಅಲ್ಲ. ಇಲ್ಲಿ ಕವಿ ನೆನೆದಿರುವ ಗುಣವರ್ಮನು ಕ್ರಿ.ಶ. 1140 ರಲ್ಲಿ ಇದ್ದ ಕರ್ಣಪಾರ್ಯನು ಆದ ಮೇಲೆ ಬಂದವನಾದ ಒಬ್ಬ ಗುಣವರ್ಮನನ್ನು. ಕ್ರಿ.ಶ. 1140ರ ತರುವಾಯ ಬಂದ ಗುಣವರ್ಮನೆಂದರೆ ಪುಷ್ಪದಂತ ಪುರಾಣವನ್ನು ರಚಿಸಿರುವ ಇಮ್ಮಡಿ ಗುಣವರ್ಮನೇ ಆಗಿದ್ದಾನೆ. ಆದ್ದರಿಂದ ನಿಶ್ಚಯವಾಗಿಯೂ. ಈ ವೃತ್ತ ಪದ್ಯದಲ್ಲಿ ಸ್ಮೃತನಾಗಿರುವ ಗುಣವರ್ಮನು ಪುಷ್ಪದಂತ ಪುರಾಣದ ಕರ್ತೃವೇ ಎಂದು ನಿರ್ಧಾರ ಮಾಡಬಹುದು. ಈ ಇಮ್ಮಡಿ ಗುಣವರ್ಮನೂ ಪಾರ್ಶ್ವಪಂಡಿತನೂ ಸಮಕಾಲೀನರಾದ ಮತ್ತು ಸಮಾನ ರಾಜಾಶ್ರಯದ ಕವಿಗಳೆಂಬುದು ತಿಳಿದಿರುವ ವಿಚಾರ. ಸವಣದತ್ತಿಯ ರಟ್ಟರ ಕೂಂಡಿ ಮಂಡಲದ ಈ ಇಬ್ಬರು ಕವಿಗಳೂ ನಾಲ್ಕನೆಯ ಕಾರ್ತವೀರ್ಯನ ಆಳ್ವಿಕೆಯಲ್ಲಿ ಇದ್ದವರು.

ಪಾರ್ಶ್ವಪಂಡಿತನು ಪಾರ್ಶ್ವನಾಥ ಪುರಾಣವನ್ನು ರಚಿಸಿದ್ದು ಕ್ರಿ.ಶ. 1222 ರಲ್ಲಿ. ಆದರೆ ಈ ಪ್ರೌಢವಾದ ಚಂಪೂ ಕಾವ್ಯವನ್ನು ಬರೆಯುವುದಕ್ಕೆ ಮೊದಲೇ ಕ್ರಿ.ಶ. 1205 ರಲ್ಲಿ ಪಾರ್ಶ್ವಪಂಡಿತನು ಕಲ್ಹೊಳೆ ಶಾಸನವನ್ನು ರಚಿಸಿದ್ದನು. ಅಂದರೆ ರನ್ನ, ಶಾಂತಿನಾಥ, ನಾಗಚಂದ್ರ, ಜನ್ನರಂತೆಯೇ ಪಾರ್ಶ್ವಪಂಡಿತನೂ ಮೊದಲು ಶಾಸನವನ್ನು ಬರೆದು ಹೆಸರುವಾಸಿಯಾದನು, ಅನಂತರ ಇನಿಸಿನಿಸು ಉದಿತೋದಿತನಾಗಿ ರಾಜನ ಆಸ್ಥಾನಕವಿಯಾದನು; ಈ ಅಂಶವನ್ನು ಇದೇ ಲೇಖನದಲ್ಲಿ ಈಗಾಗಲೇ ಸೂಚಿಸಿದ್ದಾಗಿದೆ.

ಇಮ್ಮಡಿಗುಣವರ್ಮಕವಿ ಪುಷ್ಪದಂತ ಪುರಾಣವನ್ನು ಬರೆದದ್ದು ಸು. 1215 ಎಂದು ಊಹಿಸಲಾಗಿದೆಯೇ ಹೊರತು ಅದೇ ಐತೀರ್ಪಲ್ಲ. ಏಕೆಂದರೆ ಕಾರ್ತವೀರ್ಯ IV ರಾಜನ ಆಳ್ವಿಕೆ 1202 ರಿಂದ 1220, ಅದರಿಂದ ಈ ನಡುವಣ ಅವಧಿಯಲ್ಲಿ 1202 ರಿಂದ 1220ರ ವರೆಗೆ ಯಾವಾಗ ಬೇಕಾದರೂ ಆಗಬಹುದು. ಗುಣವರ್ಮನು ಜನ್ನನನ್ನೂ ಸ್ಮರಿಸಿದ್ದಾನೆ. ತನ್ನ ಸಮವಯಸ್ಕನೂ ಸಮಕಾಲೀನನೂ ಆದ ಜನ್ನನು ಯಶೋಧರ ಚರಿತೆಯನ್ನು 1209 ರಲ್ಲಿ ರಚಿಸಿದ್ದರಿಂದ ಅದರ ಕೀರ್ತಿ ವ್ಯಾಪಿಸಿದ ಅವಧಿಯಲ್ಲಿ ಈ ಗುಣವರ್ಮನು ಜನ್ನನನ್ನು ನೆನೆದು ಸು. 1215ರಲ್ಲಿ ಪುಷ್ಪದಂತ ಪುರಾಣವನ್ನು ರಚಿಸಿರಬಹುದೆಂಬ ಊಹೆಯ ಸಮಂಜಸತೆಯನ್ನು ಪ್ರಶ್ನಿಸುವ ಜರೂರುಗಳಿಲ್ಲವಾದರೂ ಗುಣವರ್ಮನು ಕ್ರಿ.ಶ. 1209–10 ರಲ್ಲಿಯೇ ತನ್ನ ಕಾವ್ಯವನ್ನು ಬರೆದಿರಬಹುದಾದ ಸಾಧ್ಯತೆಯು ಇದೆ.

ಗುಣವರ್ಮನು ಹೀಗೆ ತನ್ನ ಓರಗೆಯ ಕವಿಯಾದ ಚಕ್ರವರ್ತಿಯ ಆಸ್ಥಾನದಲ್ಲಿದ್ದ ಜನ್ನನನ್ನು ಸ್ಮರಿಸಿ ಒಂದು ಗುಣಪಕಪಾತಿಯಾದ ಮೇಲ್ಪಂಕ್ತಿ ಹಾಕಿದ್ದನು. ಇದನ್ನು ಅರ್ಥಮಾಡಿಕೊಂಡಿದ್ದ ಅದೇ ಕಾಲಘಟ್ಟದ ಕವಿಯಾದ ಪಾರ್ಶ್ವಪಂಡಿತನೂ ತನ್ನ ಕಾವ್ಯದಲ್ಲಿ ತನ್ನ ಓರಗೆಯವನ್ನೂ ತನಗೆ ಆಶ್ರಯಕೊಟ್ಟ ರಟ್ಟ ರಾಜನ ಪಟ್ಟದ ಕವಿಯೂ ಆದ ಗುಣವರ್ಮನನ್ನು ಸ್ಮರಿಸಿದ್ದಾನೆ. ಆದ್ದರಿಂದ ಕವಿಚರಿತೆಯ ಪ್ರಥಮ ಸಂಪುಟದಲ್ಲಿ ಪಾರ್ಶ್ವಪಂಡಿತನ ಹೆಸರು ಕವಿಕಾವ್ಯ ವಿವರಗಳೂ ಮೊದಲು ಬಂದಿದ್ದು ಗುಣವರ್ಮನ ಹೆಸರು ಮತ್ತು ಕಾವ್ಯ ಪರಿಚಯ ಅನಂತರ ಬಂದಿರುವುದು ಅದಲು ಬದಲು ಆಗಬೇಕು. ಅಂದರೆ ಗುಣವರ್ಮನ ಪರಿಚಯ ಮೊದಲೂ, ಪಾರ್ಶ್ವಪಂಡಿತನ ಪರಿಚಯ ಅನಂತರವೂ ಬರಬೇಕು. ಗುಣವರ್ಮನಿಗೆ ಸು. 1210 ಎಂದೂ, ಪಾರ್ಶ್ವಪಂಡಿತನಿಗೆ ಕ್ರಿ.ಶ. 1222 ಎಂದೂ ಸ್ಪಷ್ಟಕಾಲ ನಮೂದಿತವಾಗಬೇಕು. ಅದರಂತೆಯೇ ಪಾರ್ಶ್ವಪಂಡಿತನು ಸ್ಮರಿಸಿರುವುದು ಕ್ರಿ.ಶ. 900ರ ಗುಣವರ್ಮನಲ್ಲವೆಂದೂ, ಕ್ರಿ.ಶ. 1210 ರಲ್ಲಿ ಕಾವ್ಯ ರಚಿಸಿದ ಸಮಕಾಲೀನನಾದ ಗುಣವರ್ಮನೆಂದೂ ನಮೂದಿತವಾಗಬೇಕು.

ತಮ್ಮ ಸಮಕಾಲೀನರಾದ ಓರಗೆಯ ಹಿರಿಯ ಕಿರಿಯ ಕವಿಗಳನ್ನು ನೆನೆಯುವುದು ಚಾಳುಕ್ಯರ—ರಟ್ಟರ ಕಾಲದ ಸಾಹಿತ್ಯ ಪರಿಸರದಲ್ಲಿ ಕಂಡುಬರುವ ಒಂದು ವಿಶೇಷ. ರನ್ನನು ಚಾವುಂಡರಾಯನನ್ನೂ, ಬ್ರಹ್ಮಶಿವನು ಬಂಧುವರ್ಮ ಅಗ್ಗಳರನ್ನೂ, ಗುಣವರ್ಮನು ಜನ್ನನನ್ನೂ, ಪಾರ್ಶ್ವಪಂಡಿತನು ಗುಣವರ್ಮನನ್ನೂ ಸ್ಮರಿಸಿರುವುದು ಸ್ಮರಣೀಯ ಕವಿ—ಕಾವ್ಯ ಮಹತ್ವದ ಉಲ್ಲೇಖವಾಗಿದೆ. ಅಲ್ಲದೆ ಪಾರ್ಶ್ವಪಂಡಿತನು ಅಚಣ್ಣ ಅಗ್ಗಳ ನೇಮಿಚಂದ್ರ ಬಾಳಚಂದ್ರರನ್ನು ಹೆಸರಿಸಿರುವುದನ್ನೂ ಗಮನಿಸಬೇಕು ; ಇವರೆಲ್ಲ ಈ ಕವಿಯ ಎಡಬಲಗಳಲ್ಲಿ ಭುಜತಾಕಿಸಿ ನಿಂತವರು.

ಈ ತೆರನಾಗಿ ತನ್ನ ಸಮಕಾಲೀನನಾದ ಹಿರಿಯ ಕವಿಯಿಂದ ತನ್ನ ಜೀವಿತ ಕಾಲದಲ್ಲಿಯೇ ಸ್ತುತಿಗೆ ಪಾತ್ರನಾಗಿರಬೇಕಾದರೆ ಗುಣವರ್ಮನು ಬಹುಜನ ಸಂಸ್ತುತ್ಯನೂ ಜನಾನುರಾಗಿಯೂ ಆದ ಕವಿಯೆಂಬುದು ಸ್ಥಾಪಿತವಾಗುತ್ತದೆ. ಇಂಥವನ ಕಾವ್ಯವನ್ನು ಸಂಪಾದಿಸಿ ಪ್ರಕಟಿಸಲು ಅನುವು ಮಾಡಿಕೊಟ್ಟ ಮದರಾಸು ವಿಶ್ವವಿದ್ಯಾಲಯದ (ಸರ್ವಭಾಷಾ) ಸೋದರ ಭಾಷಾ ವತ್ಸಲತೆಯು ಕೃತಜ್ಞತೆಯಿಂದ ಸ್ಮರಿಸಲು ಯೋಗ್ಯವಾದ ಕಾರ್ಯವೆನ್ನಿಸಗಿದೆ.

ಹೊಮ್ಮಳಿಗೆ ನಾಡು, ಬನೇರುಘಟ್ಟ – ಸ್ಥಳನಾಮ ಪರಿಶೀಲನೆ

ಪಿ. ವಿ. ಕೃಷ್ಣಮೂರ್ತಿ

ಬೆಂಗಳೂರು ಜಿಲ್ಲೆಯ ಸರಿಸುಮಾರು ಮಧ್ಯಭಾಗ, ಅಂದರೆ ಈಗಿನ ಬೆಂಗಳೂರು ನಗರದ ದಕ್ಷಿಣ ಭಾಗಕ್ಕೆ ಅಂಟಿಕೊಂಡಂತಿರುವ ಬನ್ನೇರುಘಟ್ಟದ ಆಸುಪಾಸಿನ ಪ್ರದೇಶ ವನ್ನು ಶಾಸನಗಳು 'ಹೊಮ್ಮಳಿಗೆ ನಾಡು' ಎಂದು ಕರೆದಿರುವುದು ಕಂಡುಬರುತ್ತದೆ. ಈ ನಾಡಿನ ಪ್ರಾಚೀನತೆ, ಭೌಗೋಳಿಕ ವ್ಯಾಪ್ತಿ, ಸ್ಥಳನಾಮ ನಿಷ್ಪತ್ತಿ ಮತ್ತು ಪ್ರಾಮುಖ್ಯತೆಗಳನ್ನು ಪರಿಶೀಲಿಸುವುದು ಪ್ರಸ್ತುತ ಸಂಪ್ರಬಂಧ ಉದ್ದೇಶ.

ಕಿ.ಶ. 1316ಕ್ಕೆ ಸೇರಿದ ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಆಳಿಕೆಯ ಶಾಸನವೊಂದು ಕನಕಪುರ ತಾಲೂಕಿನ ಗಾಣಾಳುಕೊಪ್ಪ ಗ್ರಾಮಕ್ಕೆ ಸೇರಿದ್ದು, ಆ ಊರಿನಲ್ಲಿ ಸಂತೆಯೊಂದನ್ನು ಸ್ಥಾಪಿಸಿದ ವಿವರ ಅದರಲ್ಲಿ ಬಂದಿರುವುದಲ್ಲದೆ, ಹೊಮ್ಮಳಿಗೆ ನಾಡನ್ನು ಉಲ್ಲೇಖಿಸುತ್ತದೆ. ಇದಕ್ಕೂ ಹಿಂದಿನ ಅಂದರೆ ಕ್ರಿ.ಶ. 1297ರ ಅದೇ ಅರಸನ ತಮಿಳು ಶಾಸನವು ಬನ್ನೇರುಘಟ್ಟದಲ್ಲಿದ್ದು, ಈ ನಾಡನ್ನು 'ಪೊನ್ಮಣಿಗನಾಟ್ಟು' ಎಂದು ಕರೆದಿದೆ. ಅದೇ ಬನ್ನೇರುಘಟ್ಟದ ಕ್ರಿ,ಶ. 1362 ಮತ್ತು ಕ್ರಿ.ಶ. ಸು. 1400ರ ಎರಡೂ ಶಾಸನಗಳು ಹಾಗೂ ಕನಕಪುರ ತಾಲೂಕಿನ ಕ್ರಿ.ಶ. 1407ರ ಹಳೇ ಅಗ್ರಹಾರ, ಕ್ರಿಶ. 1485ರ ಚಿಕ್ಕಮರಳವಾಡಿ ಮತ್ತು ಕ್ರಿ.ಶ. 1538ರ ಅಗ್ರಹಾರದ ಶಾಸನಗಳು ಈ ಪ್ರಾದೇಶಿಕ ವಿಭಾಗವನ್ನು 'ಹೊಮ್ಮಳಿಗೆ ನಾಡು' ಎಂದೇ ಹೆಸರಿಸಿವೆ. ಈ ಶಾಸನಗಳು ದೊರೆತಿರುವ ಸ್ಥಳ ಮತ್ತು ಶಾಸನೋಕ್ತವಾಗಿರುವ ಸ್ಥಳಗಳ ಹಿನ್ನೆಲೆಯಲ್ಲಿ ಹೇಳುವುದಾದರೆ, ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶ ವನ್ನು 'ಹೊಮ್ಮಳಿಗೆ ನಾಡು' ಎಂದು ಕರೆಯುತ್ತಿದ್ದರೆಂಬುದು ಖಚಿತಪಡುತ್ತದೆ. ಇಂದಿನ ಆನೆಕಲ್ ತಾಲೂಕಿನ ಪಶ್ಚಿಮೋತ್ತರ ಮತ್ತು ಕನಕಪುರ ತಾಲೂಕಿನ ಉತ್ತರಕ್ಕಿರುವ ಭಾಗಗಳು ಹಾಗೂ ಬೆಂಗಳೂರು ದಕ್ಷಿಣ ತಾಲೂಕಿನ ದಕ್ಷಿಣ ತುದಿ ಯನ್ನು ಒಳಗೊಂಡಂತೆ ಇರುವ ಪ್ರದೇಶವೇ ಇದಾಗಿದ್ದಿತು. ಭೌಗೋಳಿಕವಾಗಿ ಈ ಪ್ರದೇಶವು ಬೆಟ್ಟ, ಕಣಿವೆ ಮತ್ತು ಕುರುಚಲು ಕಾಡಿನಿಂದ ಕೂಡಿದ ಪ್ರದೇಶವಾಗಿ, ವಿರಳವಾದ ಗಂಧದ ಮರಗಳ ಹಾಗೂ ಆನೆಯಂತಹ ವನ್ಯ ಮೃಗಗಳ ತಾಣವೂ ಆಗಿದೆ.

ಹೊಮ್ಮಳಿಗೆನಾಡಿನ ಮುಖ್ಯ ಸ್ಥಳವಾಗಿದ್ದ ಬನ್ನೇರುಘಟ್ಟ, ಇಂದು ರಾಷ್ಟ್ರೀಯ ಉದ್ಯಾನವನಕ್ಕೆ ಪ್ರಸಿದ್ಧವಾಗಿದ್ದರೆ, ಹಿಂದೆ ಅದು 'ದಾಮೋದರ ದೇವರ' ಅಂದರೆ ಇಂದಿನ 'ಚಂಪಕಧಾಮ ಸ್ವಾಮಿ'ಯ ಸನ್ನಿಧಿಯಿಂದ ಖ್ಯಾತಿ ಪಡೆದಿದ್ದಿತು. ಕ್ರಿ. ಶ.

1407ರ ಹಳೇ ಅಗ್ರಹಾರದ ಶಾಸನ ಮತ್ತು ಕ್ರಿ.ಶ. 1672ರ ಸಂಪಿಗೆಹಳ್ಳಿ ಶಾಸನಗಳು ದಾಮೋದರ ದೇವರನ್ನು 'ನಾಡದೇವತೆ' ಯೆಂದು ಪರಿಗಣಿಸಿ ದಾನದ ಸಂದರ್ಭದಲ್ಲಿ ಈ ದೇವರ ಹೆಸರಿನಲ್ಲಿ 'ಒಪ್ಪ'[1] ಹಾಕಿರುವುದು ಗಮನಸೆಳೆಯುತ್ತದೆ. (ಕುಕ್ಕಲನಾಡಿನ ನಾಡದೇವತೆಯಾಗಿ ಬಿನ್ನಮಂಗಲದ ಶ್ರೀ ಮುಕ್ತೇಶ್ವರ ದೇವರ 'ಒಪ್ಪ' ಕೂಡ ಇಂತಹ ಮತ್ತೊಂದು ಉದಾಹರಣೆಯಾಗಿದೆ.)[2] ಬನ್ನೇರಘಟ್ಟದ ಈ ದಾಮೋದರ ದೇವರ ದೇವಾಲಯವನ್ನು ಕ್ರಿ.ಶ. 1257ರಲ್ಲಿ ಹೊಯ್ಸಳರ ಮಾಂಡಲಿಕನಾಗಿದ್ದ 'ಪೂರ್ವಾಧಿರಾಯ'ನು ಕಟ್ಟಿಸಿದನೆಂದು ತಿಳಿದುಬರುತ್ತದೆ.

ಚಂಪಕಧಾಮಸ್ವಾಮಿ (ದಾಮೋದರ ದೇವರು) ಗುಡಿಯ ಹಿಂಗಡೆ 'ಸುವರ್ಣ ಮುಖಿ' ಗಿರಿ ಇದೆ. ಈ ಕಿರು ಬೆಟ್ಟದ ಮೇಲಿನ ಅನೇಕ ಪ್ರಾಗೈತಿಹಾಸಿಕ ಕುರುಹು ಗಳನ್ನು ವಿದ್ವಾಂಸರು ಗುರುತಿಸಿರುತ್ತಾರೆ.[3] ಈ ಬೆಟ್ಟದ ಹಿಂಬದಿಗೆ, ಪಶ್ಚಿಮಕ್ಕಿರುವ ತಪ್ಪಲಿನಲ್ಲಿ 'ಸುವರ್ಣಮುಖಿ ತೀರ್ಥ' ಎಂಬ ಸರೋವರವಿದೆ. ಕ್ರಿ.ಶ. 1818 ರಲ್ಲಿ ಅದಕ್ಕೆ, ಬೇವೂರು ಸ್ಥಳದ ಬೆಂಗಳೂರು ಫವುಜದಾರ ಲಿಂಗರಾಜಯ್ಯ ಅರಸಿನವರು ಸೋಪಾನವನ್ನು ರಮ್ಯವಾಗಿ ಕಟ್ಟಿಸಿದಂತೆ ಶಾಸನವೊಂದರಿಂದ ತಿಳಿದುಬರುತ್ತದೆ.

ಈ ಮೇಲೆ ಪ್ರಸ್ತಾಪಿಸಿದ ಶಾಸನೋಕ್ತ ಹಾಗೂ ಭೌಗೋಳಿಕ ವಿವರಗಳ ಹಿನ್ನೆಲೆಯಲ್ಲಿ, ಮೊದಲಿಗೆ ಈ ನಾಡಿನ ಹೆಸರಿನಲ್ಲಿರುವ 'ಹೊಮ್ಮಳಿಗೆ' ಎಂಬುದರ ಬಗ್ಗೆ ವಿಚಾರ ಮಾಡಬಹುದಾಗಿದೆ ; 'ಹೊಮ್ಮಳಿಗೆ' ಎಂಬುದರ ಮೂಲವು ಪ್ರಾಯಶಃ 'ಪೊನ್ನಟಿ' ಕೆ ಆಗಿರಬೇಕು. ಪೊನ್ನಟಿ' ಕೆ ಎಂಬುದು ಪೊನ್ + ಅಟಿಗಕೆ ಎಂಬ ಎರಡು ಪದಗಳಿಂದ ರೂಪ ತಾಳುದುದಾಗಿದೆ. ಪೊನ್ ಅಂದರೆ ಚಿನ್ನ, ಅಟಿ'ಕೆ ಎಂದರೆ 'ಗುಡ್ಡಗಾಡುಗಳಿಂದ ಕೂಡಿದ ಕಾಡುಮರಗಳಿಂದ ಕೆಲವೊಮ್ಮೆ ಕೂಡಿದ್ದು, ನೂರಾರು ವರ್ಷಗಳವರೆಗೆ—ಈಗಲೂ ಸ್ವಲ್ಪಮಟ್ಟಿಗೆ ಕೃಷಿನಡೆಯದಿದ್ದ, ಪಾಳುಬಿದ್ದ ಜಾಗವನ್ನು ಸೂಚಿಸುತ್ತದೆ' ಎಂದು ಸ್ಥಳನಾಮ ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ."[4] ಹೀಗಾಗಿ ಚಿನ್ನವನ್ನು ಹೊಂದಿರುವ ಗುಡ್ಡಗಾಡೇ ಪೊನ್ನಟಿ'ಕೆ ಅಥವಾ ಪೊನ್ನಳಿಗೆ ಯಾಗಿದ್ದು, ಕಾಲಾಂತರದಲ್ಲಿ 'ಪೊನ್ಮಣಿಗ' ಮತ್ತು 'ಹೊಮ್ಮಳಿಗೆ' ಎಂಬ ರೂಪಗಳು ಶಾಸನಗಳಲ್ಲಿ ಪ್ರಯುಕ್ತವಾಗಿರುವುದನ್ನು ಮೇಲೆಯೇ ಗಮನಿಸಿದ್ದೇವೆ.

---

1. ಅಧಿಕೃತ ಸಾಕ್ಷಿ ಅಥವಾ ಒಪ್ಪಿಗೆ ಎಂಬ ಅರ್ಥದಲ್ಲಿ.
2. ನೋಡಿ : ಕುಕ್ಕಲನಾಡು—ಒಂದು ಪ್ರಾಚೀನ ಪ್ರಾದೇಶಿಕ ವಿಭಾಗ. ಇತಿಹಾಸ ದರ್ಶನ. ಸಂ. 7, ಪು. 144.
3. ಡಾ॥ ದೇವರಕೊಂಡಾರೆಡ್ಡಿ, ಬನ್ನೇರುಘಟ್ಟ—ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೆ, ಇತಿಹಾಸದರ್ಶನ. ಸಂ. 8, ಪು. 1.
4. ಕೆಮ್ಮೂರು ರಘುಪತಿಭಟ್ಟ. ತುಳುನಾಡಿನ ಸ್ಥಳನಾಮಗಳು, ಬೆಂಗಳೂರು, 1979, ಪು. 85.

ಇತಿಹಾಸಕಾಲಕ್ಕೂ ಪೂರ್ವದಲ್ಲೇ ಮಾನವನಿಗೆ ಚಿನ್ನದ ಬಗ್ಗೆ ಅರಿವಿದ್ದಿತು, ಪ್ರಾಯಶಃ ಚಿನ್ನವೇ ಮಾನವನಿಗೆ ತಿಳಿದಿದ್ದ ಮೊದಲ ಲೋಹವೆನ್ನಬೇಕು, ಚಿನ್ನವನ್ನು ಅಮೂಲ್ಯ ಹಾಗೂ ದುರ್ಲಭವೆಂದು ಭಾವಿಸಿದ್ದರೂ ಅದು ಪ್ರಕೃತಿಯಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಹಂಚಿಕೆಯಾಗಿದೆಯನ್ನಬಹುದು, ಚಿನ್ನವು ಸೆಲೆಗಳುಳ್ಳ ಬೆಣಚುಗಲ್ಲು ಸ್ಫಟಿಕ ಮೊದಲಾದ ಕೆಲವು ಜಾತಿಯ ಶಿಲೆಗಳಲ್ಲಿ ಸೇರಿಕೊಂಡಿರುತ್ತದೆ. ಪರ್ವತ ಬೆಟ್ಟ ಗುಡ್ಡಗಳಲ್ಲಿನ ಬಂಡೆಯ ಸಂಸ್ತರಗಳಲ್ಲಿ ಸೇರಿದ್ದ ಚಿನ್ನವೇ ಕಾಲಾಂತರದಲ್ಲಿ ಕೊರೆದು, ಪುಡಿಯಾಗಿ, ನದಿ ಪ್ರವಾಹಗಳಿಂದ ಬರುವ ಮರಳು ಮತ್ತು ಮಣ್ಣುಗಳ ಜೊತೆಯಲ್ಲಿ ಸೇರಿರುವುದುಂಟು, ಅಂತಹ ಚಿನ್ನವೇ ಮೊದಲು ಮಾನವನ ಗಮನಕ್ಕೆ ಬಂದಿತೆನ್ನ ಬಹುದು, ಬಹುಶಃ ಈ ತೆರನಾದ ಚಿನ್ನವೇ, ಬನ್ನೇರುಘಟ್ಟದ ಪಶ್ಚಿಮದ ತಪ್ಪಲಿ ನಲ್ಲಿರುವ 'ಸುವರ್ಣಮುಖಿ' ಎಂಬಲ್ಲಿ ಸಂಗ್ರಹವಾಗುತಿತ್ತೇನೋ? ಸಂಸ್ಕೃತಾನುಕರಣ ಕ್ಕೊಳಗಾಗಿರುವ ಈ ಹೆಸರಿನ ದ್ರಾವಿಡ ಅರ್ಥಾತ ಕನ್ನಡ ರೂಪ 'ಪನ್ನೆಱ್‌ಪಟ್ಟು' ಎಂಬುದಾಗಿರಬೇಕು, ಪೊನ್–ಚಿನ್ನ. ಎಱ್‌ಪಟ್ಟು–ಮೂಲಸ್ಥಳ, ಆದ್ದರಿಂದ 'ಸುವರ್ಣ ಮುಖಿ' ಮತ್ತು 'ಪೊನ್ನೆಱ್ ಪಟ್ಟು' ಎಂಬುವು ಒಂದೇ ಅರ್ಥವುಳ್ಳವಾಗುತ್ತವೆ, ofter discussion of ಎಱ್‌ಪಟ್ಟು 'ಎಱ್‌ಪಟ್ಟು' ಎಂಬ ಸಾಮಾನ್ಯ ಪ್ರತ್ಯಯದಿಂದ ರೂಪಾಂತರ ಹೊಂದಿರಬಹುದಾದ ಎರುಘಟ್ಟ, ಅರುಘಟ್ಟ. ಎರಘಟ್ಟ ಮುಂತಾದ ರೂಪಗಳನ್ನು ಅಂತ್ಯ ಪ್ರತ್ಯಯವಾಗಿ ಪಡೆದಿರುವ ಕರ್ನಾಟಕದಲ್ಲಿನ ಕೆಲವು ಸ್ಥಳನಾಮ ಗಳನ್ನು ಉದಾಹರಿಸಬಹುದು : ಚಿಕ್ಕಬಂದರಘಟ್ಟ (ಕೋಲಾರ ತಾ||), ನಾಗರಘಟ್ಟ (ಚಿತ್ರದುರ್ಗ ತಾ||) ಹೆಸರುಘಟ್ಟ (ಬೆಂಗಳೂರು ತಾ||) ಜೊತೆಗೆ ಧಾರವಾಡ ಜಿಲ್ಲೆಯ ಅಂಗರಗಟ್ಟಿ ಕಂಚುಗಾರಗಟ್ಟಿ ಬೆಳಗಾಂ ಜಿಲ್ಲೆಯ ಯರಗಟ್ಟಿಗಳನ್ನು ಪರಿಶೀಲಿಸಬಹು ದಾಗಿದೆ. ಆದ್ಧರಿಂದ ಈಗಿನ ಬನ್ನೇರುಘಟ್ಟ ಮತ್ತು ಸುವರ್ಣಮುಖಿ ಎಂಬುವು'ಪೊನ್ನೆ ಱ್‌ಪಟ್ಟು' ಎಂಬುದರಿಂದಲೇ ರೂಪತಾಳಿದವೆಂದು ಹೇಳಬಹುದು,ಪೊನ್ನೆಱ್ ಪಟ್ಟು-ಬನ್ನೆರವಟ್ಟ-ಬನ್ನೂರುಘಟ್ಟಿ ಬನ್ನೇರು ಘಟ್ಟ ಎಂದು ರೂಪಾಂತಗೊಂಡಿರಬೇಕು, ಮಧ್ಯಾಂತರ ರೂಪಗಳಾದ ಬನ್ನಿಯಘಟ್ಟ An 110[5], ಬನ್ನೂರುಘಟ್ಟ (An 82, 85–87 & 106) ಬನಿಶರಘಟ್ಟ (An187), ವನ್ನಿಯರಘಟ್ಟ MAR 1908, p. 13) ಮತ್ತು ಪಹ್ನಗಿರಿ (An 89) ಮುಂತಾದವು ಶಾಸನಗಳಲ್ಲಿ ದಾಖಲಾಗಿವೆ, ಇಲ್ಲೇ ನಾವು ಗಮನಿಸಬೇಕಾದ ಮತ್ತೊಂದು ವಿಶೇಷ ಅಂಶವೆಂದರೆ ಕೋಲಾರದ ಗಣಿಪ್ರದೇಶದಲ್ಲೂ 'ಬನ್ನೇರುಘಟ್ಟ' ಎಂಬ ಸ್ಥಳವಿರುವುದು.

ಹೊಮ್ಮಳಿಗೆನಾಡು ಕೇವಲ ಚಿನ್ನದನಾಡಷ್ಟೇ ಆಗಿರಲಿಲ್ಲ, ಇತರ ಹಲವು ಲೋಹಕೈಗಾರಿಕೆಗಳ ತಾಣವೂ ಆಗಿದ್ದಿತೆಂಬುದನ್ನು ಆ ನಾಡಿನಲ್ಲಿ ಅಂತರಗತವಾಗಿರುವ ಕುಲುಮೆಪಾಳ್ಯ, ಕಸವರಹಳ್ಳಿ, ವಾಜರಹಳ್ಳಿ, ಕ್ಯಾಸರಗುಪ್ಪೆ. ರಾಗಿಹಳ್ಳಿ ಕಾಳೀಶ್ವರಿ ಎಂಬ ಸ್ಥಳನಾಮಗಳ ಹಿನ್ನೆಲೆಯಲ್ಲಿ ಗ್ರಹಿಸಬಹುದಾಗಿದೆ.

---

5. ಎಪಿಗ್ರಾಫಿಯಾ ಕರ್ನಾಟಕ ಸಂ. 9, (1905) ಮತ್ತು ಪುರವಣಿ ಸಂಪುಟ (ಅಪ್ರಕಟಿತ)
6. ನೋಡಿ : Hommalige nadu and some of its Placenames A Study, Studies in indian place names, Vol. XV. P. 105,

ಈ ಪರಿಶೀಲನೆಯಿಂದ ನಾವು ಮನಗಾಣಬೇಕಾದ ಮುಖ್ಯ ಅಂಶವೆಂದರೆ, ನಮ್ಮ ಪ್ರಾಚೀನ ಪ್ರಾದೇಶಿಕ ವಿಭಾಗಗಳು, ನೈಜ ಭೌಗೋಳಿಕ ಲಕ್ಷಣಗಳ ಹಿನ್ನೆಲೆಯಲ್ಲೇ ರೂಪತಾಳಿರುತ್ತಿದ್ದವೆನ್ನಬೇಕು,

> 'ಯೇನಲಿಙ್ಗೇನ ಯೋ ದೇಶೋ ಯುಕ್ತಃ ಸಮುಪಲಕ್ಷ್ಯತೇ !
> ತೇನೈವ ನಾಮ್ನಾ ತಂ ದೇಶಂ ವಾಚ್ಯಮಾಹುರ್ಮನೀಷಿಣಃ !!
> (ಮ. ಭಾ., ಆಧಿಪರ್ವ ೨-೧೨)

> (ಯಾವ ಒಂದು ಚಿಹ್ನೆಯಿಂದ ಯಾವ ಒಂದು ದೇಶವು ಕೂಡಿರುವುದೋ ಆ ಚಿಹ್ನೆಯ ಹೆಸರಿನಿಂದಲೇ ಆ ದೇಶವನ್ನು ಅಥವಾ ಆ ಪ್ರದೇಶವನ್ನು ಕರೆಯಬೇಕೆಂಬುದು ವಿದ್ವಾಂಸರ ಅಭಿಪ್ರಾಯ)

ಇಂತಹ ನೈಜಭೌಗೋಳಿಕ ಹಿನ್ನೆಲೆಯುಳ್ಳ ಹಲವು ಪ್ರಾದೇಶಿಕ ವಿಭಾಗಗಳಲ್ಲಿ, ಗಂಗವಾಡಿ ಪ್ರದೇಶದಲ್ಲಿದ್ದ ಕುಕ್ಕಲ ನಾಡು, ಸೀಗಲ ನಾಡು, ಕಿಳಲೆ ನಾಡು ಮುಂತಾದವುಗಳನ್ನು ಹೆಸರಿಸಬಹುದಾಗಿದೆ.*

---

*ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಆಶ್ರಯದಲ್ಲಿ ದಿನಾಂಕ 5-7 ನವೆಂಬರ್ 1994ರಲ್ಲಿ ಏರ್ಪಾಡಾಗಿದ್ದ ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಹನ್ನೊಂದನೇ ಅಧಿವೇಶನದಲ್ಲಿ ಮಂಡಿಸಿದ "ಪೊಮ್ಮಳಗೆನಾಡು ಒಂದು ಪರಿಶೀಲನೆ" ಎಂಬ ನನ್ನ ಸಂಪ್ರಬಂಧದ ಪರಿಷ್ಕೃತ ಸಂಕ್ಷಿಪ್ತ ರೂಪವೇ ಈ ಲೇಖನ.

ಯಮುಳ ಪ್ರಶ್ನೆ : ವಿಶ್ಲೇಷಣೆ

ಹೊ. ನ. ನೀಲಕಂಠೇಗೌಡ

ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಶ್ರೀ ತೇಜಸ್ವಿಯವರಿಗೆ ವಿಶಿಷ್ಟ ಸ್ಥಾನವಿದೆ. ತಮ್ಮ ಬರವಣಿಗೆಯ ಮೂಲಕ ಹೊಸ ಆಯಾಮವನ್ನು ತಂದುಕೊಟ್ಟು, ತಮ್ಮ ಕೃತಿಗಳಲ್ಲಿ ನವಿರಾದ ಹಾಸ್ಯದೊಳಗೆ ಸಮಾಜದ ಹಲವಾರು ಅಂಕುಡೊಂಕುಗಳನ್ನು ಮಾರ್ಮಿಕವಾಗಿ ವಿಡಂಬಿಸುವ ಅವರ ಕಥನ ಕಲೆಯ ನಿರೂಪಣೆಯನ್ನು ಸಮಕಾಲೀನ ಸ್ಥಿತಿಯೊಳಗೆ ನಿಂತು ನೋಡಿದಾಗ ಬೆರಗುಗೊಳಿಸುವಂತಹದು.

"ಯಮುಳ ಪ್ರಶ್ನೆ" ಗಾತ್ರದಲ್ಲಿ ಚಿಕ್ಕದಾದರೂ, ತನ್ನ ಒಡಲೊಳಗೆ ಅಡಗಿಸಿಕೊಂಡಿರುವ ಪ್ರಶ್ನೆಗಳಾಗಲಿ, ಸತ್ತ್ವವಾಗಲಿ, ತಂತ್ರವಾಗಲಿ, ಪಾತ್ರಗಳಾಗಲಿ ಚಿಕ್ಕದೇನಲ್ಲ. ನಾಟಕ ಅದ್ಭುತ ಕಲಾಕೃತಿಯಾಗಿ ರೂಪುಗೊಂಡಿರುವುದು ಅಲ್ಲಿನ ರಚನಾ ವಿನ್ಯಾಸದ ಅನನ್ಯತೆಯಿಂದಾಗಿ ಮತ್ತು ಪಾತ್ರ ರಚನಾ ಪರಿಣತಿಯಿಂದಾಗಿ ಶ್ರೇಷ್ಠವಾಗಿದೆ. ಓದುಗ ಅಥವಾ ಪ್ರೇಕ್ಷಕನ ಮಾನಸ ಸರೋವರದಲ್ಲಿ ಕುತೂಹಲಗೊಳಿಸುವ, ಹಾಗೂ ಬೌದ್ಧಿಕ ಚಿಂತನೆಗೆ ಎಡೆಮಾಡಿಕೊಡುವುದು ಕೃತಿಯ ವೈಶಿಷ್ಟ್ಯ.

ತೇಜಸ್ವಿ ಅವರ ಏಕೈಕ ನಾಟಕ 'ಯಮುಳ ಪ್ರಶ್ನೆ'. ಈ ನಾಟಕ ಅಸಂಗತ ನಾಟಕವೇ? ಅಥವಾ ಇಲ್ಲವೇ? ಅಸಂಗತ ನಾಟಕವಾದರೆ ಹೇಗೆ? ಅಸಂಗತ ಅಲ್ಲದಿದ್ದರೆ ಹೇಗೆ ಅಲ್ಲ? ಎಂದು ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. "ಯಮುಳ ಪ್ರಶ್ನೆ" ಅಸಂಗತ ನಾಟಕ ಎನ್ನುವ ಮೊದಲು ಅಸಂಗತ ನಾಟಕದ ಬಗ್ಗೆ ಸ್ವಲ್ಪವೇ ತಿಳಿಯಬಹುದು–

ಅಸಂಗತ ಎಂದರೆ ಜೊತೆಯಲ್ಲಿ ಇಲ್ಲದಿರುವುದು. ಒಂದಕ್ಕೊಂದು ಸಂಬಂಧವಿಲ್ಲದ್ದು. ಈ ಅಸಂಗತ ಪದ ಇಂಗ್ಲೀಷಿನ Absurd ಪದದಿಂದ ಬಂದಿದೆ. ಹೊಂದಿಕೊಳ್ಳದ ಸ್ಥಿತಿಯುಳ್ಳದ್ದು, ಅಪಸ್ವರ, ಅಸಂಬದ್ಧ, ಗೊಂದಲ, ಗೋಜಲು, ಅಸಮಂಜಸ, ಅನೌಚಿತ್ಯ ಮುಂತಾದ ಪದಗಳನ್ನು ಸಂವಾದಿಯಾಗಿ ಬಳಸಬಹುದು. ಅಸಂಗತ ನಾಟಕಗಳಲ್ಲಿ ಪ್ರತಿ ದೃಶ್ಯಕ್ಕೂ, ಸನ್ನಿವೇಶಕ್ಕೂ ಸಂಬಂಧವೇ ಇಲ್ಲದಂತೆ ಕ್ರಿಯೆಗಳು ನಡೆಯುತ್ತವೆ. ಅಸಂಗತ ನಾಟಕದ ಪಾತ್ರಗಳಿಗೆ ಸ್ವಂತಿಕೆಯಾಗಲಿ, ಅಸ್ತಿತ್ವವಾಗಲಿ, ಒಂದು ನಿರ್ದಿಷ್ಟಕಾಲಕ್ಕೆ ಸೇರಿದವು ಎಂಬ ಪರಿವೆ ಇರುವುದಿಲ್ಲ. ಪ್ರತಿಮಾ ವಿಧಾನಗಳ ಮೂಲಕವೋ, ಸಂಕೇತಗಳ ಮೂಲಕವೋ ನಡೆಯುವುದನ್ನು ಕಾಣಬಹುದು.

ಅಸಂಗತ ನಾಟಕಗಳು ಎಲ್ಲಿಂದಲೋ ಆರಂಭವಾಗಿ ಎಲ್ಲಿಯೋ ಅಂತ್ಯವಾಗುತ್ತವೆ. ನಾಟಕಕಾರ ಏನನ್ನು ಹೇಳಲು ಹೊರಟಿದ್ದಾನೆ ಎಂದು ತಿಳಿಯುವುದೇ ಇಲ್ಲ. ಇದ್ದಕ್ಕಿದ್ದಂತೆ ಆರಂಭವಾದದ್ದು ಇದ್ದಕ್ಕಿದ್ದಂತೆಯೇ ತಟಸ್ಥವಾಗಬಹುದು. ಪ್ರೇಕ್ಷಕ/ಓದುಗನಿಗೆ ಮುಂದೆ ಏನೋ ನಡೆಯುತ್ತದೆಂದು ಯೋಚಿಸುತ್ತಿರುವಾಗ ನಾಟಕ ಅಂತ್ಯವಾಗಬಹುದು.

ಅಸಂಗತ ನಾಟಕ ಯೋಜನಾರಹಿತ ಮೌಲ್ಯಗಳಲ್ಲಿ ಸುತ್ತುತ್ತಿರುವ ಜಗತ್ತಿನ ಸ್ಥಿತಿಯೊಂದನ್ನು ನಿರ್ಮಾಣ ಮಾಡುತ್ತದೆ. ನೋಡುತ್ತಿರುವ ಪ್ರೇಕ್ಷಕನಲ್ಲಿ ಯಾವ ಘಟನೆ ನಡೆಯುತ್ತಿದೆ ಎಂಬುದೇ ತಿಳಿವಿಗೆ ಬರುವುದಿಲ್ಲದನ್ನು ಕಂಡು ಪ್ರೇಕ್ಷಕ ಅಸಂಬದ್ಧ ನೋಡುಗನಾಗುತ್ತಾನೆ. ಆಗ ನೋಡುಗ ತನ್ನ ಮಿದುಳಿಗೆ ಹೆಚ್ಚಿನ ಕಸರತ್ತನ್ನು ಕೊಡಬೇಕಾಗುತ್ತದೆ.

'ಯುಮಳ ಪ್ರಶ್ನೆ' ನಾಟಕದಲ್ಲಿ ನಡೆಯುವ ಕ್ರಿಯೆಗಳು ಒಂದಕ್ಕೊಂದು ಪೂರಕವಾಗಿರುವುದನ್ನು ಕಾಣಬಹುದು. ಸಾಂಪ್ರದಾಯಿಕ ನಾಟಕದಲ್ಲಿರುವಂತೆ ಒಂದು ಖಚಿತವಾದ ಚೌಕಟ್ಟಿನೊಳಗೆ ನಾಟಕದ ಕ್ರಿಯೆಗಳೆಲ್ಲವೂ ನಡೆಯುತ್ತವೆ. ನಾಟಕ ಸಂಪೂರ್ಣವಾಗಿ ಅಸಂಗತವೂ ಅಲ್ಲ. ಇತ್ತ ಸುಸಂಗತವೂ ಅಲ್ಲ. ಹೆಚ್ಚಾಗಿ ಸುಸಂಗತ ನಾಟಕದ ಲಕ್ಷಣಗಳು ತುಂಬಿಕೊಂಡಿವೆ.

'ಯುಮಳ ಪ್ರಶ್ನೆ' ವಾಸ್ತವ ಬದುಕಿನ ವರ್ತಮಾನದ ಘಟನೆಗಳ, ಮನುಷ್ಯನ ದುರಂತ ಸ್ಥಿತಿಯನ್ನು ಭೂತ, ವರ್ತಮಾನ, ಭವಿಷ್ಯದ ಕಾಲಮಾನದ ಚೌಕಟ್ಟಿನಾಚೆಗೂ ಇಟ್ಟು ಪ್ರಶ್ನಿಸುತ್ತಾ ವಿಡಂಬಿಸುತ್ತದೆ. ಮಾನವನ ಅಸ್ತಿತ್ವದಲ್ಲಿರುವ ದುರಂತ ಸ್ಥಿತಿಯನ್ನು ಸೃಜನಾತ್ಮಕ ಕಲಾಕೃತಿಯ ಸಂದರ್ಭದಲ್ಲಿ ಕಾಣಿಸುವ ಪ್ರಯತ್ನ ನಾಟಕಕಾರರದು.

ಈ ನಾಟಕವನ್ನು ಮೂರು ದೃಷ್ಟಿಕೋನಗಳಿಂದ ವಿಶ್ಲೇಷಿಸಬಹುದು.

೧. ನಾಟಕದಲ್ಲಿನ ವಾಸ್ತವತೆ
೨. ನಾಟಕದಲ್ಲಿನ ವೈಚಾರಿಕತೆ
೩. ನಾಟಕದಲ್ಲಿನ ಸಾಂಕೇತಿಕತೆ.

ನಾಟಕವನ್ನು ಹೆಚ್ಚಾಗಿ ಸಾಂಕೇತಿಕತೆಯ ಮೂಲಕವೇ ನೋಡಬಹುದು.

ನಾಟಕದ ಆರಂಭದಲ್ಲಿ ಸ್ಥಾವರ ಸ್ವರೂಪದಲ್ಲಿ ಬಿದ್ದಿರುವ ಶರೀರವೊಂದು ಕಂಡುಬರುತ್ತವೆ. ಜಡರೂಪದಲ್ಲಿ ಬಿದ್ದಿರುವ ಶರೀರ ಭಾರತದ ಸಂಕೇತವಾಗಿ ಬಂದಿದೆ. ನಂತರ ನಿಂತುಹೋದ ಬೈಕೊಂದನ್ನು ಅದರ ಸವಾರನೊಬ್ಬ ದೂಡುತ್ತಿರು

ವುದರ ಚಿತ್ರವಿದೆ. ಒಬ್ಬ ಬೈಕಿನ ಮೇಲೆ ಕುಳಿತಿದ್ದಾನೆ. ಮತ್ತೊಬ್ಬ ದೂಡುತ್ತಿದ್ದಾನೆ. ಈ ಚಿತ್ರ ಒಂದು ಕೆಲಸ ವ್ಯಕ್ತಿಯಿಂದ ಸಾಧ್ಯವಿಲ್ಲ, ಸಮಷ್ಟಿಯಿಂದ ಸಾಧ್ಯ ಎಂಬ ಅರ್ಥವನ್ನು ನೀಡುತ್ತದೆಂಬ ಭಾವನೆ. ಇಬ್ಬರೂ ವ್ಯಕ್ತಿಗಳು ಭಾರತೀಯ ಸಂಸ್ಕೃತಿಯ ಪರಂಪರೆಯನ್ನು ಪ್ರತಿಬಿಂಬಿಸುವ ಸಂಕೇತವಾಗಿ ಅವರು ಧರಿಸಿರುವ ಬಟ್ಟೆಗಳು ಹೇಳುತ್ತವೆ. ದೂಡುತ್ತಿರುವ ವ್ಯಕ್ತಿ ಬೈಕನ್ನು ನಿಲ್ಲಿಸಿ, ಗಹಗಹಿಸಿ ನಗುವುದು ಅಪಹಾಸ್ಯದ ಸಂಕೇತವಾಗಿದೆ. ಈ ಬೈಕನ್ನು ಮುಂದೆ ಸರಿಪಡಿಸಲು ಸಾಧ್ಯವೇ ಇಲ್ಲವೆನ್ನುವಂತಹ ಅರ್ಥವನ್ನು ಒಳಗೊಂಡಿದೆ. 'ನಗು' ನಗುವಾಗದೆ ಭಾರತೀಯ ಸಂಸ್ಕೃತಿಯೇ ಅನ್ಯರ ಅಪಹಾಸ್ಯಕ್ಕೆ ಒಳಗಾಗಿರುವಂತೆ ಭಾಸವಾಗಿ ಧ್ವನಿ ಪರಂಪರೆಯೊಂದನ್ನು ನಿರ್ಮಿಸುತ್ತದೆ.

ಬೈಕನ್ನು ಸ್ಟಾರ್ಟ್ (ಚಾಲ್ತಿ) ಮಾಡಲು ಪ್ರಯತ್ನ ಮಾಡುತ್ತಾ ಮಾತನಾಡುವ ರಮೇಶನ ಮಾತು 'ಇಂಡಿಯನ್ ಮೇಕೊ' ಎಂದು ಅದನ್ನು ಪ್ರಜ್ಞಾ ಪೂರ್ವಕವಾಗಿ ಕರೆದಿರುವುದನ್ನು ಚಿಂತಿಸಿ ನೋಡಿದರೆ ಈ ರೀತಿಯಲ್ಲಿ ಕರೆಯುತ್ತಲೇ ಯಾವುದೋ ಬಂದು ಹಂತದೊಳಗೆ ನಿಂತು ಬಿಟ್ಟಿರುವ ಭಾರತೀಯ ಸಂಸ್ಕೃತಿಯ ಒಳ ಪದರದ ಜಡ ಸ್ವರೂಪವನ್ನು ಆ ಬೈಕಿನ ಮೂಲಕವಾಗಿ ರಮೇಶ ವಿಶ್ಲೇಷಿಸುತ್ತಾ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತಿರುವುದು ಕಂಡು ಬರುತ್ತದೆ.

ಹೇಮಂತನಿಗೆ ಭಾರತೀಯ ಮೂಲವಾದುದೆಲ್ಲದರ ಬಗ್ಗೆ ಅಭಿಮಾನ, ಗೌರವ ಇದೆ. ತನ್ನ ಇಂಡಿಯನ್ ಬೈಕ್ ಅರ್ಧದಾರಿಯಲ್ಲಿ ಕೈಕೊಟ್ಟು ನಿಂತಾಗ, ಯಾವ ಗಾಡಿ ಇವನನ್ನು ತನ್ನ ಸ್ನೇಹಿತನನ್ನು ಹೊತ್ತು ಸಾಗಬೇಕಿತ್ತೋ, ಅದೇ ಗಾಡಿಯನ್ನು ತಾನೀಗ ದೂಡಿಕೊಂಡು ಸಾಗಬೇಕಾದ ಪರಿಸ್ಥಿತಿಯಲ್ಲಿ ಸ್ನೇಹಿತ ರಮೇಶನಿಗೆ ಭಾರತೀಯ ಮೂಲದಲ್ಲಿ ಉತ್ಪನ್ನವಾದ ಈ ಬೈಕಿನ ಮೇಲೆ ಮೇಲ್ನೋಟಕ್ಕೆ ಅಸಹನೆ, ಸಿಟ್ಟು ಇರುವುದನ್ನು ಕಾಣಬಹುದು. ಹೇಮಂತನಿಗೆ ಅಸಹನೆಯ ಬದಲು ಸಹನಾ ಭಾವವೇ ಇರುವುದು ಕಂಡು ಬರುತ್ತದೆ.

ಶರೀರವೊಂದು ಸ್ಥಾವರ ರೂಪದಲ್ಲಿ ಬಿದ್ದಿರುವುದಕ್ಕೂ, ಸ್ವಲ್ಪ ದೂರದಲ್ಲೇ 'ಇಂಡಿಯನ್' ಬೈಕ್ ನಿಲ್ಲುವುದಕ್ಕೂ ಅವಿನಾಭಾವ ಸಂಬಂಧವೊಂದು ಇರುವುದನ್ನು ಕಾಣಬಹುದಾಗಿದೆ.

"ಈ ಇಂಡಿಯನ್ ಮೇಕನ್ನು ತಗೊಳ್ಳಬೇಡ ಅಂತ ಇದರ ಬೆನ್ನುಹತ್ತಿದವನು ಹುಚ್ಚನಾಗುತ್ತಾನೆ ಅಂತ ಸಾವಿರ ಸಾರಿ ಬಡಕೊಂಡೆ ನೀನು ಕೇಳಬೇಕಲ್ಲ" ಎನ್ನುವ ಮಾತುಗಳಲ್ಲಿ ಇಂಡಿಯನ್ ಬೈಕಿನ ಬಗೆಗಿರುವ ನಿರಾಸೆಯನ್ನು ಅಭಿವ್ಯಕ್ತಿಪಡಿಸುವುದನ್ನು ಕಾಣಬಹುದು. ಭಾರತೀಯ ಸಂಸ್ಕೃತಿಯ ಜಟಿಲ ಪ್ರಶ್ನೆಗಳೆಲ್ಲಾ ಸ್ಟಾರ್ಟ್ ಆಗದ ಇಂಡಿಯನ್ ಬೈಕಿನಂತೆಯೇ. ಏನೇ ಆಗಲಿ ಇದನ್ನು ಸರಿಪಡಿಸೇ ತೀರುತ್ತೇನೆಂದು

ಆತ್ಮವಿಶ್ವಾಸದಿಂದ ಹೋದವನು, ಅಂದರೆ ಚಲನಶೀಲತೆಯನ್ನೇ ಕಳೆದುಕೊಂಡು ಜಡ ಸ್ವರೂಪವನ್ನು ಮೈಗೂಡಿಸಿಕೊಂಡು, ಸಂಸ್ಕೃತಿಯ ಬಗೆಹರಿಯದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯುತ್ತೇನೆಂದು ಇವೆಲ್ಲದರ ಬೆನ್ನುಹತ್ತಿ ಹೋಗುವುದೆಂದರೆ ಬಿಸಿಲುಗುದುರೆಯನ್ನು ಹಿಡಿಯಲು ಹೊರಟಂತೆ ಹುಚ್ಚರಾಗುತ್ತಾರೆ. ಈ ಮಾತುಗಳ ಹಿನ್ನೆಲೆಯಲ್ಲಿ ಭಾರತೀಯ ಸಮಾಜದ ಹಣೆಬರಹವನ್ನು ಕಾಣಬಹುದು.

ರಮೇಶನ ಈ ಮೇಲಿನ ಅಭಿಪ್ರಾಯಕ್ಕೆ ಹೇಮಂತನದು ವಿರುದ್ಧವಾದ ನಿಲುವು. ಅದಕ್ಕೆ ಹೇಮಂತ ಹೇಳುವ ಮಾತುಗಳು "ಯಾರಾದರೂ ಕೊಂಡು ಪ್ರೋತ್ಸಾಹಿಸಿದರೆ ತಾನೇ ಇವತ್ತಲ್ಲದಿದ್ದರೂ ನಾಳೆಯಾದರೂ ಒಳ್ಳೆಯದನ್ನು ಮಾಡುವುದು ?" ಎನ್ನುವ ಮಾತುಗಳಲ್ಲಿ ಕಟ್ಟಾ ದೇಶಪ್ರೇಮಿಯೊಬ್ಬನ ಚಿತ್ರವನ್ನು ಕಾಣುತ್ತೇವೆ. ಸ್ವದೇಶಿ ವಸ್ತುವಿನ ಮೇಲಿರುವ ವ್ಯಾಮೋಹಕ್ಕೆ, ಅದರ ಬಗೆಗಿರುವ ಗೌರವವನ್ನು ಕಾಣುತ್ತಾ, ಒಂದು ರೀತಿಯಲ್ಲಿ ಗಾಂಧಿ ವಾದವನ್ನು ಅನಾವರಣಗೊಳಿಸುವವನಂತೆ ಕಂಡು ಬರುತ್ತಾನೆ.

ರಮೇಶನಿಗೆ ಹೇಮಂತನ ಈ ಗುಣಗಳೆಲ್ಲಾ "ಕ್ಷುಲ್ಲಕ ಆದರ್ಶದ ದೇಶಭಕ್ತಿ"ಯ ಹಾಗೆ ಕಂಡು ರೇಗುತ್ತದೆ. ಹೇಮಂತನಿಗೆ ಭಾರತೀಯ ಉತ್ಪನ್ನಗಳ ಬಗ್ಗೆ ಎಷ್ಟು ಅಸಹನೆಯೆಂದರೆ ಮುಖಕ್ಷೌರ ಮಾಡಿಕೊಳ್ಳಲು ತಯಾರಿಸುವ ಭಾರತೀಯ ಬ್ಲೇಡಿನ ಗುಣಮಟ್ಟವೂ ಅತ್ಯಂತ ಕಳಪೆಮಟ್ಟದ್ದು ಎಂಬ ಅರಿವಿದೆ. ಇಂತಹ ವಸ್ತುಗಳನ್ನು ಹೇಮಂತನ ವಾದದಂತೆ ಕೊಂಡು ಪ್ರೋತ್ಸಾಹಿಸಿದ್ದೇ ಆದರೆ ದಿನದಿನಕ್ಕೂ ಕಳಪೆ ವಸ್ತುಗಳ ಉತ್ಪನ್ನಕ್ಕೆ ಕುಮ್ಮಕ್ಕು ಕೊಟ್ಟಂತಾಗುತ್ತದೆ ಎಂಬುದು ಅವನ ನಿಲುವು. ನಮ್ಮ ದೇಶ ಇತರ ರಾಷ್ಟ್ರಗಳಂತೆ ವೈಜ್ಞಾನಿಕವಾಗಿ ಉತ್ತಮ ಗುಣಮಟ್ಟದ ವಸ್ತುಗಳನ್ನೇಕೆ ಉತ್ಪಾದಿಸುತ್ತಿಲ್ಲ ಎಂಬುದರ ಬಗ್ಗೆ ಸಿಟ್ಟು. ಬಂಡವಾಳ ಶಾಹಿ ವ್ಯವಸ್ಥೆ ಕಳಪೆದರ್ಜೆಯ ವಸ್ತುಗಳನ್ನು ಉತ್ಪಾದಿಸಿ ಮತ್ತಷ್ಟು ಬಂಡವಾಳ ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಪ್ರಸ್ತುತ ಭಾರತೀಯ ಸ್ಥಿತಿಯು ಇದೇ ತಾನೆ ?

'ಸ್ವಯಂಚಾಲಿತ' ಯಂತ್ರದಿಂದ ಕೂಡಿದ 'ಇಂಡಿಯನ್' ಬೈಕನ್ನು ದೂಡುತ್ತಾ ಹೋಗುವಾಗ ರಮೇಶ ಕಲ್ಪನೆ ಮಾಡಿಕೊಳ್ಳುವ ಚಿತ್ರದಲ್ಲೇ ಸಮಕಾಲೀನ ಯಂತ್ರ ನಾಗರೀಕತೆಯನ್ನು ಪೌರಾಣಿಕ ಪ್ರತಿಮೆಯೊಂದರ ಮುಖಾಂತರ ವಿಡಂಬನೆಗೆ ನಾಟಕಕಾರರು ಒಳಪಡಿಸಿರುವುದನ್ನು ಕಾಣಬಹುದು. ಹೇಮಂತ ಕೃಷ್ಣನಾಗಿ, ರಮೇಶ ಅರ್ಜುನನಾಗಿ, ಇಂಡಿಯನ್ ಬೈಕ್ ರಥವಾಗಿ, ಈ ಜೀವನರಂಗದ ಭೂಮಿಯೇ ಕುರುಕ್ಷೇತ್ರವಾಗಿ ಕಂಡು ಬರುತ್ತದೆ. ಇಲ್ಲಿ ಲೇಖಕರ ಪ್ರತಿಭೆ ಅತ್ಯದ್ಭುತವಾಗಿ ಕೆಲಸ ಮಾಡಿದೆ.

ರಮೇಶ ಕರೆಯುವ ಇಂಡಿಯನ್ ಬೈಕ್‌ನ ಹೆಸರು 'ಸ್ವಯಂಚಾಲಿತ' ಯಂತ್ರ. ಸ್ವಯಂಚಾಲಿತ ಯಂತ್ರವನ್ನು ಚಾಲ್ತಿ ಮಾಡಿದರೆ ಸಾಕು. ನಾವು ತೋರಿಸುವ ಮಾರ್ಗಕ್ಕೆ ನಮ್ಮ ಗುರಿಗೆ ನಿಮ್ಮನ್ನು ತಲುಪಿಸುವ ಕಾರ್ಯ ಮಾಡಬೇಕು. ಆದರೆ ಅದು ಇಲ್ಲಿ ವಿರುದ್ಧವಾಗಿ, ಬೈಕನ್ನೇ ಮಾನವ ಶಕ್ತಿ ದೂಡಿಕೊಂಡು ಹೋಗಬೇಕಾಗಿರುವುದರಿಂದ, ಹೆಸರಿನಲ್ಲೇ ವಿಡಂಬನೆ ಇರುವುದನ್ನು ನೋಡುತ್ತೇವೆ. ಅದರಲ್ಲೂ ಇದು ಇಂಡಿಯನ್ ಸ್ವಯಂಚಾಲಿತ ಬೈಕ್, ಧರ್ಮದ ಕೆಲಸವೂ ಮೂಲತಃ ಇದೇ ಆಗಬೇಕು. ನಾವು ಕಂಡುಕೊಂಡ, ಕಾಣಬೇಕಾಗಿರುವ, ಸತ್ಯದ ಕಡೆಗೆ ಇತರ ಪ್ರೇರಕ ಶಕ್ತಿಗಳೇ ಸಹಾಯವಿಲ್ಲದೆ ಮನುಷ್ಯನನ್ನು ತನ್ನ ಸ್ವಯಂ 'ಚಾಲಿತ' ಶಕ್ತಿಯಿಂದ ಕೊಂಡೊಯ್ಯಬೇಕು. ಈ ರೀತಿ ಆಗದಿದ್ದರೆ ಧರ್ಮವೂ ಸಹ ತನ್ನ ಚಲನೆಯ ಕೀಲುಗಳನ್ನು ಮುರಿಮಕೊಂಡು ಪರಿವರ್ತನ ಶೀಲತೆಗೆ ಸಿಲುಕದೆ ನಿಂತು ಬಿಟ್ಟು ಲಕ್ವ ಬಡಿಸಿಕೊಂಡ ಸ್ಥಿತಿಯಲ್ಲಿ ನಿಂತುಬಿಡಬಹುದು. ಸ್ವಯಂಚಾಲಿತ ಬರೇ ಹೆಸರಿನಿಂದಷ್ಟೇ ಚಾಲಿತವಾಗಿ ಸವಾರನಿಂದಲೇ ದೂಡಿಸಿಕೊಂಡು ಚಾಲನೆಯಲ್ಲಿರುವ ಇಂಡಿಯನ್ ಬೈಕ್‌ನ ಹಾಗೆಯೇ ನಮ್ಮ ಸಮಕಾಲೀನ ಭಾರತೀಯ 'ಸಮಾಜ' ಧರ್ಮವೂ ನಿಂತು ಬಿಟ್ಟಿದೆ. ಜಾತಿ ವ್ಯವಸ್ಥೆಯೂ ಚಲಿಸದೆ ಭಾರತದಲ್ಲಿ ಮಡುಗಟ್ಟಿರುವುದನ್ನು ಕಾಣಬಹುದು.

ನಾಟಕಕಾರರು ಎಲ್ಲೋ ಒಂದು ಕಡೆ ನಿಂತುಹೋದ ಬದುಕಿನ ಚಲನಶೀಲತೆಯನ್ನು ಪೌರಾಣಿಕ ಪ್ರತಿಮೆಯ ಮೂಲಕ ಅನಾವರಣಗೊಳಿಸುತ್ತಾ, ಸಮಕಾಲೀನ ಬದುಕಿನ ವಸ್ತುಸ್ಥಿತಿಯ ಅರಿವು ಮಾಡಿಕೊಡುತ್ತಿದ್ದಾರೆ.

ರಮೇಶ ಕಲ್ಪನೆ ಮಾಡಿಕೊಳ್ಳುವುದು ಸ್ವಯಂಚಾಲಿತ ಬೈಕ್ ದ್ವಾಪರ ಯುಗಕ್ಕೂ ಮೊದಲೇ ಇದ್ದಿದ್ದರೆ ಕುರುಕ್ಷೇತ್ರ ಯುದ್ಧದಲ್ಲಿ ಕೃಷ್ಣ ಸವಾರ ಅರ್ಜುನ ಅದನ್ನು ನಟ್ ಬೋಲ್ಟ್ ಹಿಡಿದುಕೊಂಡು ದೂಡಬೇಕಾಗಿತ್ತು. ಕೃಷ್ಣ ಎಷ್ಟೇ ಸ್ಟಾರ್ಟ್ ಮಾಡಿದರೂ ಗಾಡಿ ಚಾಲನೆ ಗೊಳ್ಳುವುದಿಲ್ಲ, ಇವರ ಪಾಡು ನೋಡಲಾರದೆ ಕೌರವ, ಪಾಂಡವರೆಲ್ಲಾ ರಥದೂಡಲು ಇವರ ಸಹಾಯಕ್ಕೆ ಬರುತ್ತಾರೆ. ಅದು ಸ್ಪಾನರ್, ಸ್ಕ್ರೂಡ್ರೈವರ್ ಸಮೇತರಾಗಿ, ಆಗ ರಥ 'ನೈನಂ ಛಿಂದಂತಿ ಶಸ್ತ್ರಾಣಿ ನೈನಂದಹತಿ ಪಾವಕಃ' ಎಂದು ಹೇಳುತ್ತದೆ. ನನ್ನನ್ನು ಶಸ್ತ್ರಗಳಿಂದ ಛಿದ್ರಗೊಳಿಸಲಾಗುವುದಿಲ್ಲ. ಯಾವ ಬೆಂಕಿಯೂ ಸುಡಲಾರದು ಎಂದು ಸ್ಥಾವರದಂತೆ ನಿಂತು ಬಿಟ್ಟರೆ ಕೌರವ ಪಾಂಡವರು ಮುಖಕ್ಕೆ ಕರಿಗ್ರೀಸ್ ಬಳಿದುಕೊಂಡು ನಿಂತುಕೋಬೇಕಾಗಿತ್ತೆಂದು ಕಾಲವನ್ನು ಸ್ವಲ್ಪ ಹಿಂದುಮಾಡಿ ಅವಲೋಕಿಸಿದರೆ, ವಾಸ್ತವಕಾಲದ ವರ್ತಮಾನದ ಸ್ಥಿತಿಯ ಪಾಡನ್ನು ರಮೇಶ ಕಲ್ಪನೆ ಮಾಡಿಕೊಳ್ಳುವ ಸುಂದರ Flash back Technique ಮುಖಾಂತರ ಸಮಕಾಲೀನ ಭಾರತೀಯ ಸಮಾಜದ ಚಲನೆ ಹಿಮ್ಮುಖ ಚಲನೆಯಲ್ಲಿದೆ ಎಂಬುದರ ಚಿತ್ರಣವನ್ನು ಗ್ರಾಹ್ಯವಾಗುವಂತೆ

ಮಾಡುವುದಕ್ಕೆ ಈ ಮಾತುಗಳಲ್ಲಿ ಸಾಧ್ಯವಾಗಿದೆ. ರಮೇಶನ ಚಿಕಿತ್ಸಕ ದೃಷ್ಟಿಕೋನ ಅವನ ವಾಸ್ತವವಾದಿ ದೃಷ್ಟಿಕೋನವನ್ನು ತಿಳಿಸುತ್ತದೆ. ಅವನ ಪ್ರಕಾರವೇ ನೋಡುವುದಾದರೆ 'ಸ್ವಧರ್ಮೇನಿಧನಂ ಶ್ರೇಯಃ' ಅವನಿಗೆ ಯಾವುದು ತನ್ನ ಧರ್ಮ ಎನ್ನಿಸಿಕೊಳ್ಳುತ್ತದೆ ಎಂದರೆ ಯಾವುದು 'ಶ್ರೇಯಸ್ಸನ್ನು ತಂದುಕೊಡುತ್ತದೋ ಅದು ಸ್ವಧರ್ಮ' ಎನ್ನುವಂತಹ ಮಾತುಗಳು ಹೇಮಂತನು ಸ್ವಧರ್ಮ, ಸ್ವದೇಶಿ ವಸ್ತು ಎಂದು ತನಗೆ ಕಿರಿಕಿರಿಯನ್ನು ಒಡ್ಡಿರುವ ಇಂಡಿಯನ್ ಬೈಕ್‌ಗೆ ಶ್ರೇಯ ಎಂದೂ ಗಂಟು ಬಿದ್ದಿರುವ ಮನೋಭಾವಕ್ಕೆ ವಿರುದ್ಧವಾದುದು.

ಇಬ್ಬರು ಹೋಗುತ್ತಿರುವುದು ಹೆಣ್ಣು ನೋಡುವುದಕ್ಕಾಗಿ, ಎರಡು ಜೀವಗಳ ಬೆಸುಗೆಗಾಗಿ ಹೋಗುವುದನ್ನು ಕಾಣಬಹುದು. ಇದರ ಹಿನ್ನಲೆ ಎಂಬಂತೆ ಸ್ಥಾವರ ಸ್ವರೂಪಿಯಂತೆ ಬಿದ್ದಿರುವ ಶರೀರ. ಅದರ ಸ್ವಲ್ಪದೂರದಲ್ಲೇ ಕೆಟ್ಟು ನಿಂತು ಹೋಗುವ ಬೈಕ್, ಇವೆಲ್ಲವುಗಳ ಹಿನ್ನಲೆಯಾಗಿ ಹೆಣ್ಣು ಆಗದಿರುವುದರ ಸಂಕೇತವಾಗಿ ಮೂಡಿಬಂದಿದೆ. ರಮೇಶನಿಗೆ ಸಂಸಾರದಲ್ಲಿ ನಂಬಿಕೆ ಇರುವಂತೆ ಕಂಡು ಬರುವುದಿಲ್ಲ. ಆ ಸಂಸಾರ ಯುದ್ಧರಂಗವೆಂಬಂತೆ ಕಾಣುತ್ತಿದೆ. ಪ್ರೀತಿಸುವ ಹುಡುಗಿಯನ್ನು ಮದುವೆಯಾಗುವ ಸ್ವಾತಂತ್ರ್ಯವೂ ಈ ಸಮಾಜದ ಹೆಣ್ಣುಗಂಡುಗಳಿಗಿಲ್ಲ ಎಂಬುದು ರಮೇಶನ ನಿಲುವು. ಸಂಸಾರವೇ ಕುರುಕ್ಷೇತ್ರವಾಗಿ ಕಂಡಿರುವ ರಮೇಶನಿಗೆ ಜಾತಿ ಯಲ್ಲದ ಜಾತಿಯಲ್ಲಿ ಮದುವೆಯಾದವಳ ಕೂಡೆಬಾಳನ್ನು ನಡೆಸುವಾಗ ಆಗುವ ಮಾನಸಿಕ ಹಿಂಸೆಯ ತುಮುಲವನ್ನು ಪ್ರೇಕ್ಷಕರೆದುರು ಬಿಚ್ಚಿಡುತ್ತಾನೆ.

"ನಾ ಮದುವೆಯಾದ ಹೆಣ್ಣು ನಮ್ಮ ಜಾತಿಯೋಳಲ್ಲಾಂತ ಗೊತ್ತಾದ ಕೂಡಲೇ ಈ ಬಾಳಿನ ಕುರುಕ್ಷೇತ್ರದಲ್ಲಿ ನನ್ನ ಬಂಧು ಬಾಂಧವರೆಲ್ಲಾ ಮುಂದೆ ನಿಲ್ಲುವ ವೈರಿಗಳಯ್ಯಾ" ಎಂದು ಹೇಳುವ ಮಾತು ಕೇವಲ ಹೇಮಂತನಿಗೆ ಸೀಮಿತವಾದದಲ್ಲ. ಇಡೀ ಸಮುದಾಯಕ್ಕೆ ಸಮಾಜದ ಮುಂದಿಡುವ ಪ್ರಶ್ನೆಯಾಗಿದೆ. ಭಾರತೀಯ ಸಮಾಜದಲ್ಲಿ ವ್ಯಾಪಿಸಿಕೊಂಡಿರುವ ಜಾತಿಯ ಮಹತ್ವವನ್ನು ತಿಳಿಸುತ್ತಾ, ಮೂಢ ನಂಬಿಕೆ, ಸಂಪ್ರದಾಯಗಳ ಮೌಲ್ಯಗಳಲ್ಲೇ ಕೊಳೆಯುತ್ತಿರುವ ಭಾರತೀಯ ಸಂಸ್ಕೃತಿ ಯನ್ನು ಕಂಡಾಗ ರಮೇಶನಿಗೆ ಅಸಹನೆ ತಾನೇ ತಾನಾಗಿ ಹುಟ್ಟುತ್ತದೆ. ಈ ಭಾರತೀಯ ಸಮಾಜದ ಚೌಕಟ್ಟಿನ ಪಂಜರದ ಬಂಧನದೊಳಗೆ ಬದುಕುತ್ತಿರುವ ಮಾನವನಿಗೆ ಪ್ರೇಮವೆಂದರೇನು ? ಕಾಮವೆಂದರೇನು ? ಎಂಬುದೇ ತಿಳಿಯುವುದಿಲ್ಲ ಎಂದು ಸಿಟ್ಟಿನಿಂದ ನುಡಿಯುವ ಮಾತು ಮಾರ್ಮಿಕವಾಗಿವೆ.

ಜಡ ಸ್ವರೂಪದಲ್ಲಿರುವ ಭಾರತೀಯ ಧರ್ಮ ಸ್ವಲ್ಪ ಎಚ್ಚರವಾಗಬೇಕಾದರೆ ಸರಾ ಸರಿ ಐವತ್ತು ಬಾರಿಯಾದರೂ ಒಡೆಯಬೇಕು ಎನ್ನುವ ಮಾತು ಕೇವಲ ಬೈಕಿಗೆ ಸೀಮಿತವಾಗಿರದೆ ಇಡೀ ಭಾರತೀಯ ಧರ್ಮಕ್ಕೆ ಒದೆಯ ಬೇಕಾಗಿರುವ ಸೂಕ್ಷ್ಮತೆ ಯನ್ನು ಸಂಕೇತದ ಮೂಲಕ ಲೇಖಕರು ಹೇಳುತ್ತಾರೆ.

ರಣಬಿಸಿಲು ಬದುಕಿನ ಸಂದಿಗ್ಧ ಪರಿಸ್ಥಿತಿಗೆ ಸಂಕೇತವಾಗಿದೆ. ನೆಳಲು ಇಲ್ಲದಿರುವುದು ಭಾರತೀಯ ಸಮಾಜದ ಪರಿಸರದಲ್ಲಿ ಸಮಾನ ಜೀವಿಗಳಂತೆ ಬಾಳುವವರಿಗೆ ನೆಲೆ ಇಲ್ಲದ ಸ್ಥಿತಿಯನ್ನು ಸೂಚಿಸುತ್ತದೆ. ಹೇಮಂತ ಆದರ್ಶದಲ್ಲಿ ಯಾವುದು ಸರಿ ತಪ್ಪು ಎನ್ನುವ ಅರಿವೇ ಇಲ್ಲದವನಂತೆ ರಮೇಶನಿಗೆ ಕಾಣುತ್ತಾನೆ. ಹೇಮಂತ ಬುದ್ಧಿಜೀವಿಯಂತೆ ಕಂಡರೂ ವಾಸ್ತವ ಬದುಕಿನ ಒಳ ಪದರದ ಎಳೆಎಳೆಯನ್ನು ಅರ್ಥ ಮಾಡಿಕೊಳ್ಳದೆ ಕೇವಲ ಬದುಕಿನ ಹೊರಮೈಯನ್ನು ನೋಡಿರುವ ಮುಗ್ಧನಂತೆ ಕಂಡು ಬರುತ್ತಾನೆ. ರಮೇಶನಿಗೆ ಇವೆಲ್ಲವುಗಳ ಆಚೆ ನಿಂತು ಯೋಚಿಸುವ ಸೂಕ್ಷ್ಮ ಗ್ರಾಹ್ಯ ಪ್ರಜ್ಞೆ ಇರುವುದು ಕಂಡು ಬರುತ್ತದೆ.

'ಕಡಲೆಕಾಯಿ'ಯನ್ನು ಮಾರುವವನು ಬಂದು ಹೋಗುವುದರ ಹಿನ್ನೆಲೆಯಾಗಿ, ಜೀವನದಲ್ಲಿ ಸಮಸ್ಯೆ ಎಂಬ ಕವಚವನ್ನು ಕಿತ್ತು ಹೊರ ಬರಬೇಕಾಗಿದೆ. ಜೀವನವನ್ನು ಕಡಲೆಕಾಯಿಗೆ ಸಂಕೇತವಾಗಿ ಬಳಸಿಕೊಂಡಂತೆ ಕಾಣುತ್ತದೆ. ಪೊರೆಯನ್ನು ಕಳಚಿದಾಗಲೇ ಬೀಜ ಬರಲುಸಾಧ್ಯ, ಸಮಸ್ಯೆಗಳನ್ನು ಬಿಡಿಸದೆ ಕೇವಲ ಕಡಲೆಕಾಯಿಯನ್ನು ಸಿಪ್ಪೆಸುಲಿಯದಂತೆ ತಿಂದರೆ ಹೇಗೆ ಸಮಸ್ಯೆಗಳು ಮತ್ತಷ್ಟು ಉದ್ಭವವಾಗುತ್ತವೋ ಹಾಗೆಯೇ ಜೀವನವನ್ನು ಅರ್ಥಮಾಡಿಕೊಳ್ಳದಿದ್ದರೆ ಎಂಬುದನ್ನು ಸಂಕೇತವಾಗಿ ಬಳಸಿಕೊಂಡಂತೆ ತಿಳಿಯುತ್ತದೆ.

ಹೇಮಂತ ರಮೇಶರ ಹೋರಾಟವನ್ನು ಕಂಡು ಹತ್ತಿರಕ್ಕೆ ಬಂದು ಬೈಕ್‌ನ ಬಗ್ಗೆ ಮಾತನಾಡುವ ದಾರಿಹೋಕನು ಪಾಶ್ಚಾತ್ಯ ಸಂಸ್ಕೃತಿಯ ಸಂಕೇತಕ್ಕೆ ಪ್ಯಾಂಟ್, ಕೋಟನ್ನು ಧರಿಸಿದ್ದಾನೆ. ದಾರಿಹೋಕನ ಮಾತುಗಳಲ್ಲಿಯೂ ನಿಂತು ಹೋದ ಬೈಕಿನ ಮೂಲಕ ಅದು ನಿಂತುಹೋದ ಕಾಲದ ನಾಡಿಮಿಡಿತದಂತೆ ನಿಂತುಹೋಗಿ ಜಡ್ಡಾಗಿರುವ ಸಮಕಾಲೀನ ಭಾರತೀಯ ಸಂಸ್ಕೃತಿಯ ಬಗೆಗಿನ ಹಣೆಬರಹದ ಮಂತ್ರಗಳಂತಿರುವುದನ್ನು ಅವನ ಮಾತುಗಳ ಮುಖಾಂತರ ಗ್ರಹಿಸಬಹುದಾಗಿದೆ.

"ಒಹೋ ಇಂಡಿಯನ್ ಮೇಕೊ ಈ ಮೋಟಾರು ಬೈಸಿಕಲ್ಲು! ಈ ಬೈಸಿಕಲ್ಲು ಯಾವಾಗಲೂ ಹೀಗೆ ಸ್ವಾಮಿ, ದಾರೀ ಮೇಲೆ ದೂಡಿಸಿಕೊಂಡು ಹೋಗುವುದನ್ನು ನೋಡಿದ್ದೇನೆಯೇ ಹೊರತು ಹತ್ತಿಕುಳಿತವರನ್ನು ಹೊತ್ತು ಒಯ್ದಿದ್ದು ನಾನು ನೋಡೇ ಇಲ್ಲ" ಈ ಮಾತುಗಳು ಬರೀ ಬೈಸಿಕಲ್ಲಿನ ಬಗ್ಗೆ ಆಡುವ ಮಾತುಗಳಾಗದೆ, ಅದರ ಅಂತರ್ಯದಲ್ಲಿರುವ ಅದರಲ್ಲೂ ಇಷ್ಟವಿದ್ದವರು ಮಾತ್ರ ಉದಾ: ಹೇಮನಂತಹ ದೇಶಪ್ರೇಮಿಗಳು ದೂಡಿಕೊಂಡು ಹೋಗಬೇಕೆನ್ನುವ : ಇಂತಹ ಸನ್ನಿವೇಶದಲ್ಲೂ ಇಂತಹ ಬೈಕನ್ನು ದೂಡಿಕೊಂಡು ಹೋಗುವ ಮನೋಭಾವದ, ರಾಷ್ಟ್ರಪ್ರೇಮದ ವ್ಯಾಮೋಹ ಇರುವವರಿಗೆ ರಮೇಶನಂತಹ ವಾಸ್ತವವಾದಿಗಳಾಗಿ ಕಂಡು ಬರುವವರಿಗೆ, ದಾರಿಹೋಕರಂತ ಸಾಮಾನ್ಯ ಮನುಷ್ಯರಿಗೂ ಪ್ರತಿಭಟನೆ ಅಸಹನೆ

ಇದೆ ಎಂಬುದನ್ನು ಕಾಣಬಹುದಾಗಿದೆ. ಬೈಸಿಕಲ್ಲು ನಾಗರೀಕತೆಯ ಸಂಕೇತ. ಪ್ರತಿನಿಧಿ. ಉತ್ತಮ ನಾಗರೀಕತೆಯ ಮುಖ್ಯ ಕರ್ತವ್ಯವೆಂದರೆ ಮನುಷ್ಯನನ್ನು ಪ್ರಗತಿಯತ್ತ ಕೊಂಡೊಯ್ಯುವುದು. ನಾಗರೀಕತೆಗೆ ಒಳಗಾಗಬೇಕಾಗಿದ್ದ 'ನಾಗರಿಕ' ಅದನ್ನು ದೂಡಿಕೊಂಡು ಹೋಗುವ ಪರಿಸ್ಥಿತಿ ಬಂದರೆ, ಅದು ನಿಜಕ್ಕೂ ನಾಗರಿಕತೆಯೊಂದರ. ಅದರ ಸುತ್ತಲೂ ಚಲನ ಶೀಲವಾಗಿರುವ 'ಸಮಕಾಲೀನ' ದುರಂತವನ್ನು ಅನಾವರಣಗೊಳಿಸುವುದನ್ನು ಗ್ರಹಿಸುತ್ತಾ ಹೋಗಬಹುದು.

ಛತ್ರಿಯಡಿಯಲ್ಲಿ ಬಂದು ಸೇರಿದ ನಂತರ ನಾಟಕದ ಸ್ವರೂಪ ಮತ್ತೊಂದು ಆಯಾಮದತ್ತ ಸಾಗುತ್ತದೆ. ಛತ್ರಿ ಆಸರೆಗೆ ಸಂಕೇತವಾಗಿ ಬಂದಿರುವಂತೆ, ದಡಿಯ ವ್ಯಕ್ತಿ ಇರುವ ಸಮಸ್ಯೆ ದೈತ್ಯಾಕಾರವಾಗಿರುವುದಕ್ಕೆ ಸಂಕೇತವೆಂಬಂತೆ ಬಂದಿದ್ದು, ಮತ್ತಷ್ಟು ಸಂದಿಗ್ಧತೆಗೆ ಪೂರಕವಾಗಿರುವುದನ್ನು ಕಾಣಬಹುದು. ಒಂದು ಸಮಸ್ಯೆಯನ್ನು ಬಿಡಿಸಲು ಹೋದರೆ ಮತ್ತೊಂದು ಸಮಸ್ಯೆ ಎದುರಾಗುವ ಸ್ಥಿತಿಯನ್ನು ಒಂದನೇ ಹಾದಿಹೋಕನು ಕಾಲು ಸುಟ್ಟಿಕೊಂಡ ಹಿನ್ನೆಲೆಯಲ್ಲಿ ನಾಟಕಕಾರ ತಿಳಿಸುತ್ತಾರೆ.

ಖಾಲಿಕೊಡವನ್ನು ತರುವ ಯುವತಿಯ ಮೂಲಕವಾಗಿ ಜೀವನ ಸಮಸ್ಯೆಯನ್ನು ಬಿಡಿಸಿಕೊಳ್ಳುವುದಕ್ಕಿಂತ ಪ್ರೇಮ ಕಾಮದ ಸಮಸ್ಯೆಯ ಸುಳಿಯಲ್ಲಿ ಸಿಲುಕಿಕೊಳ್ಳುವ ಮತ್ತೊಂದು ಪ್ರಶ್ನೆಯನ್ನು ಮುಂದಿಡುತ್ತಾರೆ. ಸ್ಥಾವರ ರೂಪದಲ್ಲಿ ಬಿದ್ದಿರುವ ಶರೀರವೊಂದು ಯಾರ ಗಮನಕ್ಕೂ ಬಾರದೆ, ಕೆಟ್ಟುನಿಂತ ಬೈಕ್, ಯುವತಿ ಮಾತ್ರ ಕಣ್ಣಿಗೆ ಕಾಣುತ್ತಿರುವುದು ವಿಪರ್ಯಾಸವೇ ಸರಿ. ಪ್ರಸ್ತುತ ಸಮಕಾಲೀನ ಯುವಕರ ಮನಸ್ಥಿತಿಯನ್ನು ಬಿಂಬಿಸುತ್ತದೆ. ಛತ್ರಿದಡಿಯನು ಗಾಡಿಯನ್ನು ಚಾಲು ಮಾಡುತ್ತೇನೆಂದು ಪ್ರಯತ್ನಿಸುವಾಗ ಬೈಕಿನ ಒಂದು ಭಾಗವೇ ಕಿತ್ತು ಸಮಸ್ಯೆ ಮತ್ತಷ್ಟು ಜಟಿಲವಾಗುತ್ತದೆ. ಹೇಮಂತನ ಮಾತಿಗೆ ಛತ್ರಿದಡಿಯ "ಮೊದಲೇ ಬಿದ್ದು ಹೋಗಿತ್ತೋ ಏನೋ" ಎಂದು ಹೇಳುವ ಮಾತು ನಮ್ಮ ನಾಗರೀಕತೆಯ ಬೆಳವಣಿಗೆ ಹಿಂದೆಯೇ ನಿಂತು ಹೋಗಿರುವಂತೆ ಕಂಡುಬರುತ್ತದೆ.

ಹೇಮಂತನ ಸಾಹಸದಿಂದ ಬೈಕ್ ಚಾಲುಗೊಂಡರೂ ಮತ್ತೊಂದು ಸಮಸ್ಯೆಗೆ ಹಿನ್ನೆಲೆಯಾಗಿ ಪೋಲೀಸನ ಆಗಮನದಿಂದ ನಾಟಕ ಮತ್ತೊಂದು ದಾರಿಯತ್ತ ಸಾಗುತ್ತದೆ. ಸಮಸ್ಯೆಗಳು ಮತ್ತೆ ಮತ್ತೆ ಹೇಗೆ ಉದ್ಭವಗೊಳ್ಳುತ್ತವೆ ಎಂಬುದನ್ನು ಪಾತ್ರ ಪಾತ್ರಗಳ ಮೂಲಕ ನೋಡಬಹುದು. ಸಂಸ್ಕೃತಿ ಚಾಲನೆಗೊಂಡರೂ. ನಾಗರೀಕತೆಯನ್ನು ಕಪಿಮುಷ್ಟಿಯಲ್ಲಿ ಹಿಡಿದಿರುವ ಅಧಿಕಾರ ವರ್ಗದ ದರ್ಪವನ್ನು ಪೇದೆಯ ಮೂಲಕವಾಗಿ ಅಭಿವ್ಯಕ್ತಪಡಿಸುತ್ತಾ ಜಡ ಸ್ವರೂಪದಲ್ಲಿರುವ ಶರೀರಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲದಂತೆ ಇದ್ದ ರಮೇಶ, ಹೇಮಂತರಿಗೆ ಈಗ ಸಂಬಂಧದ ಕೊಂಡಿ ಕೂಡಿಕೆಯಾಗುತ್ತದೆ. ಜಡ ಸ್ವರೂಪದ ಭಾರತೀಯ ಸಂಸ್ಕೃತಿಗೆ ಕಾರಣ ನಾವು, ನೀವು ಎನ್ನುವುದನ್ನು ಈ ಸಂದರ್ಭ ತೋರಿಸುತ್ತದೆ,

ಪೇದೆ ಕೇವಲ ತೊಡಕಿಗೆ ತೊಡಕನ್ನು ಪೋಣಿಸುವವನಂತೆ ಕಂಡುಬಾರದೆ, ಸಮಸ್ಯೆ ಎದುರಾದಾಗ ಜಾರಿಕೊಳ್ಳುವ ಜಾಣತನವನ್ನು ಪ್ರದರ್ಶಿಸುತ್ತಾ, ಅವನ ಕೆಲಸ ದಸ್ತಗಿರಿ, ಮಹಜರ್ ಎರಡೇ ಆಗಿರುವಂತೆ ಕಂಡುಬರುತ್ತದೆ. ಇವನಿಗೆ ಸಾಯುವುದು ಅಥವಾ ಬದುಕಿಸುವುದು ಮುಖ್ಯವಲ್ಲ ಯಾವ ರೀತಿ ಸಾಯುತ್ತಾರೆಂಬುದು ಮುಖ್ಯ ವಾಗಿದೆ.

ಪೇದೆ ಇಬ್ಬರನ್ನೇ ಸಮಸ್ಯೆಗೆ ಸಿಲುಕಿಸದೆ ಸುತ್ತಲ ಜನರನ್ನೂ ಸಿಕ್ಕಿಸಿ ಸಮಸ್ಯೆಗೆ ನೀವೂ ಕಾರಣ ಎಂಬುದನ್ನು ತಿಳಿಸುತ್ತಾನೆ. ಯುವತಿ ತುಂಬಿದ ಕೊಡವನ್ನು ಹೊತ್ತು ತರುವುದು ಸಮಸ್ಯೆಯು ಪ್ರಶ್ನೆ ಮತ್ತಷ್ಟು ಗಂಭೀರವಾಗುವುದರ ಹಿನ್ನಲೆಯಲ್ಲಿ ಮೂಡಿದೆ. 'ಬೆಳಗಿನಿಂದ ಮನೆಯಲ್ಲಿ ನೀರಿಲ್ಲ' ಎಂಬ ಯುವತಿಯು ಮಾತುಗಳಿಂದ ಪೇದೆಗೆ ಬೆಳಿಗ್ಗೆಯಿಂದ ತಕರಾರು ಸಿಕ್ಕಿಲ್ಲದಿರುವುದಕ್ಕೆ ಸೂಚನೆಯಾಗಿದೆ.

ಛತ್ರಿದಡಿಯ ಮತ್ತು ದಾರಿ ಹೋಕ ಮತ್ತೆ ಸಮಸ್ಯೆಗೆ ಸಿಲುಕುತ್ತಾರೆ. ಸಾಕ್ಷಿ ಹೇಳಬೇಕೆಂದು ಕರೆಯುವ ಪೇದೆಯನ್ನೇ ಸಮಸ್ಯೆಗೆ ಸಿಲುಕಿಸುವ ಚಾಲಾಕಿತನ ಛತ್ರಿ ದಡಿಯನದು. [ಇಬ್ಬರೂ ಡಿಕ್ಕಿ ಹೊಡೆಯಲಿಲ್ಲ ಅಂತ] ಯುವತಿ ಸಮೀಪಕ್ಕೆ ಬಂದಾಗ ಪೇದೆ ಅವಳನ್ನು ಪ್ರಶ್ನಿಸಿದರೆ "ಅವನ್ನ ನಾ ಮುಂಜಾವಲ್ಲೇ ನೋಡಿದೆ. ಅವರು ಬರೋದಕ್ಕೂ ಎಷ್ಟೊ ಹೊತ್ತು ಮುಂಚಿನಿಂದಲೇ ಮಲಗಿದಾನ್ರೀ" ಎನ್ನುವ ಮಾತು ಭಾರತೀಯ ನಾಗರೀಕತೆಯಲ್ಲಿರುವ ಸಮಾಜ, ವ್ಯಕ್ತಿ ಸ್ಥಿತಿಗಳು ಕೇವಲ ಇಂದು ಸ್ಥಾವರ ರೂಪದಲ್ಲಿ ನಿಂತಿಲ್ಲ. ಅನಾದಿ ಕಾಲದದಿಂದ ನಿಂತಿದೆಂಬುದರ ಧ್ವನಿಯನ್ನು ; ಹಿಂದಿನಿಂದ ಪರಂಪರೆಯಾಗಿ ಬೆಳೆದು ಬಿಟ್ಟಿದೆ. ಸರಿಪಡಿಸಲು ಸಾಧ್ಯವೇ ಇಲ್ಲ ಎಂಬ ಅರ್ಥವನ್ನು ಒಳಗೊಂಡಿದೆ. ಪೇದೆ ಮೊದಲ ಭಾರಿಗೆ ತನ್ನ ಮನಸ್ಸಿನ ಅರಿವಿನ ಪ್ರಜ್ಞೆಯಿಲ್ಲದೆ ಸಮಸ್ಯೆ ಪ್ರಶ್ನೆಯನ್ನು ಮತ್ತಷ್ಟು ಗೊಂದಲವನ್ನಾಗಿ ಮಾಡಿ, ಪರಿಸ್ಥಿತಿಯ ಅರಿವಾದಾಗ ಬೇಜಾರಿನಿಂದ "ನೀ ಯಾಕೆ ಮೊದಲೇ ಹೇಳಬಾರದೇ ಅವ್ವಾ ನನಗಷ್ಟು ವೃಥಾಶ್ರಮ ತಪ್ಪುತ್ತಿತ್ತು" ಎಂದು ಹೇಳುವ ಮಾತಲ್ಲಿ ಈ ಅವ್ಯವಸ್ಥೆಯನ್ನು ಸರಿಪಡಿಸಲು ಸಾಧ್ಯವೇ ಇಲ್ಲವೆನ್ನುವಂತಿದೆ.

"ಮೊದಲಿಂದಾ ನಾ ಮಾಡಿದ ತಪ್ಪೋ ಅದು" ಎನ್ನುವ ಪೇದೆ ಮಾತಲ್ಲಿ ಈ ಸಮಾಜವನ್ನು ತಿದ್ದಲು ಹೊರಟವನಿಗೆ ಅದನ್ನು ತಿದ್ದಲು ಸಾಧ್ಯವೇ ಇಲ್ಲವೆನ್ನುವಷ್ಟು ಅರಿವು ಬಂದ ಮೇಲೆ ತನ್ನ ತಪ್ಪು ತಿಳಿಯುತ್ತದೆ.

ಹೇಮಂತ ಮತ್ತೆ ತನ್ನ ಮಾನವತಾವಾದದಿಂದ ಸಮಸ್ಯೆಗೆ ಸಿಲುಕುತ್ತಾನೆ. ಜಡ ರೂಪದಲ್ಲಿ ಬಿದ್ದಿರುವ ಶರೀರವನ್ನು ಬದುಕಿಸಬೇಕೆಂದು ಪ್ರಯತ್ನಿಸುವಾಗ, ಪೇದೆ ಕಾರಣಗಳನ್ನು ನೀಡಿ ತಪ್ಪಿಸಿಕೊಳ್ಳುತ್ತಾನೆ. ಪೇದೆಗೆ ಸಮಸ್ಯೆಯ ಗಂಟು ತಿಳಿದಿರುವುದ ರಿಂದಲೇ ಆತ ಜಾರಿಕೊಳ್ಳುವುದು. ಹೇಮಂತ ಮಾನವತಾ ದೃಷ್ಟಿಯಿಂದ ನೋಡುವುದ

ರಿಂದ ಬದುಕಿನ ಹಲವಾರು ಸಮಸ್ಯೆಗಳನ್ನು ಬಿಡಿಸಲು ಸಾಧ್ಯವೇ ಇಲ್ಲ ಎನ್ನುವ ಪ್ರಶ್ನೆಯನ್ನು ಅರಿತಂತೆ ಕಾಣುವುದಿಲ್ಲ. ಜರ್ನಲಿಸ್ಟ್ ವಾಸ್ತವವಾದಿ ರಮೇಶನಿಗೆ ಜಗತ್ತಿನ ಸಮಸ್ಯೆಯು ಪ್ರಶ್ನೆ ತಿಳಿದಿದೆ. ಹೇಮಂತನ ಧರ್ಮ ಸೂಕ್ಷ್ಮ ಪ್ರಜ್ಞೆ ಬಿದ್ದಿರುವ ಶರೀರವನ್ನು ಜಂಗಮ ರೂಪದತ್ತ ಸಾಗಿಸಲು ಪ್ರಯತ್ನಿಸುವಾಗ, ಜಂಗಮ ಸ್ವರೂಪಿಯಹಾದ ರಮೇಶನಿಗೆ ಸ್ಥಾವರ ರೂಪದ ಶರೀರವನ್ನು ಜಂಗಮತ್ವಕ್ಕೆರಿಸಲು ಸಾಧ್ಯವಿಲ್ಲವೆಂಬ ನಂಬಿಕೆ ಇದೆ. ಸ್ಥಾವರ ರೂಪಿಯಂತೆ ಕಲ್ಪನೆಗಳ ಲೋಕದಲ್ಲೇ ವಿಹರಿಸುವ ಸಾಹಿತ್ಯ ಪ್ರೇಮಿ ಹೇಮಂತನಿಗೆ ಇದ್ಯಾವುದೂ ಅರ್ಥವಾಗುವುದಿಲ್ಲ.

ರಮೇಶನು ಹೇಮಂತನಿಗೆ "ಡಿಕ್ಕಿ ಹೊಡೆಸಿದ್ದರೆ ಆ 'ರೆ' ಇದೆಯಲ್ಲಾ ಅದು ಬಹಳ ಮುಖ್ಯವಾದುದು. ಆ 'ರೆ'ಯು ಅಚೆಗಿನದು ನನಗೂ ನಿನಗೂ ಅಥವಾ ಯಾರಿಗೂ ಸಂಬಂಧಿಸಿದ್ದಲ್ಲ. ನನಗೆ ಸಂಬಂಧಿಸಿದ್ದು. ನನಗೆ ಸಂಬಂಧಿಸಿದ್ದು. ನಿನ್ನ 'ರೆ'ಯನ್ನು ನಾನು ಇನ್ನೊಂದು 'ರೆ'ಯಿಂದ ಸೋಲಿಸಿ ಬಿಡಲಾ? ನಮ್ಮ ಮೋಟಾರು ಸೈಕಲ್ಲು ಇಲ್ಲಿ ಕೆಟ್ಟು ನಿಲ್ಲದಿದ್ದ 'ರೆ' ಗೊತ್ತಾಯ್ತೋ" ಎನ್ನುವ ಮಾತುಗಳು ಹೇಮತಂನ "ಇದೊಂದು ಧರ್ಮ ಸೂಕ್ಷ್ಮವಾದಕ್ಕೆ ಸಂಬಂಧಿಸಿದುದಲ್ಲ. ಆತ್ಮಕ್ಕೆ ಸಂಬಂಧಿಸಿದ್ದು. ನಾವು ನಾಲ್ಕು ಜನ ಕೈಕಾಲು ಗಟ್ಟಿ ಇದ್ದವರು ಸುತ್ತೂ ಇದ್ದೂ ಅವನು ಸತ್ತರೆ ನಾವು ಕೊಲೆ ಪಾತಕಿಗಳು ಏಕೆ ಅಲ್ಲ ! ನಿನಗೆ ಗೊತ್ತಾಗುವುದಿಲ್ಲ. ಡಿಕ್ಕಿ ಹೊಡೆದರೆ ಮಾತ್ರ ಅಪರಾಧಿಗಳಾಗುತ್ತಿದ್ದೆವು. ಈಗ ಅಲ್ಲ ಎಂದು ಹೇಗೆ ಹೇಳುತ್ತೀ !" ಎಂದು ಹೇಮಂತ ಎತ್ತುವ ಈ ಮೂಲಭೂತ ಪ್ರಶ್ನೆಗೆ ಮೇಲಿನ ರಮೇಶನ ಮಾತುಗಳು ಮೂಲಭೂತ ಮಾನವೀಯ ಸಿದ್ಧಾಂತಕ್ಕೆ ಸಮಂಜಸವಾದ ಉತ್ತರವಾದಂತೆ ಕಂಡುಬರುವುದಿಲ್ಲ. ರಮೇಶನು ವಾಸ್ತವವನ್ನು ಎದುರಿಸುವುದು ಸಂಭವಿಸುವ ಘಟನೆಗಳ ಆಧಾರದ ಮೇಲೆಯೇ ಹೊರತು, ಸಂಬಂಧಿಸಿದ ಘಟನೆಗಳೊಳಗೆ ನೇರವಾಗಿ ತೊಡಗಿಕೊಳ್ಳುವ ಪರಿಹಾರ ಸೂಚಿಸುವುದಿಲ್ಲ.

ರಮೇಶನ ಉತ್ತರದಿಂದ ಹೇಮಂತನಿಗೆ ತೃಪ್ತಿಯಾಗುವುದಿಲ್ಲ. ಆದುದರಿಂದ ನಮಗೆ ಇಲ್ಲಿ ರಮೇಶನ ಪ್ರಶ್ನೆ ವಾಸ್ತವವನ್ನು ಸದ್ಯದ ಮಟ್ಟಿಗೆ ಎದುರಿಸಲು ಸಹಾಯಕವಾದ ಬದುಕಿನ ಧೋರಣೆಯನ್ನು ಕುರಿತದ್ದಕ್ಕಿಂತ ಹೆಚ್ಚಿನದಾಗಿ ಕಾಣುತ್ತದೆ. ಹೇಮಂತ ಮತ್ತು ರಮೇಶನ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದು ಬಿಡುತ್ತವೆ. ರಮೇಶ ತನ್ನ ಪ್ರಶ್ನೆಗೆ ಉತ್ತರವೋ ಎನ್ನುವಂತೆ ಹೇಮಂತನಿಗೆ "ನಿನ್ನ ಮೋಟಾರು ಬೈಸಿಕಲ್ಲಿನಂತೆಯೇ ಎಲ್ಲವೂ ಕ್ಲಿಷ್ಟ ನಾವು ತಿಳಿದಷ್ಟು ಮುಗ್ಧವಾಗಿಲ್ಲೊ, ಬದುಕಿನಲ್ಲಿ ನಂಬಿಕೆ ಅಂದ್ರೆ ಸಾವಿರ ತೂತಿನ ಪಾತ್ರೆಯಲ್ಲಿ ನೀರು ಸಾಗಿಸಿದ ಹಾಗೆ ಕಾಣೋ" ಎನ್ನುವ ಮಾತುಗಳಲ್ಲಿ ವಾಸ್ತವತೆ ಇದೆ.

ಹೇಮಂತನು ಅನಾಥವಾಗಿ ಬಿದ್ದಿರುವ ಶರೀರವೊಂದರ ಬಗ್ಗೆ ಇರಿಸಿಕೊಂಡಿರುವ ಅನುಕಂಪ, ದಯೆ ಇದೆಲ್ಲಾ ಸದಾ ಉಳಿಸಿಕೊಳ್ಳಲಾಗುವುದಿಲ್ಲ. ಹಾಗೂ ಈ

ಸಮಸ್ಯೆಗೆ ಪರಿಹಾರವಿಲ್ಲ. ಅದು ಎಷ್ಟು ಮಾಡಿದರೂ ಮುಗಿಯದ ಕೆಲಸ; ಸಾವಿರ ತೂತಿನ ಪಾತ್ರೆಗೆ ನೀರು ತುಂಬಿದಂತೆ ವ್ಯರ್ಥ ಪ್ರಯತ್ನ ನಿನ್ನದಾಗುತ್ತದೆಂಬುದನ್ನು ರಮೇಶನು ಗೆಳೆಯನಿಗೆ ಹೇಳುವ ಬುದ್ಧಿವಾದದಂತೆ ಕಂಡರೂ ಹೇಮಂತನು ಈ ಮಾತುಗಳನ್ನು ಕೇಳುವ ಲೋಕದಲ್ಲಿಲ್ಲ. ತನ್ನದೇ ಆದ ಆದರ್ಶ ಲೋಕದ ಭ್ರಮೆಯಲ್ಲಿ ಸಂಪೂರ್ಣ ಮುಳುಗಿ ಹೋಗಿರುವುದನ್ನು ಕಾಣಬಹುದು.

ರಮೇಶನ ಮಾತುಗಳಿಗೆ ಹೇಮಂತ ತನ್ನದೇ ಆದ ಕೆಲವು ತಾತ್ವಿಕ ನಿಲುವನ್ನು ಮುಂದಿಡುತ್ತಾನೆ. "ಅಪ್ಪ ಅಮ್ಮನ್ನು ನೀನು ಬದುಕಿರಬೇಕಾದರೆ ಹೇಗೆ ನೋಡಿದೆ ಅನ್ನೋದೆ ಮುಖ್ಯ. ಸತ್ತ ಮೇಲೆ ಎಷ್ಟು ರೂಪಾಯಿಯ ತಿಥಿಮಾಡಿದೆ ಅನ್ನೋದು ಸುತ್ತ ಮುತ್ತಿನವರಿಗೆ ವೇದ ಶಾಸ್ತ್ರಾಚಾರಗಳಿಗೆ ನಾವು ಮಾಡೋ ಕಣ್ಣು ಕಟ್ಟು. ಇವನ ತಿಥಿಗೆ ಎಷ್ಟು ಪೈಸಾ ಹಾಕಿದೆ ಅನುವುದಲ್ಲ ಈಗ ಇರುವ ಪ್ರಶ್ನೆ. ನೀನು...... ಇವನು......ಬದುಕಲು ಏನು ಮಾಡಿದೆ ? ಅನ್ನುವುದೇ ಪ್ರಶ್ನೆ" ಎನ್ನುವ ಈ ಮಾತುಗಳು ಅಪ್ಪಟ ಮಾನವತಾವಾದದ ಅಭಿಪ್ರಾಯುವಾಗಿದ್ದು; ಇಬ್ಬರ ಅಭಿಪ್ರಾಯಗಳು ಒಂದಕ್ಕಿಂತ ಒಂದು ಗಟ್ಟಿಕೊಂಡು ಒಂದು ವಾಸ್ತವವಾದ ಮತ್ತೊಂದು ಮಾನವತಾವಾದ ಪರಸ್ಪರ ಮುಖ ತಿರುಗಿಸಿ ಸ್ಪರ್ಧೆಗಿಳಿಯುವಂತೆ ಕಾಣುತ್ತವೆಯೇ ಹೊರತು ಪ್ರಶ್ನೆಗೆ ತನ್ನದೇ ಆದ ಒಂದು ಉತ್ತರಕ್ಕೆ ಬರಲು ಸಾಧ್ಯವಾಗದ "ಎರದು ಪ್ರಶ್ನೆಗಳು" ಹಾಗೆಯೇ 'ಯಮಳಪ್ರಶ್ನೆ'ಯಾಗಿ ಉಳಿದುಬಿಡುತ್ತದೆ.

ನಾಟಕದ ಕೊನೆಯ ಭಾಗದ ವೇಳೆಗೆ ನಾಟಕ ಮತ್ತೊಂದು ಆಯಾಮದತ್ತ ಸಾಗುವುದನ್ನು ಕಾಣಬಹುದು. ಆರಂಭದಿಂದ ಕೊನೆಯಾಗುವ ತನಕ ಸ್ಥಾವರ ರೂಪದಲ್ಲಿ ಬಿದ್ದಿದ್ದ ಶರೀರಕ್ಕೆ ಈಗ ವಾರಸುದಾರನೊಬ್ಬ ಬಂದಿದ್ದಾನೆ. ರಮೇಶನಿಗೆ ತೋಟಿ ಮಾಡುತ್ತಿರುವ ಕೆಲಸ ಅರ್ಥವಾಗಿದೆ. ಹೇಮಂತನಿಗೆ ಅರ್ಥವಾಗುವುದಿಲ್ಲ. ಅರ್ಥವಾಗಿಸಿಕೊಳ್ಳುವ ಸ್ಥಿತಿಯಲ್ಲಿಯೂ ಇಲ್ಲ. ರಮೇಶನಿಗೆ ಪ್ರಪಂಚ ಒಂದು ಹಸಿದ ಗೋರಿಯಾಗಿ ಕಂಡು ಬರುತ್ತದೆ. ಜೀವನವೆಂಬ ರಂಗ ಮಂಟಪದ ಮೂಲತತ್ವಾನೇ ಬೇರೆ ರೀತಿಯದು. ತ್ಯಾಗ ಮಾಡುವುದಕ್ಕೆ ಹೊರಟರೆ ಅನಂತ ತ್ಯಾಗವನ್ನೇ ಕೇಳಿ ಬಿಡುವ ಜಗತ್ತಿನ ಒಂದೊಂದು ಪದರವೂ ಜರ್ನಲಿಸ್ಟು ರಮೇಶನಿಗೆ ಪರಿಚಯುವಿದೆ. ತ್ಯಾಗ ಮಾಡಲು ಮುಂದಾದರೆ ವ್ಯಕ್ತಿ ಸಮಾಧಿಯಾಗುವ ಪರಿಸ್ಥಿತಿ ಒದಗುವುದು ರಮೇಶನಿಗೆ ತಿಳಿಯುತ್ತದೆ.

'ದೇಹವನ್ನು ಶವಾಗಾರದಿಂದ ಇಲ್ಲಿಗೇಕೆ ತಂದು ಹಾಕಿ ದುಡ್ಡು ಮಾಡುತ್ತಿರುವೆ ?' ಎಂದು ರಮೇಶ ತೋಟಿಯನ್ನು ಕೇಳಿದಾಗ "ನಾವು ಇರೋದೆ ಸತ್ತವರ ಕೋಣೆ ಆಗಿರಬೇಕಾದರೆ ಇನ್ನು ಸತ್ತವರ ಕೋಣೆ ಎಲ್ಲಿಂದ ಬಂತು ಸ್ವಾಮಿ" ಎನ್ನುವ ಮಾತುಗಳಿಗೆ ಮಾತ್ರ ರಮೇಶನಿಂದ ಉತ್ತರಿಸಲಾಗಲಿಲ್ಲ, ಹೇಮಂತನೊಡನೆ ತೀರ ವಾಸ್ತವವಾದಿಯಾಗಿ ಮಾತನಾಡಿದ ರಮೇಶ ವಾಸ್ತವದಲ್ಲಿ ತೋಟಿ ಕೇಳುವ ಪ್ರಶ್ನೆಗೆ

ಉತ್ತರ ಹೇಳುವುದಕ್ಕೆ ಆಗದೆ ಮೌನವಾಗುತ್ತಾನೆ. ತೋಟಿ ಕೇವಲ ರಮೇಶನೊಬ್ಬನನ್ನೇ ಕೇಳುವುದಿಲ್ಲ. ಭಾರತೀಯ ಸಮುದಾಯದ ಮೇಲೆ ಹಾಕಿದ ಪ್ರಶ್ನೆಯಾಗಿದೆ.

ರಮೇಶ ಜರ್ನಲಿಸ್ಟು; ವಾಸ್ತವತೆಯ ದೃಷ್ಟಿಕೋನದ ಮೂಲಕ ಬದುಕನ್ನು ನೋಡುತ್ತಾನೆ. ಹೇಮಂತ ಸಾಹಿತ್ಯಕಲ್ಪನೆಯೆಂಬ ಹುಚ್ಚುಕುದುರೆಯನ್ನೇರಿ ಸವಾರಿ ಮಾಡಲು ಹೊರಟಂತಿದೆ. ಉಪನ್ಯಾಸಕನಾಗಿರುವುದರಿಂದ ತಾತ್ವಿಕತೆಯ ಹಿನ್ನೆಲೆಯೊಂದಿಗೆ, ಆದರ್ಶದ, ಅಂದರೆ ಮಾನಸತಾವಾದದ ಮೂಲಕವೇ ಬದುಕನ್ನು ನೋಡುತ್ತಾ, ತಾವೇ ಹಾಕಿಕೊಳ್ಳುವ ಪ್ರಶ್ನೆಗಳಿಗೆ ತಮ್ಮಿಬ್ಬರಲ್ಲೂ ಉತ್ತರಗಳು ಇಲ್ಲವಾಗುತ್ತವೆ. 'ಯಮಳ ಪ್ರಶ್ನೆ'ಯಲ್ಲಿ ರಮೇಶ ಮತ್ತು ಹೇಮಂತರ ಪ್ರಶ್ನೆಗಳು ಮುಖ್ಯವಾಗದೆ. ತೋಟಿ ಕೇಳುವ ಪ್ರಶ್ನೆ ವಾಸ್ತವ ಬದುಕಿನ ದುರಂತದ ಬಗೆಗೆ ಎತ್ತಿದ ಪ್ರಶ್ನೆಯೇ ಮುಖ್ಯವಾಗುತ್ತದೆ. ಸ್ಥಾವರ ರೂಪದಲ್ಲಿ ಬಿದ್ದಿರುವ ಶರೀರದ ಮೌನ ಪ್ರಶ್ನೆ ಮತ್ತೊಂದು, ಈ 'ಯಮಳ ಪ್ರಶ್ನೆ'ಗಳಿಗೆ ಓದುಗ/ಪ್ರೇಕ್ಷಕ ಉತ್ತರಿಸಲಾಗುವುದಿಲ್ಲ. ಉತ್ತರ ದೊರೆತರೂ ಅದು ವಾಸ್ತವ ಉತ್ತರವಾಗದೆ ಆದರ್ಶದ ಉತ್ತರವಾದೀತು. ನಾಟಕದಲ್ಲಿ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದು ಬಿಡುವುದು ಇಲ್ಲಿಯ ರಚನಾ ವಿನ್ಯಾಸದ ವೈಶಿಷ್ಟ್ಯ. ನಾಟಕದ ಆರಂಭದಿಂದ ಕೊನೆಯವರೆಗೂ ವಿಡಂಬನೆ ಬರೇ ವಿಡಂಬನೆಯಾಗಿ ಮೂಡಿಬರದೆ ಜೀವನ ಮೌಲ್ಯಗಳನ್ನು ಮೂಡಿಸುವ ದೃಷ್ಟಿಕೋನವನ್ನು ಒಳಗೊಂಡಿವೆ. ನಾಟಕದಲ್ಲಿ ಸೃಷ್ಟಿಗೊಂಡಿರುವ ಯಾವ ಪ್ರಶ್ನೆಗೂ ಉತ್ತರ ಸಿಗುವುದೇ ಇಲ್ಲ. ಸಾಧ್ಯವೂ ಇಲ್ಲ ಎನ್ನಬಹುದೇ :

ನಿರಂತರ

ಶಶಿಕಲಾ ಆರ್.

ಭಾವನಾಕಾಶದ
ಚಿತ್ರಾಂತರದ ತುಂಬೆಲ್ಲ
ಬದುಕಿನಾಸೆಯು
ಚುಕ್ಕೆಗಳನು ಬಯಸಿದ ಮನಕೆ
ಕಾರ್ಮುಗಿಲ ಕಪ್ಪಿನಲ್ಲಿ
ಮರೆಯಾದ ಬೆಳ್ಳಿಯಂತೆ
ಮನದ ಮೋಹವು
ಮಾತಲ್ಲಿ ಉದಿಸಿ
ನೀರಸವೆನಿಸಿದಾಗ
ಮಳೆಕಾರುವ ತಿಳಿಮೋಡವು
ಘನವಾಗಿ ಮನ ಸಂಘರ್ಷದಿಂದ
ಚುಕ್ಕಿಗಳೊಡೆದು ಗಾಜ
ತುಣುಕುಗಳ ಓಡಾಟದಲಿ
ರಕ್ತಕಾರುವ ಸೂರ್ಯನ
ಅಸ್ತವಾದಂತೆ
ಶಶಿಯುದಯದ ತಂಪು
ನಿರಂತರ ಜೀವನ ಮುಂದಾಗಿತ್ತು

ಹಿರೇಮಡಿವಾಳದ ಶಿವನಾಂಕಾರೇಶ್ವರ ದೇವಾಲಯ : ಒಂದು ಜಾನಪದೀಯ ಅಧ್ಯಯನ

ಎಂ. ಬೈರೇಗೌಡ

ಕನ್ನಡನಾಡು ಸಂಸ್ಕೃತಿ - ಪರಂಪರೆಗಳ ಭವ್ಯ ಭೂಮಿ, ವಿವಿಧ ಬಗೆಯ ಬಣ್ಣ-ಬಣ್ಣದ ಜಾತಿಗಳೆಂಬ ಹೂತೋಟ. ದೇವರು - ದೈವಗಳು ಇಲ್ಲಿ ನೂರಾರು. ಇಂಥ ಭವ್ಯ ನಾಡಿನ ಆಗ್ನೇಯ ಅಂಚಿನಲ್ಲಿ - ಕ್ರಿ. ಶ. 13 ರಿಂದ 17 ನೇ ಶತಮಾನದವರೆಗೆ 'ಕಾಣಿಕಾರನ ಹಳ್ಳಿ' ಎಂದೂ 18 ರಿಂದ 20 ನೇ ಶತಮಾನದವರೆಗೆ 'ಕಾನ ಕಾನ ಹಳ್ಳಿ' ಎಂದೂ ಸ್ವಾತಂತ್ರ್ಯ ನಂತರ 'ಕನಕ ಪುರ'ವೆಂದೂ ಹೆಸರು ಪಡೆದ ತಾಲೂಕು ಕೇಂದ್ರ ವಿದೆ[1]. ದೇಗುಲ ಮಠದ ಶಿಲಾಶಾಸನದಲ್ಲಿ 'ಕಾಣಿಕಾರನ ಹಳ್ಳಿ' ಎಂಬ ಉಲ್ಲೇಖವಿದೆ[2]. ಕಾಣಿ ಎಂದರೆ "ಗದ್ದೆ"ಎಂದೂ, 'ಕಾಣಿಕಾರ' ಎಂದರೆ 'ಗದ್ದೆಯುಳ್ಳವನು' ಎಂದೂ ಅರ್ಥವಿದೆ.[3]

ಜಾಗತಿಕ ದೃಷ್ಟಿಯಿಂದ, ಕನಕಪುರ ತಾಲ್ಲೂಕು ನೆರೆರಾಜ್ಯವಾದ ತಮಿಳುನಾಡಿಗೆ ಹೊಂದಿಕೊಂಡಿದೆ, ತಾಲ್ಲೂಕಿನ ಅರ್ಧಭಾಗ ದಟ್ಟವಾದ ಅರಣ್ಯ ಮತ್ತು ಕಣಶಿಲೆ (ಗ್ರ್ಯಾನೈಟ್) ಯ ತವರೂರು, ಈ ವಿಪುಲ ನೈಸರ್ಗಿಕ ಸಂಪತ್ತನ್ನು ಲೂಟಿಮಾಡಿ ಶ್ರೀಮಂತರು ಅತೀ ಶ್ರೀಮಂತರಾಗುತ್ತಿದ್ದಾರೆ. ಬಡತನದ ಬೇಗೆಯಲ್ಲಿ ಬೆಂದು ಬಳಲುವವರ ಸಂಖ್ಯೆ ಏಕ ಪ್ರಕಾರವಾಗಿ ಹೆಚ್ಚುತ್ತಲೇ ಇದೆ. "Money Goes Where There is Money" ಎಂಬಂತೆ.

ಕನಕಪುರ ತಾಲ್ಲೂಕು ಬೆಂಗಳೂರು ಜಿಲ್ಲೆಯಲ್ಲೇ ಹೆಚ್ಚು ವಿಸ್ತೀರ್ಣವುಳ್ಳ ತಾಲ್ಲೂಕು ಎಂಬ ಖ್ಯಾತಿಗೆ ಹೆಸರಾಗಿದೆ. ಈ ಕನಕಪುರ ತಾಲ್ಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿಗೆ 31. ಕಿ. ಮೀ ದೂರದಲ್ಲಿ ಕಾವೇರಿ ಮತ್ತು ಅರ್ಕಾವತಿ ನದಿಗಳು ಕೂಡುವ ಸಂಗಮಸ್ಥಾನ. ಚಿತ್ತಾಕರ್ಷಕ ಗಿರಿ. ಝರಿಗಳಿಂದಾವೃತವಾದ, ನಿತ್ಯ

---

1. ದೇಗುಲ ಜ್ಯೋತಿ. (ಸಂ.1. ಎಸ್. ಮಹದೇವಪ್ಪ, ಬಿ. ನಂಜುಂಡಪ್ಪ) ಆರ್. ಚಕ್ರವರ್ತಿ ಪು. 29.
2. ಎಫಿಗ್ರಾಫಿಕಾ ಕರ್ನಾಟಕ—9. ಬೆಂ. 94; 1662.
3. ದೇಗುಲ ಜ್ಯೋತಿ (ಸ್ಮರಣ ಸಂಪುಟ) ಆರ್. ಚಕ್ರವರ್ತಿ ಪು. 29. [ಕನಕಪುರದ ದೇಗುಲ ಮಠದ ಕೊಡುಗೆ—ಸಿದ್ದಗಂಗಾ ವಿಶೇಷ ಸಂಚಿಕೆ - ಲೇ. ಬಿ. ಸಿ. ವೀರಪ್ಪ]

ಹರಿದ್ವರ್ಣ ಕಾನನ. ಪ್ರವಾಸಿಗರನ್ನು ತನ್ನೆಡೆಗೆ ಆಕರ್ಷಿಸುವ ಖ್ಯಾತ ಪ್ರವಾಸಿತಾಣ ಮೇಕೆದಾಟು ಇರುವುದು ಅಲ್ಲಿಯೇ. ಮೇಕೆ ದಾಟು ಮುಟ್ಟುವ ಮುನ್ನ ಒಂದು ಕಿ. ಮೀ. ಹಿಂದಿನ ಕೊಗ್ಗೆದೊಡ್ಡಿ ಬಸ್ ನಿಲ್ದಾಣದಲ್ಲಿ ಇಳಿದು ಉತ್ತರಕ್ಕೆ ನಡೆದರೆ ಅರ್ಕಾವತಿ ನದಿ ಅಡ್ಡವಾಗುತ್ತದೆ.

ನದಿ ದಾಟಿ ಅರ್ಧ ಮೈಲು ನಡೆದರೆ ವನದೇವಿಯ ಒಡಲೊಳಗೆ ಸೇರಿ ಕೊಳ್ಳುತ್ತೇವೆ. ಎರಡು ಮೈಲಿ ದೂರ ಸವೆದರೆ ಪುರಾತನ ಅವಶೇಷಗಳಿಂದ ಒಡೆದ ಮಡಿಕೆಯ ಚೂರುಗಳು, ಒಡೆದ ಮಡಿನ ಹೆಂಚಿನ ಚೂರುಗಳು, ಚೂರಾದ ರಾಗಿ ಬೀಸುವ ಕಲ್ಲುಗಳು, ಹಾಳಾದ ಧಾನ್ಯದ ಗುಳಿಗಳ ಮೇಲೆ ಸುತ್ತಮುತ್ತ ಪಾಪಾಸುಕಳ್ಳಿ ಚುಜ್ಜಲಿ ಎಕ್ಕದಗಿಡಗಳನ್ನು ಕಾಣುತ್ತೇವೆ, ಕಂಡು ಬರುವ ಅವಶೇಷಗಳ ಬಗೆಗೆ ಕೇಳಿದರೆ ಅಲ್ಲಿನ ಜನಪದರು–ಹದಿನಾಲ್ಕು ಹಳ್ಳಿಗಳು ನಾಶವಾದ ವಿಚಾರ ಹೇಳುತ್ತಾರೆ. ಸ್ವಾಮಿ ಶಿವನಾಂಕಾರನ ಕೋಪಕ್ಕೆ ಬಲಿಯಾಗಿ ಸುತ್ತಲೂ ಇದ್ದ ಹದಿನಾಲ್ಕು ಹಳ್ಳಿ ಗಳು ನಾಶವಾದ ಬಗೆಗೆ ಒಂದು ಐತಿಹ್ಯವನ್ನು ಹೇಳುತ್ತಾರೆ[4] ಅಲ್ಲಿನ ಅವಶೇಷಗಳ ಆಳ ಅಧ್ಯಯನವನ್ನು ಇತಿಹಾಸ-ಪುರಾತತ್ವ ಇಲಾಖೆಯವರಿಗೆ ಬಿಡುತ್ತೇನೆ, ಹಾಗೂ ಇಂದಿಗೂ ರಾಮನಗರ ರೆವಿನ್ಯೂ ದಾಖಲೆಗಳಲ್ಲಿ ಮಡಿವಾಳ-ಮಾವಳ್ಳಿ ದಾಖಲೆ ಎಂದು ನಮೂದಾಗಿರುವುದನ್ನು ಗಮನಿಸಬಹುದು.

ಸುತ್ತಲೂ ಏಳು ಕಿ.ಮೀ.ಗಳಷ್ಟು ಬೆಟ್ಟ-ಕಾಡುಗಳಿಂದಾವೃತವಾದ "ಕಾಡೂರು" "ಹಿರೆ ಮಡಿವಾಳ"ಕ್ಕೆ ನಡೆದೇ ಹೋಗಬೇಕು. ಹೋಗುವ ದಾರಿಯ ದೂರ ಕಳೆ ಯಲು ಜೊತೆಗಿದ್ದವರನ್ನು[5] ಮಾತಿಗೆಳೆದು ಅಲ್ಲಿ ಕಂಡ ಮುರಿದ ಮೂರ್ತಿಯ

---

4. ಬಹುಹಿಂದೆ ಶಿವನಾಂಕಾರ ಸ್ವಾಮಿಯ ಕೊಂಡಬಂಡಿ ಜೋರಾಗಿ ನಡೆಯುತ್ತಿತ್ತು. ತಮ್ಮಡಿಗಳು ಕೊಂಡ ಹಾಯಲು ಸಾಧ್ಯವಾಗದಿದ್ದಾಗ ಬೆಟ್ಟದ ಮೇಲೆ ಗೆಣಸು ಬಗೆಯುತ್ತಿದ್ದ ಇರುಳಿಗರ ಕಾಡುಶಿವನಯ್ಯ ಬಂದು ಕೊಂಡ ಹಾಯುತ್ತಾನೆ. ಕೀಳುಜಾತಿಯವನೊಬ್ಬ ಕೊಂಡ ಹಾಯ್ದುದಕ್ಕೆ ಅಸಮಾಧಾನಗೊಂಡ ತಮ್ಮಡಿಗಳು ಕೊಂಡ ಮಾಡುವುದನ್ನೇ ನಿಲ್ಲಿಸುತ್ತಾರೆ. ಇದರಿಂದ ಕೋಪಗೊಂಡ ಶಿವನಾಂಕಾರಸ್ವಾಮಿ–ಸುತ್ತಲಿರುವ ಹದಿನಾಲ್ಕು ಹಳ್ಳಿಗಳು (ಮಾವಳ್ಳಿ, ತಟ್ಟಗೋಡು, ಬಿಕ್ಕಳ್ಳಿ, ಊರತಟ್ಟಗೋಡು, ಎಡತಟ್ಟಗೋಡು, ಅಣ್ಣಳ್ಳಿ, ಹೊಲ, ಬಿಕ್ಕಳ್ಳಿ, ಬೆಡ್ಲದಿಂಬ, ಎಳ್ಳೊಲ, ಚವರದೊಲ, ಭೂಮೇನಳ್ಳಿ, ಯಲಚಿ ಕುಂಟೆ, ಮಾರೆಕಂದಟ್ಟ, ಅಜ್ಜಬೋರೆ) ನಾಶವಾಗಲಿ, ಮಡಿವಾಳದಲ್ಲಿ ಮೂರುವರ್ಷಕ್ಕೊಮ್ಮೆ ಮಳೆ ಬೀಳಲಿ ಮೂರು ವರ್ಷಕ್ಕೆ ಒಂದು ಬೆಳೆಯಾಗಲಿ ಎಂದು ಶಾಪಕೊಟ್ಟಾಗ ಈ ಹಳ್ಳಿಗಳು ನಾಶವಾಗಿವೆ ಎಂದು ಹೇಳುತ್ತಾರೆ. ಕಾಕತಾಳೀಯವೋ ಎಂಬಂತೆ ಇಂದಿಗೂ ಮೂರು ವರ್ಷಕ್ಕೊಮ್ಮೆ ಬೆಳೆಯಾಗುತ್ತಿದೆ. ಇದು ಹವಾಮಾನದ ವೈಲಕ್ಷಣ್ಯವೂ ಇರಬಹುದು.

5. 27-6-95ರಂದು ಕ್ಷೇತ್ರಕಾರ್ಯಾರ್ಥಿಯಾಗಿ ಹೋದಾಗ ಕಾಡಾನೆಗಳ ಕಾಟವಿದ್ದುದರಿಂದ ಅಲ್ಲಿನ ಇರುಳಿಗ ವಕ್ತೃಗಳಾದ ಕೆಂಪಯ್ಯ, ಶಿವನಾಂಕಾರಯ್ಯ, ಬೈರಯ್ಯ, ಬೈರಲಿಂಗಯ್ಯ ಹಾಗೂ ಕೆ.ಐ.ಟಿ.ಡಿ.ಸಿ. ಕಾರ್ಯಕರ್ತರಾದ ರವಿ, ಮರಿಯಪ್ಪ, ಕಬ್ಬಾಳಯ್ಯರ ಜೊತೆಗೆ ಹೋಗಿದ್ದೆ.

ಬಗೆಗೆ ಕೇಳಿದಾಗ ಅದಕ್ಕೆ ಪೂಜೆಮಾಡಿ ಇದು ಎಲ್ಲೆ ಮಾರಮ್ಮ, ಉತ್ತರಕ್ಕೆ ಕಾಡು ಶಿವನಯ್ಯ, ಪೂರ್ವಕ್ಕೆ ಸೊಳ್ಳೆ ಬಸಪ್ಪ ಹಾಗೂ ಪಶ್ಚಿಮಕ್ಕೆ ಎಡತಡಕೋಡು ಮುನಿಯಪ್ಪಾದಿಗಳಿದ್ದು ನಮ್ಮನ್ನು ಕಷ್ಟ ಕಾರ್ಪಣ್ಯದಿಂದ ಕಾಪಾಡುತ್ತಿದ್ದಾರೆಂದು ಹೇಳುತ್ತಾರೆ[6].

ವನರಾಶಿಯು ವಿವರ ಕೇಳಿದರೆ ನೆಲ್ಲಿ, ದಿಂಡಿಗ, ಕೊಂಡಮಾವು, ಧೂಪ ಕನಕ, ಚುಜ್ಜಲಿ, ಕಗ್ಗಲಿ, ಕಾರಚ್ಚು, ವಡವಾರ, ಎರುಗಲು, ಚಿಟ್ಟುಚುಜ್ಜಲಿ, ತೇಗ, ಹೊನ್ನೆ, ಬನ್ನಿ, ಬೇಲ, ಬಿದಿರು, ಹುಣಿಸೆ, ಬಿಳುಕ, ಕಾಗಮಾರೆ, [ಕಾಗಮಾರೆ ಕಾಯುಟ್ಟಿ ವನ ಕೆಡಿಸ್ತಂತೆ] ಚಿಲ್ಲುದ ಮರ[7] ತಪಾಲಿ, ಆಲೆ, ಆಲ, ಮೆಟ್ಲೆ, ಅಂಕೋಲೆ, ಪೆಟ್ಲೆ, ಬಾಗೆ, ಹೊಂಗೆ, ಮತ್ತಿ, ಅಂಟುವಾಳ ಬಿಲ್ವಪತ್ರೆ, ಹೀಗೆ ನೂರಾರು ಮರಗಳ ಹೆಸರು ಹೇಳಿದರು.

ಬೆಣ್ಣಂಚಿ, ಕೈನಾಲೆ (ಕಹಿನಾಲೆ) ಸೀನಾಲೆ (ಸಿಹಿನಾಲೆ) ಕಾಡ್ರಾಗಿ ಅಂಟು ಬರುಲೆ, ಮೂಡೆ, ಮುದ್ದಿ ಮುಂತಾದ ಹುಲ್ಲುಗಳು ಮೆಂದೆ, ಸೀಗೆ, ಎಗನಿ, ಜಾಗಡಿ, ಮುಳ್ಳುಗೆಣಸು, ಅಂಬಲಿಗೆಣಸು, ಕರಿಹಂಬು, ಬಾಯಿಬಸಲೆ, ಮರಜಾಗಡಿ, ಈಶ್ವರೀ-ಹಂಬು ಇತ್ಯಾದಿ ಹಂಬುಗಳನ್ನು ಹೆಸರಿಸುತ್ತಾರೆ. ಕೇಳುತ್ತಿದ್ದರೆ ಕೇಳುತ್ತಲೇ ಇರ ಬೇಕೆಂಬ ಹಂಬಲ ಆದರೆ ಸಮಯಾಭಾವ.

ಬಾಡುಬಕ್ಕ, ಕತ್ತರಿ, ಸೊಡ್ಲಿ, ಪಾಪಾಸುಕಳ್ಳಿ, ನೆಗ್ಗಿಲು, ಕಾರೆ, ಕಾಡುಸೀಗೆ, ಕೊತ್ತಿಮುಳ್ಳು, ಕೊತ್ತಿ ಹೂವು, ಹೀಗೆ ವೈವಿಧ್ಯಮಯ ಮುಳ್ಳು ಕಂಟಿಗಳನ್ನು ಪರಿಚಯಿಸಿದರು. ರುದ್ರ ರಮಣೀಯ ಸೌಂದರ್ಯದ ತಾಣ ಹಸಿರು ಸುಪ್ಪತ್ತಿಗೆಯ ತವರೂರು, ಗಾಢ ಮೌನ, ಹೆಮ್ಮರ, ಹಕ್ಕಿಗಳ ಕಿಲ-ಕಿಲ-ಉಲಿದಾಟ, ಎಡ-ಬಲದ ಎತ್ತರ ಘಟ್ಟ ಪ್ರದೇಶದ ಪರ್ವತ ಶ್ರೇಣಿಯನ್ನು ಸೀಳಿರುವ ಕಾಲುದಾರಿಯಲ್ಲಿ ನಡೆದು ಧಾವಿಸಿದೆವು ಹಿರೇಮುಡಿವಾಳವೆಂಬ 'ಕಾಡೂರನ್ನು'.

ನಾಲ್ಕು ಕೈ ಹೆಂಚಿನ ಮನೆಯು (ನಾಡ ಹೆಂಚು) ಮಾಲೀಕರು ತಮ್ಮಡಿಗಳು (ಲಿಂಗಾಯತರು) ಉಳಿದ ಮೂವತ್ತು-ಮೂವತ್ತೈದು ತೆಂಗಿನ ಗರಿ ಮತ್ತು "ಹುಲ್ಲರಮನೆಯ" ಮಹಾರಾಜರುಗಳು "ಇರುಳಿಗರು" ಕಪಟ, ಮೋಸ, ವಂಚನೆ, ದ್ವೇಷ, ಅಸೂಯೆ, ತರತಮಗಳು ಅರಿವಿಲ್ಲದೆ ಶಿವನ ಹೆಸರೇಳಿ ಎಲ್ಲ ನಾಗರೀಕ

---

6. ಎಲ್ಲೆ ಮಾರಮ್ಮನ ಗುಡಿ ಎಂದು ಹೇಳುವ ಕಡೆ ಹಲವಾರು ಶಿಲ್ಪಕಲಾ ಕೃತಿಗಳು ಒಡೆದು ಚೂರು ಚೂರಾಗಿ ಬಿದ್ದಿವೆ. ನದಿಯ ನೀರು ರಭಸವಾಗಿ ಹರಿದು ದೇವಾಲಯವನ್ನು ಕೊಚ್ಚಿಕೊಂಡು ಬಂದಾಗ ಒಂದಕ್ಕೊಂದು ಬಡಿದು ಪುಡಿಯಾಗಿರುವುದು ಗೋಚರಿಸುತ್ತದೆ.
7. ಚಿಲ್ಲುದ ಸೌದೆಯಿಂದ ಪಕ್ಕದ ಮನೆಯಾಕೆ ಅಡಿಗೆ ಮಾಡುತ್ತಿದ್ದಳಂತೆ, (ಸೌದೆ ಉರಿಯು ವಾಗ ಚಟ-ಪಟ ಎಂದು ಎಳ್ಳು ಉರಿದ ಶಬ್ದ ಬರುತ್ತಿದೆ) ಮತ್ತೊಬ್ಬಳು ತನ್ನ ಮನೆ ಯಲ್ಲಿದ್ದ ಎಳ್ಳನ್ನು ಬಿತ್ತನೆಗೂ ಇಲ್ಲದಂತೆ ಉರಿದು ತಿಂದಳಂತೆ.

ಸವಲತ್ತುಗಳಿಂದ ವಂಚಿತರಾಗಿ ಇರುವಷ್ಟರಲ್ಲೇ ತೃಪ್ತ ಜೀವನ ನಡೆಸುತ್ತಿರುವ ಇರುಳಿಗರನ್ನು ನೋಡಿದರೆ ದರಿದ್ರ ಸಂಸ್ಕೃತಿಯ ನಾವು (ನಾಗರೀಕ ಸಂಸ್ಕೃತಿಗೆ ಗಿರಿ ಜನರು ಕೊಟ್ಟ ಹೆಸರು ದರಿದ್ರ ಸಂಸ್ಕೃತಿ) ತಲೆ ತಗ್ಗಿಸಬೇಕು. ಏಕತೆಯ ಪಾಠವನ್ನು ಅವರಿಂದ ಕಲಿಯಬೇಕು.

ಅಲ್ಲೊಂದು ವೀರಶೈವ ಮಠವೂ ಇದೆ. ಶಿವರಾತ್ರಿಯ ಸಂದರ್ಭದಲ್ಲಿ ಪೂಜಾ ವಿಧಿಗಳು ಅನೂಚಾನವಾಗಿ ನಡೆಯುತ್ತದೆ. ಸಾವಿರಾರು ಭಕ್ತಾದಿಗಳು ಬಂದು ಸ್ವಾಮಿಯ ದರ್ಶನಮಾಡಿ ಹೋಗುತ್ತಾರೆ.

ಮಡಿವಾಳದ ಜನರನ್ನು ಕಾಪಾಡುವ ಅವರ ಆರಾಧ್ಯ ದೈವ ಸ್ವಾಮಿ ಶಿವ ನಾಂಕಾರನ ಗುಡಿ ಊರಿಂದ ಒಂದು ಮೈಲಿ ಉತ್ತರ ದಿಕ್ಕಿನಲ್ಲಿದೆ. ಗರ್ಭಗುಡಿ ಎಂದು ಹೇಳಲಾಗುವ ಆಲಯದ ಮೂರು ಕೋಣೆಗಳನ್ನು ಶಿವನಾಂಕಾರ, ತಮ್ಮ ವೀರಭದ್ರ, ಸೇವಕಿ ಸೋಲಗಿತ್ತಿ, ಸರಿಯಾಗಿ ಪಾಲುಮಾಡಿಕೊಂಡಿದ್ದಾರೆ.

ಗಂಗ ಚೋಳರ ಕಾಲದ ವಾಸ್ತು ಶೈಲಿಯಲ್ಲಿ ಈ ದೇಗುಲವಿದೆ. ಮೈಸೂರು ಮಹಾರಾಜರು ಜೀರ್ಣೋದ್ಧಾರ ಮಾಡಿಸಿದ ಕುರುಹುಗಳೂ ಕಾಣಸಿಗುತ್ತವೆ. ಈ ದೇಗುಲ 365 ಅಂಕಣವಿತ್ತೆಂದೂ, ನೂರೊಂದು ಅಂಕಣವಿತ್ತೆಂದೂ ಹೇಳುತ್ತಾರೆ. ಆದರೆ ಅದರ ವಿಸ್ತೀರ್ಣ ಇಷ್ಟೇ ಎಂದು ನಿಖರವಾಗಿ ಹೇಳಲು ಆಗದಿದ್ದರೂ ಬಹು ದೊಡ್ಡದಿತ್ತು ಎಂಬುದಕ್ಕೆ ಬೇಕಾದ ಸಾಕ್ಷಿ ಆಧಾರಗಳು. ಅಡಿಪಾಯದ ರೂಪದಲ್ಲಿ ಹಾಗೆಯೇ ಉಳಿದಿದೆ. ಈಗಂತೂ ಗರ್ಭಗುಡಿಯೂ ಸೇರಿದಂತೆ ಪ್ರಾಂಗಣವನ್ನು ಅಳತೆ ಮಾಡಿದರೆ 35 ರಿಂದ 40 ಚದರಗಳಷ್ಟು ಉಳಿದಿದೆ. ಆಲಯದ ಎಡ ಭಾಗ ದಲ್ಲಿ ಹಾಯ್ದು ಹೋಗುವ ಚಿಕ್ಕ ತೊರೆಯಲ್ಲಿ ಸುತ್ತಾಡಿದಾಗ ಶಿಲ್ಪ ಕಲಾಕೃತಿಗಳು ನೂರಾರು, ಸಾವಿರಾರು ನದಿಯ ಉಸುಕಿನಲ್ಲಿ ಉದುಗಿ ಹೋಗಿರುವುದು ಗೋಚರಿಸಿತು. ಕುತೂಹಲದಿಂದ ಕೆಲವನ್ನು ಕೆದಕಿ ನೋಡಿದಾಗ ಏಳು ತಲೆಯ ಸರ್ಪ, ರಾಹುತರು, ವಿವಿಧ ಭಂಗಿಯ ನೃತ್ಯಗಾರ್ತಿಯರು, ಮೂರ್ತಿ ಶಿಲ್ಪಗಳು ಕಂಡುಬಂದವು. ಆ ಶಿಲ್ಪ ಕೃತಿಗಳು ದೇಗುಲದ ಬೃಹತ್ತು, ಮಹತ್ವಗಳಿಗೆ ಸಾಕ್ಷಿಭೂತವಾಗಿವೆ.

ಈ ದೇಗುಲದ ಮೇಲ್ವಿಚಾರಕರು, ಇಲ್ಲಿ ಕೆಳವರ್ಗದ ಜನರ ಮೇಲೆ ನಡೆದ ದೌರ್ಜನ್ಯದ–ಬಂಡಾಯದ ಕೂಗು ಧ್ವನಿಸುವ ಜಾನಪದ ಸಂಗ್ರಹವನ್ನು ತಮ್ಮ ಮುಂದಿಡುತ್ತೇನೆ. ಮುಖ್ಯವಾಗಿ ಇಲ್ಲಿ ಗುಡಿ ನಾಶವಾದ ಮತ್ತು ಕೆಳವರ್ಗದ ಕನ್ಯೆ ಸೋಲಗಿತ್ತಿಯ ಸತ್ವಗಳನ್ನು ವರ್ಣಿಸುವ ಜಾನಪದ ಹಾಡುಗಳನ್ನು ಅವುಗಳ ಸತ್ವ ವನ್ನು ಪರಿಚಯಿಸುತ್ತೇವೆ.

ಹುಣಸನಹಳ್ಳಿ ಕೆರೆಯಿಂದ ಬರುವ ಜಿನುಗು–ಚಿಕ್ಕ ತೊರೆಯಾಗಿ ಶಿವನಾಂಕಾರ ಸ್ವಾಮಿಯ ದೇಗುಲದ ಎಡಪಾರ್ಶ್ವದಲ್ಲಿ ಈಗಲೂ ಹರಿಯುತ್ತಿದೆ. ಅಲ್ಲಿನ ಜನಪದರು

ಹೇಳುವಂತೆ ಉನ್ಮತ್ತಳಾದ ಗಂಗೆ ರಭಸವಾಗಿ ಬರುತ್ತಾಳೆ. ಚಿಕ್ಕವಾದ ತೊರೆಯಾದ್ದರಿಂದ ಹೋಗಲು ಸ್ಥಳವಿಲ್ಲದೆ ಶಿವನಾಂಕಾರ ಸ್ವಾಮಿಯು ಆಕೆಯನ್ನು ಒಂದು ದಿನ ಒಪ್ಪತ್ತು ತಡೆದಿಡುತ್ತಾನೆ. ಆಗ ಗಂಗಾದೇವಿ ಕೇಳುತ್ತಾಳೆ.

"ಸ್ವಾಮಿ ನನಗೆ ಮುಂದೆ ಹೋಗಲು ಜಾಗ ಕೊಡು"–ಎಂದು

"ಎಲ್ಲಿ ಹೋಗುತ್ತೀಯು'-ಎಂದು ಸ್ವಾಮಿ ಕೇಳುತ್ತಾನೆ. ಅದಕ್ಕೆ ಗಂಗೆ ಹೇಳುತ್ತಾಳೆ–"ಒಂದು ತಮ್ಮಡಗೇರಿಯ ಮೇಲೆ ಹೋಗುತ್ತೇನೆ (ಈಗಿನ ಮಡಿವಾಳಕ್ಕೆ ತಮ್ಮಡಿಗಳು ವಾಸವಾಗಿದ್ದುದರಿಂದ ತಮ್ಮಡಗೇರಿ ಎಂಬ ಹೆಸರಿದೆ) ಅಥವಾ ನಿನ್ನ ಗುಡಿಗೋಪುರಗಳನ್ನು ಹೊತ್ತುಕೊಂಡು ಹೋಗುತ್ತೇನೆ"–ಎನ್ನುತ್ತಾಳೆ.



ಶಿವನಾಂಕಾರೇಶ್ವರ ದೇವಾಲಯದ ಮೂಲ ವಿಗ್ರಹ

"ತಮ್ಮಡಗೇರಿಯನ್ನು ಹೊತ್ತುಕೊಂಡು ಹೋದರೆ ನನ್ನ ಸಿರಿಮುಡಿಯ ಮೇಲೆ ಗಂಧ ನೀರಾಕುವವರಿಲ್ಲ, ಆದ್ದರಿಂದ ನನ್ನ ಗುಡಿಯನ್ನೇ ಎತ್ತಿಕೊಂಡು ಹೋಗು"—ಎನ್ನುತ್ತಾನೆ. [ಆ ಚಿಕ್ಕ ತೊರೆ ಹೋಗಿರುವ ಸ್ಥಳ ನೋಡಿದರೆ ಬಲಗಡೆ ತಗ್ಗಾಗಿದ್ದರೂ ಏಕೆ ಹೋಗಲಿಲ್ಲ. ಎಂಬ ಅನುಮಾನ ಕಾಡುತ್ತದೆ. ನಿಜವಾಗಿ ನೀರು ಸುಲಭವಾಗಿ ಹರಿಯಲು ಅನುಕೂಲವಾಗಿರುವುದು ದೇಗುಲದ ಬಲಭಾಗಕ್ಕೆ ಇಂದು ನದಿ ಹರಿಯುತ್ತಿರುವುದು ಮಾತ್ರ ಎಡಭಾಗದಲ್ಲಿ ಇದನ್ನು ನೋಡಿದಾಗ ಆಶ್ಚರ್ಯವಾಗುತ್ತದೆ.]

ಅದರಂತೆ ಮಧೋನ್ಮತ್ತಳಾದ ಗಂಗೆ ದೇಗುಲವನ್ನು ಒಡೆದುಕೊಂಡು ಅವರ ಜೊತೆಗೆ ಹನ್ನೆರಡು ಗಾಲಿಯ ಕಂಚಿನ ತೇರನ್ನು ಹೊತ್ತುಕೊಂಡು ಹೋಗುತ್ತಾಳೆ.



ಗಂಧ ಮತ್ತು ನೀರು ಒಸರುವ ಕಲ್ಲಿನ ಕುಳಿಗಳು

ಕೋಪಗೊಂಡ ಶಿವನಾಂಕಾರ ಸ್ವಾಮಿ "ಮತ್ತಿ ಮರದುದ್ದ ಬಂದರೂ ಮಧ್ಯಾ
ದೊತ್ತಿಗೆ ಬತ್ತಿಹೋಗು" ಎಂದು ಶಾಪ ಕೊಡುತ್ತಾನೆ. ಅದರಂತೆ ಎಷ್ಟೇ ರಭಸವಾ
ಬಂದರೂ ಕೆಲವೇ ಗಂಟೆಗಳಲ್ಲಿ ನೀರು ಕಡಿಮೆಯಾಗುತ್ತದೆಂಬ ನಂಬಿಕೆ ಆ ಜನರಲ್ಲಿ
ಆದರೆ ವಾಸ್ತವವಾಗಿ ನೋಡಿದಾಗ ಅಲ್ಲಿರುವ ಮೂಲದ ಕೊರತೆಯನ್ನು ಗಮನಿ
ಬಹುದು. ಈ ಕಥಾಸಾರವುಳ್ಳ ಜನಪದ ಕಥನ ಗೀತೆ ಮಡಿವಾಳದ ಮಹಿಳೆಯ
ಬಾಯಿಂದ ಕೇಳಿದ್ದನ್ನು ಧ್ವನಿಮುದ್ರಿಸಿಕೊಂಡು ತಮ್ಮ ಮುಂದಿಡುತ್ತಿದ್ದೇನೆ.

ಮಳೆ ನೀರ ಪಾಲಾಯ್ತು

–ಮಲೆ ದೇಗುಲ

ಅಂಗರಕೆ ಗಿಡವುಟ್ಟಿ ಕೊಡಲಿಗೆ ಕಾವಾದೋ
ಒಂದೇ ಅಂಕಣಕೆ ತೊಲೆಯಾದೋ
ಒನ್ನೆಯು ಗಿಡವುಟ್ಟಿ ಕೊಡಲೀಗೆ ಕಾವಾದೋ
ಕೋಟಿರಡಂಕಣಕೆ ತೊಲೆಯಾದೋ ॥

ಮುಂದೆರಡಂಕಣಕೆ ತೊಲೆಯಾದೊ ಶಿವನಯ್ಯ
ಅವ್ರೊಡದೀ ಮೂಡವರೆ ಗುಡೀಯಲ್ಲೀ
ಮಡಿವಾಳ ಮಾವಳ್ಳಿ ನಡುವೆ ದಿಂಬದ ಗುಳಿ
ಕಡದಿ ಗೇದವರೆ ಕಲ್ಲು ಕಂಬ ॥

ಕಡದಿ ಗೇದವರೆ ಕಲ್ಲುಕಂಬ ಶಿವನಯ್ಯ
ವಡದಿ ಮಣಡವರೆ ಗುಡಿಯಲ್ಲೀ
ವಡದೀ ಮೂಡವರೇ ಗುಡಿಯಲ್ಲಿ–ಶಿವನಯ್ಯ
ಅವ್ರೊಡೆದ ತೆಂಗಿನಕಾಯ ಯಳನೀರೂ ॥

ಕಾಡಿನಂದಾಕೆ, ಕಾಡೀನ ಚೆಂದಾಕೆ
ಕಾಡುಮಲ್ಲೀಗೆ ಗಮಲಾಕೇ
ಕಾಡು ಮಲ್ಲೀಗೇ ಗಮಲಾಕೆ ಶಿವನಯ್ಯೋ
ಕಾಡೊಳ್ಗೆದೆಂದು ನೆಲೆಗೊಂಡ್ರು ॥

ಗುಂಡಿನಂದಾಕೆ - ಗುಂಡಿನ ಚೆಂದಾಕೆ
ದುಂಡು ಮಲ್ಲೀಗೆ ಗಮಲಾಕೆ - ಶಿವನಯ್ಯ
ಗುಂಡೊಳ್ಗೆದೆಂದೂ ನೆಲೆಗೊಂಡ್ರೋ ॥

ಅಂಗೈಲಾರೂತೀ ಮುಂಗೈಲಿ ಒಂಬಾಳೇ
ಮೂರನೆ ಕೈಲಾಸ ಮಡಿವಾಳಾ – ದೊಡ್ಡಿಯಲ್ಲಿ
ಬುಟ್ಟ ರಂಗಾಲೆ ಕೆಡಲಿಲ್ಲಾ ॥೫॥

ನಿಸರ್ಗದ ಚಲುವಿಗೆ ಮನಸೋತು ಬೇರೆಡೆಗೆ ಹೋಗಲು ಆಗದೆ ನೆಲೆಗೊಂಡ ನೆಂಬುದನ್ನು ತ್ರಿಪದಿಯ ಮಟ್ಟಿನಲ್ಲಿ ಹಾಡುಕಟ್ಟಿ ಹಾಡುತ್ತಾರೆ–ಕೇಳುಗರಿಗೆ ಇಂಪಾಗು ವಂತೆ ಜನಪದರು.

ಮೂರನೇ ಕೈಲಾಸ ಮಡಿವಾಳ್ದ ಬೀದೀಲಿ
ಬುಟ್ಟ ರಂಗೋಲೆ ಕೆಡಲಿಲ್ಲಾ । ಅಂತೇಳಿ
ಸತವಂತ್ರು ಕಾಣೇ ಸರಣಾರೂ ॥ ೬ ॥

ಕೈಯಲ್ಲೂವಿನ ಕುಕ್ಕೆ – ಹೊಂಗೆ ವಣಾವಿನ ಪತ್ರೇ
ತಂದಿ ಮಡಿವಾಳ್ದ ಶಿವನೀಗೇ– ॥ ೭ ॥

ಚಿಕ್ಕ ಮಡಿವಾಳ ಉಕ್ಕಿದರೆ ಗಜಪೇಟೇ
ಚಿತ್ತಾರ ಬರೆದೊ ಜಗತೀಯೋ[1]– ಕಲ್ಲಿನ ಮೇಲೇ
ಸ್ವಾಮೀ ಶಿವನಯ್ಯ ಪಗಡೇಯಹಾ ॥ ೮ ॥

ಸ್ವಾಮೀ ಶಿವನಯ್ಯ ಪಗಡೇಯ ನಾಡುವಾಗ
ಮಜ್ಜರದ ಕಲ್ಲು ಕರೆಯಿಡದೋ–ಶಿವನಯ್ಯ
ಗುಡಿಯ ಕಲ್ಲೆಲ್ಲ ಪುಡಿಯಾದೋ ॥ ೯ ॥

ಗುಡಿಯ ಕಲ್ಲೆಲ್ಲಾ ಪುಡಿಯಾಗ ಸ್ವಪ್ನಕಂಡು
ಮನಗಿದ ಶಿವನಯ್ಯ ಇರುಳೆದ್ದು–ಏನಂದ
ನಾನು ಕೆಟ್ಟ ಸ್ವಪ್ನಾವ ಕಂಡಿದ್ದೆ ॥ ೧೦ ॥

ಮುಂದಿನ ಮಳೆ ಊದು ಅಳ್ಳ ಕೊಳ್ಳ ತುಂಬ್ಕೊಂಡೂ
ವರಾರಮುಂಡೀಯ ಒಡಕೊಂಡೂ–ಗಂಗಮ್ಮ
ಅವ್ಳುಗುಡಿಯ ಬಾಗ್ಲಲಿ ನಿಂತುಕೊಂಡೂ ॥೧೧॥

ಗುಡಿಯ ಬಾಗ್ಲಲಿ ನಿಂತುಕೊಂಡು ಗಂಗಮ್ಮ
ಏನಂತ ಅವಳು ಕೇಳುತಾಳೋ - ॥ ೧೨ ॥

ಗುಡಿಯೇ ಕೊಟ್ಟೀಯೋ. ಗೋಪುರವೇ ಕೊಟ್ಟೀಯೋ
ತಮ್ಮಡಗೇರಿಯಹಾ ಕೊಟ್ಟೀಯೋ ॥ ೧೩ ॥

---

1) ಜಗತೀ – ಜಗಲಿ.

ಮದೋನ್ಮತ್ತಳಾದ ಗಂಗೆ ಬಂದು ನಿನ್ನ ಗುಡಿಯ ಗೋಪುರವನ್ನೂ ಕೊಚ್ಚಿ ಕೊಂಡು ಹೋಗಲೋ ಪಕ್ಕದ ತಮ್ಮಡಗೇರಿಯನ್ನು ಕೊಚ್ಚಿಕೊಂಡು ಹೋಗಲೋ ಎಂದು ಕೇಳಿದಾಗ ಸ್ವಾಮಿ ಶಿವನಾಂಕಾರ ಹೇಳುತ್ತಾನೆ.

ತಮ್ಮಡಗೇರಿ ಕೊಟ್ಟಾರೆ ಗಂಧವಿಲ್ಲ. ಚಂದ್ರವಿಲ್ಲ.
ಪೂಜೆ ಮಾಡೋರೂ ಯಾರೂ ಇಲ್ಲ. ॥ ೧೪ ॥

ನಾನು ಬಂದಯ್ಯೋ ದಿನ ಮದ್ವಾನಾತಯ್ಯೋ
ಬಾಗವೇ ಕೊಟ್ಟು ಕಳಬಯ್ಯೋ ॥ ೧೫ ॥

ಗಂಗಮ್ಮ ತಾಯೇ ಗುಡಿಯೇ ಕೊಡತೀನಿ
ಒಡಕೊಂಡು ನೀನು ಹೊರಟೋಗೇ ॥ ೧೬ ॥

ಚೂಜಿಯ ತ್ವಾರ ಸಂದಿಗೊಡೊ ಶಿವಸಯ್ಯ
ತಮ್ಡಗೇರಿಗೆ ಹೊರದ್ತೇನೀ ॥ ೧೭ ॥

ಚೂಜೀಯ ತ್ವಾರ ಸಂದೀಯ ಕೊಡೋದಿಲ್ಲ
ಚೂಜೀ ಮೊನೆಯಷ್ಟು ಕೊಡೆದಿಲ್ಲಾ ॥ ೧೮ ॥

ಕೊಚ್ಚಿಕೊಂಡು – ಕೊರಕೊಂಡೂ ಗುಡಿಯನ್ನು ಒಡಕೊಂಡು
ಕಂಚೀನ ತೇರ ಎಳಕೊಂಡೂ – ಗಂಗಮ್ಮ
ಮುತ್ತೀನ ಸೆರಗ ಮರೆಮಾಡೀ ॥ ೧೯ ॥

ಹೀಗೆ ಗುಡಿ ಗೋಪುರ ಕಂಚಿನ ತೇರನ್ನೂ ಹೊತ್ತುಕೊಂಡು ಹೋಗುವಾಗ ವೀರಭದ್ರ ಎರಡು ಬೆಟ್ಟಗಳಿಗೆ ತನ್ನ ಕಾಲುಚಾಚಿ ಒಂದೂವರೆ ದಿನ ತಡೆದು ನಿಲ್ಲಿಸಿದ್ದನಂತೆ. ಕೊಚ್ಚಿಹೋದ ಮೇಲೆ ಭಿನ್ನವಾಯಿತು ಬಿಟ್ಟುಬಿಡು ತಮ್ಮ ಎಂದು ಶಿವನಾಂಕಾರ ಸ್ವಾಮಿ ಹೇಳಿದ ಮೇಲೆ ವೀರಭದ್ರ ಬಿಟ್ಟುಕೊಟ್ಟನಂತೆ. ಇಂದಿಗೂ ಕಂಚಿನ ತೇರಿನ ಹನ್ನೆರಡು ಚಕ್ರಗಳು ಮೇಕೆದಾಟುವಿನ ಯಾವುದೋ ಸ್ಥಳದಲ್ಲಿ ಮಿರ-ಮಿರ ಮಿಂಚುತ್ತದೆ—ಪುಣ್ಯವಂತರಿಗೆ ಮಾತ್ರ ಗೋಚರಿಸುತ್ತದೆಂಬ ಪ್ರತೀತಿ.

ಶಿವನಾಂಕಾರ ಹೇಳುತ್ತಾನೆ—
ಗಂಗಮ್ಮ ತಾಯೇ ತೇರನ್ನ ಬಿಟ್ಟುಕೊಡೇ
ಈಗಾವ್ರೆ ನಾನೂ ಬುಡೊದೆಲ್ಲಾ ॥ ೨೦ ॥

ತಮ್ಮಡ್‌ಗೇರಿ ಕೊಟ್ಟಿದ್ದರೆ ತೇರನ್ನ ಬುಡುತಿದ್ದೇ
ಗುಡಿಯ ಗೋಪುರವಾ–ಬಿಡುತಿದ್ದೆ-ಶಿವನಯ್ಯ
ಈಗಲಾದರೆ ನಾನು ಬುಡವೊಲ್ಲೇ ॥೨೧॥

ಈ ಮಾತು ಕೇಳಿ ಕೋಪಗೊಂಡ ಶಿವನಾಂಕಾರ ಸ್ವಾಮಿ ಗಂಗೆಗೆ ಶಾಪ ಕೊಡುತ್ತಾನೆ.

ಮತ್ತೀ ಮರದುದ್ದ ಬಂದಾರೂ ಗಂಗಮ್ಮ
ಮದ್ದಿನ* ಕಿಲ್ಲದಂಗೇ ಆಗಾಲೀ ॥೨೨॥

ಒಳಗುಡಿ ಸೇರಿದ ಸೋಲಗಿತ್ತಿ

ಸೋಲಿನ ಕನ್ಯೆಯೋರ್ವಳ ಭಕ್ತಿಯ ಪರಾಕಾಷ್ಠತೆಯನ್ನು ಲೋಕಕ್ಕೆ ಪರಿಚಯಿಸುವುದನ್ನು-ಜನಪದರ ಬಾಯಿಂದಲೇ ಕೇಳೋಣ.

ನುಗ್ಗೇಯ ಮರದಡೆ ಕರಿಯ ಕಂಬಳಿ ಹಾಸಿ
ಮುದ್ದಾಡಿ ಪಗಡೇಯಾಡುತಾರೇ-ಶಿವನಯ್ಯ
ನುಗ್ಗಿ ಹೂನಂಗೆ ಮೊಗವೊಳದೋ ॥೧॥

ಆಲದ ಮರದಡಿ ಜಾಲಗಂಬಳಿ ಹಾಸೀ
ಜಲನಾಡಿ ಪಗಡೆಯ ಆಡುತಾರೆ-ಶಿವನಯ್ಯ
ಜಾಲದೂನಂಗೆ ಮೊಗವೊಳದೋ ॥೨॥

ನಾಗರ ಕೋಲು ರನ್ನಾದ ಸ್ವಾರೆ ಬುರುಡೆ
ಕನ್ನೆ ಸ್ವಾಲಗಿತ್ತಿ ಕಾಡ ಬೇಟೇ-ಗೋಗುವಾಗ
ಸ್ವಾಮಿ ಸಿವನಯ್ಯ ಎದುರಾದ್ರೋ ॥೩॥

ಸ್ವಾಮೀ ಸಿವನಯ್ಯ ಎದುರಾಗಿ ಏನಂದ್ರು
ಎಲ್ಲಿಗೆ ಸೋಲಗಿತ್ತಿ ದುರಪಯಣ ॥೪॥

ನೂಲೇಯ ಗೆಣಸು, ಬಿದಿರಕ್ಕಿ ಜೇನುತುಪ್ಪಾ
ನೂರೊಂದು ಲಿಂಗಾಕೆ ಎಡೆಯಾದೋ ॥೫॥

ಆಪಾತುಲವರು ಕೇಳುತಾರೆ ಶಿವನಯ್ಯೋ
ಮಾಯವಾಗಿ ಅವರು ಹೊರಟಾರೋ ॥ ೬ ॥

ಗಂಡುಡುಗೆಲವಳು ಕೂತವಳೆ ಸ್ವಾಲಗಿತ್ತೀ
ಗೆಡ್ಡೆಗುಂಡೀಯಲಗದವಳೆ – ಸ್ವಾಲಗಿತ್ತೀ
ಚೀಲಕೆ ಅವಳು ತುಂಬಾಳೇ ॥ ೭ ॥

ಚೀಲುಕೆಲವಳು ತುಂಬುತಾಳೆ ಸ್ವಾಲಗಿತ್ತೀ
ಗೆಡ್ಡೆ ಚೀಲಾಪ ಪೊಲುದಾಳೇ–ಸ್ವಾಲಗಿತ್ತಿ
ಎತ್ತುಕ್ಕಾಗದೆ ದುಃಖವಾಡೀ ॥ ೮ ॥

*ಮದ್ದಿನ ಮಧ್ಯಾಹ್ನ

ಗೋಳು ಗೋಳನ್ನೆ ಮಾಡವಳೆ ಸ್ವಾಲಗಿತ್ತಿ
ಗೋಳು ಮುಟ್ಟೀತು ಸಿವನೀಗೆ ॥ ೯ ॥

ಸ್ವಾಮೀ ಶಿವನಯ್ಯ ದಾಸಪ್ಪನ್ಯಾಸ ತಾಳೀ
ಆನಂದಡವೀಗೆ ಬರುತಾರೋ ॥ ೧೦ ॥

ಯಾವೂರು ದಾಸಪ್ಪ ಯಾವ ಕೇರಿದಾಸಪ್ಪ
ಗೆಡ್ಡೇ ಚೀಲಾವ ಎತ್ತಬನ್ನೀ ॥ ೧೧ ॥

ಎತ್ತಿದಂಗೆ ಲವರು ಎತ್ತಿಬುಟ್ಟು ಶಿವನಯ್ಯೋ
ಮಾಯವಾಗಿಲವರು ಹೊರಟಾರೋ ॥ ॥ ೧೨ ॥

ಗವಿಯ ಬಾಕಿಲಿಗೆ ಹೋಗವಳೆ ಸ್ವಾಲಗಿತ್ತೀ
ಚೀಲವಲಪಳು ಇಳುಸವಳೆ ॥ ೧೩ ॥

ಚೀಲಾ ಎಲವಳೂ ಇಳಿಸವಳೆ ಸ್ವಾಲಗಿತ್ತಿ
ಗೆಡ್ಡೇಯುಲವಳೂ ತೆಗೆದಾಳೋ ॥ ೧೪ ॥

ಸ್ವಾಮಿ ಸಿವನಯ್ಯಾ ಏನಂತ ಗ್ಯಾನವಮಾಡಾನೋ
ಸೋಲಿಗರೆಣ್ಣಿನ ದುಡಮುನವಾ — ಈಗಲಾದರೆ
ನಾನು ನೋಡಬೇಕೂ... ॥ ೧೫ ॥

ಗೆಡ್ಡೆ ಗೆಣಸನ್ನು ಚೀಲದಲ್ಲಿ ಎತ್ತಿಕೊಂಡು ಗವಿಯ ಬಾಗಿಲಿಗೆ ಬಂದಾಗ ಶಿವನು ದಾಸಯ್ಯನ ವೇಷ ತಾಳಿ ಹಸಿವು ಎಂದು ಹೇಳುತ್ತಾನೆ. ಗೆಡ್ಡೆಯನ್ನು ಕಾಡಿನಿಂದ ತಂದಿದ್ದೀನಿ ತಿಂದು ನಿನ್ನ ಹಸಿವನ್ನು ಹಿಂಗಿಸಿಕೋ ಎಂದು ಹೇಳುತ್ತಾಳೆ.

ಯಾವೂರೋ ದಾಸಪ್ಪ, ಯಾವ ಕೇರಿ ದಾಸಪ್ಪ
ಊಟಾನ ನೀವು ಮಾಡ ಬನ್ನೀ ॥ ೧೬ ॥

ಸ್ನಾನ ಜಪವನ್ನಾ ಮಾಡಬೇಕು ಕೇಳೆಣ್ಣೆ
ನಾವು ಅಂಗೆಲ್ಲ ಊಟ ಮಾಡಲ್ಲೆ ॥ ೧೭ ॥

ಅಕ್ಕಿ–ಪಕ್ಷಿ ಕುಡಿಯಾಕೆ ತೊಟ್ಟು ನೀರಿಲ್ಲಾ
ಎಲ್ಲೋಗಿ ಶಿವನೆ ತರಬಲ್ಲೇ ॥ ೧೮ ॥

ಚಿನ್ನದಾರೇ ಕೋಲು ರನ್ನಾದ ಸ್ವಾರೆ ಬುರುಡೇ
ಸಣ್ಣವೇ ಮಾಡಿ ಇಡಕೊಂಡೂ ॥ ೧೯ ॥

ಸಣ್ಣವೇ ಮಾಡಿ ಇಡಕೊಂಡೆತ್ತಿಕೊಂಡು ಸ್ವಾಲಗಿತ್ತಿ
ದೇವ್ರ ಬೆಟ್ಟಾಕೇ ಹೊರಟಾಳೋ ॥ ೨೦ ॥

ತಾಯಿ ತಂದೇನ ನೆನಕೊಂಡು ಸ್ವಾಲಗಿತ್ತೀ
ಬಂಡೇಗ್ ಮೂರೇಟಾ ಒಡೆದಾಳೋ-ಸೋಲಗಿತ್ತಿ
ಏನಂತಲಾಗ ನೆನುದಾಳೋ ॥ ೨೧ ॥

ಒಬ್ಬ ತಾಯೀಗೇ ಒಬ್ಬಾನೆ ತಂದೇಗುಟ್ಟಿದ್ದರೇ
ಯಜ್ಜದೇಲಿ ನೀರು ಬರಾವಲೀ ॥ ೨೨ ॥

ಒಂದು ಎಜ್ಜದೇಲಿ ಹಾಲನಂಗೆ ನೀರುಬಂದೋ
ಒಂದು ಎಜ್ಜದೇಲಿ ಸಿರಿಗಂಧ* ॥ ೨೩ ॥

ಹೀಗೆ ಬಂದ ಗಂಧ–ನೀರನ್ನು ತೋರಿಸಿ ಸೋಲಗಿತ್ತಿ ಹೇಳುತ್ತಾಳೆ.

ಬನ್ನೀ ದಾಸಪ್ಪ ಸ್ನಾನವೆ ಮಾಡೀಕೊಳ್ಳಿ
ಅಂಗಂತಲವಳೂ ಏಳುತಾಳೇ ॥ ೨೪ ॥

ನೀರ ಕೊಳದೇವಿ ಸ್ನಾನಾವೆ ಮಾಡಿಕೊಳ್ಳಿ
ಗಂಧದ ಸೋಣೆಯು ಗಂಧಾ ದರಿಸೀ–ದಾಸಯ್ಯ
ಹಾಲಿನ ಕೊಳದೇಲಿ ಜಪ ಮಾಡೀ ॥ ೨೫ ॥

ಶಿವನಾಂಕಾರ ಸ್ವಾಮಿಯು ಹಾಗೆಯೇ ಮಾಡುತ್ತಾನೆ–ಜನಪದರು ಶಿವ ಭಕ್ತರ ಬಾಂಧವ್ಯವನ್ನು ಚಿತ್ರಿಸುವ ರೀತಿ ಮನೋಜ್ಞವಾಗಿರುತ್ತದೆ. ಹೀಗೆ ಓತಪ್ರೋತವಾಗಿ ಹಾಡು ಸಾಗುತ್ತದೆ. ಕಾಡು ಕಾಡು ಸುತ್ತಿ ಕಾಡು ಮಲ್ಲಿಗೆ ಪುಷ್ಪ ತಂದು, ತೇಗದೆಲೆ ಕಿತ್ತು ಜೊನ್ನೆ (ದೊನ್ನೆ) ಮಾಡಿ, ನರಾಲೆಯು ಗೆಣಸು, ಕಿರು ಜೇನು ತುಪ್ಪಾ ಬಿಟ್ಟು ಸ್ವಾಮಿಗೆ ಎಡೆಮಾಡಿ ಊಟ ಬಡಿಸುತ್ತಾಳೆ. ಕಡೆಗೆ ಶಿವನು ನಿಜರೂಪ ತಾಳಿ ....

ಸತ್ಯಾಕೆ ನಾನು ಮೆಚ್ಚೀದೆ ಕಾಣೆಣ್ಣೆ
ನಡಿಯೆಣ್ಣೆ ನನ್ನ ಚಿನ್ನ ಇಂದೇ ॥
ತಂದೆ ಕಾರಯ್ನ ಬಿಟ್ಟು ತಾಯಿ ಸಂಕಮ್ನ ಬಿಟ್ಟು
ಬರುಲಾರೆ ಸ್ವಾಮಿ ಚಿನ್ನ ಇಂದೇ ॥

ತಂದೇನು ನಾನೆ, ತಾಯೀನು ನಾನೇ
ಬಾರೆಣ್ಣೆ ನನ್ನ ಚಿನ್ನ ಇಂದೇ ॥

---

* ಮಡಿವಾಳ ಊರಿನ ಪೂರ್ವಕ್ಕೆ ನಡೆದರೆ ಐದು ಸಾವಿರ ಮೀ.ಗೂ ಎತ್ತರವಾದ ಮರಳು ಮಿಶ್ರಿತ ಸುರುಜುಗಲ್ಲಿನ ಪರ್ವತ ಕಾಣುತ್ತದೆ. ಗರುಡುನಂಬಿ ಶಿಖರದ ಮೇಲ್ಭಾಗ ದಲ್ಲಿದೆ. ಆದರೆ ಕೆಳಗೆ ಒಂದು ಕಲ್ಲಿನಲ್ಲಿ ಮೂರು ಕುಳಿಗವೆ. ಇಂದಿಗೂ ಒಂದು ಕುಳಿ ಯಲ್ಲಿ ನೀರು. ಮತ್ತೊಂದು ಕುಳಿಯಲ್ಲಿ ಗಂಧ ಬರುವುದನ್ನು ನೋಡಿ ಬಂದಿರುತ್ತೇವೆ. (ಗಂಧದಂತೆಯೇ ಇದ್ದರೂ ವಾಸನೆ ಇಲ್ಲ) ಅದರ ಭಾವ ಚಿತ್ರವನ್ನು ತೆಗೆದುಕೊಂಡು ಬಂದಿರುತ್ತೇನೆ.

ಹೀಗೆ ಎಲ್ಲರನ್ನೂ ಬಿಟ್ಟು ನಾನು ಹೇಗೆ ಬರಲಿ ಎಂದರೆ—

ಅಕ್ಕಾನು ನಾನೆ ತಂಗೀನು ನಾನೇ
ಅಣ್ಣ ತಮ್ಮದಿರೂ ನಾನೇನೇ—
ನಡಿ ಎಣ್ಣೆ ನನ್ನ ಒಳಗುಡಿಗೇ— ॥

ಈಗಲೂ ಸೋಲಗಿತ್ತಿಯು ಸ್ವಾಮಿ ಶಿವನಾಂಕಾರನ ಒಳಗುಡಿಯಲ್ಲಿರುವುದನ್ನು ಕಾಣಬಹುದು, ಸೋಲಿಗರ ಹೆಣ್ಣು ಶಿವನ ಸಾನ್ನಿಧ್ಯದಲ್ಲಿ ಶಾಶ್ವತವಾಗಿ, ಪೂಜಾರ್ಹಳಾಗಿ ನೆಲೆಗೊಂಡಿದ್ದಾಳೆ ಹಿರೇಮಡಿವಾಳದಲ್ಲಿ

ವಕ್ತೃ ವಿವರ

1.	ಶ್ರೀ ಕೆಂಪಯ್ಯ	ಗಂ.	ಇರುಳಿಗ	45 ವರ್ಷ	ಮಡಿವಾಳ
2.	ಶ್ರೀ ಶಿವನಾಂಕಾರಯ್ಯ	ಗಂ.	,,	40 ,,	,,
3.	ಶ್ರೀ ಬೈರಯ್ಯ	ಗಂ.	,,	42 ,,	,,
4.	ಶ್ರೀ ಬೈರಲಿಂಗಯ್ಯ	ಗಂ.	,,	35 ,,	,,
5.	ಶ್ರೀಮತಿ ಮದ್ದೂರಮ್ಮ	ಹೆಂ.	,,	28 ,,	,,
6.	ಶ್ರೀ ಕೆಂಪಮ್ಮ	ಹೆಂ.	,,	30 ,,	,,
7.	ಶ್ರೀ ಶಿವಮಣಾದಮ್ಮ	ಹೆಂ.	,,	32 ,,	,,
8.	ಈರಮ್ಮ	ಹೆಂ.	,,	35 ,,	,,

ಬೇಟಿ ಕೊಟ್ಟ ದಿನಗಳು

1. 27.6.95
2. 28.7.95
3. 14.9.95
4. 28.10.95

ಸಹಕಾರ→ಶ್ರೀ ರೇವಿ
ಶ್ರೀ ಕಬ್ಬಾಳಯ್ಯ
ಶ್ರೀ ಮರಿಯಪ್ಪ
} KITDP— ಕಾರ್ಯಕರ್ತರು [Kanakapura Tribal Develpment Programme]

ಕೃತಜ್ಞತೆಗಳು → ಶ್ರೀಯುತ ಬಿ. ಶಿವರಾಜೇಗೌಡ K. I T. D. P ನಿರ್ದೇಶಕರು. ಕನಕಪುರ

ಸಾರಂಗಮಠ ಇತಿಹಾಸ

ಡಾ॥ ಬಸವಲಿಂಗ ಸೊಪ್ಪಿಮಠ

ಕರ್ನಾಟಕದ ಪ್ರಾಚೀನ ವೀರಶೈವ ಮಠಗಳಲ್ಲಿ ಸಾರಂಗಮಠವೂ ಒಂದು. ಉಜ್ಜಯಿನಿ ಸಿಂಹಾಸನದ ಮರುಳಸಿದ್ಧೇಶ್ವರನ ಶಾಖೆಗೆ ಸೇರಿರುವ ಇದು ಗುರುಸ್ಥಲದ (ಪಂಚಾಚಾರ್ಯ ಸಂಪ್ರದಾಯ) ಮಠವಾಗಿದೆ. ಈ ಮಠದ ಸ್ವಾಮಿಗಳು ವಿರಕ್ತರಿರುವ ಹಾಗೆ (ಪಟ್ಟಾಧ್ಯಕ್ಷರು), ಸಾರಂಗಮಠ ಹೆಸರಿನ ಗೃಹಸ್ಥ ಮನೆತನದವರೂ ಕರ್ನಾಟಕ ದಲ್ಲಿದ್ದಾರೆ. "ಶ್ರೀಮತ್ ಪರಮಪಾವನ ಚಾರುಚರಿತ್ರ ಚರಚಕ್ರವರ್ತಿ ಕಾಶೀ ಸಾರಂಗ ಸಿಂಹಾಸನಪತಿ ಧರ್ಮಕಪ್ಪಡಿ ಕಾರಣಕರ್ತರಾದಂಥ..." ಎಂದು ಮೊದಲಾಗುವ ಒಕ್ಕಣಿಯನ್ನು ಇವರು ಹೊಂದಿದ್ದಾರೆ. ಇಲ್ಲಿ ಸಾರಂಗ ಎಂಬ ವ್ಯಕ್ತಿ ಯನ್ನು ಕಾಶಿ ಮತ್ತು ಕಪ್ಪಡಿ (ಕೂಡಲ ಸಂಗಮ) ಗಳಿಗೆ ಸಂಬಂಧಿಸಿ ಸ್ತುತಿಸಲಾಗಿದೆ. ಕಾಶಿ ಮತ್ತು ಕಪ್ಪಡಿಗಳು ಮಾತ್ರವಲ್ಲ, ಬಹುತೇಕ ದಕ್ಷಿಣ ಭಾರತದಲ್ಲಿ ಸಾರಂಗಮಠ ಗಳಿದ್ದ ಬಗೆಗೆ ಆಧಾರಗಳಿವೆ. ಕರ್ನಾಟಕದಲ್ಲಿ ಕೂಡಲ ಸಂಗಮವೇ ಮುಖ್ಯ ನೆಲೆ ಯಾಗಿದ್ದು, ಈಗಲೂ ಇಲ್ಲಿ ಸಾರಂಗಮಠ ಅಸ್ತಿತ್ವದಲ್ಲಿದೆ. ಅದೇ ರೀತಿ ಗುಳೇದಗುಡ್ಡ, ಸಿಂದಗಿ (ವಿಜಾಪುರ ಜಿಲ್ಲೆ) ಯಲ್ಲೂ ಸಾರಂಗಮಠ ಇದೆ.

ಸಂಗಮ ಮತ್ತು ಗುಳೇದಗುಡ್ಡದ ಸಾರಂಗಮಠ ಅಧಿಪತಿಗಳಿಂದ ಬಹಳ ಹಿಂದೆಯೇ ಡಾ. ಫ. ಗು. ಹಳಕಟ್ಟಿ ಅವರು ಸಾರಂಗಮಠ ಚರಿತ್ರೆಯನ್ನು ಹೇಳುವ ಎರಡು ಹಸ್ತಪ್ರತಿಗಳನ್ನು ಸಂಗ್ರಹಿಸಿ 'ಸಾರಂಗಮಠಾಧೀಶ್ವರರು' ಎಂಬ 23 ಪುಟಗಳ ಕಿರುಹೊತ್ತಿಗೆಯೊಂದನ್ನು ಪ್ರಕಟಿಸಿದ್ದಾರೆ.[1] ಸಾರಂಗಮಠ ಇತಿಹಾಸಕ್ಕೆ ಸಂಬಂಧಿಸಿ ನಮ್ಮ ಕಣ್ಣಮುಂದೆ ಇರುವುದು ಇದೊಂದೇ ಕೃತಿ. ಕೃತಿ ಚಿಕ್ಕದಾದರೂ ಇದು ನೀಡುವ ಸಾಮಗ್ರಿ, ಮಾಡುವ ಉಲ್ಲೇಖ ಮಹತ್ಪೂರ್ಣವಾಗಿದ್ದು ಸಾರಂಗಮಠ ಇತಿಹಾಸ ಸಂಶೋಧಕರಿಗೆ ಇದು ಅವಶ್ಯ ಆಕರಗ್ರಂಥವಾಗಿದೆ.

ಸಾರಂಗಮಠದ ಸ್ಥಾಪಕ ಸಾರಂಗ, ಸಾರಂಗಸಿದ್ಧೇಶ್ವರ, ಸಾರಂಗಧರ, ಸಾರಂಗ ದೇವ ಮೊದಲಾದ ಹೆಸರಿನ ಸಾರಂಗ ಎಂಬುದನ್ನು ಶ್ರೀ ಹಳಕಟ್ಟಿ ಅವರ 'ಸಾರಂಗ ಮಠಾಧೀಶ್ವರರು' ಕೃತಿ ಹೇಳುತ್ತಿದ್ದಾಗಲೂ ಈತ ಯಾರು ? ಈತನ ನಿಜಹಿನ್ನೆಲೆ ಏನು ? ಎಂಬಂಥ ಪ್ರಶ್ನೆಗಳಿಗೆ ಸಂಶೋಧನಾತ್ಮಕ ಉತ್ತರವನ್ನು ಇಲ್ಲಿ ಹೇಳಲಾಗಿಲ್ಲ,

1. ಡಾ॥ ಫ. ಗು. ಹಳಕಟ್ಟಿ (ಸಂ.) ಸಾರಂಗಮಠಾಧೀಶ್ವರರು, ಶಿವಾನುಭವ ಗ್ರಂಥಮಾಲಾ, ವಿಜಾಪುರ 1956.

ಲೋಕದಲ್ಲಿ ಅನೀತಿ ಹೆಚ್ಚಾಗಿದ್ದಾಗ ಶಿವನ ದಕ್ಷಿಣಭಾಗದಿಂದ ಸಾರಂಗ ಮುನಿವರನು ಅವತರಿಸಿ ಕಾಶಿಯಲ್ಲಿ ಕಾಣಿಸಿಕೊಂಡನು ಎನ್ನಲಾಗಿದೆ. ಸಾರಂಗಮಠದ ಒಕ್ಕಣೆಯಲ್ಲಿ 'ಕಾಶೀ ಸಾರಂಗ ಸಿಂಹಾಸನಪತಿ' ಎಂಬ ಪದವಿದ್ದು. ಈ ಹಿನ್ನೆಲೆಯಲ್ಲಿ "ಸಾರಂಗದೇವನು ಕಾಶೀಪಟ್ಟಣದವನೆಂಬ ಅನುಮಾನ ಉಂಟಾಗುತ್ತದೆ" ಎಂದಿದ್ದಾರೆ ಶ್ರೀ ಹಳಕಟ್ಟಿ ಯುವರು[2] ಸಾರಂಗನು ಕಾಶಿಯಲ್ಲಿದ್ದಾಗ "ಅಲ್ಲಿ ಕಲೀಂದ್ರರು (ಮುಸಲ್ಮಾನರು) ಜನರ ಮೇಲೆ ರಾಜ್ಯಮಾಡುತ್ತ ಪ್ರಬಲರಾಗಿದ್ದರು. ಆಗ ಈ ಭಾಗದಲ್ಲಿ ಮಳೆಯು ಬೀಳದೆ ಜನರು ತಾಪತ್ರಯವನ್ನು ಪಡುತ್ತಿರುವುದನ್ನು ಸಾರಂಗ ಮುನಿಯು ನೋಡಿ ಪರ್ಜನ್ಯವು ಬರುವಂತೆ ಮಾಡಿದನು, ಹೀಗೆ ಜನರ ಸಂಕಷ್ಟಗಳನ್ನು ದೂರ ಮಾದಿದನು, ಆಗ ಸಾರಂಗದೇವನಿಗೆ 'ಮಳೆಯ ಮಲ್ಲೇಶ' ನೆಂಬ ಹೆಸರು ಪ್ರಾಪ್ತ ವಾಯಿತು[3] ಎಂದು ಬರೆಯುತ್ತ ಮಳೆಯುಮಲ್ಲೇಶನೆಂದು ಹೆಸರಾದ ಸಾರಂಗ ಮುನಿಯು ಕಾಶಿಯಿಂದ ಶ್ರೀಶೈಲಕ್ಕೆ ಬಂದು 'ಕಪಿಲಸಿದ್ಧೇಶ್ವರ' ನೆಂಬ ಹೆಸರಿನಿಂದ ಇರುತ್ತಿರಲಾಗಿ, ಅಲ್ಲಿ ಕೈಕಾಲುಗಳಿಲ್ಲದೆ ಕಷ್ಟದಿಂದ ಬಳಲುತ್ತಿದ್ದ ಸಾರಂಗದೇವ ಎಂಬ ಅರಸನನ್ನು ಕಂಡು ಕರುಣೆದೋರಿ ಅವನಿಗೆ ಕೈಕಾಲುಗಳನ್ನಿತ್ತು ಉದ್ಧರಿಸಿ, ಆ ಅರಸನ ವಿನಂತಿಯ ಮೇರೆಗೆ ತನ್ನ ಕಪಿಲಸಿದ್ಧೇಶ್ವರ ಹೆಸರಿಗೆ ಬದಲು ಅರಸನ 'ಸಾರಂಗದೇವ' ಹೆಸರನ್ನೇ ಧರಿಸಿದನಂತೆ. ಇಲ್ಲಿಂದ ಆತ ಪುದುಚೆರಿ, ವಿಜಯನಗರ, ಶಿವಗಂಗೆ, ಉಜ್ಜಯಿನಿ, ಕಪ್ಪಡಿ, ಆಲಮೇಲ, ಸಿಂದಗಿ, ಬಾಗೇವಾಡಿ, ಬೆಳ್ಳುಬ್ಬಿ, ಯರ್ಜರಿ, ಹುನಗುಂದ, ಕೆಲೂರ, ಚಳ್ಳಗೆರೆ, ಹೂಲಿ ಮೊದಲಾದ ಊರುಗಳಿಗೆ ತೆರಳಿ ಸಾರಂಗಮಠಗಳನ್ನು ಸ್ಥಾಪಿಸಿದನೆಂದು ಡಾ|| ಹಳಕಟ್ಟಿಯವರು ಬರೆದಿದ್ದಾರೆ. ಹೀಗೆ ಆಂಧ್ರ, ಕರ್ನಾಟಕ, ತಮಿಳ್ನಾಡು ರಾಜ್ಯಗಳಲ್ಲಿ ಸಂಚರಿಸಿ ತನ್ನ ಹೆಸರಿನಲ್ಲಿ ವೀರಶೈವ ಮಠಸ್ಥಾಪನೆ ತನ್ಮೂಲಕ ಧರ್ಮಪ್ರಸಾರ ಮಾಡಿದ ಬಹುಮುಖ ಹೆಸರು ಹಾಗೂ ಕಾರ್ಯಗಳ ಸಾರಂಗ ಎಂಬ ಈ ಮಹಾನುಭಾವ ಯಾರು? ಕಾಲ–ದೇಶ ಜೀವನೇತಿಹಾಸಗಳೇನು?

ಡಾ|| ಹಳಕಟ್ಟಿಯವರು ತಮ್ಮ ಸಾರಂಗ ಮಠಾಧೀಶ್ವರರು ಕೃತಿಯಲ್ಲಿ ಸಾರಂಗ ನಿಗಿರುವ ಪರ್ಯಾಯನಾಮಗಳನ್ನು ತಿಳಿಸುತ್ತ, ಕಪಿಲ ಸಿದ್ಧೇಶ್ವರ ಮಳೆಯಮಲ್ಲೇಶ ಹೆಸರಿನ ಈತ ಶ್ರೀಶೈಲದ ಸಾರಂಗದೇವ ಹೆಸರಿನ ಅರಸನನ್ನು ಉದ್ಧರಿಸುವ ಮೂಲಕ ಸಾರಂಗವೆಂದು ಹೆಸರಾದ ಎಂದಿರುವುದು ಪರಿಶೀಲನಾರ್ಹ ವಿಚಾರವಾಗಿದೆ. ಈ ಸಾರಂಗ ಅರಸು ಯಾರು? ಯಾವ ಕಾಲದಲ್ಲಿದ್ದನು? ಕೈ ಕಾಲುಗಳಿಲ್ಲದೆ ಬಳಲು ತ್ತಿರಲು ಕಾರಣವೇನು? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರೆ, ಈತನ

2. ಅದೇ, ಪು. 5.
3. ಅಲ್ಲೇ.
4. ಅದೇ, ಪು. 6.

ಕಾಲದಲ್ಲಿದ್ದು ಈತನನ್ನು ಉದ್ಧರಿಸಿದ ಈತನ ಹೆಸರನ್ನು ತಾನು ಸ್ವೀಕರಿಸಿದ ಕಪಿಲ ಸಿದ್ಧೇಶ್ವರ ಅರ್ಥಾತ್ ಮಳೆಯ ಮಲ್ಲೇಶನ ಕಾಲ ಹೊರಬೀಳುವ ಸಾಧ್ಯತೆ ಇದೆ.

ಡಾ॥ ಹಳಕಟ್ಟಿಯವರು 'ಸಾರಂಗ ಮಠಾಧೀಶ್ವರರು' ಕೃತಿಯಲ್ಲಿ ಕಾಣಿಸಿದ ಸಾರಂಗ ಅರಸನ ಕತೆ ಹೀಗಿದೆ: "ಸಾರಂಗದೇವನು ಕಾಶಿಯಲ್ಲಿ ಬಾದಶಹನಿಂದ ಹಿಂದುಗಳ ಧರ್ಮಕ್ಕೆ ಚ್ಯುತಿ ಬಾರದಂತೆ ವರ್ತಿಸುವೆನೆಂದು ಆಶ್ವಾಸನೆಯನ್ನು ಹೊಂದಿದವನಾಗಿ ಅವನು ದಕ್ಷಿಣ ಪ್ರಾಂತಕ್ಕೆ ಬರುವವನಾದನು. ಈ ದಕ್ಷಿಣ ಪ್ರಾಂತದಲ್ಲಿ ಶ್ರೀ ಶೈಲದಲ್ಲಿ ಒಂದು ಸಂಸ್ಥಾನವಿದ್ದು ಅಲ್ಲಿ ಸಾರಂಗದೇವನೆಂಬ ಅರಸು ಆಳುತ್ತಿದ್ದನು. ಅವನು ಕೈ ಕಾಲುಗಳಿಲ್ಲದೆ ಬಳಲುತ್ತಿದ್ದನು. ಆಗ ಅವನು ಅಲ್ಲಿ ಕಷ್ಟತರವಾದ ತಪಸ್ಸನ್ನು ಆಚರಿಸುತ್ತಿದ್ದನು. ಆಗ ಮಳೆಯ ಮಲ್ಲೇಶ್ವರನು 'ಕಪಿಲ ಸಿದ್ಧ' ಎಂಬ ಹೆಸರಿನಿಂದ ಈ ಪ್ರಾಂತದಲ್ಲೆಲ್ಲ ಬಹು ಪ್ರಸಿದ್ಧಿಯನ್ನು ಹೊಂದಿದ್ದನು. ಆಗ ಸಾರಂಗದೇವ ನೃಪತಿಯು ಅವನನ್ನು ತನ್ನಲ್ಲಿಗೆ ಬರಮಾಡಿ ಕೊಂಡು ಅವನಿಗೆ ಶರಣಾಗತನಾಲು ಅವನಿಗೆ ಕೈಕಾಲುಗಳು ಬಂದವು. ಆಗ ಅರಸನು ಅವನಿಗೋಸ್ಕರ ಬಹಳ ಭಕ್ತಿಯನ್ನು ತಾಳಿ ಅವನಿಗೆ ಸಿದ್ಧಾಪುರ ಎಂಬ ಗ್ರಾಮವನ್ನು ಕಾಣಿಕೆಯಾಗಿ ಅರ್ಪಿಸಿದನು. ಮತ್ತು ತನ್ನ ಹೆಸರನ್ನೇ ಇಟ್ಟುಕೊಳ್ಳಬೇಕೆಂದು ಅರಸನು ವಿಜ್ಞಾಪಿಸಿಕೊಳ್ಳಲು ಸಾರಂಗಮುನಿಯು ತನ್ನ ಮೊದಲಿನ ಹೆಸರು ಕಪಿಲ ಸಿದ್ಧೇಶರ ಇದ್ದು, ಆದನ್ನು ಬಿಟ್ಟು 'ಸಾರಂಗದೇವ'ನೆಂಬ ಹೆಸರನ್ನು ತಾಳಿದನು. ಮತ್ತು ಶ್ರೀಪರ್ವತದಲ್ಲಿ ಸಾರಂಗಮಠವೆಂಬ ಹೆಸರಿನಿಂದ ಒಂದು ಮಠವನ್ನು ಸ್ಥಾಪಿಸಿದನು; ಈ ಸಾರಂಗ ಮಠವು ಈಗಲೂ ಅಲ್ಲಿ ಅಸ್ತಿತ್ವದಲ್ಲಿದೆ"[5]

ಸಾರಂಗ ಮಠಗಳ ಹಸ್ತಪ್ರತಿ (ಕಪ್ಪಡಿ ಮತ್ತು ಗುಳೇದ ಗುಡ್ಡ) ಆಧಾರದ ಮೇಲೆ ಡಾ॥ ಹಳಕಟ್ಟಿ ಅವರು ಕೊಟ್ಟಿರುವ ಮೇಲಿನ ಕತೆಗೆ ಹೊರತಾಗಿ ಸಾರಂಗನ ಕತಯೊಂದು ಸಿದ್ಧನಂಜೇಶನ 'ಗುರು ರಾಜ ಚಾರಿತ್ರ'ದಲ್ಲಿ ಬಂದಿದ್ದು, ಡಾ॥ ಹಳಕಟ್ಟಿ ಆದಿಯಾಗಿ ಯಾರೂ ಇದನ್ನು ಗಮನಿಸಿಲ್ಲ. ಸಾರಂಗನ ಇತಿಹಾಸಕ್ಕೆ ತನ್ಮೂಲಕ ಸಾರಂಗಮಠ ಇತಿಹಾಸಕ್ಕೆ ಒಳ್ಳೆಯ ಆಧಾರವಾಗುವ ಈ ವಿಖ್ಯಾತ ಕತೆ ಹೀಗಿದೆ:

ಹಿಂದಕ್ಕೆ ಶಾಂತರಾಯ ಎಂಬ ಅರಸು. ಈತನ ಮಗ ಸಾರಂಗಧರ ಇವನ ಚಿಕ್ಕಮ್ಮ ಚಿತ್ರಾಂಗಿ ಸಾರಂಧರ ಒಮ್ಮೆ ಡೇಗೆ (ಗಿಡುಗ ?) ಹಾರಿಸುತ್ತ ಚಿತ್ರಾಂಗಿಯ ಅರಮನೆಗೆ ಬಂದ. ಇವನಿಗೆ ಮೋಹಿತಳಾದ ಆಕೆ ಇವನನ್ನು ಕಾಮಕೇಳಿಗೆ ಕರೆದಳು. ಬೆಚ್ಚಿಬಿದ್ದ ಸಾರಂಗಧರ 'ತಂದೆಗಳ ಸತಿ ತಾಯಿ' ಎಂದು ಬುದ್ಧಿವಾದ ಹೇಳಿ ವಿಫಲ ನಾಗಿ ಕೋಸರಿ ಅಲ್ಲಿಂದ ಹೊರಬಿದ್ದ. ತನ್ನ ವಶವಾಗದ್ದಕ್ಕೆ ಕುಪಿತಳಾದ ಚಿತ್ರಾಂಗಿ ಈ ವಾರ್ತೆ ಗಂಡನ ಕಿವಿಗೆ ಬಿದ್ದರೆ ಉಳಿಗಾಲವಿಲ್ಲವೆಂದು ಮೈಯೆಲ್ಲ ಚೂರಿದ ಗಾಯ

[5] ಪೂರ್ವೋಕ್ತ, ಪು. 6

ಮಾಡಿಕೊಂಡು ಸಾರಂಗ ತನ್ನ ಮಾನಭಂಗಕ್ಕೆ ಎಳಸಿದನೆಂದು ದೂರುತ್ತಾಳೆ. ವಿವೇಚನಾಹೀನ ಅರಸು ಹಿಂದು-ಮುಂದು ವಿಚಾರಿಸದೆ ತನ್ನ ಅಪ್ತಭಟರನ್ನು ಕರೆಸಿ ಮಗನ ಕೈಕಾಲು ಕತ್ತರಿಸಲು ಅಪ್ಪಣೆ ಮಾಡುತ್ತಾನೆ. ನಿರಪರಾಧಿ ಸಾರಂಗ 'ಸರ್ವವೂ ಶಿವಾಧೀನ'ವೆಂದು ಒಪ್ಪಿ, ಕತ್ತರಿಸಿದ ಕೈಕಾಲುಗಳಿಂದ ವೇದನೆಯಲ್ಲಿ ಬಹುತರವಾಗಿ ಒದ್ದಾಡುತ್ತಿರುವಾಗ ಆಕಾಶಗಾಮಿಯಾಗಿ ಹೊರಟಿದ್ದ ಮತ್ಸ್ಯೇಂದ್ರ ಸಿದ್ಧ ಸಾರಂಗನನ್ನು ಕಂಡು ಕರುಣೆದೋರಿ ಅವನ ಕೈಕಾಲು ಪುನಃ ಚಿಗಿಯುವಂತೆ ಮಾಡುತ್ತಾನಲ್ಲದೆ ಮಂತ್ರೋಪದೇಶವಿತ್ತು ಅವನನ್ನು 'ಸಾರಂಗ ಸಿದ್ಧ'ನಾಗಿಸುತ್ತಾನೆ.[5]

ಇಷ್ಟು ಗುರುರಾಜ ಚಾರಿತ್ರ ಹೇಳುವ ಸಾರಂಗನ ಕತೆ. ಕಮ್ಮಟದುರ್ಗದ ದೊರೆ ಕಂಪಿಲನ ಮಗ ಕುಮಾರರಾಮನ ಕತೆಯನ್ನು ಹೋಲುತ್ತಿರುವ ಈ ಕತೆಯಲ್ಲಿ[6] ಮತ್ಸ್ಯೇಂದ್ರ ಸಿದ್ಧನ ಪ್ರವೇಶ, ಈತನಿಂದ ಮರಳಿ ಕೈಕಾಲು ಪಡೆದ ಸಾರಂಗ 'ಸಾರಂಗಸಿದ್ಧ'ನಾದ ವಿಚಾರ ಮಹತ್ವ "ಸಾರಂಗಧರನತ್ತ ನೋವಿನಿಂದ-

ಡಾ॥ ಹಳಕಟ್ಟಿಯವರು ಕೊಟ್ಟಿರುವ ಸಾರಂಗನ ಕತೆ ಗುರುರಾಜ ಚಾರಿತ್ರ ಹೇಳುವ ಸಾರಂಗನ ಕತೆ ಒಂದೇ ಎನ್ನವಲ್ಲಿ ಅನುಮಾನವಿಲ್ಲ. ಎರಡೂ ಕತೆಗಳಲ್ಲಿ ಸಮಾನವಾಗಿರುವ ಅಂಶವೆಂದರೆ, ಸಾರಂಗಧರ ರಾಜಮನೆತನದ ವ್ಯಕ್ತಿ; ಈತ ಅಂಗಹೀನನಾಗಿ ನರಳುತ್ತಿದ್ದಾಗ 'ಸಿದ್ಧ' ನೊಬ್ಬನಿಂದ ಉದ್ಧಾರವಾದ, ಈ ಸಿದ್ಧ ಕಪಿಲ ಸಿದ್ಧ ಹೆಸರಿನ ಮಳೆಯಮಲ್ಲೇಶ ಅರ್ಥಾತ್ ಸಾರಂಗಮಠ ಸ್ಥಾಪಕ ಸಾರಂಗ ಎಂದು ಡಾ॥ ಹಳಕಟ್ಟಿಯವರು ಹೇಳುತ್ತಿದ್ದರೆ, ಮತ್ಸ್ಯೇಂದ್ರಸಿದ್ಧ ಎಂದು ಗುರುರಾಜ ಚಾರಿತ್ರ ಹೇಳುತ್ತದೆ.

ಹೊರಳುತ್ತ ಶಿವಧೋ ಎಂಬನಿತರೊಳಗಾಕಾಶ
ಸರಣಿವಿಡಿದುಂ ಬರುತ ಮಚ್ಚೇಂದ್ರಸಿದ್ಧಪತಿ
ಪಿರಿದಾರ್ತ ವಚನಮಂ ಕೇಳಿ ಕರುಣಂ ಪುಟ್ಟಿ ಇಳಿಗಿಳಿದುವನಕಂಡು
ಪರಿವಿಡಿಯೊಳೆಲ್ಲವಂ ಕೇಳ್ದಂಜಬೇಡೆಂದು
ಹೊರಿಸಿಕೊಂಡು ಪೋಗಿಯೊಂದು ಸುಸ್ಥಾನದೊಳ
ಗಿರಿಸಿ ಮಂತ್ರೋಪದೇಶವನಿತು ಮೇಲೊಂದು ಗುಂಡ ಕಟ್ಟಿದ ನೋಡುತ
ಶಿವನ ಧ್ಯಾನಿಪ್ಪುದೆಂದು ನೇಮಿಸಲ್ ಧ್ಯಾನ ಬಲಿ
ದವಗೆ ಕೈಕಾಲ್ಗಳುಂ ಚಿಗಿತು ಬಂದವು ಸತ್ಯ
ಕವಧಿಯುಂಟೇ ಮುಂದೆ ಸಾರಂಗಸಿದ್ಧನೆಂಬತಿಬಳದ ಸಿದ್ಧನಾದ

—(ಪ್ರೊ। ಸಂ.ಶಿ. ಭೂಸನೂರಮಠ (ಸಂ.), ಗುರುರಾಜಚಾರಿತ್ರ, ಸಂ. 13, ಪ. 59–60

[6]ಮುರಿಗೆ ಶಾಂತವೀರರು ಸಾರಂಗನ ಕುರಿತು ತಮ್ಮ 'ವೈರಾಗ್ಯ ಷಟ್ಪದಿ'ಯಲ್ಲಿ "ಸಿದ್ಧ ಸಾರಂಗನಂ ವ್ಯರ್ಥಕೆ ಘಾತಕದಿ ಚಿತ್ರಾಂಗಿ ಕೈಕಾಲ ಕೊಯ್ಸಿದಳ್" (ಪದ್ಯ 15) ಎಂದಿರುವುದನ್ನು ಗಮನಿಸಬೇಕು (ನೋ : ಮುರಿಗೆ ಶಾಂತವೀರ ಸ್ವಾಮಿಗಳ ಕೃತಿಗಳು, ಸಂ : ಎಸ್. ಶಿವಣ್ಣ)

ಮತ್ಸ್ಯೇಂದ್ರ ಸಿದ್ಧ ವಿಖ್ಯಾತ ನಾದ ಸಿದ್ಧನಾದ ಗೋರಖನಾಥನ ಗುರು ಎನ್ನು ವಲ್ಲಿ ಸಂದೇಹವಿಲ್ಲ. ಗೋರಖನಾಥನನ್ನು ಅಲ್ಲಮಪ್ರಭುದೇವ ಶ್ರೀಶೈಲದಲ್ಲಿ ಸಂಧಿಸುವುದರಿಂದ, ಪ್ರಭುದೇವರ ಕಾಲವಾದ 12ನೆಯ ಶತಮಾನದಲ್ಲಿ ಗೋರಖನನ್ನು, ಆತನ ಗುರು ಮತ್ಸ್ಯೇಂದ್ರನನ್ನು ಊಹಿಸಬಹುದಾಗಿದೆ ಗುರುರಾಜ ಚಾರಿತ್ರದ ಮಾತುಗಳನ್ನು ಒಪ್ಪಿದರೆ, ಮತ್ಸ್ಯೇಂದ್ರನ ಶಿಷ್ಯನಾಗಿ 'ಸಾರಂಗ ಸಿದ್ಧ'ನ ಕಾಲ ಕ್ರಿ.ಶ. 12ನೆಯ ಶತಮಾನವೇ ಆಗುತ್ತದೆ.

ಡಾ॥ ಹಳಕಟ್ಟಿಯವರು ಸಾರಂಗನ ಗುರುವಾಗಿ ಹೇಳಿರುವ 'ಕಪಿಲಸಿದ್ಧ' ಹೆಸರು ಸಿದ್ಧಸಂಪ್ರದಾಯದ ಹೆಸರಾಗಿ ಕೇಳಿಸುತ್ತಿರುವುದು ಗಮನಾರ್ಹವಾಗಿದೆ. ಮತ್ಸ್ಯೇಂದ್ರ ಸಿದ್ಧನನ್ನೇ ಡಾ॥ ಹಳಕಟ್ಟಿಯವರು ಗಮನಿಸಿರುವ ಸಾರಂಗಮಠ ಹಸ್ತಪ್ರತಿಕಾರರು ತಪ್ಪಾಗಿ ಗ್ರಹಿಸಿದರೇನೊ! 'ಕಪಿಲಸಿದ್ಧ' ಹೆಸರಿನ ಚಾರಿತ್ರಿಕ ವ್ಯಕ್ತಿಯೊಬ್ಬ 12ನೆಯ ಶತಮಾನದಲ್ಲಿ ನಮ್ಮ ಕಣ್ಣಿಗೆ ಬೀಳದಿರುವುದರಿಂದ, ಈ ಹೆಸರು ವಿಶೇಷಣವಾಗಿರುವ ಸಾಧ್ಯತೆ ಹೆಚ್ಚಿಗಿರುವುದರಿಂದ ಮತ್ಸ್ಯೇಂದ್ರ ಸಿದ್ಧನೆ ಸಾರಂಗನ ಗುರುವೆಂದೂ ಕಪಿಲಸಿದ್ಧ ಮತ್ಸ್ಯೇಂದ್ರನ ಪರ್ಯಾಯ ನಾಮವಾಗಿರಬಹುದೆ. ಎಂಬ ಸಂದೇಹವನ್ನು ಸದ್ಯಕ್ಕೆ ಸ್ವೀಕರಿಸಬಹುದಾಗಿದೆ.

ಶಿಷ್ಯ ಸಾರಂಗನ ಹೆಸರನ್ನು ಗುರು ಕಪಿಲಸಿದ್ಧ ಸ್ವೀಕರಿಸಿ ಸಾರಂಗ ದೇವನಾದ; ಸಾರಂಗಮಠ ಸ್ಥಾಪಕನಾದ ಎಂಬ ಡಾ॥ ಹಳಕಟ್ಟಿ ಅವರು ಸಂಗ್ರಹಿಸಿರುವ ಹಸ್ತಪ್ರತಿಗಳ ಹೇಳಿಕೆ ತುಂಬ ಅಸಹಜವಾದುದು ಎನ್ನದೆ ವಿಧಿಯಿಲ್ಲ, ಗುರುಪರಂಪರೆಯಲ್ಲಿ ಶಿಷ್ಯನೊಬ್ಬ ಗುರುವಿನ ಹೆಸರನ್ನು ಧರಿಸುವುದು ಇದೆಯೇ ಹೊರತು ಶಿಷ್ಯನ ಹೆಸರನ್ನು ಗುರು ಧಾರಣ ಮಾಡಿರುವುದು ಸಂಪ್ರದಾಯದಲ್ಲಿ ಇಲ್ಲ. ಗುರುವಿನಿಂದ ದೀಕ್ಷೆ ಹೊಂದಿ ಸಾರಂಗನು, 'ಸಾರಂಗಸಿದ್ಧ'ನಾದ ಎಂಬ ಗುರುರಾಜ ಚಾರಿತ್ರ ಹೇಳಿಕೆಯೇ ಸಮಂಜಸ ವಾಗಿದ್ದು, ಈ ಸಾರಂಗಸಿದ್ಧನಿಂದ ಸಾರಂಗಮಠಗಳು ಕಾಣಿಸಿಕೊಂಡಿರುವ ಸಂಭವವಿದೆ. ಹೀಗೆ ಗುರು ಮತ್ಸ್ಯೇಂದ್ರ ನಾಥನ ಪರಂಪರೆಯನ್ನು ಮುಂದುವರಿಸಿಕೊಂಡು ಹೋದ ನಾಥಸಿದ್ಧ ಸಾರಂಗ ಎನ್ನಲು ಮನಸ್ಸಾಗುತ್ತದೆ. ನಾಥ ಸಂಪ್ರದಾಯದ 84 ಜನ ಸಿದ್ಧರಲ್ಲಿ ಸಾರಂಗನ ಹೆಸರಿರುವುದು ಈ ನಿಟ್ಟಿನಲ್ಲಿ ಲಕ್ಷಿಸುವಂತಿದೆ.[7] ಹೀಗೆ ಮೂಲತಃ ನಾಥಪೀಠವಾಗಿರಬಹುದಾದ ಸಾರಂಗಮಠ ವೀರಶೈವ ಮಠವಾಗಿ ಪರಿವರ್ತಿತವಾದುದು ಯಾವಾಗ : ಎಂಬುದರ ಚರ್ಚೆಯನ್ನು ಈ ಲೇಖನದಲ್ಲಿ ಮುಂದೆ ಎತ್ತಿಕೊಳ್ಳುವವನಿದ್ದೇನೆ.

ಸಾರಂಗನಿಗಿರುವ ಪರ್ಯಾಯನಾಮಗಳಾದ ಕಪಿಲಸಿದ್ಧೇಶ್ವರ, ಮಳೆಯಮಲ್ಲೇಶ ಹೆಸರುಗಳಲ್ಲಿ ಮಳೆಯಮಲ್ಲೇಶ ಎಂಬುದು ಥಟ್ಟನೆ ನಮ್ಮನ್ನು ಸೆಳೆಯುವ ಪರಿಚಿತ ಹೆಸರಾಗಿದೆ. ಚೆನ್ನಬಸವಪುರಾಣ, ಗುರುರಾಜಚಾರಿತ್ರ, ವೀರಶೈವಾಮೃತ ಪುರಾಣ,

7. ನೋಡಿ : ಡಾ। ಮ. ಸು. ಕೃಷ್ಣಮೂರ್ತಿ, ಸಿದ್ಧಸಾಹಿತ್ಯ, ಪು.

ಪ್ರೌಢರಾಯನ ಕಾವ್ಯ ಮೊದಲಾದ ವೀರಶೈವ ಕಾವ್ಯ ಪುರಾಣಗಳಲ್ಲಿ ಮಳೆಯ ಮಲ್ಲೇಶ ಉಕ್ತನಾಗಿದ್ದಾನೆ. ಬರಗಾಲದಲ್ಲಿ ಜನ ತತ್ತರಿಸುತ್ತಿದ್ದಾಗ ಮಳೆ ತರಿಸಿದ್ದರಿಂದ ಮಳೆಯಮಲ್ಲೇಶ ಹೆಸರು ಈತನಿಗೆ ಪ್ರಾಪ್ತವಾಯಿತೆಂದು ಈ ಕೃತಿಗಳು ಏಕ ಕಂಠದಿಂದ ಸಾರುತ್ತವೆ. ಡಾ॥ ಹಳಕಟ್ಟಿಯವರು ತಮ್ಮ 'ಸಾರಂಗಮಠಾಧೀಶ್ವರರು' ಕೃತಿಗೆ ಬಳಸಿಕೊಂಡಿರುವ ಹಸ್ತಪ್ರತಿಗಳಲ್ಲೂ ಇದೇ ಅಭಿಪ್ರಾಯವಿದ್ದು, ಕಾಶಿಯಲ್ಲಿ ಮಳೆ ತಂದು ಸಾರಂಗ ಮಳೆಯ ಮಲ್ಲೇಶನಾದ ಎನ್ನಲಾಗಿದೆ. ಚೆನ್ನಬಸವ ಪುರಾಣ ಹೇಳುವಂತೆ, 'ಮರ್ತ್ಯದ ಮಹಾಶರಣರ್ಗೆ ಗುರುವೆನಿಸಿ ಸಕಲ ದೇಶಂಗಳ ಚರಿಸಿದ' ಮಳೆಯ ಮಲ್ಲೇಶ—

> ವರಖಲಿಂದರೇಳುನೂರ್ವರ್ಗೆ ಗುರುವಾಗಿ
> ಹರುಷದಿಂ ಮುಖ್ಖಕ್ಕೆ ಪೋಗಿ ಮಹಿಮೆಯ ತೋರಿ
> ತುರುಕಾಣ್ಯದೊಳಗನಾವೃಷ್ಟಿದೋಷಂ ಬಂದು ಪಸರಿಸೆ ಪವಾಡದಿಂದೆ ॥
> ವರುಷವಂ ಸುರಿಸಿ ಸುರಿತಾಳನಿಂ ಪೂಜೆಯಂ
> ಪಿರಿದಾಗಿ ಕೈಕೊಂಡು ಘನತರ ಕೀರ್ತಿಯಂ
> ಧರಿಸಲಂದಂದಿತ್ತ ಮಳೆಯಮಲ್ಲೇಶನೆಂದೆಂಬ ನಾಮವನಾಂತನು ॥

ಚೆನ್ನಬಸವ ಪುರಾಣ ಹೇಳುವ ಈ ಮಳೆಯ ಮಲ್ಲೇಶ, ಸಾರಂಗನಿಗೆ ಸಂಬಂಧಿಸಿ ಡಾ॥ ಹಳಕಟ್ಟಿ ಸಂಗ್ರಹಿತ ಹಸ್ತಪ್ರತಿಗಳ ಮಳೆಯ ಮಲ್ಲೇಶ ಒಬ್ಬ ವ್ಯಕ್ತಿಯೇ ಆಗಿದ್ದಾನೆ ಎನ್ನಲು ಈತನ ಮಳೆ ಪವಾಡ ಆಧಾರವಾಗಿದೆ. ಈತನ ಈ ಪವಾಡ ಮಕ್ಕಾ ಕಾಶಿ ಎರಡರಲ್ಲಿ ಎಲ್ಲಿಯಾದರೂ ಆಗಿರಲಿ ಖಲಂದರರು (ಮುಸಲ್ಮಾನರು) ಈ ದೇಶದಲ್ಲಿ ಕಾಣಿಸಿಕೊಂಡಾಗಿನ ಕಾಲದಲ್ಲಿ ಎಂಬುದು ಸ್ಪಷ್ಟ. ಸುಮಾರು ಇದೇ ಕಾಲದಲ್ಲಿಯೇ ಪ್ರೌಢರಾಮನ ಕಾವ್ಯದ ಕರ್ತೃ ಅದೃಶ್ಯನ ಗುರು ಬೆಳ್ಳುಬ್ಬಿ ಮಳೆಯ ಮಲ್ಲೇಶ ಬರುತ್ತಾನೆ. ಡಾ॥ ಹಳಕಟ್ಟಿಯವರು ಸಾರಂಗನ ಸಂಚಾರಿ ನೆಲೆಗಳನ್ನು ಹೇಳುವಾಗ ಬೆಳ್ಳುಬ್ಬಿಯನ್ನು ಕಾಣಿಸಿದ್ದಾರೆ. ಅಂದರೆ ಬೆಳ್ಳುಬ್ಬಿ ಮಳೆಯ ಮಲ್ಲೇಶ ಸಾರಂಗ ಮಠದ ಸಾರಂಗನೆಂಬುದು ಹೊಳೆಯುತ್ತದೆ. ಪ್ರೌಢ ರಾಮನ ಕಾವ್ಯ ಸಂಪಾದಕರಾದ ಪ್ರೊ. ಸಂ. ಶಿ. ಭೂಸನೂರಮಠ ಅವರು ತಮ್ಮ ಪ್ರಸ್ತಾವನೆಯಲ್ಲಿ ಕವಿಚರಿತೆಕಾರರು ಗುರುತಿಸಿರುವ ಮಳೆಯ ಮಲ್ಲೇಶನ ಕಾಲ ಕ್ರಿ.ಶ. 1500ನ್ನು ಒಪ್ಪಿದ್ದಾರೆ. ನಾವಾದರೂ ಈ ಕಾಲವನ್ನು ಒಪ್ಪಬಹುದು; ಆದರೆ ಇರುವ ಪ್ರಬಲ ಅಡ್ಡಿಯೆಂದರೆ ಸು.ಕ್ರಿ.ಶ. 12ನೆಯ ಶತಮಾನದ ಮತ್ಸ್ಯೇಂದ್ರ ಸಿದ್ಧನ ಶಿಷ್ಯನಾದ ಸಾರಂಗ ಅರ್ಥಾತ್ ಮಳೆಯ ಮಲ್ಲೇಶ ಕ್ರಿ.ಶ. 1500ರ ಕಾಲ ದವನಾಗುವುದು ಹೇಗೆ? ಹಾಗಾದರೆ ಮಳೆಯ ಮಲ್ಲೇಶ ಹೆಸರಿನವರು ಅನೇಕರು ಇದ್ದು, ಬೇರೆ ಬೇರೆ ಕಾಲಘಟ್ಟದ ಈ ಇಬ್ಬರು ಬೇರೆ ಬೇರೆ ಎನ್ನೋಣವೆ? ಮಳೆ ಪವಾಡದ ಮಳೆ ಮಲ್ಲೇಶ ವೀರಶೈವ 'ಮಳೆ ಬಗಿ'ಯ ಮೂಲ ಪುರುಷನಾಗಿದ್ದು,

8. ಚೆನ್ನಬಸವ ಪುರಾಣ, ಪೀಠಿಕಾ ಸಂಧಿ, ಪು. 19

ಈ 'ಬಗಿ ಉಜ್ಜಯಿನಿ ಸಿಂಹಾಸನದ ಮರುಳಸಿದ್ಧೇಶ್ವರರ ಶಾಖೆಯನ್ನು ಹೇಳುತ್ತದೆ. ಇವತ್ತಿಗೂ ಸಾರಂಗಮಠ ಉಜ್ಜಯಿನಿ ಪೀಠಕ್ಕೆ ಸಂಬಂಧಪಡುವ ಗುರುಸ್ಥಲದ ಮಠಗಳಾಗಿರುವುದು ಚಾರಿತ್ರಿಕ ಸಮರ್ಥನೆಯಾಗಿದೆ. ಡಾ॥ ಹಳಕಟ್ಟಿಯವರ 'ಸಾರಂಗ ಮಠಾಧೀಶ್ವರರು ಕೃತಿಯಲ್ಲಿ ಕಪ್ಪಡಿ (ಸಂಗಮ) ಸಾರಂಗಮಠದ ಹಸ್ತಪ್ರತಿಯಲ್ಲಿನ ಕೆಲವು ಪದ್ಯಗಳ ಉಲ್ಲೇಖವಾಗಿದ್ದು, ಸಾರಂಗನ ಐಕ್ಯವನ್ನು ಹೇಳುವ ಕೊನೆಯ ಪದ್ಯದಲ್ಲಿ "ವರಕೀರ್ತಿ ಪಡೆದ ಮರುಳಸಿದ್ಧೇಶ್ವರನ ಅವತಾರಮೂರ್ತಿ ಧರೆಯಲ್ಲಿ ಸಾರಂಗ ದೇವರು ಮಹತ್ವ ಪುರುಷರು ಎಂದು ಕರವೆತ್ತಿ ಕೊಂಡಾಡಿದರು ಕಂಡ್ಯಾ ಸಾರಂಗ ದೇವರ ಚಾರಿತ್ರ್ಯಮಂ" ಎನ್ನಲಾಗಿದೆ[9]. ಸಂಗಮದಲ್ಲಿ ಕೊನೆಯದಾದ ಸಾರಂಗದೇವರನ್ನು ಮರುಳಸಿದ್ಧೇಶ್ವರನ ಅವತಾರಮೂರ್ತಿ ಎಂದು ಕರೆದಿರುವುದು ಮಹತ್ವದ್ದು. ರೇವಣಸಿದ್ಧನ ಸಮಕಾಲೀನನೂ ಉಜ್ಜಯಿನೀ ಪೀಠ (ಬಳ್ಳಾರಿ ಜಿ.) ಪ್ರವರ್ತಕನೂ ಆದ ಮರುಳಸಿದ್ಧನ ಕಾಲ ಹನ್ನೆರಡನೆಯ ಶತಮಾನ. ಈ ಕಾಲದಲ್ಲಿಯೇ ಸಾರಂಗ ಇದ್ದಾನೆ. ಈತನ ಗುರು ಮತ್ಸ್ಯೇಂದ್ರ ಸಾರಂಗರ ಹಾಗೆ ರೇವಣಸಿದ್ಧ ನಾಥಪಂಥಿಯೆ ? ಎಂಬ ಅನುಮಾನಗಳು ನಮ್ಮಲ್ಲಿ ಇವೆ. ರೇವಣಸಿದ್ಧನ ಶಿಷ್ಯನಾಗಿ ಮರುಳಸಿದ್ಧ ನಾಥಸಿದ್ಧನೆಂದು ತರ್ಕಿಸಲು ಬರುವಂತಿದೆ. ವಿಚಿತ್ರವೆಂದರೆ ನಾಥಸಿದ್ಧರೆಂಬ ಸಂದೇಹದ ರೇವಣ, ಮರುಳ, ಸಾರಂಗ ಸಿದ್ಧರು ವೀರಶೈವ ಗುರುಸ್ಥಲದ ಆಚಾರ್ಯರಾಗಿದ್ದಾರೆ. ಇದು ಹೇಗೆ ? ನಾಥ ಸಿದ್ಧರಿಗೂ ಈ ವೀರಶೈವ ಸಿದ್ಧರಿಗೂ ಇದ್ದಿರ ಬಹುದಾದ ಸಂಬಂಧದ ಸ್ವರೂಪವೇನು ? ಎಂಬುದಿನ್ನೂ ನಿಖರ ಶೋಧನೆಗೆ ಒಳಪಡಬೇಕಿದೆ. ನನ್ನ ಅನುಮಾನ ಇದು : 12ನೆಯ ಶತಮಾನದ ಸಾರಂಗಸಿದ್ಧ ಮರುಳಸಿದ್ಧನೇ ಯಾಕಾಗಿರಬಾರದು ? ಮಳೆ ವಾಸ್ತವವಾಗಿ 'ಮಲೆ' (ಪರ್ವತ) ಯನ್ನು ಹೇಳುತ್ತಿದ್ದು ಸಿಂಹಪರ್ಷೆಯ ಮಲೆಯಾಳ ಪಂಡಿತ ಎಂಬ ಶಾಸನೋಕ್ತ ವ್ಯಕ್ತಿ ಈ ಮರುಳಸಿದ್ಧನೇ ಆಗಿದ್ದು, ಈತನ ಪೀಠದಲ್ಲಿ ಕುಳಿತ 15ನೆಯ ಶತಮಾನದ ವ್ಯಕ್ತಿಯೂ ಮಳೆಯ ಮಲ್ಲೇಶ ಎನಿಸಿದನೆ ? ಬಹುಶಃ ಈ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವದಿಲ್ಲ. ಹದಿನೈದನೆಯ ಶತಮಾನದ ಮಳೆಯ ಮಲ್ಲೇಶನಿಗೂ ಪೂರ್ವದಲ್ಲಿ ಅದೇ ಹೆಸರಿನ ಅಂದರೆ ಇನ್ನೊಬ್ಬ ಮಳೆಯ ಮಲ್ಲೇಶ ಹನ್ನೆರಡನೆಯ ಶತಮಾನದಲ್ಲಿ ಆಗಿಹೋಗಿದ್ದಾನೆ ಎಂಬುದು ನನ್ನ ಗಟ್ಟಿ ನಂಬುಗೆ. ಇದಕ್ಕೆ ಆಧಾರವಾಗಿ, ಇದುವರೆಗೆ ಯಾರೂ ಗಮನಿಸದೆ ಹೋಗಿರುವ ಸಿದ್ಧರಾಮನ ವಚನವನ್ನು ಇಲ್ಲಿ ಕಾಣಿಸುತ್ತೇನೆ :

> ಗುರು ವಾಕ್ಯದಿಂದ ನಾರದನಿಗನಂತ ಜನ್ಮಪ್ರಳಯವಾಯಿತ್ತು
> ಗುರು ವಾಕ್ಯದಿಂದ ಚಿದನ ಶಿವಾಚಾರ್ಯರಿಗೆ ಬೋಧರತ್ನ ದೊರಕಿತ್ತು
> ಗುರು ವಾಕ್ಯದಿಂದ ಮಳೆಯ ಮಲ್ಲೇಶಂಗೆ ಪಾತಾಳ ಪದಾರ್ಥ ಸಿದ್ಧಿಯಾಯಿತ್ತು
> ... ...

---

9 ಅದೇ, ಪು. 13.

ಇದು ಕಾರಣ, ಗುರುವೆ ಘನವೆಂದಱಿದು
ಗುರುವಾಗಿ ಗುರುಪೂಜೆಯ ಮಾಡಬೇಕಲ್ಲದೆ
ಗುರು ಸಮ್ಮುಖದಲ್ಲಿ ಗದ್ದುಗೆಯನೇಱಿದಡೆ
ಕಪಿಲಸಿದ್ಧ ಮಲ್ಲಿಕಾರ್ಜುನ ಕರಸಿತಗ, ಕೇಳಾ ನಿಜಗುಣಯ್ಯಾ

ಮಳೆಯ ಮಲ್ಲೇಶನನ್ನು ಇಲ್ಲಿ ಉಲ್ಲೇಖಿಸುತ್ತಿರುವ ಸಿದ್ಧರಾಮನ ಕಾಲ ಕ್ರಿ.ಶ. 12ನೆಯ ಶತಮಾನವಾದುದರಿಂದ, ಮಳೆಯ ಮಲ್ಲೇಶ ಸಹಜವಾಗಿ ಸಿದ್ಧರಾಮನಿಗೆ ಪೂರ್ವಿಕನಾಗಬೇಕು. ಸಾರಂಗಮಠದ ಮೂಲ ಪುರುಷನಾಗಿರುವ ಈತ, ಸಾರಂಗ ಮಠ ಹಸ್ತಪ್ರತಿಗಳು ಸ್ಮರಿಸುವ ಮರುಳಸಿದ್ಧ ಪರ್ಯಾಯ ನಾಮವನ್ನೂ ಹೊಂದಿರ ಬಹುದು. ಈ ಮರುಳಸಿದ್ಧ ಸಿದ್ಧರಾಮನ ಸಮಕಾಲೀನನೂ ರೇವಣಸಿದ್ಧನ ಶಿಷ್ಯನೂ ಆದ ಮರುಳಸಿದ್ಧನೆ ? ಅಥವಾ ಪೂರ್ವದವನ : ತಿಳಿಯದು. ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ನಾಲ್ವರು ಮರುಳಸಿದ್ಧರನ್ನು ತಮ್ಮ ಒಂದು ಲೇಖನದಲ್ಲಿ ಊಹಿಸುತ್ತಿದ್ದು, "ಈ ಮರುಳಸಿದ್ಧರಲ್ಲಿ ಪೂರ್ವಾಚಾರ್ಯ ಮರುಳಸಿದ್ಧನ ಬಗ್ಗೆ ಹೆಚ್ಚು ಸಂಶೋಧನೆ ಅಗತ್ಯವೆಂದು ತೋರುತ್ತದೆ ಎಂದಿದ್ದಾರೆ.[11] ಏನೇ ಇದ್ದರೂ ನಾವು ಮೇಲೆ ನೋಡಿದಂತೆ ಮತ್ಸ್ಯೇಂದ್ರ ಶಿಷ್ಯ ಸಾರಂಗನೇ ಸಾರಂಗಮಠಕ್ಕೆ ಸಂಬಂಧಿಸಿ ಕೇಳಿಬರುವ ಮರುಳಸಿದ್ಧನಾಗಿದ್ದು, ರೇವಣನ ಶಿಷ್ಯ ಮರುಳಸಿದ್ಧ ('ರೇವಣ ಪ್ರಭುವೆ' ಅಂಕೀತದ ವಚನಕಾರ) ನಿಂದ ಈತ ಬಹುಶಃ ಭಿನ್ನವೆಂದೇ ತೋರುತ್ತದೆ.

ಹೀಗೆ ಸಿದ್ಧರಾಮ ಉಲ್ಲೇಖಿಸುವ ಮಳೆಯ ಮಲ್ಲೇಶ ಮೂಲ ಸಾರಂಗ ನಾಗಿದ್ದು, ಮತ್ಸ್ಯೇಂದ್ರನ ಶಿಷ್ಯನಾಗಿ ನಾಥಸಿದ್ಧನಾದ ಈತ ಶ್ರೀಶೈಲದಲ್ಲಿ ತನ್ನ ಹೆಸರಿನಲ್ಲಿ ಮಠ ಸ್ಥಾಪನೆ ಮಾಡಿದಂತಿದೆ ಶ್ರೀಶೈಲದಲ್ಲಿ ಈಗಲೂ ನೋಡಿ ಸಿಗುತ್ತಿರುವ ಪಾಳುಬಿದ್ದ ಸಾರಂಗಮಠವೇ ಸಾರಂಗನ ಮೂಲ ಮಠವಾಗಿರಬೇಕು; ಪ್ರಮುಖ ನಾಥಪೀಠವಾಗಿ ಕಾರ್ಯನಿರ್ವಹಿಸಿರಬೇಕು; ಮುಂದೊಂದು ಕಾಲದಲ್ಲಿ ವೀರಶೈವದಲ್ಲಿ ವಿಲೀನವಾಗಿರಬೇಕು. ಹೀಗೆ ನುಡಿಯಲು 'ಗುರುಲಿಂಗ ಜಂಗಮ ಚಾರಿತ್ರ' ನಮಗೆ ಬಲವಾದ ಆಧಾರವಾಗಿದೆ. ಕೆಳಗಿನ ಪದ್ಯಗಳನ್ನು ನೋಡಿ :

ಬಂದು ಸಾರಂಗ ಸಿದ್ಧೇಶ್ವರ ಲಿಂಗವ
ಕಂಡು ದರುಶನವನೆ ಮಾಡೆ
ಅಂದು ಮಹತ್ತು ಬಿಡಾರವ ಮಾಡಿರೆ
ಬಂದರು ಜೋಗಿಗಳೆಲ್ಲ ॥

ಇತ್ತ ಶ್ರೀಗಿರಿ ತಮ್ಮದೆಂದು ಜೋಗಿಗಳೆಲ್ಲ
ಸತ್ತು ಬಳಸಿ ಸಂಭ್ರಮದಿ
ಮುತ್ತಿಗೆಗಿಳಿವಂತೆ ಸಾರಂಗ ಮಂಟಪ
ದೊತ್ತೀಲಿ ಪಾಳೆಯವಿಳಿಯೆ ॥

---

10 ಡಾ॥ ಆರ್. ಸಿ. ಹಿರೇಮಠ (ಸಂ). ಶ್ರೀ ಸಿದ್ಧರಾಮೇಶ್ವರ ವಚನಗಳು. ವ.ಸಂ. 528
11 ಬಸವೇಶ್ವರರ ಸಮಕಾಲೀನರು. ಪ್ರ: ಬಸವ ಸಮಿತಿ ಬೆಂಗಳೂರು. ಪು. 318

ಹನ್ನೆರಡು ಸಾವಿರ ಜೋಗಿಗಳೆಲ್ಲ
ಮನ್ನೆಯುವಳಿತದಿ ಬಂದು
ಇನ್ನೆಂದೂ ಸಾರಂಗಮಠ ತಮ್ಮದೆಂದುರೆ
ಸನ್ನದ್ಧರಾಗಿ ನುಡಿದರು ॥

ಸಾರಂಗಮಠ ತಮ್ಮದೆನಲು
ವೀರ ಕುಮಾರ ಜಂಗಮರೆಲ್ಲ ಕೂಡಿ
ಸಾರಿ ವಿಚಾರಿ ಕೇಳಿ ॥

ಸಾರಂಗಸಿದ್ಧ ಶ್ರೀಗಿರಿಯೊಳು ತಾನಲ್ಲಿ
ಓರಂತೆ ತಪವಿರೆ ಮೆಚ್ಚಿ
ಮಾರಹರನು ಮೈಲಾರಲಿಂಗವ ಕೊಡಲಾಗಿ
ಸೇರಿತು ಯೆಮಗೆಂದರವರು ॥

ಮತ್ಸ್ಯೇಂದ್ರನು ಗೋರಕ್ಷನು ತಾವಿಲ್ಲಿ
ಯಚ್ಚರಿ ಮಿಗೆ ತಪಮಿರಲು
ನಿಶ್ಚಯದಿಂದಲೆ ಮಲ್ಲಿಕಾರ್ಜುನ ತಾನೆ
ಮೆಚ್ಚಿ ಅವರಿಗಿತ್ತ ಮಠವ ॥

ಅಂದು ನಾಗಾರ್ಜುನ ತಪವ ಮಾಡಲು ಮೆಚ್ಚಿ
ಇಂದುಧರನು ಅವರ್ಗಿತ್ತಾ
ಸಂದೇಹಪೇಕಿನ್ನು ಸಾರಂಗಮಠ ತಮ್ಮ
ದೆಂದು ನುಡಿಯೆ ಜೋಗಿಗಳು ॥

ಆದಿಭೈರವನನಾದಿ ಸಿದ್ಧನುಯೆಂದು
ಓದುತಿಹರು ಶಾಸ್ತ್ರಗಳ
ಮಾಧವ ಹರನಿಗೆ ಹುಟ್ಟಿವ ಭೈರವನ
ನಾದಿ ಭೈರವ ಹೇಗಾದ ? ॥

ಟಗರು ಟಗರು ತಾಗಿದಂದದಿ ಹೊಯ್ದಾಡಿ
ಜಗಳವ ಮಾಡಲು ಕೂಡಿ
ದುರ್ಗ ಬಿದ್ದ ಪಗಡೆಯಂದದಿ ತೆಗದು
ಕಡೆಗೆಸೆದರು ಕೇಳ್ತಲೆಗಳನು ॥

ಅಲ್ಲಮಪ್ರಭು ಗೋರಕ್ಷಣೆ ಕಥೆವೇಳ್ದು
ಅಲ್ಲಿ ಸಿದ್ಧರ ಮಠದೊಳಗೆ
ಎಲ್ಲಿ ತತ್ವಂಗಳ ಪೇಳಿ ಶಿಷ್ಯನ ಮಾಡಿ
ಅಲ್ಲಿ ಶ್ರೀಗಿರಿಯೊಳೊಪ್ಪಿದರು॥ [12]

12 ಉದ್ಧೃತ : ಜಾನಪದ ಸಾಹಿತ್ಯ ದರ್ಶನ, ಭಾಗ–13, ಪು. 95–96 (ಶ್ರೀ ಹ.ಕ. ರಾಜೇಗೌಡರ ಲೇಖನ : ದಕ್ಷಿಣ ಕರ್ನಾಟಕದಲ್ಲಿ ಮೈಲಾರಲಿಂಗ ಸಂಪ್ರದಾಯ)

ಇಲ್ಲಿನ ಪದ್ಯಗಳಿಂದ ನಿಷ್ಪನ್ನವಾಗುವುದು ಇಷ್ಟು : 1) ಶ್ರೀಗಿರಿ ಅಂದರೆ ಶ್ರೀಶೈಲದಲ್ಲಿ ಸಾರಂಗಮಠ ಅಸ್ತಿತ್ವದಲ್ಲಿತ್ತು 2) ಸಾರಂಗಮಠದ ಸಾರಂಗನ, ನಾಗಾರ್ಜುನ, ಮಲ್ಲೇಂದ್ರನಾಥ, ಗೋರಖನಾಥ ಇವರ ಸಂಪ್ರದಾಯಕ್ಕೆ ಸೇರಿದ ಸಿದ್ಧನು. 3) ಸಾಕ್ಷಾತ್ ಮಲ್ಲಿಕಾರ್ಜುನನಿಂದ ಸಾರಂಗನಿಗೆ ದತ್ತವಾದ ಲಿಂಗ ಮೈಲಾರಲಿಂಗ 4) ಸಾರಂಗಮಠ ತಮ್ಮದೆಂದು 'ಜೋಗಿಗಳು' ತಮ್ಮದೆಂದು 'ವೀರ ಕುಮಾರ ಜಂಗಮರು' ಪರಸ್ಪರ ಕಾದಾಡುತ್ತಿದ್ದಾರೆ.

'ಗುರುರಾಜ ಚರಿತ್ರೆ' ಸಾರಂಗನನ್ನು ಮತ್ಸ್ಯೇಂದ್ರನ ಶಿಷ್ಯನೆಂದು ಕರೆದಿದ್ದರೆ, ಪ್ರಸ್ತುತ 'ಗುರುಲಿಂಗ ಜಂಗಮ ಚಾರಿತ್ರವು' ಸಾರಂಗನ ಸಿದ್ಧಪರಂಪರೆಯಲ್ಲಿ ನಾಗಾರ್ಜುನ ಗೋರಖ್‌ನಾಥನನ್ನೂ ಸೇರಿ ಮತ್ಸ್ಯೇಂದ್ರನನ್ನು ಉಲ್ಲೇಖಮಾಡಿದೆ. ಸಾರಂಗಮಠದಲ್ಲಿ 'ಜೋಗಿಗಳು' ಇರುವುದು, 'ಮೈಲಾರಲಿಂಗ' ತಮ್ಮ ದೇವರು, ಎನ್ನುವುದು. ನಾಥ ಸಿದ್ಧ ಪರಂಪರೆಯುನ್ನು ಈ ಪೀಠ ಹೊಂದಿರುವುದು—ಈ ಅಂಶ ಗಳು ಶ್ರೀಶೈಲದ ಸಾರಂಗಮಠವನ್ನು ನಿಸ್ಸಂದೇಹವಾಗಿ ನಾಥಪೀಠ ಎಂಬ ನಿರ್ಣಯಕ್ಕೆ ದಾರಿ ಮಾಡಿಕೊಡುತ್ತವೆ.

ಮೇಲಿನ ಪದ್ಯಗಳಲ್ಲಿ ಜೋಗಿಗಳು ಸಾರಂಗಮಠ ತಮ್ಮದು ತಮಗೆ ಸೇರ ಬೇಕಾದದ್ದು ಎಂದು ಪಟ್ಟು ಹಿಡಿದಿದ್ದರೆ, 'ವೀರ ಕುಮಾರ ಜಂಗಮರು' ತಮ್ಮ ದೆಂದು ವಾದ ಹೂಡಿದ್ದಾರೆ. ಜೋಗಿಗಳು ನಾಥಸಿದ್ಧರಾಗಿದ್ದರೆ ಈ 'ವೀರಕುಮಾರ ಜಂಗಮರು' ಯಾರು ? ಬಹುಶಃ ವೀರಶೈವ ಜಂಗಮರೇ ಇರಬೇಕೆನ್ನಲು 'ಜಂಗಮ' ಪದಪ್ರಯೋಗ ಅಲ್ಲಿರುವುದು ಸಾಕಾಗುತ್ತದೆ. ವೀರಕುಮಾರ ಎಂಬಲ್ಲಿ ವೀರ ಪದ, ಈ ಜಂಗಮರು ವೀರಗಣ ಎಂಬುದನ್ನು (ಉಗ್ರಶಿವನಿಷ್ಠೆಯ ದಶಗಣ ತೇರೆಸಗಣ ಎಂಬಂತೆ) ಸೂಚಿಸುತ್ತಿರುವಂತೆ ತೋರುತ್ತದೆ. ವೀರ ಜಂಗಮರೊಂದಿಗೆ ಸೇರಿ ಸಾರಂಗಮಠದಲ್ಲಿ ಭಿಡಾರ ಹೂಡಿರುವ 'ಕುಮಾರ', ಆ ಹೆಸರಿನ ವೀರಶೈವ ಮಠಾಧಿಪ ಎನ್ನಲು 'ಗುರುರಾಜ ಚಾರಿತ್ರ'ದಲ್ಲಿ ಪುರಾವೆಗಳಿವೆ. ಈ ಪದ್ಯಗಳನ್ನು ನೋಡಿ ;

ಧರೆಗೆ ಬಾಳೆಯಹಳ್ಳಿ ಸಿಂಹಾಸನಾಧೀಶ
ಚರಚಕ್ರವರ್ತಿ ದುಷ್ಟನಿಗ್ರಹಂ ಶಿಷ್ಟಜನ
ಪರಿಪಾಲಕಂ ಕುಮಾರಸ್ವಾಮಿಮಷ್ಟ ವಿಧಷೋಡಶು ಪಚಾರದಿಂದ॥

ಹರನನರ್ಚಿಸುತಿರಲ್ಕೀಶ ಜಂಗಮರೂಪ
ಧರಿಸಿ ಬರೆ ನೀವಾರದೆಲ್ಲಿಂದ ಚಂದಿರೆನೆ
ದರಹಸಿತ ಮುಖನಾಗಿ ಶಂಕರಂ ಚಮವಾಗೆ ಕಂಡು ಪಶ್ಚಾತ್ತಾಪದಿ॥

ಬಳಲುತಿರೆ ಸ್ವಪ್ನದೊಳು ಪ್ರತ್ಯಕ್ಷನಾಗಿ ನೀ
ನಳಲದಿರು ಪರ್ವತದ ಸಾರಂಗಮಠದೊಳಹ
ಖಳಜೋಗಿವಡೆಯ ಸಂಹರಿಸಿ ಮಾಹಲ್ತೆನುರುಸಿಂಹಾಸನವ ಮಾಡೆನೆ ॥

ಒಲಿದು ಸೂರ್ಯಗ್ರಹಣ ಪುಣ್ಯಕಾಲದೊಳು ಹೊಳೆ
ಗಿಳಿದೇಳು ನೂರಂದಳದ ಜೋಗಿಗಳ ಕೊಂದು
ಸಲೆ ವೀರಮಾಹೇಶ್ವರರ ತಿಂಥಿಣಿಯ ಮಾಡಿ ಮೆರೆದನಾಪರ್ವತವನು

ಇಲ್ಲಿ ಉಕ್ತವಾದ 'ಕುಮಾರ ಸ್ವಾಮಿ'ಯೇ ವೀರ'ಕುಮಾರ' ಜಂಗಮ, ಎನ್ನು ವಲ್ಲಿ ಅನುಮಾನವಿಲ್ಲ. ಈತ ವೀರಶೈವ ಪಂಚಾಚಾರ್ಯ ಪೀಠಗಳಲ್ಲಿ ಒಂದಾದ ಬಾಳೇಹಳ್ಳಿ (ರಂಭಾಪುರಿ) ಸಿಂಹಾಸನದ ಅಧಿಪತಿಯಾಗಿದ್ದು, ನಾಥ ಸಿದ್ಧರ ಸಾರಂಗ ಮಠವನ್ನು ತನ್ನ ಅಂದರೆ ವೀರಶೈವ ವಶಕ್ಕೆ ತೆಗೆದುಕೊಳ್ಳಲು ಆ ಮಠದ ಜೋಗಿ ಗಳೊಂದಿಗೆ ಬಲವಾದ ಹೋರಾಟವನ್ನೇ ನಡೆಸಿರುವುದು ಮೇಲಿನ ಎರಡೂ ಕಾವ್ಯ ಗಳಿಂದ–ಗುರುಲಿಂಗ ಜಂಗಮ ಚಾರಿತ್ರ ಹಾಗೂ ಗುರುರಾಜ ಚಾರಿತ್ರ–ಇಲ್ಲಿ ಸ್ಪಷ್ಟ ಪಡುತ್ತದೆ. ಕುಮಾರಸ್ವಾಮಿ ಹಾಗೂ ಆತನ ಸಹಚರರ ಕೈ ಮೇಲಾಗಿರಬೇಕು. ಸಿದ್ಧರ ಸಾರಂಗಮಠ ಈ ದಿನ ಕರ್ನಾಟಕದಲ್ಲಿ ಅಂತೆಯೇ ಶ್ರೀ ಶೈಲದಲ್ಲಿ ವೀರಶೈವ ಮಠವಾಗಿ ಮುಂದುವರಿಯುತ್ತಿರುವುದೇ ಇದಕ್ಕೆ ಸಜೀವ ಸಾಕ್ಷಿಯಾಗಿದೆ.

ಬಾಳೇಹಳ್ಳಿ (ಚಿಕ್ಕಮಂಗಳೂರು ಜಿಲ್ಲೆ) ಸಿಂಹಾಸನ ರೇವಣಸಿದ್ಧ ಪರಂಪರೆಯ ವೀರಶೈವ ಗುರುಪೀಠ (ರೇವಣಸಿದ್ಧನೇ ರೇಣುಕಾಚಾರ್ಯನೆಂದು ಪ್ರತೀತಿ). ರೇವಣ ಸಿದ್ಧನ ಮಗ ರುದ್ರಮುನಿ, ರುದ್ರಮುನಿ ಶಿಷ್ಯ ಮುಕ್ತಿಮುನಿ, ಮುಕ್ತಿಮುನಿ ಶಿಷ್ಯ ದಿಗಂಬರ ಮುಕ್ತಿ ಮುನಿ, ದಿಗಂಬರ ಮುಕ್ತಿ ಮುನಿ ಶಿಷ್ಯನೇ ಈ ಕುಮಾರಸ್ವಾಮಿ ಯಾಗಿದ್ದು, ಈತನಿಗೆ 'ಕುಮಾರ ಚೆನ್ನಬಸವೇಶ್ವರ' ಎಂಬುದಾಗಿ ಪೂರ್ಣ ಹೆಸರಿರು ವುದು 'ಚೆನ್ನಬಸವ ಪುರಾಣ'ದಿಂದ ತಿಳಿದುಬರುತ್ತದೆ—

ವರದಿಗಂಬರ ಮುಕ್ತಿಮುನಿ ದೇವರಾಜ್ಞೆಯಿಂ
ಹರುಷದಿಂ ಸುಕುಮಾರ ಚೆನ್ನಬಸವೇಶ್ವರಂ
ಶರಣ ಸಂಕುಲವನುರೆ ಪಾಲಿಸುತೆ ದುಷ್ಟಪರವಾದಿಗಳ ಸಂಹರಿಸುತೆ ॥

ಎಂಬಲ್ಲಿ 'ದುಷ್ಟಪರವಾದಿಗಳ' ಸಂಹರಿಸಿದ ಕುಮಾರ ಚೆನ್ನಬಸವೇಶ್ವರನ ವೀರ ಪ್ರತಾಪ ಸುವ್ಯಕ್ತವಾಗಿದೆ. ಚೆನ್ನಬಸವ ಪುರಾಣದಲ್ಲಿ ಕುಮಾರ ಚೆನ್ನಬಸವೇಶ್ವರ ಸಾರಂಗ ಮಠದ ಜೋಗಿಗಳೊಂದಿಗೆ ಕಾದಿದ ವಿವರಗಳಿಲ್ಲ. ಆದರೆ ಗುರುರಾಜ ಚಾರಿತ್ರ ಹೇಳುವ ಕುಮಾರಸ್ವಾಮಿಯೇ ಈ ಕುಮಾರ ಚೆನ್ನಬಸವೇಶ್ವರ ಎನ್ನಲು ನಮಗಿರುವ ಪ್ರಬಲ ಆಧಾರವೆಂದರೆ, ಇಬ್ಬರೂ ಬಾಳೇಹಳ್ಳಿ ಸಿಂಹಾಸನಕ್ಕೆ ಸೇರಿದ ವರು, ಇಬ್ಬರಿಗೂ ದಿಗಂಬರ ಮುಕ್ತಿಮುನಿಯೇ ಗುರು–ಈ ಸಾಮ್ಯ ಅಂಶಗಳು ಕುಮಾರಸ್ವಾಮಿ ಮತ್ತು ಕುಮಾರ ಚೆನ್ನಬಸವೇಶ್ವರ ಅಭಿನ್ನರೆಂದೂ, ಗುರುಲಿಂಗ ಜಂಗಮ ಚಾರಿತ್ರ ಹೇಳುವ 'ವೀರ+ಕುಮಾರ+ ಜಂಗಮ' ಈತನೇ ಎಂದು ಖಚಿತ ವಾಗಿ ನುಡಿಯಬಹುದು.

---

13 ಗುರುರಾಜ ಚಾರಿತ್ರ, ಸಂ. 13, ಪ. 34-35

14 ಚೆನ್ನಬಸವ ಪುರಾಣ, ಸಂ. 62, ಪ. 43

ಕುಮಾರಸ್ವಾಮಿ ಸಾರಂಗಮಠದ ಖಳಜೋಗಿ ವಡೆಯ ಸಂಹರಿಸಿ ಮಾಡಿದ್ದು 'ಮಾಹತ್ತಿನುರು ಸಿಂಹಾಸನ' ಎನ್ನುತ್ತದೆ ಗುರುರಾಜ ಚಾರಿತ್ರ. ಗುರುಲಿಂಗ ಜಂಗಮ ಚಾರಿತ್ರ ಅದನ್ನು 'ಮಹತ್ತಿನ ಬಿಡಾರ' ಎಂದು ಕರೆದಿದೆ. ಈ 'ಮಾಹತ್ತು' ಏನನ್ನು ಸೂಚಿಸುತ್ತಿದೆಯೋ ತಿಳಿಯದು. ಆದರೆ ಸಾಮ್ಯತೆ ಎರಡೂ ಪ್ರಯೋಗಗಳಲ್ಲಿದೆ. ಬಹುಶಃ 'ಮಹಂತ' ಪದದಿಂದ ನಿಷ್ಪನ್ನಗೊಂಡ ಮಾಹತ್ತು (=ಶ್ರೇಷ್ಠ) ಈ ಮಾಹತ್ತು ಆಗಿರಬೇಕು.

ಕುಮಾರಸ್ವಾಮಿ ತನ್ನ ಗುರುವಾದ ದಿಗಂಬರ ಮುಕ್ತಿಮುನಿ ಅಪ್ಪಣೆಯ ಮೇರೆಗೆ 'ದುಷ್ಟಪರಿವಾದಿಗಳ ಸಂಹಾರ'ಕ್ಕೆ ತೊಡಗಿದನೆಂದು ಚೆನ್ನಬಸವ ಪುರಾಣ ಹೇಳಿದರೆ, ಸಾಕ್ಷಾತ್ ಮಲ್ಲಿಕಾರ್ಜುನನೇ ಕುಮಾರಸ್ವಾಮಿಯ ಕನಸಿನಲ್ಲಿ ಬಂದು ಸಾರಂಗಮಠವನ್ನು ವೀರಶೈವ ಮಠವಾಗಿಸಲು ಸೂಚಿಸಿದನೆಂದು ಗುರುರಾಜ ಚಾರಿತ್ರ ಹೇಳುತ್ತದೆ. ಇವುಗಳಲ್ಲಿ ಚೆನ್ನಬಸವ ಪುರಾಣದ ಹೇಳಿಕೆಯೇ ನೈಜವಾಗಿ ಕಾಣುತ್ತದೆ. ಆದರೆ 'ಮಲ್ಲಿಕಾರ್ಜುನನು ಕನಸಲ್ಲಿ ಬಂದು' ಎನ್ನುವಾಗ ಕುಮಾರಸ್ವಾಮಿ ಆಗ ಶ್ರೀ ಶೈಲದಲ್ಲಿ (ಮಲ್ಲಿಕಾರ್ಜುನ ನೆಲೆ) ಇದ್ದನೋ ಬಾಳೇಹಳ್ಳಿಯಲ್ಲಿ ಇದ್ದನೋ ಎಂದು ಕೇಳುವಂತಾಗುತ್ತದೆ. ಬಾಳೇಹಳ್ಳಿಯಲ್ಲಿ ರೇವಣಸಿದ್ಧ ಸಂಪ್ರದಾಯದ ಗುರುಪೀಠ ರಚನೆಗೊಳ್ಳುವ ಮುಂಚೆಯೇ ರೇವಣಪುತ್ರ ರುದ್ರಮುನಿ ಈ ಪೀಠವನ್ನು ಶ್ರೀ ಶೈಲ ದಲ್ಲಿ ಆರಂಭಿಸಿದ್ದರಿಂದ ಈ ಮಾತು.

> ಬಂದನಿಬರಲೆ ಗೋಪ್ಯದಿಂದಿರುತೆ ರುದ್ರಮುನಿ
> ತಂದೆ ತನ್ನಯ ಶಿಷ್ಯ ಮುಕ್ತಿಮುನಿಯೊಡನೆ ನೀ
> ನಿಂದ್ಯೆದಿ ಸಕಲ ದೇಶಗಳಂ ಚರಿಸುತುಂ ದುಷ್ಟಪರವಾದಿಗಳನು ॥
> ಕೊಂದು ಶರಣರ ಪೊರೆವುದೆಂದುಸುರಿ ಕಳುಹಲಾ
> ನಂದದಿಂದಖಿಳ ದೇಶಂಗಳ ಚರಿಸುತಾ
> ನಿಂದು ಶ್ರೀಗಿರಿಯ ಸಿಂಹಾಸನದೆ ಸಕಲ ಸದ್ಭಕ್ತರಂ ಪಾಲಿಸುವನು ॥[15]

ಚೆನ್ನಬಸವ ಪುರಾಣದಲ್ಲಿ ಚೆನ್ನಬಸವಣ್ಣ ಸಿದ್ಧರಾಮನಿಗೆ ಹೇಳುವ ಕಾಲಜ್ಞಾನ ಸಂದರ್ಭದಲ್ಲಿ ಬಂದಿರುವ ಈ ಮಾತಿನಲ್ಲಿ ರುದ್ರಮುನಿ 'ಶ್ರೀಗಿರಿಯ ಸಿಂಹಾಸನ'ದಲ್ಲಿ ನಿಂತುದು ವ್ಯಕ್ತವಾಗಿದೆ. ಈ ರುದ್ರಮುನಿಯಿಂದ ನಾಲ್ಕು ತಲೆಮಾರು ಈಚೆ ಕುಮಾರ ಸ್ವಾಮಿ ಇದ್ದು, ಈತನ ವೇಳೆಗಾಗಲೇ ರುದ್ರಮುನಿ ಸ್ಥಾಪಿಸಿದ ಶ್ರೀ ಶೈಲದಲ್ಲಿದ್ದ ಈ ಸಿಂಹಾಸನ ಬಾಳೇಹಳ್ಳಿಗೆ ಬಂದಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ದಿಗಂಬರ ಮುಕ್ತಿ ಮುನಿ–ಕುಮಾರಸ್ವಾಮಿ ಕಾಲಕ್ಕೇ ರುದ್ರಮುನಿ ಸ್ಥಾಪಿತ ಪೀಠ ಶ್ರೀಶೈಲದಿಂದ ಬಾಳೇ ಹಳ್ಳಿಗೆ ಸ್ಥಳಾಂತರಗೊಂಡಿದೆ. ಬಾಳೇಹಳ್ಳಿಗೆ ಬರುವ ಪೂರ್ವದಲ್ಲಿಯೇ ಶ್ರೀಶೈಲದ ಸಾರಂಗಮಠವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನ ಕುಮಾರಸ್ವಾಮಿಯಿಂದ

---

15 ಚೆನ್ನಬಸವ ಪುರಾಣ, ಸಂ. 62, ಪ. 37

ನಡೆದಿದೆ ಎಂದು ಒಪ್ಪಬಹುದು. ರುದ್ರಮುನಿಯ ಕಾಲ ಬಸವಾದಿ ಶಿವಶರಣರ ಹನ್ನೆರಡನೆಯ ಶತಮಾನವೇ ಆಗಿದ್ದು, ರುದ್ರಮುನಿಯಿಂದ ನಾಲ್ಕು ತಲೆಮಾರು ಈಚೆ ಇರುವ ಕುಮಾರಸ್ವಾಮಿಯ ಕಾಲವನ್ನು ಕ್ರಿ. ಶ. 1250 ಎಂದು ಸ್ವೀಕರಿಸಬಹುದು. ಸಿದ್ಧರ ಸಾರಂಗಮಠ ವೀರಶೈವ ಗುರುಮಠವಾದುದು ಈ ಕಾಲಕ್ಕೆ ಎಂಬುದು ನಿಚ್ಚಿತ.

ಸಾರಂಗಮಠ ತಮ್ಮದೆಂದು ವಾದಹೂಡಿ ಗೆದ್ದ ಕುಮಾರಸ್ವಾಮಿ ವೀರಶೈವ ಪಂಚಾಚಾರ್ಯ ಪೀಠದಲ್ಲಿ ಬಾಳೇಹಳ್ಳಿ ಸಿಂಹಾಸನದ ಅಧಿಪತಿಯಾಗಿದ್ದರೆ, ಇವತ್ತು ಸಾರಂಗಮಠ ವ್ಯವಹರಿಸುತ್ತಿರುವುದು ಉಜ್ಜಯಿನಿ ಸಿಂಹಾಸನದ ಶಾಖೆಯಾಗಿ. ಹಾಗಾದರೆ ಸಾರಂಗಮಠ ಬಾಳೇಹಳ್ಳಿ ಪೀಠದಿಂದ ಉಜ್ಜಯಿನಿ ಪೀಠಕ್ಕೆ ಹಸ್ತಾಂತರ ವಾದುದು ಯಾವಾಗ? ಯಾಕೆ? ಎಂಬ ಪ್ರಶ್ನೆಗಳು ಏಳುತ್ತವೆ. ನಮಗೆ ತೋರುವಂತೆ, ರುದ್ರಮುನಿ ಸ್ಥಾಪಿತ ಪೀಠ ಶ್ರೀಶೈಲದಿಂದ ಬಾಳೇಹಳ್ಳಿಗೆ ಸ್ಥಳಾಂತರ ಗೊಂಡಾಗಲೇ ಸಾರಂಗಮಠದ ಮೇಲೆ ಅದರ ಹಿಡಿತ ತಪ್ಪಿರಬೇಕು. ಅದೇ ಆಗ ಮಾಳವ ದೇಶದ ಉಜ್ಜಯಿನಿಯಿಂದ ಕರ್ನಾಟಕದ ಉಜ್ಜಯಿನಿಗೆ ಬಂದಿಳಿಯುತ್ತಿದ್ದ ಮರುಳಸಿದ್ಧ ಸಂಪ್ರದಾಯದ ಪೀಠದಲ್ಲಿ ಮಳೆಯ ಮಲ್ಲೇಶ ಎಂಬ ವೀರಶೈವ ಮಳೆ ಜಗಿದು (ಮಳೆ ಪವಾಡದ) ಪ್ರಭಾವೀ ಗುರುವಿನಿಂದ ಉಜ್ಜಯಿನಿ ಶಾಖೆಯಲ್ಲಿ ಅದು ಸಮಾವೇಶಗೊಂಡು ಗುರುಪೀಠವಾಗಿಯೇ ಮುಂದುವರಿದಿರಬೇಕು. ಇವತ್ತು ಕರ್ನಾಟಕದ ಬಹುತೇಕ ಸಾರಂಗಮಠಗಳನ್ನು ಮಧ್ಯಯುಗದ ಈ ಮಳೆಯ ಮಲ್ಲೇಶನೇ ಸ್ಥಾಪಿಸಿದಂತಿದೆ. ಹಿಂದೆ ನೋಡಿದಂತೆ ಈತನ ಕಾಲ ಕ್ರಿ.ಶ. 1500. ಇಸ್ಲಾಂ ಈ ನಾಡಿನಲ್ಲಿ ವೈಭವಿಸುತ್ತಿದ್ದ ಕಾಲದಲ್ಲಿ ಈತನ ಉತ್ಸಾಹ, ತಿರುಗಿದ ಊರು–ನಿಂತ ನೆಲೆ–ಸ್ಥಾಪಿಸಿದ ಪೀಠಗಳು ನಮ್ಮಲ್ಲಿ ಮಹಾಬೆರಗು ಮೂಡಿಸುತ್ತವೆ.

ಇದುವರೆಗಿನ ಚರ್ಚೆಯಿಂದ[1] ಸಾರಂಗಮಠದ ಮೂಲಪುರುಷ ಹನ್ನೆರಡನೆಯ ಶತಮಾನದ ಚಾರಿತ್ರಿಕ ವ್ಯಕ್ತಿ ಸಾರಂಗಸಿದ್ಧನೆಂಬುದು[2] ಮತ್ಸ್ಯೇಂದ್ರನ ಶಿಷ್ಯನಾದ ಈತ ನಾಥಸಿದ್ಧನಾಗಿದ್ದು ಸಾರಂಗಮಠ ಮೂಲತಃ ಸಿದ್ಧರಮಠ ಎಂಬುದು[3] ಮಧ್ಯಕಾಲದ ಸಾರಂಗವೆಂದರೆ ವೀರಶೈವ ಗುರುವರ್ಗದ ಮಳೆಯ ಮಲ್ಲೇಶನೆಂಬುದಂ[4] ಮಳೆಯ ಮಲ್ಲೇಶನಿಗೆ ಪೂರ್ವದಲ್ಲಿಯೇ ಕುಮಾರಸ್ವಾಮಿ ಸಾರಂಗಮಠವನ್ನು ಮಹತ್ತಿನ ಮಠವಾಗಿ ವೀರಶೈವಕ್ಕೆ ಪರಿವರ್ತಿಸಿದನೆಂಬುದು ವಿವರವಾಗಿ ಚರ್ಚಿತವಾಯಿತು. ಆದರೆ ಸಾರಂಗ ಅಭಿಧಾನ ಮಳೆಯ ಮಲ್ಲೇಶನಿಗೆ ಮಾತ್ರ ಬಳಕೆಯಾಗಿದ್ದು, ಕುಮಾರ ಸ್ವಾಮಿಗೆ ಇಲ್ಲದಿರುವುದು ಆಶ್ಚರ್ಯಕರವಾಗಿದೆ. ಡಾ। ಹಳಕಟ್ಟಿಯವರು ಸಂಪಾದಿಸಿದ ಕಪ್ಪಡಿ–ಗುಳೇದಗುಡ್ಡ ಹಸ್ತಪ್ರತಿಗಳಲ್ಲಿ ಸಾರಂಗನೆಂದರೆ ಮಳೆಯ ಮಲ್ಲೇಶನೆಂದೇ ಅವುಗಳ ಅಂಬೋಣ ಸಾರಂಗಪೀಠದವರಿಗೆಲ್ಲ ಸಾರಂಗ ಎಂಬ ನಾಮ ಅಂಕಿತವಾಗಿರು ವುದು ಇದರಿಂದ ಸ್ಪಷ್ಟಪಡುತ್ತದೆ. ಈ ಮಾತಿಗೆ ಮಳೆಯ ಮಲ್ಲೇಶನೇ ಉದಾಹರಣೆ ಯಾಗಿರುವಂತೆ, ಮಳೆಯ ಮಲ್ಲೇಶನ ಕಾಲಾನಂತರ ಆ ಪರಂಪರೆಯಲ್ಲಿ ಬಂದ ಸಣ್ಣ ಸಾರಂಗೇಶ್ವರನೂ ಮಾದರಿಯಾಗಿದ್ದಾನೆ. ಈ ಸಣ್ಣಸಾರಂಗೇಶ್ವರ ಸಾರಂಗಮಠ

ಪರಂಪರೆಯನ್ನು ಮುಂದುವರಿಸಿಕೊಂಡು ಬಂದ ಬಹುಮುಖ ವ್ಯಕ್ತಿತ್ವದ ಇನ್ನೊಬ್ಬ ಪ್ರಭಾವಶಾಲೀ ಶರಣನಾಗಿದ್ದಾನೆ. ಈತನ ಬಗೆಗೆ ಡಾ। ಹಳಕಟ್ಟಿಯವರು ತಮ್ಮ 'ಸಾರಂಗಮಠಾಧೀಶ್ವರರು' ಗ್ರಂಥದಲ್ಲಿ ವಿವರಗಳನ್ನು ನೀಡಿದ್ದಾರೆ. ಅವರು ಹೇಳುವಂತೆ ಸಾರಂಗದೇವನಿಗೆ (ಅಂದರೆ, ಅವರು ಹೇಳುವ ಮಳೆಯ ಮಲ್ಲೇಶನಿಗೆ ಒಬ್ಬ ತಮ್ಮನಿದ್ದನಂತೆ. ಈತನಿಗೆ (ಹೆಸರು ಹೇಳಿಲ್ಲ ಶಿವಸಂಗಪ್ಪಯ್ಯ ಕಾಶೀದೇವರು ಮತ್ತು ಸೂರಪ್ಪನೂ) ಎಂದು ಮೂವರು ಮಕ್ಕಳಿದ್ದರಂತೆ. ಇವರಲ್ಲಿ ಶಿವ ಸಂಗಪ್ಪಯ್ಯನ ಮಗನೇ ಸಣ್ಣಸಾರಂಗೇಶ್ವರ ಎನ್ನಲಾಗಿದೆ.[16] ಈತನ ಕುರಿತು ಬರೆಯುತ್ತ ಡಾ. ಹಳಕಟ್ಟಿಯವರು ಹೀಗೆ ಹೇಳಿದ್ದಾರೆ—"ಉಜ್ಜನಿಯಲ್ಲಿ ಹರಪನ ಹಳ್ಳಿಯ ದೊರೆಯು ಇರಲಾಗಿ ಒಂದು ದಿವಸ ಅನೇಕ ಪಂಡಿತರು ಅವನ ಆಸ್ಥಾನದಲ್ಲಿ ನೆರೆದಿದ್ದರು. ಆಗ್ಗೆ ಧರ್ಮಚರ್ಚೆಗಳು ನಡೆಯಲು, ಸಣ್ಣ ಸಾರಂಗೇಶ್ವರನು ಎಲ್ಲರನ್ನೂ ವಿವಾದದಲ್ಲಿ ಸೋಲಿಸಿ, ವೀರಶೈವ ಮತದ ಹೆಚ್ಚಳವನ್ನು ಅರಸನಿಗೆ ಮನವರಿಕೆ ಮಾಡಿಕೊಟ್ಟನು. ಆಗ ಅರಸನು ಅಲ್ಲಿದ್ದ ಶಿಖಾ, ಶೈಲ, ಕಠಾರಿಗಳನ್ನು ಅವನಿಗೆ ಕೊಟ್ಟನು. ಆಮೇಲೆ ಸಣ್ಣಸಾರಂಗೇಶ್ವರನು ಉಜ್ಜನಿಯಲ್ಲಿ ತನ್ನ ಶಿಷ್ಯರನ್ನಿಟ್ಟು ಕಾಶಿಗೆ ಹೋದನು ಎಂದಿದ್ದಾರೆ.[17]" ಇಲ್ಲಿ, ಉಜ್ಜಯಿನಿ ಬಳ್ಳಾರಿ ಜಿಲ್ಲೆಯ ಐತಿಹಾಸಿಕ ನೆಲೆಯಾಗಿದ್ದು, ಇಲ್ಲಿ ಸಾರಂಗೇಶ್ವರ ಕಂಡ ಹರಪನಹಳ್ಳಿಯ ದೊರೆ ಯಾರು? ಈ ದೊರೆ ಸಾರಂಗೇಶ್ವರನಿಗೆ ಶಿಖಾಶೈಲ ಕಠಾರಿಗಳ ರಾಜಮರ್ಯಾದೆ ನೀಡಿ ಗೌರವಿಸ ಬೇಕಾದರೆ ಸಾರಂಗಮಠದ ಈ ಸ್ವಾಮಿಯೊಂದಿಗೆ ಈ ದೊರೆಯ ಸಂಬಂಧ ಏನು? ಎಂದು ಕೇಳುವಂತಾಗುತ್ತದೆ.

ಸಣ್ಣಸಾರಂಗೇಶ್ವರನು ಸಾರಂಗದೇವ ಅರ್ಥಾತ್ ಮಳೆಯ ಮಲ್ಲೇಶನ ತಮ್ಮನ ಮಗ (ಶಿವಸಂಗಪ್ಪಯ್ಯ)ನ ಮಗನೆಂದು ಹೇಳಿರುವುದರಿಂದ ಮಳೆಯ ಮಲ್ಲೇಶನಿಗಿಂತ ಎರಡು ತಲೆಮಾರು ಈಚೆ ಸಣ್ಣಸಾರಂಗೇಶ್ವರ ಇದ್ದಾನೆ. ಹಿಂದೆ ನೋಡಿದಂತೆ ಮಳೆಯ ಮಲ್ಲೇಶನ ಕಾಲ ಕವಿಚರಿತೆಕಾರರು ನಿರ್ಣಯಿಸಿದಂತೆ ಸುಮಾರು ಕ್ರಿ.ಶ. 1500 ಇಲ್ಲವೆ 15ನೆಯ ಶತಮಾನದ ಉತ್ತರಾರ್ಧ[18]. ಇಲ್ಲಿಂದ ಎರಡು ತಲೆಮಾರು ಈಚೆ ಅಂದರೆ ಸ್ಥೂಲವಾಗಿ 16ನೆಯ ಶತಮಾನದ ಮಧ್ಯಭಾಗದಲ್ಲಿ ಸಣ್ಣಸಾರಂಗೇಶ್ವರ ನಿದ್ದಾನೆ. ಹೆಚ್ಚು ಕಡಿಮೆ ಇದೇ ವೇಳೆಗೆ ವೀರಶೈವನಿಷ್ಠೆಯ ಹೆಸರಾಂತ ದೊರೆಯೊಬ್ಬ ಹರಪನಹಳ್ಳಿ–ಉಜ್ಜಯಿನಿ ಭಾಗದಲ್ಲಿ ಆಗಿಹೋಗಿದ್ದಾನೆ; ಆತನೇ ಬಸವಂತರಾಯ. ಈ ಬಸವಂತಭೂಪಾಲನ ಗುರು ಚೀವಾಳ ಎಂಬ ಚೀವಾಳ ಸಮಯ ಪ್ರವರ್ತಕ.

---

16 ಸಾರಂಗಮಠಾಧೀಶ್ವರರು, ಪು. 13 ರಿಂದ 16

17 ಅಲ್ಲೇ.

18 ಕ. ಕ. ಚ., ಸಂ. 2, ಪು. 305.

ಚೀವಾಳ ಸಮಯ ವೀರಶೈವ ವಿರಕ್ತ ವರ್ಗದ ಜಗದ್ಗುರು ಪೀಠ ಸಂಪ್ರದಾಯಗಳಲ್ಲಿ (ಮುರುಗಾ ಸಮಯ, ಕುಮಾರ ಸಮಯ ಎಂಬಂತೆ) ಒಂದಾಗಿದೆ.[19] ಬಸವಪ್ರಭು ಎಂಬ ಪರ್ಯಾಯನಾಮ ಹೊಂದಿರುವ ಈ ಚೀವಾಳನು ಮತ್ತು ಚಿತ್ರದುರ್ಗ ಬೃಹನ್ಮಠದ ಮುರಿಗೆ ಶಾಂತವೀರರು ಸಮಕಾಲೀನರಾಗಿದ್ದು, ಕಟ್ಟಿಗೆಹಳ್ಳಿ ಸಿದ್ಧಲಿಂಗನ (ಇವರ ಪರ್ಯಾಯ ನಾಮ ಕಟ್ಟಿಗೆಹಳ್ಳಿ ಸಂಗಮೇಶ್ವರ[20]) ಶಿಷ್ಯರಾಗಿದ್ದಾರೆ ಇಬ್ಬರೂ ಷಟ್ಸ್ಥಲ ಶಿವಾಯಣ (ಸು. 1700), ಮಹಾಲಿಂಗೇಂದ್ರ ವಿಜಯ (1870) ಎಂಬ ಎರಡು ವೀರಶೈವ ಕಾವ್ಯಗಳಲ್ಲಿ ಈ ಗುರು–ಶಿಷ್ಯರುಗಳ ಚರಿತ್ರೆ, ಪರಸ್ಪರ ಸಂಬಂಧ ವಿವರಗಳು ಕಾಣಿಸಿಕೊಂಡಿವೆ. ಇವುಗಳಲ್ಲಿ 'ಷಟ್ಸ್ಥಲಶಿವಾಯಣ' ಹೇಳುವಂತೆ ಚೀವಾಳನ ಜನನ ಕಾಲ 'ಆನಂದನಾಮ ಸಂವತ್ಸರದ ಕಾರ್ತಿಕ ಮಾಸ' ವಾಗಿದ್ದು ಇದರ ತೇದಿ ಡಾ॥ ಕಲಬುರ್ಗಿಯವರು ಊಹಿಸುವಂತೆ ಕ್ರಿ.ಶ. 1615 ಆಗಿದೆ[21]. ಸುಮಾರು ಈ ಕಾಲದಲ್ಲಿಯೇ ಹರಪನಹಳ್ಳಿಯ ಬಸವಂತರಾಯ ಹಾಗೂ ಸಣ್ಣಸಾರಂಗೇಶ್ವರ ಇದ್ದಾರೆ.

ಹರಪನಹಳ್ಳಿಯನ್ನು ಬಸವಂತರಾಯ ಆಳುತ್ತಿದ್ದಾಗ ಚೀವಾಳಸ್ವಾಮಿ ಹತ್ತಿರದ ಅತ್ತಿಕಟ್ಟೆಯಲ್ಲಿ ಬಾಲಸಂಗ, ಮಲಯ ಮಾದನೆ, ಮಂಟೆದಯ್ಯ, ಕೊಡೆಕಲ್ಲು ರಾಚ ಇವರಿಂದ ಪೂಜೆಗೊಳ್ಳುತ್ತಿರುತ್ತಾನೆ. ಆಗ ಈತನನ್ನು ಕರೆತರಲು ಕಟ್ಟಿಗೆಹಳ್ಳಿ ಸಿದ್ಧಲಿಂಗರು ಬಸವಂತರಾಯನನ್ನು ಕಳುಹುತ್ತಾರೆ. ಆ ಪ್ರಕಾರ ಚೀವಾಳಸ್ವಾಮಿ ಮುಂದೆ ಕೆಲವು ದಿನಗಳಲ್ಲಿ ಹರಪನಹಳ್ಳಿಗೆ ಬಂದು ಶಿಖಾಸಹಿತ ಷಟ್ಸ್ಥಲ ಪಟ್ಟಾಭಿಷಿಕ್ತನಾಗಿ ಅರಸನಿಂದ ಉಡುಗೊರೆ ಸ್ವೀಕರಿಸುತ್ತಾನೆ.

'ಷಟ್ಸ್ಥಲ ಶಿವಾಯಣ'ದಲ್ಲಿನ ಚೀವಾಳಸ್ವಾಮಿಯ ಈ ಕತೆಗೂ 'ಸಾರಂಗ ಮಠಾಧೀಶ್ವರರು' ಹೇಳುವ ಸಣ್ಣಸಾರಂಗೇಶ್ವರನ ಕತೆಗೂ ಸಾಮ್ಯತೆ ಇರುವುದನ್ನು ಗುರುತಿಸಬಹುದು. ಹರಪನಹಳ್ಳಿಯ ದೊರೆಯನ್ನು ಸಣ್ಣಸಾರಂಗೇಶ್ವರ ಚೀವಾಳ ಸ್ವಾಮಿ ಇಬ್ಬರೂ ಕಂಡಿದ್ದಾರೆ. ಸಣ್ಣಸಾರಂಗೇಶ್ವರ–ಹರಪನಹಳ್ಳಿ ದೊರೆಯ ಭೇಟಿ ಆಕಸ್ಮಿಕವಾಗಿರದೆ ರಾಜಮರ್ಯಾದೆಯನ್ನು ಒಳಗೊಂಡಿದೆ, ಚೀವಾಳಸ್ವಾಮಿ

---

19 ಚಿತ್ರದುರ್ಗ ಬೃಹನ್ಮಠದ ಮುರಿಗೆ ಶಾಂತವೀರರಿಂದ ಮುರುಗಾ ಸಮಯ, ಚೀವಾಳನಿಂದ ಚೀವಾಳ ಸಮಯ ಆದಂತೆ ಬಾಳೇಹಳ್ಳಿ ಸಿಂಹಾಸನದ ಕುಮಾರಸ್ವಾಮಿ (ಕುಮಾರ ಚೆನ್ನಬಸವೇಶ್ವರ)ಯಿಂದ ಕುಮಾರ ಸಮಯ ಕಾಣಿಸಿಕೊಂಡಿತೆ ? ಆದರೆ ಕುಮಾರಸ್ವಾಮಿ ಗುರುವರ್ಗದ ಸ್ವಾಮಿಯಾಗಿದ್ದು, ವಿರಕ್ತ ಸಮಯ ಸ್ಥಾಪನೆ ಹೇಗೆ ? ಆಗ ಈ ಭೇದ ಇರಲಿಲ್ಲವೆ ?

20 ಮುರಿಗೆ ಶಾಂತವೀರರ ಕೃತಿಗಳು, ಸಂ। ಎಸ್. ಶಿವಣ್ಣ, ಪೀಠಿಕೆಯಲ್ಲಿ (ಪು. V)

21 ಚೀವಾಳ ಸಮಯ, ಕರ್ನಾಟಕ ಭಾರತಿ, ಸಂ. 24, ಸಂಚಿಕೆ 4, ಪುಟ. 28

ಯಂತೆ ಸಾರಂಗ-ಚೀವಾಳ ಇಬ್ಬರೂ ದೊರೆ ಬಸವಂತರಾಯನಿಂದ ಶಿಖಾ ಸಹಿತ ಉಡುಗೊರೆ ಪಡೆದವರಾಗಿದ್ದಾರೆ. 'ಶಿಖಾನಿರೂಪ' ಎಂದು ಷಟ್‌ಸ್ಥಲ ಶಿವಾಯಣ ಹೇಳಿದರೆ; ಶಿಖಾಶೈಲಕಠಾರಿ' ಎಂದು ಒಂದು ಹೆಜ್ಜೆ ಮುಂದೆ ಹೋಗಿ 'ಸಾರಂಗ ಮಠಾಧೀಶ್ವರರು' ಕೃತಿಯಲ್ಲಿನ ಹಸ್ತಪ್ರತಿಗಳು ಹೇಳುತ್ತವೆ.[22] ಹಾಗಾದರೆ ಹರಪನಹಳ್ಳಿ ದೊರೆಯಿಂದ ಪೂಜೆಗೊಂಡ ಸಣ್ಣಸಾರಂಗೇಶ್ವರ-ಚೀವಾಳ ಅಭಿನ್ನರೆ ? ಎಂದು ಕೇಳುವ ಮನಸ್ಸಾಗುತ್ತದೆ. ಆದರೆ ಚೀವಾಳ ವಿರಕ್ತ ಪೀಠಕ್ಕೆ ಸಂಬಂಧಿಸಿದವ ನಾಗಿದ್ದರೆ, ಸಣ್ಣಸಾರಂಗೇಶ್ವರ ಮಳೆ ಬಾಗಿಯ ಉಜ್ಜಯಿನಿ ಪೀಠದ ಗುರು ವರ್ಗಕ್ಕೆ ಸಂಬಂಧಿಸಿದವನಾಗಿದ್ದಾನೆ. ಇದನ್ನು ನೋಡಿದರೆ ಗುರು-ವಿರಕ್ತ ಭೇದ ಆಗ ಇರಲಿಲ್ಲವೆಂದೇ ತೋರುತ್ತದೆ. ಅಥವಾ ಚೀವಾಳ-ಸಣ್ಣ ಸಾರಂಗ ಭಿನ್ನ ವ್ಯಕ್ತಿಗಳಾ ಗಿದ್ದು, ಬಸವ ತಮ್ಮ ಪಾಲ ಇಬ್ಬರನ್ನು ಸಮನಾಗಿ ಗೌರವಿಸುತ್ತಿದ್ದನೆ ? ಎನ್ನ ಬೇಕಾಗುತ್ತದೆ.

ಚೀವಾಳಸ್ವಾಮಿ ಸಂಚರಿಸಿದ ನೆಲೆಗಳೆಲ್ಲವೂ ಸಾರಂಗಮಠಾಧಿಪರು ಸಂಚರಿಸಿದ ನೆಲೆಗಳೇ ಆಗಿರುವುದು ಲಕ್ಷಿಸುವಂತಿದೆ. ಶ್ರೀಶೈಲ, ಹಂಪೆ, ಸಂಗಮ, ಹರಪನಹಳ್ಳಿ, ಉಜ್ಜಯಿನಿ ಮೊದಲಾದ ಮುಖ್ಯನೆಲೆಗಳನ್ನೊಳಗೊಂಡು ಮಕ್ಕೆ, ಕಾಶಿ, ಕುಂಭ ಕೋಣ, ಶಿವಗಂಗೆ, ಪಟ್ಟದಕಲ್ಲು, ಎಳಮಲೆ (ಆಲಮೇಲ) ಮೊದಲಾದ ನೆಲೆಗಳನ್ನು ಈ ನಿಟ್ಟಿನಲ್ಲಿ ಗಮನಿಸಬಹುದಾಗಿದೆ. ಎಲ್ಲದಕ್ಕೂ ಮುಖ್ಯವಾಗಿ ಉಜ್ಜಯಿನಿ ಹರಪನಹಳ್ಳಿಗಳಲ್ಲಿ ಬಸವಂತರಾಯನನ್ನು ಚೀವಾಳ-ಸಾರಂಗ ಇಬ್ಬರೂ ಕೂಡಿದ್ದಾರೆ. ಇದು ಉಜ್ಜಯಿನಿ ಪುರ ವೀರಶೈವ ಗುರು-ವಿರಕ್ತರ ಮುಖ್ಯನೆಲೆಯಾಗಿತ್ತು; ಬಸವಂತ ರಾಯ ಇಬ್ಬರನ್ನು ಪಾಲಿಸುತ್ತಿದ್ದನೆಂಬುದು ಹೊಳೆಯುತ್ತದೆ.

ಚೀವಾಳಸ್ವಾಮಿ ಹರಪನಹಳ್ಳಿಗೆ ಬರುವ ಮುನ್ನ ಬಾಲಸಂಗೆ, ಮಲೆಯ ಮಾದನ, ಮಂಟೆದಯ್ಯ, ಕೊಡೆಕಲ್ಲು ರಾಚ ಮೊದಲಾದವರಿಂದ ಪೂಜೆಗೊಳ್ಳು ತ್ತಿದ್ದನೆಂಬ ವಾತಿದೆ. ಜೊತೆಗೆ, ಚೀವಾಳಸ್ವಾಮಿಗೆ ಷಟ್‌ಸ್ಥಲ ಪಟ್ಟವಾದುದಕ್ಕೆ ಬೇಸರ ತಾಳಿ ಯಾರೋ ಕೆಲವರು 'ಬೇರೆ ಸಮಯ' ಮಾಡಿಕೊಂಡರೆಂಬ ವಿಚಾರವೂ 'ಷಟ್‌ಸ್ಥಲ ಶಿವಾಯಣ'ದಲ್ಲಿದೆ. ಈ ಎರಡು ಅಂಶಗಳು ಚೀವಾಳಸ್ವಾಮಿ ಚರಿತ್ರೆ ಯನ್ನು ಹೊಸದಿಕ್ಕಿನತ್ತ ಕೊಂಡೊಯ್ಯುತ್ತಿದ್ದು, ಚೀವಾಳ ಸಮಯಕ್ಕೆ ಪರ್ಯಾಯವಾಗಿ ಹುಟ್ಟಿಕೊಂಡ ಆ 'ಬೇರೆ ಸಮಯ' ಯಾವುದು ? ಯಾರು ಆ ಬೇರೆ ಸಮಯ ದವರು ? ಎಂಬುದನ್ನು ಈಗ ವಿಚಾರಿಸಬಹುದಾಗಿದೆ.

---

22 ಶಿಖಾ ಇದು ಸಿಕ್ಕಾ (ಮುದ್ರೆ) ಎಂದೂ, ಶೈಲ ಸೀಲ್ ಎಂದೂ ವಿದ್ವಾಂಸರ ಅಭಿಪ್ರಾಯ (ವಿವರಗಳಿಗೆ ಡಾ॥ ಕಲಬುರ್ಗಿಯವರ ಮೇಲಿನ ಲೇಖನ ನೋಡಿ)

ಚೀವಾಳಸ್ವಾಮಿ ಸಂಚಾರದಲ್ಲಿ ಎರಡು ಗಮನಾರ್ಹವಾದ ಭಾಗಗಳಿವೆ: 1) ಹರಪನಹಳ್ಳಿಗೆ ಬರುವವರೆಗಿನ ಘಟ್ಟ 2) ಹರಪನಹಳ್ಳಿಯಲ್ಲಿ ಪಟ್ಟವಾದ ಮೇಲಿನ ಘಟ್ಟ. ಈ ಭೇದವನ್ನು ನಾವು ಯಾಕೆ ಗುರುತಿಸಬೇಕಾಗಿದೆ ಎಂದರೆ, ಹರಪನಹಳ್ಳಿಗೆ ಬರುವ ಮುಂಚೆ ಚೀವಾಳಸ್ವಾಮಿಯ ಜೊತೆಗಿರುವ ಬಹುತೇಕ ವ್ಯಕ್ತಿಗಳು ವೀರಶೈವರಾಗಿರದೆ ನಾಥಪಂಥದವರಾಗಿರುವುದು ಪ್ರಮುಖ ಕಾರಣವಾಗಿದೆ. 'ಷಟ್ಸ್ಥಲ ಶಿವಾಯಣ' ಹೇಳುವ ಹಾಗೆ ಚೀವಾಳಸ್ವಾಮಿ ಜೊತೆಗಿರುವ ವ್ಯಕ್ತಿಗಳು 15-16ನೇ ಶತಮಾನದ ಕೊಡೇಕಲ್ಲ ಬಸವಣ್ಣ ಎಂಬ ನಾಥಸಿದ್ಧನ ಪರಿಸರದ ವ್ಯಕ್ತಿಗಳಾಗಿದ್ದಾರೆ. ಇವರಲ್ಲಿ ಬಾಲಸಂಗ ಅರ್ಥಾತ್ ಸಂಗಪ್ಪಯ್ಯ, ಕೊಡೆಕಲ್ಲು ರಾಚ ಅರ್ಥಾತ್ ರಾಚಪ್ಪಯ್ಯ ಕೊಡೇಕಲ್ ಬಸವಣ್ಣನ ಮಕ್ಕಳಾಗಿದ್ದರೆ, ಮಂಟೆದಯ್ಯ ಅರ್ಥಾತ್ ಮಂಟೇಸ್ವಾಮಿ ಕೊಡೇಕಲ್ ಬಸವಣ್ಣನ ನೇರ ಶಿಷ್ಯನಾಗಿದ್ದಾನೆ (ಮಲೆಯ ಮಹಾದೇಶ್ವರನ ಬಗೆಗೆ ಅನುಮಾನಗಳಿದ್ದಾಗಲೂ ಶಿಷ್ಯನೆಂದು ನಿರ್ಣಯಿಸಲು ಆಧಾರಗಳ ಕೊರತೆ ಇದೆ.) ಸ್ಥೂಲವಾಗಿ 15-16ನೇ ಶತಮಾನಕ್ಕೆ ಸೇರುವ ಈ ವ್ಯಕ್ತಿಗಳು ಚೀವಾಳಸ್ವಾಮಿಯ ಪರಿಸರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಕುತೂಹಲಕಾರಿಯಾಗಿದೆ.

ಸಾರಂಗಮಠ ಮೂಲತಃ ನಾಥಸಿದ್ಧರ ಪೀಠವೆಂದು ಮೇಲೆ ನೋಡಿದ್ದೇವೆ, ಮುಂದೆ ಇದು ವೀರಶೈವಮಠವಾಗಿ ಪ್ರವರ್ತಿತವಾದರೂ ಸಿದ್ಧಸಂಪ್ರದಾಯದ ಮುಂದಿನವರು ಈ ಮಠದತ್ತ ತಮ್ಮ ಎಳೆತವನ್ನು ಹೊಂದಿರುವಂತಿದೆ. ಆರಂಭದಲ್ಲಂತೂ ಸರಿಯೆ. ಮುಂದಿನ ಕಾಲದಲ್ಲೂ ಸಾರಂಗಪೀಠಸ್ಥರಲ್ಲಿ 'ಸಿದ್ಧ' ಹೆಸರಿನ ಪೀಠಸ್ಥರು ವಿಪುಲವಾಗಿ ಕಣ್ಣಿಗೆ ಬೀಳುವುದು ಅವರ ಸಿದ್ಧಸಂಪ್ರದಾಯದ ಜಲವನ್ನು ಸೂಚಿಸುತ್ತದೆಯೆ ? ಸಣ್ಣಸಾರಂಗೇಶ್ವರ ಮತ್ತು ಚೀಲಾಳ ಉಜ್ಜಯಿನಿ–ಹರಪನಹಳ್ಳಿ ದೊರೆ ಬಸವಂತರಾಯನಿಂದ ಸಮ್ಮಾನಗೊಂಡ ಸಂದರ್ಭಗಳಿರುವಂತೆ, ಕೊಡೇಕಲ್ ಬಸವಣ್ಣನೂ ಉಜ್ಜಯಿನಿಯಲ್ಲಿ ದೊರೆಗೆ ಬೋಧೆಗೈದ ವಿವರಗಳಿವೆ.

> ಈ ಪರಿಮಲ ಬೊಧೆ ಕೇಳುತಲಿ
> ಆ ಪರಾಪರ ವಸ್ತು ಬಸವನು
> ವಿರೂಪವನು ತಾ ಕೊಂಡು ನಡೆದನು ಉಜ್ಜನಿಯ ಪಟ್ಟಣಕೆ ॥
>
> ವ್ಯಾಪರಸ್ಥರು ಈರ್ವ ಬ್ರಾಹ್ಮರು
> ಆ ಪುರುಷೋತ್ತಮ ದೇವರಾಜನು
> ರೂಪು ಕಂಡಾಶ್ಚರ್ಯ ಪಾದಕೆ ಬಂದು ನಮಸ್ಕರಿಸೇ ॥[23]

ಕೊಡೇಕಲ್ ಬಸವಣ್ಣನ ಚರಿತ್ರೆಯನ್ನು ಕಥಿಸುವ, ಕೊಡೇಕಲ್ ಬಸವನ ವಂಶಸ್ಥ ವೀರಸಂಗಯ್ಯ ಎಂಬಾತ ಬರೆದ (ಕ್ರಿ. ಶ. 1589) 'ನಂದಿಯಾಗಮ ಲೀಲೆ

---

23. ನಂದಿಯಾಗಮಲೀಲೆ, ಸಂ. 13, ಪ. 29

ಕಾವ್ಯದಲ್ಲಿನ ಈ ಪದ್ಯದಲ್ಲಿ ಉಜ್ಜನಿಯ ಪುರುಷೋತ್ತಮ ದೇವರಾಜನು ಉಜ್ಜನಿ ಹರಪನಹಳ್ಳಿ ಪ್ರದೇಶವಾಳುತ್ತಿದ್ದ ಬಸವಂತರಾಯ ಎಂಬಲ್ಲಿ ಸಂಶಯವಿಲ್ಲ. ನಮ್ಮ ಸಂಶಯವನ್ನು ಸಮರ್ಥಿಸುವಂತೆ ನಂದಿಯಾಗಮ ಲೀಲೆಯಲ್ಲಿ ಉಕ್ತವಾದಂತೆ ರಾಚೋಟಿ, ಸಂಗಮ, ಹಂಪೆ, ಕಲ್ಯಾಣ, ನಾಗಾವಿ, ಗಲಗ, ವಿಜಾಪುರ, ಕಂದಗಲ್ಲ ಇವೇ ಮೊದಲಾದ ನೆಲೆಗಳಲ್ಲಿ ಕೊಡೇಕಲ್ ಬಸವಣ್ಣ ಸಂಚರಿಸಿ ಬಾಳಿದ್ದರೆ, ತನ್ನ ಸಂಪ್ರದಾಯದ ಕೇಂದ್ರಗಳನ್ನು ಸ್ಥಾಪಿಸಿದ್ದರೆ ಸಣ್ಣಸಾರಂಗ, ಚೀಲಾಳ ಇಲ್ಲಿಯೇ ಸಂಚರಿಸಿದ್ದಾರೆ.[24] ಇವುಗಳಲ್ಲಿ ಗಲಗ ಮತ್ತು ನಾಗಾವಿಗಳಲ್ಲಿ ಕೊಡೇಕಲ್ ಬಸವಣ್ಣನ ಸಂಪ್ರದಾಯದ ಕೇಂದ್ರಗಳು ಈಗಲೂ ತಮ್ಮ ಕಾರ್ಯನಿರ್ವಹಣೆ ಮಾಡುತ್ತಿದ್ದು, ಸಾರಂಗ-ಚೀವಾಳರ ಸಾರಂಗಮಠವಾಗಲೀ-ಚೀವಾಳ ಸಮಯದ ವಿರಕ್ತಮಠವಾಗಲೀ ಇಲ್ಲಿ ಇಲ್ಲದಿರುವುದು ಕೊಡೇಕಲ್ ಬಸವಣ್ಣನೇ ಸಾರಂಗ ಅರ್ಥಾತ್ ಚೀವಾಳ ಇರ ಬಹುದೆ ? ಎಂಬ ಅನುಮಾನಕ್ಕೆ ಕಾರಣವಾಗುತ್ತದೆ. ಆದರೆ ಈ ಊಹೆಗೆ ಇನ್ನೂ ಸಮರ್ಥನೆಗಳು ಬೇಕು.

ಕೊಡೇಕಲ್ ಒಕ್ಕಣೆಯಲ್ಲಿ "ಅಶ್ವನಾಮ–ಆರೂಢಮಠ" ಎಂದು ಬರುತ್ತದೆ. 'ಕುದುರೆ ಮಠ' ಎಂಬ ಹೆಸರೂ ಕೊಡೇಕಲ್ಲ ಪೀಠಕ್ಕಿದೆ. ಇವುಗಳಲ್ಲಿ ಆರೂಢ ಎಂಬುದು ನಾಥಸಿದ್ಧರ ಅವಧೂತ ಮಾರ್ಗವನ್ನು ಸೂಚಿಸುತ್ತಿದ್ದರೆ, 'ಅಶ್ವನಾಮ' ಕುದುರೆಯನ್ನು ಹೇಳುತ್ತಿದ್ದು,[41] ಸಾರಂಗ ಎಂಬುದು ಕುದುರೆಯನ್ನು ಸೂಚಿಸುತ್ತಿರು ವುದೂ—ಇದು ಕೊಡೇಕಲ್ ಬಸವಣ್ಣ–ಸಾರಾಂಗಮಠ ಸಂಬಂಧವನ್ನು ಹೇಳುತ್ತದೆ. ಕೊಡೇಕಲ್ ಬಸವನ ಶಿಷ್ಯ ಪೀಠವಾದ ಗಲಗಿನಮಠ ಕೊಡೇಕಲ್ ಒಕ್ಕಣೆ ಜೊತೆಗೆ 'ಮಳೆ ಬಗಿ' ಎಂಬ ಉಲ್ಲೇಖ ಹೊಂದಿದೆ. ಇದು ಸಾರಂಗಮಠ ಸೂಚಕ ಆಗಿದೆ. ಸಾರಂಗಮಠ ಚರಿತ್ರೆಯಲ್ಲಿ ಪಂಚವಣ್ಣಿಗೆ ಮಠದ ಪ್ರಸ್ತಾಪ ಬರುತ್ತದೆ. ಸಾರಂಗ ಮಠದ ಕುಪ್ಪಗಿಸೀಮೆಯು ಮರಿ ಕಾವಾರಿಸಿದ್ಧ ದೇಶಿಕನಿಗೆ ಹೂಲಿ ಪಂಚವಣ್ಣಿಗೆ ಮಠದ ಕನ್ಯೆಯನ್ನು ತಂದುಕೊಳ್ಳಲಾಗಿದೆ[42]. ಕೊಡೇಕಲ್ ಬಸವಣ್ಣನ ಪತ್ನಿ ಮಹಾದೇವಮ್ಮ (ನೀಲಮ್ಮ) ಬಳ್ಳಿಗಾವೆ ಪಂಚವಣ್ಣಿಗೆಮಠದ ಸಿದ್ಧಯ್ಯ-ಚನ್ನಮ್ಮರ ಮಗಳಂತೆ[43]

---

24. ವಿವರಗಳಿಗೆ ಮೇಲಿನ ಕಾವ್ಯ ನೋಡುವುದು

41. ಕಾದ ಉಕ್ಕಿನ ಕುದುರೆಯನ್ನು ಕೊಡೇಕಲ್ ಬಸವ ಏರಿದ್ದಕ್ಕೆ ಈ 'ಅಶ್ವನಾಮ', 'ಕುದುರೆಮಠ' ಬಂದಿದೆ ಎಂಬ ಅಭಿಪ್ರಾಯ ಕೊಡೇಕಲ್ಲವರದಾಗಿದೆ. ನನಗೇನೋ ಇದು ಸಾರಂಗ ಮಠ (=ಕುದುರೆ ಮಠ) ಸೂಚಕ ಎನಿಸುತ್ತದೆ

42. ಸಾರಂಗ ಮಠಾಧೀಶ್ವರರು, ಪು. 11

43. ನಂ. ಆ. ಲೀಲೆ, ಸಂ. 11, ಪ. 54
('ಬಳ್ಳಿಗಾವಿಗೆ ಸುಜನ ಪಂಚಾವಣ್ಣಿಗೆಯ ಸಿದ್ಧಯ್ಯ ಚನ್ನಮ್ಮನಾ ನಿಜದ ಗರ್ಭದಲ್ಲಿ ಜನಿಸಿ...')

ಸಾರಂಗಮಠ ಗುರುವರ್ಗದ ಮಠ (ಮಳೆ ಬಾಗಿ)ವಾಗಿದ್ದು, ಪಂಚವಣ್ಣಿಗೆ ಮಠ ಗುರುವರ್ಗದ ಗೃಹಸ್ಥ ಮಠವೇ ಆಗಿರುವುದು ಎರಡರ ರಕ್ತಸಂಬಂಧ ಸಹಜವಾಗಿದೆ. ಕೊಡೇಕಲ್ ಬಸವ ಪಂಚವಣ್ಣಿಗೆ ಮಠದ ಸಂಬಂಧ ಮಾಡುವುದು ಈತ ಗುರುವರ್ಗದ ಜಂಗಮನೆ ? ಎಂಬ ಅನುಮಾನ ಏಳುತ್ತದೆ. ಸಂ. ಆ. ಲೀಲೆ ಹಾಗೂ ಕೊಡೇಕಲ್ ಸಾಹಿತ್ಯ ಕೂಡ ವಿಜಯನಗರ ಸರಸೆಟ್ಟಿ ಮನೆತನದ ಬಣಜಿಗನೆನ್ನುವುದು ನಮ್ಮ ಅನುಮಾನವನ್ನು ಅಲುಗಿಸುತ್ತದೆ. ಹಾಗಾದರೆ ಗುರುವರ್ಗದ ಸಂಬಂಧ ಹೇಗೆ ? ಅಂತೂ ಈ ಕುರಿತು ಶೋಧ ಮುಂದುವರಿಸಬೇಕಾಗಿದೆ.

ಸಾರಂಗಮಠ ಗುರುವರ್ಗದ ಮಠ, ಚೀವಾಳ ಸಮಯ ವಿರಕ್ತಪೀಠ, ಕೊಡೇಕಲ್ ಮಠ ನಾಥಸಂಪ್ರದಾಯದ ಮಠ—ಹೀಗೆ ಇವು ಮೂರು ಬೇರೆ ಬೇರೆ ಮಾರ್ಗಗಳಾಗಿ ಇವತ್ತು ಒಡೆದು ಕಾಣುತ್ತಿದ್ದರೂ, ಒಂದು ಹಂತದಲ್ಲಿ ಈ ಮಠಾಧಿಪರಂ ನಾಥ ಸಂಪ್ರದಾಯದ ಸಿದ್ಧರಾಗಿದ್ದರು ಎಂಬುದು ಹೊಳೆಯುತ್ತದೆ. ಮಳೆಯ ಮಲ್ಲೇಶನಿಗೆ ಪೂರ್ವದಲ್ಲಿ ಸಾರಂಗಮಠ ಸಿದ್ಧರ ಮಠವಾಗಿಯೇ ಇತ್ತು, ಕುಮಾರಸ್ವಾಮಿ ಎಂಬ ಬಾಳೇಹಳ್ಳಿ ಮಠಾಧೀಶನಿಂದ ಇದು ವೀರಶೈವಕ್ಕೆ ಹೊರಳಿದೆ. ಚೀವಾಳ ಸಮಯರ ಚೀವಾಳ ಹರಪನಹಳ್ಳಿಯಲ್ಲಿ ವಿರಕ್ತ ಪಟ್ಟ ಹೊಂದುವ ಮುಂಚೆ ಕೊಡೇಕಲ್ ಪರಿಸರ ನಾಥಸಿದ್ಧನೇ ಆಗಿದ್ದಾನೆ. ಕೊಡೇಕಲ್ ಮಠವಂತೂ ಸರಿಯೆ, ಅದು ಆಗಲೂ ಈಗಲೂ ಸಿದ್ಧರ ಆರೂಢಮಠವಾಗಿಯೇ ಬೆಳಗುತ್ತಿದೆ. ಕಾಪಾಲಿಕರೆಂದರೆ ವಾಮಾಚಾರದ ಉಗ್ರಶೈವರೆಂದೇ ನಮ್ಮ ಭಾವನೆಯಾಗಿದೆ. ನಿಷ್ಠೆಯಲ್ಲಿ ಉಗ್ರತೆಯನ್ನು, ಯೋಗದಲ್ಲಿ ಹಠವನ್ನೂ (ಹಠಯೋಗ) ಮಾನಸಪೂಜೆಯನ್ನೂ ಹೊಂದಿದ ಗೌರವಾರ್ಹ ವರ್ತನೆಯ ವಿಶಿಷ್ಟ ಕಾಪಾಲಿಕರು ಮತ್ಸ್ಯೇಂದ್ರ-ಗೋರಕ್ಷ-ಸಾರಂಗ-ಕೊಡೇಕಲ್ ಬಸವಣ್ಣ ಆಗಿದ್ದರೆಂಬುದು ಅವರ ಚರಿತ್ರೆಯಿಂದ ತಿಳಿದುಬರುತ್ತದೆ. ಕಾಪಾಲಿಕರು ಎಂದಾಗ ಅಸಹ್ಯಭಾವನೆ ತೋರೆದು ಪೂರ್ವಗ್ರಹಪೀಡಿತ ದೃಷ್ಟಿಯಿಂದ, ಮುಕ್ತವಾಗಿ ಇವರನ್ನು ಅಭ್ಯಸಿಸುವ ಅಗತ್ಯ ಮತ್ತು ಹೊಣೆಗಾರಿಕೆ ನಮ್ಮ ಮೇಲೆ ಇದ್ದೇ ಇದೆ.

ತೊಡರು ಕಾಲಿಗೆ ತೊಡವು

ತಲಘಟ್ಟಪುರ ನಟರಾಜ

ಕರುಳ ಕುಣಿಕೆಯಲ್ಲಿ
ಅರಳುತ್ತಿರುವ ಮೊಗ್ಗು,
ಕಣ್ಣು ಬಿಟ್ಟ ಬಳಿಕವಷ್ಟೇ
ಕಾದ ನೆಲದಲ್ಲಿ ಅಳುವ
ತುಟಿಗೆ ಅಮೃತ ಸಿಂಚನ.
ಎದೆ ಅರಳಿ
ನಗುವ ಜೋಗುಳ
ಕತ್ತರಿಸಿದರೂ ಬೇರ್ಪಡಿಸಲಾಗದ
ಕರುಳ ಬಳ್ಳಿ
ಹಾದಿಯುದ್ದಕ್ಕೂ
ತೊಡರಾಗಿ ಕಾಲಿಗೆ
ತೊಡವಾಗಿ ಸದಾ ಗಿಲಿಗಿಲಿ ಶಬ್ದ.

ಒಮ್ಮೆ
    ಮೃಗದ ಮಿಥುನವ
    ಕಂಡು ಕರುಬಿದವನು
    ಸ್ವೈರ ವಿಹಾರದ
    ಆಲಿಂಗನದಲ್ಲೇ ಲೀನವಾದ
    ಹೆತ್ತ ಏಳನೂ
    ನೀರಿಗೆಸೆದ ಗಂಗೆ,
    ಹಾದರದ ಕೂಸೆಂದು
    ಗಂಗೆಯಲ್ಲೇ ತೇಲಿಬಿಟ್ಟ ಕುಂತಿ
    ಧರ್ಮರಾಯಾದಿಗಳನ್ನು
    ಮತ್ತೆ ಪಡೆದದ್ದು ಆಕಾಶಕ್ಕೆ
    ಏಣಿ ಹಾಕಿಯೇ ತಾನೆ!

ವಠಾದ್ರಿಗೂ ಮುಟ್ಟಾಗದ ಹಾಗೆ
ನಕುಲ ಸಹದೇವರನ್ನು
ಕೊಡಿಸಿದಳು
ಹೊತ್ತು ಹೆತ್ತರೋ,
ಸೂಲಗಿತ್ತಿಯರು ಬಂದರೋ,
ದಾದಿಯರೇ ಹಾಲುಣಿಸಿ
ಜೋಗುಳ ಹಾಡಿದರೋ,

ಆದರೆ– ಎಲ್ಲರನ್ನೂ ಕುರುಕ್ಷೇತ್ರ ಕಣಕ್ಕೆ
ಬಿಟ್ಟದ್ದಂತೂ ಸತ್ಯ !
'ರಾಸಲೀಲಾಪತಿ' ಸಾರಥ್ಯದಲ್ಲಿ
ಮಹಾಭಾರತ ನಡೆದದ್ದು,
ಹಾದರದ ಕೂಸನ್ನು
ಕತ್ತರಿಸಿದ್ದೂ ಸತ್ಯ !
ಅಕ್ಕನ ಬಾಣಂತನಗಳನ್ನು
ಕಂಡವಳೇ, ಕಲಿಸಿಕೊಂಡದ್ದು
ನಂತರ ನೂರೊಂದನ್ನೂ
ಪಡೆದ ಮಹಾಗಾಂಧಾರಿ,
ವಜ್ರ ಆಲಿಂಗನಕೆ ಭೀಮ
ಬಲಿಯಠಾಗದೆ ಹೋದದ್ದು.
ಅಜ್ಜಿ ಹೇಳಿದ ಕಥೆ
ಹಳಸಾಗದೇ ಹೋಗುತ್ತದೆ.
ನೆರಮನೆಯ 'ನಾಗಿ'
ಹೊಟ್ಟೆ ತೊಳೆಸಿಕೊಂಡು ಬಂದಾಗಲೆಲ್ಲಾ
ಕುಂತಿ, ಗಾಂಧಾರಿಯರ ನೆನಪಾಗುತ್ತದೆ
ನನ್ನ ಇಡೀ ದೇಹ
ಕುರುಕ್ಷೇತ್ರದ ಕಠಿಣವಾಗುತ್ತದೆ,

ಬೌದ್ಧ ಹಾಗೂ ಜೈನ ದರ್ಶನಗಳ ತತ್ತ್ವ ವೈಶಿಷ್ಟ್ಯ : ಒಂದು ವಿವೇಚನೆ

ಡಾ॥ ಟಿ. ಬಿ. ಬಸವರಾಜು

ವೈದಿಕ ಪರಂಪರೆಯ ಅರ್ಥಹೀನ ಕರ್ಮದ ಆಚರಣೆ ಮತ್ತು ಸಂಕುಚಿತ ಧಾರ್ಮಿಕ ಬದ್ಧತೆಗಳಿಂದಾಗಿ ಐದನೆಯ ಶತಮಾನದಲ್ಲಿ ಇಡೀ ಭಾರತೀಯ ತಾತ್ತ್ವಿಕ ಚಿಂತನೆಗೆ ಕತ್ತಲು ಕವಿದಿತ್ತು. ಧಾರ್ಮಿಕ ಕಂದಾಚರಣೆ, ಅಂಧಶ್ರದ್ಧೆ, ಜಾತಿವ್ಯವಸ್ಥೆ, ಲಿಂಗಭೇದದ ಜೊತೆಗೆ ಸ್ತ್ರೀ ಶೋಷಣೆ ಮತ್ತು ಪುರೋಹಿತಶಾಹಿಯ ಪ್ರಾಬಲ್ಯಗಳಿಂದಾಗಿ ಇಡೀ ಭಾರತೀಯ ಸಮಾಜ ತಲ್ಲಣಗೊಂಡಿತ್ತು ;

ಇಡೀ ಭಾರತೀಯ ಸಮಾಜದ ಬಹುಸಂಖ್ಯಾತ ಮುಗ್ಧ ಜನರ ಭೀಭತ್ಸಬದುಕು, ಮೂಕಯಾತನೆಗಳು, ವೈದಿಕ ಧರ್ಮದ 'ಮತ್ತಿನ' 'ಗತ್ತಿನ' ಕ್ರೂರತನಕ್ಕೆ ಸ್ಪಷ್ಟ ಸಾಕ್ಷಿಯಾಗಿತ್ತು ! ಧಾರ್ಮಿಕ ಢಂಬಾಚಾರದ ಹೃದಯವೇ ಇಲ್ಲದ, ಶುಷ್ಕ ಶಾಸ್ತ್ರ ಪಂಡಿತರ, ಪುರೋಹಿತರ, ಸನಾತನವಾದಿಗಳ ಮೇಲಾಟಗಳು ಪರಾಕಾಷ್ಟೆಯನ್ನು ಮುಟ್ಟಿದ್ದವು ;

ಈ ಸ್ಥಾಪಿತ ಧಾರ್ಮಿಕ ಮಂದಿ ಅಪ್ಪಿಕೊಂಡಿದ್ದ 'ಧರ್ಮಪರಿಕಲ್ಪನೆ'ಯಲ್ಲಿ ಕೆಳಹಂತದ ಬಹುಸಂಖ್ಯಾತರಿಗೆ ಸ್ಥಾನವಿರಲಿಲ್ಲ ಎನ್ನುವುದು ಒತ್ತಟ್ಟಿಗಿರಲಿ. ಅವರಿಗೆ ಈ ಜನ್ಮದಲ್ಲಿ ಮೋಕ್ಷವೇ ಇರಲಿಲ್ಲವೆನ್ನುವುದು ಬೇರೆಮಾತು !! 'ಕರ್ಮ'ವೆನ್ನುವುದರ ಹಿಂದಣ 'ಮರ್ಮವನ್ನು ಅಮಾಯಕ, ಆ—ವಿದ್ಯೆವಂಚಿತ ಸಮುದಾಯ ಅರಿಯುವುದಾದರೂ ಎಲ್ಲಿ ಸಾಧ್ಯವಿತ್ತು ? !

ಈ ಬರ್ಭರ ವ್ಯವಸ್ಥೆಯ ಪ್ರತಿರೋಧವಾಗಿ ವೇದಪ್ರಾಮಾಣ್ಯವನ್ನು ಧಿಕ್ಕರಿಸಿ, ಸ್ವಾನುಭವ, ವೈಚಾರಿಕ ನೆಲೆಯ ಅಭಿವ್ಯಕ್ತಿ ಸ್ವಾತಂತ್ರ್ಯ. ಸ್ವಸಾಮರ್ಥ್ಯದ ಮೇಲೆ ನಂಬುಗೆ ಆತ್ಮವಿಶ್ವಾಸ. ತೀಡಿಹಾಕಿದ್ದ ಮಾನವೀಯ ಮೌಲ್ಯಗಳ ಸಂಸ್ಥಾಪನೆಯ ನೆಲೆ-ಬೆಲೆಯಲ್ಲಿ ಬೌದ್ಧ ಮತ್ತು ಜೈನ ಧರ್ಮಗಳ ಅವಿಷ್ಕಾರವಾಯಿತು. ಬಂಡಾಯ ಮನೋ ಪ್ರವೃತ್ತಿಯುಳ್ಳ ಈ ಧರ್ಮಗಳ ತತ್ತ್ವವಾಹಿನಿಯು ಜನಮನದಲ್ಲಿ ಕ್ಷಿಪ್ರಗತಿಯಲ್ಲಿ ಪ್ರಕಾಶಿಸತೊಡಗಿತು. ಈ ಭರತಖಂಡದ ಮೇಲೆ ಪ್ರಪ್ರಥಮ ಬಂಡಾಯ ಹೋರಾಟ ಕಟ್ಟಿದವರು ಬೌದ್ಧ ಮತ್ತು ಜೈನರು !

(i)

ಬೌದ್ಧ ಮತ್ತು ಜೈನ ಮತಗಳೆರಡೂ ವೇದ ಪ್ರಾಮಾಣ್ಯವನ್ನು ಒಪ್ಪುವುದಿಲ್ಲ ಕಾರಣವಾಗಿ ಇವರನ್ನು ನಾಸ್ತಿಕರೆನ್ನುತ್ತಾರೆ! ನಾಸ್ತಿಕರೆಂದರೆ ದೇವರ ಅಸ್ತಿತ್ವವನ್ನು ಒಪ್ಪದ ನಿರೀಶ್ವರವಾದಿ ಎಂದೇನಲ್ಲ! ಹಾಗೆ ನೋಡಿದರೆ ಆಸ್ತಿಕರಾದ ಸಾಂಖ್ಯರೂ. ಮೀಮಾಂಸಕರು ದೇವರ ಪರಿಕಲ್ಪನೆ (Concept) ನಿರಾಕರಿಸುತ್ತಾರೆ. ಈ ಅರ್ಥ ದಲ್ಲಿಯೇ ವೇದ ಪ್ರಾಮಾಣ್ಯವನ್ನು ಒಪ್ಪದವರನ್ನು ನಾಸ್ತಿಕರೆಂದು ವ್ಯಾಖ್ಯಾನಿಸ ಲಾಗಿದೆ.

ಬೌದ್ಧಧರ್ಮವು ಮಾನವೀಯತೆಯ ಪ್ರತೀಕ. ಅಲ್ಲಿ ದುರಾಚಾರಗಳಿಗೆ ಆಸ್ಪದವಿಲ್ಲ. ಅವಿಚಾರಗಳಿಗೆ ಇಂಬುಗೊಡುವ, ಎಲ್ಲವನ್ನೂ ಹಿಡಿದಿಡುವ ಸಾರ್ವ ಭೌಮ ಆತ್ಮ ತತ್ತ್ವದ ಸಂಸ್ಥಾಪನೆ ಬುದ್ಧನ ತಾತ್ತ್ವಿಕ ಜಾಯಮಾನದಲ್ಲೇ ಕಾಣಸಿಗದು. ಆತ ವಿಚಾರ ಶೀಲತೆಯ ಪ್ರತಿನಿಧಿ.[1] ಆತ ಅಜ್ಞಾನ ಎಂಬ ರೋಗ ಶಮನಕ್ಕೆ ಉದಿಸಿದ ವೈದ್ಯನೇ ಸರಿ! ಬುದ್ಧನ ಮೂಲ ಆಶಯವೇ ಜೀವನದಲ್ಲಿ 'ದುಃಖ'ವೆಂಬ ಕೆಡುಕನ್ನು ಕಿತ್ತೊಗೆಯುವುದೇ[2] ಪರಂತು ಕಾಣದ ಕಡೆ ಕೈ ತೋರಿಸಿ ಜನಸಾಮಾನ್ಯರಿಗೆ ಅರ್ಥವಾಗದ, ಬುರುಡೆ ತತ್ತ್ವ ಪುರಾಣ ಕೊಚ್ಚುವ ಖಾಲಿಮಾತಿನ ಪಾಂಡಿತ್ಯ ಪ್ರದರ್ಶನವಲ್ಲ! ಮೂಲತಃ ಆತ ಶುಷ್ಕ ವೇದಾಂತಿಯಲ್ಲ!

ಬೌದ್ಧ ಹಾಗೂ ಜೈನ ಮತಗಳೆರಡೂ ಸ್ವತಂತ್ರ ಪ್ರಮಾಣಗಳ ಮೇಲೆ ಸ್ವತಂತ್ರ ಮಾರ್ಗದಲ್ಲಿ ತಮ್ಮ ಚಿಂತನೆಯನ್ನು ಬಿತ್ತರಿಸಿ, ತಮ್ಮ ಧರ್ಮಗಳನ್ನು ಕಟ್ಟಿವೆ. ಜೈನಧರ್ಮವು ತೀರ್ಥಂಕರರ ಉಪದೇಶದ ಮೇಲೆ ನಿಂತಿದ್ದರೆ, ಬೌದ್ಧಧರ್ಮವು ಬುದ್ಧನೊಬ್ಬನ ಉಪದೇಶವನ್ನು ಅವಲಂಬಿಸಿದೆ. ಈ ಮಹನೀಯರ ಉಪದೇಶಗಳನ್ನೇ ಇವರ ಶಿಷ್ಯರು ಸಂಗ್ರಹಿಸಿ, ದಾಖಲಿಸಿದ್ದಾರೆ. ಇದು ಬಹಳಷ್ಟು ಮಟ್ಟಿಗೆ ಬುದ್ಧನಿಗೆ ಸೀಮಿತ ಎನಿಸಿದರೆ, ಜೈನ ತೀರ್ಥಂಕರರಲ್ಲಿ ಹಲವರು ವಿದ್ವತ್ಪೂರ್ಣವಾದ ಕೃತಿಗಳನ್ನು ರಚಿಸಿಯೂ ಇದ್ದಾರೆ.

---

1. ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವುದರಲ್ಲಿ ಬುದ್ಧನು ಪ್ರಥಮನು ಪ್ರವಚನವೊಂದ ರಲ್ಲಿ ಶಿಷ್ಯರನ್ನುದ್ದೇಶಿಸಿ ಹೀಗೆ ನುಡಿದಿದ್ದಾನೆ ; "ಆದ್ದರಿಂದ· ಬಿಕ್ಕುಗಳೇ- ನಿಮ್ಮಗಳ ಅಭಿಮತ ನೀವೇ ಮಾನ್ಯಮಾಡಿದ್ದು, ನೀವೇ ಅರಿತದು." ನೀವೇ ಅರ್ಥಮಾಡಿ ಕೊಂಡದ್ದು, ಅಲ್ಲವೇ" "ಹೌದು, ಭಗವಾನ್". —— ಮಜ್ಜಿದುನಿಕಾಯ— 38 ನೆಯ ಪ್ರವಚನ.
2. Mrs. Rhys Davids : Buddhism—Page – 159 —ಈ ಹೊತ್ತಿಗೆ ಯಲ್ಲಿ ಬುದ್ಧ ಹೀಗೆ ಹೇಳಿದ್ದಾನೆ ಎಂದು ನಿರೂಪಣೆ ಮಾಡಲಾಗಿದೆ : "ನಾನು ಬೋಧಿ ಸಿರುವುದೂ ಇಷ್ಟೇ" ಬೋಧಿಸುವುದೂ ಇಷ್ಟೇ— 'ಕೆಡಕು ಮತ್ತು ಅದರ ನಿವಾರಣೆ'.

ಬೌದ್ಧ ಹಾಗೂ ಜೈನಮತಗಳೆರಡು ದೇವರನ್ನು ಸೃಷ್ಟಿಕರ್ತನೆಂದು ಒಪ್ಪು ವುದಿಲ್ಲ. ಬುದ್ಧನು ದೇವರನ್ನು ಕುರಿತಂತೆ ಮಾತನಾಡುವುದೇ ಇಲ್ಲ[3], 'ಅವಚನಂ ಬುದ್ಧವಚನಂ' [ಅವಚನವೇ ಬುದ್ಧನ ವಚನವಾಗಿದೆ]. ತಂತ್ರ ಆಸ್ತಿಕನಲ್ಲದ ಅದ್ಭುತ ಅನುಭಾವಿಯಾಗಿದ್ದ ಬುದ್ಧ ಪ್ರಾಪಂಚಿಕರ ಎದುರಲ್ಲಿ ಆಧ್ಯಾತ್ಮಿಕವಾದ ನಿಗೂಢ ತತ್ತ್ವಗಳನ್ನು ಚರ್ಚಿಸಲಿಲ್ಲ. ಅದರ ತಲೆಕೆಡಿಸಲಿಲ್ಲ! ಅತ ದೇವರನ್ನು ಸಂಬದಿದ್ದರೂ ಇಡೀ ಜಗತ್ತಿನ ಸರ್ವಜೀವಿಗಳಲ್ಲಿ ದೇವರನ್ನು ಕಂಡಿದ್ದಾನೆ, ತನ್ಮೂಲಕ ಎಲ್ಲಾ ಜೀವಿಗಳನ್ನೂ ಗೌರವಿಸಿದ್ದಾನೆ. ಆತ ಮಾನವೀಯ ಮೌಲ್ಯಗಳಿಗೆ ನೀಡಿದ ಪ್ರಾಮು ಖ್ಯತೆ. ಅಸಹಾಯಕರ, ನಿತ್ಯನಾರಕಿಗಳೆಂದೇ ಪರಿಗಣಿಸಿದ್ದ ಮುಗ್ಧರ ಬದುಕಿಗೆ ನೀಡಿದ ಹೊಸ ಬೆಳಕಿನ ತಾತ್ತ್ವಿಕ ಅಮೃತಸಿಂಚನ— ! ಇದೇ ಬುದ್ಧ ದರ್ಶನದ ಉತ್ತುಂಗ

ಜಾತಿ ಭೇಧ. ಲಿಂಗಭೇಧ, ಧರ್ಮಭೇದ — ಇವುಗಳಿಗೆ ಅತೀತನಾಗಿ ಬುದ್ಧನು ಮಾನವ ಕುಲ ಒಂದೇ ಎಂದು ಸಾರಿದ್ದಾನೆ. ವೈದಿಕ ಕಂದಾಚಾರಗಳನ್ನು, ವರ್ಣವ್ಯವಸ್ಥೆ ಯನ್ನು ತಿರಸ್ಕರಿಸಿ ಜರಿದಿದ್ದಾನೆ. ಇಡೀ ಮಾನವ ಕುಲವನ್ನೇ ಮುಕ್ಕಿಬಿಡುವ ಈ ಪೈಶಾಚಿಕ ಪರಿಕಲ್ಪನೆಯ ನಿರ್ನಾಮಕ್ಕಾಗಿ ಬುದ್ಧ ಶ್ರೀಗಂಧದಂತೆ ತನ್ನನ್ನೇ ತೇದು ಕೊಂಡಿದ್ದಾನೆ. ಬುದ್ಧನ ಈ ಬಗೆಯ ಅನುಷ್ಠಾನ ಪ್ರಾಧಾನ್ಯ ತತ್ತ್ವ ಒಂದು ಬಿರುಗಾಳಿ ಯಂತೆ ಎದ್ದು ಹಿಂದೂ ಧಾರ್ಮಿಕತೆಯನ್ನು ಶುಭ್ರಗೊಳಿಸುವಲ್ಲಿ ಸಹಕಾರಿಯಾದುದು ಗಮನಾರ್ಹ! ಈ ಗೋಚರ ಜಗತ್ತಿನಲ್ಲಿ ಎಲ್ಲಾ ರೀತಿ ಸ್ವಾರ್ಥಪರ ದೊಂಬರಾಟ ಗಳನ್ನೂ ಆಡಿ, ಕೊನೆಗೆ "ಹಗ್ಗನೋಡಿ ಹಾವೆಂದು ಭ್ರಮಿಸುವಂತೆ ಈ ಜಗತ್ತು ಮಿಥ್ಯ, ಅಧಿಷ್ಠಾನವಾದ ಬ್ರಹ್ಮವೊಂದೇ ಸತ್ಯ"[1]ವೆಂದು ಬಿಡುವುದು ಸುಲಭ, ಜತೆಗೆ ಅದೊಂದು ಬಗೆಯ ಪಲಾಯನವಾದವೇ ಸರಿ! ಆದರೆ ಈ ಜಗತ್ತಿನಲ್ಲಿ ಅರ್ಥಪೂರ್ಣ ವಾಗಿ ಬದುಕಿ, ಸಮಾಜದ ಮುಖ್ಯ ಪ್ರವಾಹಿನಿಯಲ್ಲಿ ಕೆಡುಕನ್ನು [EVIL] ಎದುರಿಸಿ, ತಾತ್ತ್ವಿಕತೆಯ ಪ್ರತಿಷ್ಠಾಪನೆ ಗೈಯುವುದು ಅಷ್ಟು ಸುಲಭ ಸಾಧ್ಯವಲ್ಲ! ಭಗವಂತನ ಹೆಸರಿನಲ್ಲಿ ಚಕ್ರವರ್ತಿ ಮತ್ತು ಪುರೋಹಿತ – ಈ ಈರ್ವರೂ ಭೋಗ ಜೀವನಕ್ಕೆ ಧರ್ಮವನ್ನು ಬಳಸಿಕೊಂಡದ್ದು, ಕರ್ಮ ಹಾಗೂ ಪುನರ್ಜನ್ಮ ಸಿದ್ಧಾಂತಗಳನ್ನು ಇವುಗಳಿಗೆ ಪೂರಕವಾಗಿ ಪೂರ್ವನಿಯೋಜಿತವಾಗಿ ಪುಷ್ಟಿಯಾಗುವಂತೆ ನೋಡಿಕೊಳ್ಳ ಲಾಗಿರುವ ವೈದಿಕ ಪರಂಪರೆಯಲ್ಲಿ ಅಪಾಯಗಳನ್ನೆದುರಿಸಿ, ಸತ್ಯವನ್ನು ದಿಟ್ಟವಾಗಿ

---

3. ಇದೊಂದು ವಿವಾದಾತ್ಮಕ ಪರಿಕಲ್ಪನೆ ಎಂಬುದು ಮಹಾಜ್ಞಾನಿ ಬುದ್ಧನಿಗೆ ಗೊತ್ತಿತ್ತು. ಜತೆಗೆ, 'ಇದರಿಂದ ಕೇವಲ ಸಮಯ ನಷ್ಟವೆಂಬ ನಂಬಿಗೆಯೂ ಇದ್ದೀತು !!. ಕೆಲ ವೇದಾಂತಿಗಳು ದೈವಾನುಭೂತಿಯು ಅನಿರ್ವಚನೀಯವೆಂದು ವ್ಯಾಖ್ಯಾನಿಸಿ, ದೇವರ ಬಗ್ಗೆ ಅಸಂಖ್ಯಾತ ಗ್ರಂಥಗಳ ರಚನೆಗೆ ತೊಡಗಿದ್ದು ವಿಪರ್ಯಾಸವಲ್ಲದೆ ಬೇರೇನು ?

1. Dr. G. Srinivasan Essentials of Vedanta–p. 22 [Bapco publication, 1974]

ಸಮಾಜದಲ್ಲಿ ಸಾರುವುದು ಬುದ್ಧನಂತಹ ಛಾತಿಯುಳ್ಳ ಪರಿಪೂರ್ಣ ಸಾಧಕರಿಗೆ ಮಾತ್ರ ಸಾಧ್ಯವೇನೋ! ಈ ನೆಲೆಯಲ್ಲಿಯೋ ಭಾರತದಲ್ಲಿ ಮಾನವೀಯ ಮೌಲ್ಯಗಳ ಪುನರುತ್ಥಾನವು ಬೌದ್ಧಧರ್ಮದಿಂದಲೇ ಸಾಧ್ಯವಾಯಿತು.

ಪ್ರಯೋಗ ಶೀಲತೆಯಲ್ಲಿಯೋ ವೈದಿಕ ಧರ್ಮ ಪ್ರಾರಂಭಗೊಂಡು ಅದರ ನೆಲೆಯಲ್ಲಿಯೋ ಅದು ಸಾರ್ಥ್ಯಕ್ಯ ಕಾಣುವುದು[2] ಎಂದು ಸನಾತನವಾದಿಗಳು ಎಷ್ಟೇ ಬೊಬ್ಬೆ ಹೊಡೆದರೂ ಅವರ ಮೂಲ ಬೇರುಗಳಲ್ಲಿ ಎಲ್ಲರ ಹಿತ ಕಡೆಗಣಿಸುವ, ಜಾತಿ ವ್ಯವಸ್ಥೆಯ ಜ್ಯೇಷ್ಠತೆ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಭೇದವನ್ನು ಎತ್ತಿಹಿಡಿಯುವ ಶೋಷಣೆಯ ಮೂಲ ಪರಿಕಲ್ಪನೆಗಳಲ್ಲಿ ನಂಬಿಕೆ ತುಂಬಿರುವುದನ್ನು ಯಾರೂ ಅಲಕ್ಷಿಸುವಂತಿಲ್ಲ !!

(ii)

ಜೈನಧರ್ಮವೂ ಸಹ ವೇದ ಪ್ರಾಮಾಣ್ಯ ಧಿಕ್ಕರಿಸಿ ತನ್ನದೇ ಆದ ಸ್ವತಂತ್ರ ಪ್ರಮಾಣದ ಮೇಲೆ ಕಟ್ಟಲ್ಪಟ್ಟಿದೆ[3]. ಜೈನರು ದೇವರನ್ನು ಸೃಷ್ಟಿಕರ್ತನೆಂದು ಒಪ್ಪುವುದಿಲ್ಲ. ಆದರೆ, ಜಗತ್ತು ಸೃಷ್ಟಿಯಾದ ಬಗೆಗೆ ಅವರದೇ ಆದ ಸಿದ್ಧಾಂತವನ್ನು ಮಂಡಿಸುತ್ತಾರೆ. ಅದೇ ಅವರ 'ಅಣುವಾದ'. ಬೌದ್ಧರು ಪ್ರತೀತ್ಯ ಸಮುತ್ಪಾದವನ್ನು ಮುಂದಿಟ್ಟರೆ, ಜೈನರು ಅಣುವಾದದ ಪ್ರಾಮುಖ್ಯತೆ ಕುರಿತು ಹೇಳುತ್ತಾರೆ. ಇವೆರಡೂ ಧರ್ಮಗಳೂ ಸೃಷ್ಟಿಸಿದ್ಧಾಂತದ ಬಗೆಗೆ ತತ್ತ್ವ ಪ್ರಪಂಚಕ್ಕೆ ಹೊಸ ಚಾಲನೆಯನ್ನೇ ನೀಡಿವೆ ಎಂದು ಧಾರಾಳವಾಗಿ ಹೇಳಬಹುದು.

---

2. Dr. Radhakrishnan The Hindu View of Life– p–16 [An Imprint of Harper Collins Publishers–New–Delhi, India-1993]

3. ಜೈನ ಸಂಪ್ರದಾಯದ ಪ್ರಕಾರ ವರ್ಧಮಾನ ಮಹಾವೀರ ಈ ಧರ್ಮದ ಪುನರುಜ್ಜೀವಕ; ಪರಂಪರೆಯಲ್ಲಿ 24 ನೆಯ ತೀರ್ಥಂಕರ.

ಸಮ್ಯಕ್ ಜ್ಞಾನ	[ಆರ್ಯ ಸತ್ಯಗಳನ್ನು ಅರಿಯುವಿಕೆ]
ಸಮ್ಯಕ್ ಸಂಕಲ್ಪ	[ದೃಢ ನಿಶ್ಚಯ]
ಸಮ್ಯಕ್ ವಚನ	[ಸತ್ಯವಚನ]
ಸಮ್ಯಕ್ ಕರ್ಮಾಂತ	[ಹಿಂಸೆ, ದ್ರೋಹಗಳಿಂದ ಹೊರತಾದ ಕರ್ಮ]
ಸಮ್ಯಕ್ ಜೀವನ	[ನ್ಯಾಯದ ಬದುಕು]
ಸಮ್ಯಕ್ ವ್ಯಾಯಾಮ	[ಒಳ್ಳೆಯದರ ಗಳಿಕೆ ಯತ್ನ]
ಸಮ್ಯಕ್ ಸ್ಮೃತಿ	[ಚಿತ್ತ ಶರೀರಗಳ ಅಶುಚಿ, ಅಸತ್ಯಗಳ ಅರಿವು]
ಸಮ್ಯಕ್ ಸಮಾಧಿ	[ನೈಸರ್ಗಿಕ ಏಕಾಗ್ರತೆ]

ಜೈನರು ದೇವರನ್ನು ನಿರಾಕರಿಸಿದರೂ ದೈವೀತನವನ್ನು ಒಪ್ಪುತ್ತಾರೆ. ಕೇವಲ ಜ್ಞಾನಿಯಾದ ಜಿನನು ಸರ್ವಜ್ಞನೆಂದು ಉದ್ಘೋಷಿಸುತ್ತಾರೆ. ಅರ್ಥಾತ್ ಕೇವಲ ಜ್ಞಾನವನ್ನು ಹೊಂದಿ ತೀರ್ಥಂಕರ ಮಟ್ಟಕ್ಕೇರಿದ ಸಾಧಕ ದೈವದ ಎಲ್ಲಾ ಗುಣಗಳನ್ನೂ ಹೊಂದಿರುತ್ತಾನೆ ಎಂಬ ತಾತ್ತ್ವಿಕ ತಾತ್ಪರ್ಯದಲ್ಲಿ ನಂಬಿಕೆ ಇಡುತ್ತಾರೆ[1]. ಬುದ್ಧನೂ ಸಹ ನಿರ್ವಾಣವನ್ನು ಒಪ್ಪುವ ಮೂಲಕ ಸಾಧಕ ದೈವೀಗುಣಗಳ ಆವಿಷ್ಕಾರ ಎಂಬ ವಿಚಾರವನ್ನು ಒಪ್ಪಿದ್ದಾನೆ.

ಜೈನರು ಕೆಡುಕಿಗೆ [EVIL] ದೇಹ ಮತ್ತು ಮನಸ್ಸುಗಳನ್ನು ಕಾರಣವಮಾಡಿ, ದೇಹ ಹಾಗೂ ಮನಸ್ಸಿಗೆ ಸಮಾನಸ್ಥಾನ ನೀಡುತ್ತಾರೆ. ಈನೆಲೆಯಲ್ಲಿಯೇ ಜೈನಧರ್ಮದಲ್ಲಿ ದೇಹ ಹಾಗೂ ಮನಸ್ಸಿಗೆ ಕಠಿಣ ಸಾಧನೆಯನ್ನು ವಿಧಿಸಲಾಗಿದೆ. ಆದರೆ, ಬೌದ್ಧಧರ್ಮವು ಜೈನರಂತೆ ಅತಿರೇಕದ ಪರಮಾವಧಿಯಾದ ಕಠಿಣದಂಡನೆಯನ್ನು ವಿಧಿಸಲಿಲ್ಲ!

ಜೈನಧರ್ಮದಲ್ಲಿ ವರ್ಣವ್ಯವಸ್ಥೆಗೆ ಸ್ಥಳವಿಲ್ಲ. ವೈದಿಕ ಕರ್ಮಕಾಂಡದಿಂದ ಪ್ರಚೋದಿತವಾದ ಯಜ್ಞ ಯಾಗಾದಿಗಳನ್ನು ಬೌದ್ಧರಂತೆ ಜೈನರೂ ತಿರಸ್ಕರಿಸುತ್ತಾರೆ. ಇಲ್ಲೊಂದು ಸೂಕ್ಷ್ಮ ವಿಶಿಷ್ಟತೆಯೆಂದರೆ ಬೌದ್ಧ ಮತ್ತು ಜೈನ ಧರ್ಮಗಳೆರಡೂ ಮೇಲುನೋಟಕ್ಕೆ ನಿರಾಶವಾದವನ್ನು ಬೋಧಿಸಿದಂತೆ ಮತ್ತು ವೈರಾಗ್ಯಕ್ಕೆ ಪ್ರಚೋದನೆ ಕೊಟ್ಟಂತೆ ತೋರುತ್ತವೆ. ಆದರೆ, ಅಂತರಂಗದಲ್ಲಿ ಮಾನವ ಜೀವನವನ್ನು ಹಸನುಗೊಳಿಸುವ, ಸಾಧನೆಗಳ ಮೂಲಕ ಮಾನವ ಪೂರ್ಣತೆಯನ್ನು ಸಾಧಿಸುವ ನಂಬುಗೆಯನ್ನು ಹೊಂದಿವೆ. ಮಾನವನು ಸರ್ವದುಃಖಗಳಿಂದ ನಿವೃತ್ತಿಯಾಗಿ ಪರಿಪೂರ್ಣವಾದ ಸುಖ–ಶಾಂತಿಯನ್ನು ಹೊಂದುವ ಸಾಧ್ಯತೆಯ ಬಗ್ಗೆ ಅದಮ್ಯ ವಿಶ್ವಾಸವನ್ನು ಹೊಂದಿವೆ ಅಂತರ್ಯದಲ್ಲಿ ಇವೆರಡೂ ಧರ್ಮಗಳೂ ಉದಾತ್ತ ಆಶಾವಾದದ ದಿವ್ಯವಾಹಿನಿಯಾಗಿವೆ.

(iii)

ಅತ್ಯುನ್ನತ ಸಾಧನೆಗೆ ಬೌದ್ಧಧರ್ಮವು ಆರ್ಯ–ಅಷ್ಟಾಂಗಿಕ ಮಾರ್ಗವನ್ನು[2] ತಿಳಿಹೇಳುತ್ತದೆ, ಅಷ್ಟಾಂಗ ಮಾರ್ಗಗಳನ್ನು ಹೀಗೆ ಹೇಳಬಹುದು :-

ಅತ್ಯುನ್ನತ ಸಾಧನೆಗೆ 'ಜ್ಞಾನ' ಆವಶ್ಯಕ. ಆದರೆ ಬುದ್ಧನ ಪ್ರಕಾರ ಈ ಬಗೆಯ ಜ್ಞಾನವು ಸ್ಪಷ್ಟವೂ, ನಿಖರವೂ ಆಗಿ, ಯಥಾರ್ಥವಾಗಿ ಬದುಕಿನಲ್ಲಿ ಹೊರ

---

1. ಜೈನ ಧರ್ಮದಲ್ಲಿ 'ಕೇವಲ ಜ್ಞಾನವನ್ನು ಪಡೆಯುವುದೇ ಸಾಧಕನ ಆತ್ಯಂತಿಕ ಗುರಿ ಸಾರ್ಥಕತೆ. ಕೇವಲ ಜ್ಞಾನ ಹೊಂದಿದ ಸಾಧಕ ಸರ್ವಜ್ಞ, ರಾಗದ್ವೇಷರಹಿತ, ಲೋಕಪೂಜ್ಯ ಅಲ್ಲದೆ, ಪರಮೇಷ್ಠಿ, ವೀತರಾಗ. ಜಿನ, ತೀರ್ಥಂಕರ' ಮುಂತಾಗಿ ಕರೆಯಲ್ಪಡುತ್ತಾನೆ.
2. ಮಹಾವಗ್ಗ 1-6.

ಹೊಮ್ಮಬೇಕಾದರೆ ಅದು ಸ್ವಾಂತಿಕೆಯಿಂದ ಸಾಧಿತವಾಗಿರಬೇಕು, ಅಂತರ್ಬೋಧೆಯು [ವೈದಿಕರು ಹೇಳುವ ಆತ್ಮ ಸಾಕ್ಷಾತ್ಕಾರವಲ್ಲ !] ಆಡಿಪಾಯದ ಭದ್ರತೆ ಹೊಂದಿರಬೇಕು. ಇಲ್ಲಿ ಅಂತರ್ಬೋಧೆ ಎಂದರೆ ಯಾವುದೇ ಭೌದ್ಧಿಕ ಶ್ರದ್ಧೆಯಲ್ಲ ! ಅದನ್ನು ಮೀರಿ ಹೆಚ್ಚಿನದಾಗಿರುವುದು ! ಅದು ಬದುಕಿನಲ್ಲಿ ಅನುಭವಕ್ಕೆ ಪರಿವರ್ತಿತವಾಗಿರಬೇಕು. ಪಡೆದುಕೊಂಡ ಈ ಬಗೆಯ ಸಮ್ಯಕ್ ಬೋಧೆಯನ್ನು ಬೌದ್ಧದರ್ಶನವು 'ಪ್ರಜ್ಞಾ' ಎಂದೇ ಕರೆದಿದೆ.

ಜೀವ ವಿರೋಧಿಯಾದ ಯಾವುದೇ ನಿಲುವನ್ನು ಸಾರಾಸಗಟಾಗಿ ಕಿತ್ತೊಗೆಯುವ ಬುದ್ಧನು 'ಅತಿರೇಕಗಳ' ಬಗ್ಗೆ ಜಿಗುಪ್ಸೆ ಪಡುತ್ತಿದ್ದನು. ವಿಷಯಾಸಕ್ತ ಕೊಳಕು ಬದುಕಿನ ಅತಿರೇಕಗಳ ಬಗೆಗೆ ಎಚ್ಚರಿಸುವ ಆತ, ಬದುಕಿನ ಸಾರ್ಥಕ ಉದ್ದೇಶದ ಹೆಸರಿನಲ್ಲಿ ಯಾವುದೇ ರೀತಿಯಲ್ಲಿ ದೇಹವನ್ನು ಅತಿಯಾಗಿ ದುಡಿಸುವ ಅಸಹಜ ಸಾಂಪ್ರದಾಯಕ ಕ್ರಮಗಳನ್ನು, ನಿಯಮಗಳನ್ನೂ ತಿರಸ್ಕರಿಸುತ್ತಾನೆ. ಬೆಂಕಿ ಬಿದ್ದಿರುವ ಮನೆ ಕಂಡಾಗ ನಾವು ತತ್‌ಕ್ಷಣ ಮಾಡಬೇಕಾದ ಪ್ರಥಮ ಕರ್ತವ್ಯವೆಂದರೆ, ಆ ಮನೆಯಲ್ಲಿ ಬೆಂಕಿಗೆ ಸಿಲುಕಿದವರನ್ನು ಪಾರುಮಾಡುವುದು...ಅಲ್ಲವೇ ? ಅದನ್ನು ಬಿಟ್ಟು ವೈದಿಕ ಸಂಪ್ರದಾಯದಂತೆ, ಬೆಂಕಿ ಕಂಡ ತತ್‌ಕ್ಷಣ, ಈ ಬೆಂಕಿಯ ಸ್ವರೂಪವೇನಿರಬಹುದು...? ಇದು ಅದ್ಯಂತಿಕವೇ...? ಇದು ಆದಿಭೌತಿಕವೇ...? ಅಥವಾ ಪಾರಮಾರ್ಥಿಕವೇ...?!—ಎಂದು ವೇದಾಂತದ ಜಿಜ್ಞಾಸೆಯಲ್ಲಿ ನಿಂತುಬಿಟ್ಟರೆ ಆ ಬೆಂಕಿಯಲ್ಲಿ ಸಿಲುಕಿದವರ ಪಾಡೇನು...? ಎಂದು ವ್ಯಂಗ್ಯವಾಗಿ ವೈದಿಕರ ಬೂಟಾಟಿಕೆಯ ವೇದಾಂತವನ್ನು ಬಯಲಿಗೆಳೆಯುವ ಬುದ್ಧ ವಾರಣಾಸಿಯ ತನ್ನ ಪ್ರವಚನದಲ್ಲಿ ಹೇಳಿರುವ ಮಾತುಗಳು ಮನನೀಯ ; ಆತನ ತಾತ್ತ್ವಿಕತೆಯನ್ನು ಧ್ವನಿಸುವ ಮಾತುಗಳು ತಥ್ಯ ಹೀಗಿವೆ...?'ಬಿಕ್ಕುಗಳೇ....ಧಾರ್ಮಿಕ ಜೀವನ ನಡೆಸುವವನು ದೂರವಿಡಬೇಕಾದ ಎರಡು ಅತಿರೇಕಗಳಿವೆ...ಆಸೆ ಭೋಗಗಳಿಗೆ ಮೀಸಲಾದ ಸುಖದ ಬದುಕು ಒಂದು. ಅದು ತುಚ್ಛವಾದದು, ಅನುದಾತ್ತವಾದದ್ದು, ಆಧ್ಯಾತ್ಮಿಕವಲ್ಲದ್ದು... ಅನರ್ಹ್ಯವಾದದ್ದು, ಅಸತ್ಯವಾದದ್ದು ; ಇನ್ನೊಂದು ದೇಹ ದಂಡನೆಯ ಬದುಕು, ಅದು ಮ್ಲಾನವಾದದ್ದು, ಅನರ್ಹ ಹಾಗೂ ಮಿಥ್ಯವಾದದ್ದು ಎಂದು ಎಚ್ಚರಿಸುತ್ತಾ, ಬುದ್ಧನು, ಹೀಗೆ ಮುಂದುವರಿಯುತ್ತಾನೆ.' ...'ಪೂರ್ಣನಾದವನು, ಓ...ಬಿಕ್ಕುಗಳೇ, ಈ ಎರಡೂ ಅತಿರೇಕಗಳಿಂದಲೂ ದೂರವಿರುತ್ತಾನೆ, ಅವೆರಡರ ನಡುವೆ ಇರುವ ದಾರಿಯನ್ನು ಕಂಡುಕೊಂಡಿದ್ದಾನೆ. ಆ ದಾರಿಯು ಕಣ್ಣು, ಮನಸ್ಸುಗಳನ್ನು ಬೆಳಗುತ್ತದೆ...ವಿಶ್ರಾಂತಿ, ಜ್ಞಾನ, ಬೋಧೆ, ನಿರ್ವಾಣಗಳಿಗೆ ಒಯ್ಯುತ್ತದೆ'.[1]

ಬುದ್ಧನು ಸದಾ ಪ್ರೇಮವತ್ಸಲ. ಹೃದಯ ಪೂರ್ವಕವಾದ ಪರಿಶುದ್ಧ ಪ್ರೇಮವೇ ಶಾಂತಿಗೆ, ಮಾನವ ಕುಲದ ಸಾರ್ಥಕತೆಗೆ ನಾಂದಿ ಎಂದು ತಿಳಿದಿದ್ದವನು.

1 ಮಹಾವಗ್ಗ—1-ii. 1.

ಆತನ ನೀತಿ ಸೂಕ್ತಗಳಲ್ಲಿ ಅವನ ಹೃದಯದ ಔದಾರ್ಯವನ್ನು ನಾವು ಕಾಣಬಹುದಾಗಿದೆ. ಕೆಲವನ್ನು ಉದಾಹರಿಸಬಹುದು.

"ಯಾವ ಜೀವಿಯನ್ನೂ ಕೊಲ್ಲಬಾರದು"

"ತನಗೆ ನೀಡದುದನ್ನು ಸ್ವೀಕರಿಸಬಾರದು"

"ಸುಳ್ಳು ಹೇಳಬಾರದು"

"ದ್ವೇಷದಿಂದ ದ್ವೇಷ ಎಂದೂ ಆರದು...ಪ್ರೀತಿಯಿಂದ ದ್ವೇಷ ಆರುತ್ತದೆ... ಇದೇ ಅದರ ಸ್ವಭಾವ"

"ನಾವು ಸಂತೋಷದಿಂದ ಬಾಳೋಣ, ನಮ್ಮನ್ನು ದ್ವೇಷಿಸುವವರನ್ನು ನಾವು ದ್ವೇಷಿಸದೆ ಇರೋಣ : ನಾವು ದ್ವೇಷಮುಕ್ತರಾಗಿ ಬಾಳೋಣ"

"ಕೋಪವನ್ನು ಪ್ರೀತಿಯಿಂದ ಗೆಲ್ಲಬೇಕು ; ಕೆಡುಕನ್ನು ಒಳಿತಿನಿಂದ ಗೆಲ್ಲಬೇಕು ; ದುರಾಸೆಯನ್ನು ಔದಾರ್ಯದಿಂದ ಗೆಲ್ಲಬೇಕು : ಸುಳ್ಳನ್ನು ಸತ್ಯದಿಂದ ಗೆಲ್ಲಬೇಕು"[1]...

ಬೌದ್ಧ ಧರ್ಮದ ಮತ್ತೊಂದು ಕೊಡುಗೆಯೆಂದರೆ ಅದು ಸ್ತ್ರೀಯರನ್ನು ಗೌರವಿಸಿದ್ದು. ಸ್ತ್ರೀ ಸಮುದಾಯದ ಧಾರ್ಮಿಕ ಭಾವನೆಗೆ ಬೌದ್ಧ ಧರ್ಮವು ಹೊಸ ಆಯಾಮವನ್ನೇ ನೀಡಿತೆನ್ನಬೇಕು. ಹೊಸ ಧರ್ಮದ ಅಭಿವೃದ್ಧಿಗೆ ಸ್ತ್ರೀಯರು ವಹಿಸಿದ ಪಾತ್ರ ಅಭಿನಂದನಾರ್ಹ, ಅವರ ಕ್ರಿಯಾಶೀಲ ಪಾತ್ರವನ್ನು ಎಂದಿಗೂ ಮರೆಯಲಾಗದು. ಇದು ಬೌದ್ಧ ಧರ್ಮದ ಜನಪ್ರಿಯತೆಯ ದ್ಯೋತಕವೂ ಹೌದು ! ಪ್ರತಿ ಹಂತದಲ್ಲಿಯೂ ಬೌದ್ಧ ಧರ್ಮಕ್ಕೆ ಅಭೂತಪೂರ್ವ ಕೊಡುಗೈದಾನ, ಸ್ತ್ರೀಯರಿಂದ ಲಭಿಸಿತು, ಉಧಾಹರಣೆಯೊಂದರಿಂದ ಇದನ್ನು ಸಾಂಕೇತಿಕವಾಗಿ ಪುಷ್ಟೀಕರಿಸಬಹುದು. ಬುದ್ಧನ ಶಿಷ್ಯರು ಸಾವತ್ತಿಗೆ ಬಂದಾಗ ಅವರಿಗೆ ಬೃಹತ್ ಪ್ರಮಾಣದಲ್ಲಿ ಜೀವನಕ್ಕೆ ಅಗತ್ಯ ವಸ್ತುಗಳನ್ನು ನೀಡಲು ಸಾವತ್ತಿಯ ಸದ್ಗೃಹಿಣಿ ಕೆಳವರ್ಗದ ಶ್ರೀಮಂತ ಮಹಿಳೆ ವಿಶಾಖ ಎಂಬುವವರು ಆಸೆಪಟ್ಟು ಸಮ್ಮತಿ ಪಡೆಯಲು ಬುದ್ಧನ ಬಳಿ ನಡೆದು ಹೀಗೆ ಬಿನ್ನವಿಸಿಕೊಂಡಳು : "ನಾನು ಬದುಕಿರುವ ತನಕ ಇದು ನನ್ನ ಆಸೆ, ತಂದೆ ; ಭ್ರಾತೃ ವರ್ಗಕ್ಕೆ ಮಳೆಗಾಲದಲ್ಲಿ ಉಡುಪುಗಳನ್ನು ಪೂರೈಸುತ್ತೇನೆ. ಇಲ್ಲಿಗೆ ಬರುವ ಅಪರಿಚಿತ ಭಿಕ್ಕುಗಳಿಗೆ ಆಹಾರ ನೀಡುತ್ತೇನೆ. ಕಾಯಿಲೆಯಾದ ಸೋದರರಿಗೆ, ಈ ಮಾರ್ಗವಾಗಿ ಹೋಗುವ ಎಲ್ಲರಿಗೂ ಪ್ರತಿದಿನ ಅನ್ನದಾನ ಮಾಡುವೆ, ಸನ್ಯಾಸಿನಿಯರಾದ ಸೋದರಿ

1 ಬುದ್ಧನ ಈ ನೀತಿ ಸೂಕ್ತಿಗಳು R. C. ದತ್ತ ಅವರ "CIVILISATION OF THE BUDDHIST AGE" ಗ್ರಂಥವನ್ನು ಆಧರಿಸಿವೆ.

ಸಮೂಹಕ್ಕೆ ಸ್ನಾನವಸನ ಕೊಡುವೆನು, ಇದು ನನ್ನ ಆಸೆ, ತಂದೆಯೇ...ಕೃಪೆ ಮಾಡು"[1].

IV

ಜೈನಧರ್ಮವು ಆತ್ಮವನ್ನು ಒಪ್ಪಿದ್ದರೆ, ಬೌದ್ಧಧರ್ಮವು ಆತ್ಮನಲ್ಲಿ ನಂಬಿಕೆ ತಾಳಿಲ್ಲವೆನ್ನುವುದು ಸರಿಯಷ್ಟೇ. ಜೈನರು 'ಚೇತನೋ ಲಕ್ಷ್ಯನೋ ಜೀವಃ' ಎನ್ನುವರು. ಬೌದ್ಧರು ಜೀವವು ಪಂಚಸ್ಕಂದಗಳ ಸಂಘಾತವೆನ್ನುತ್ತಾರೆ. ತಾನು ಸತ್ಯವೆಂದು ಪ್ರತಿಪಾದಿಸುದ ಸಂಘಾತಗಳಿಗೆ ಆಧಾರವಾಗಿ ಬುದ್ಧನು ಪಂಚಮಹಾ ಭೂತಗಳಲ್ಲಿ ನಾಲ್ಕನ್ನು ಮಾತ್ರ ಸ್ವೀಕರಿಸುತ್ತಾನೆ. ಇವೆಲ್ಲವೂ ಭೌತಿಕ ಹಾಗೂ ಪ್ರತ್ಯಕ್ಷವಾಗಿ ಲಭ್ಯವಿರುವಂತವು. ಅವು—ಪೃಥ್ವಿ, ಅಪ್, ಅಗ್ನಿ ಮತ್ತು ವಾಯು. ಕಡೆಯದಾದ ಆಕಾಶವನ್ನು ಬುದ್ಧ ನಿರಾಕರಿಸಿದ್ದಾನೆ. ಕ್ರಿಯಾಶೀಲವಾಗಿರುವ ದೇಹದಲ್ಲಿ ಈ ನಾಲ್ಕು ಭೂತಗಳು ವಿಶಿಷ್ಠ ರೀತಿಯಲ್ಲಿ ಸಂಘಟಿತಗೊಂಡಿರುತ್ತವೆ. ಮನಸ್ಸು ಎನ್ನುವುದೂ ಇವುಗಳ ಆಧಾರದಿಂದುಂಟಾಗುವ ಒಂದು ಕ್ರಿಯೆಯೇ ಆಗಿದೆ. ಒಟ್ಟಾರೆ, ಬುದ್ಧನ ಪ್ರಕಾರ ಆತ್ಮವೆನ್ನುವುದು ಭೌತಿಕ ಮತ್ತು ಮಾನಸಿಕ ಅಂಶಗಳ ಮೊತ್ತಕ್ಕೆ ಇಟ್ಟಿರುವ ಕೇವಲ 'ನಾಮ' ಮಾತ್ರ! ಭೌತಿಕ ಮತ್ತು ಮಾನಸಿಕ ಅಂಶಗಳು ಭಾಗಗಳಿಗಿಂತ ಹೆಚ್ಚಿನ ವ್ಯಾಪ್ತಿಯನ್ನು ಪಡೆದಿಲ್ಲ; ವಿಶಿಷ್ಟ ಭಾಗಗಳಾಗಿರುವ ಅವು ನಿರ್ದಿಷ್ಟವಾಗಿ ಸಂಘಟಿತಗೊಂಡಾಗ ಕ್ರಿಯಾಶೀಲವಾಗುತ್ತವೆ. ಇವುಗಳ ಹಿಂದೆ ಆಧಾರವಾಗಿ ಅಖಂಡ ತತ್ತ್ವವಿದೆ ಎನ್ನುವುದು ಪೊಳ್ಳುಮಾತು, ಅರ್ಥಾತ್ ಬುದ್ಧನ ಅಭಿಪ್ರಾಯದಂತೆ ಸಾಮಾನ್ಯವಾಗಿ 'ಅದು ಕಪ್ಪಾಗಿದೆ' 'ಅದು ಯೋಚಿಸುತ್ತದೆ'. ಎಂದು ಹೇಳುವಲ್ಲಿ 'ಅದು' ಎಂಬ ಪದವು ಯಾವ ಅರ್ಥವನ್ನೂ ಹೊಂದಿರುವುದಿಲ್ಲ. ಬುದ್ಧನ ಈ ವಿಚಾರಧಾರೆ 'ನೈರಾತ್ಮ್ಯವಾದ'ವೆಂದೇ ಪ್ರಸಿದ್ಧವಾಗಿದೆ. ಇಲ್ಲಿ ಬುದ್ಧನ ವಿಶೇಷತೆಯೆಂದರೆ ಆತನಲ್ಲಿ ಈ ಗೋಚರ ಪ್ರಪಂಚವನ್ನು ಬಿಟ್ಟು ಬೇರೆಲ್ಲೋ ಕಾಣದ ಕಡೆ 'ಸತ್ಯ'ವನ್ನು ನೋಡುವ ದೃಷ್ಠಿ ಕಾಣಸಿಗದು! ವೈದಿಕರು ಮಂಡಿಸುವ ಸಾರ್ವಭೌಮ ಪರತತ್ತ್ವವನ್ನು ತಿರಸ್ಕರಿಸಿ, ಯಾವುದನ್ನು ವೈದಿಕಮತವು ಅಂತಿಮ ಸತ್ಯವೆಂದು ಚೀರಾಡುತ್ತಾ ಪ್ರತಿಷ್ಠಾಪಿಸಲೆತ್ನಿಸುವ ಪರಿಕಲ್ಪನೆಯನ್ನು [Ultimate Reality] ಬುದ್ಧ 'ಮಿಥ್ಯೆ' ಎಂದೇ ಸಾರುತ್ತಾನೆ! ವೈದಿಕ ಮತ 'ಅಂತಿಮ'ವಲ್ಲವೆಂದು ನಿರ್ಣಯಿಸಿದ ಅಂಶಗಳನ್ನು ಬುದ್ಧ 'ಸತ್ಯ'ವೆಂದೇ ತೀರ್ಮಾನಿಸುವ ಪರಿ ನಮಗೆ ಜ್ಞಾನದ ಪರಿಧಿಯ ಹೊಸ ಅನುಭವ ಉಂಟುಮಾಡುತ್ತದೆ!

---

1 Prof. H. Oldenburg: Buddha—Page, 169

2 ಪಂಚಸ್ಕಂದಗಳನ್ನು ಅನುಕ್ರಮವಾಗಿ ಹೀಗೆ ಹೇಳಬಹುದಾಗಿದೆ:
ರೂಪಸ್ಕಂದ (ದೇಹ), ವೇದನಾಸ್ಕಂದ (ಭಾವನೆ), ವಿಜ್ಞಾನ [ಸ್ವ-ಪ್ರಜ್ಞೆ], ಸಂಜ್ಞಾ [ಪ್ರತ್ಯಕ್ಷಜ್ಞಾನ], ಸಂಸ್ಕಾರ [ಮಾನಸಿಕ ಪರಿಣಾಮ]

ಜೈನಧರ್ಮವು ಅನೇಕಾಂತ ವಾದವನ್ನು ಒಪ್ಪಿ ನಡೆದರೆ, ಬೌದ್ಧರು ಕ್ಷಣಿಕ ವಾದದಲ್ಲಿ ವಿಶ್ವಾಸ ತೋರುತ್ತಾರೆ.[1] ಜೈನಧರ್ಮದ ಸ್ಯಾದ್ವಾದವು ಒಂದು ವಿಶಿಷ್ಟ ತಾತ್ತ್ವಿಕ ಪರಿಕಲ್ಪನೆ ಎನಿಸಿ ನಮ್ಮ ಗಮನ ಸೆಳೆಯುತ್ತದೆ. ಈ ದರ್ಶನದಲ್ಲಿ ಕಾಣಸಿಗುವ ಅನೇಕಾಂತವಾದದ ಮತ್ತೊಂದು ರೂಪವೇ ಸ್ಯಾದ್ವಾದ; ಒಂದು ವಸ್ತು ಬಹು ಧರ್ಮಾತ್ಮಕ ಎನಿಸಿರುವುದರಿಂದ ಸಾಮಾನ್ಯ ಮನುಷ್ಯನೋರ್ವ ವಸ್ತುವಿನ ಸರ್ವಧರ್ಮಗಳನ್ನು ಗ್ರಹಿಸಲಸಮರ್ಥನಾಗಿರುವ ಕಾರಣ, ನಾವು ಏರ್ಪಡಿಸಿಕೊಳ್ಳುವ ಪರಾಮರ್ಶೆಗಳು, ಸೋಪಾಧಿಕವೂ, ಸಾಪೇಕ್ಷವೂ ಆಗಿರುವುದೆನ್ನುವುದು ಸ್ಯಾದ್ವಾದದ ತಾತ್ಪರ್ಯ. ವಸ್ತುವೊಂದರ ಅಸ್ತಿತ್ವ ಕುರಿತಾಗಿ 'ಇರುವುದು' ಅಥವಾ 'ಇಲ್ಲ' ಎನ್ನುವ ತಾತ್ತ್ವಿಕ ಧೋರಣೆಗೆ ಸಂಬಂಧಿಸಿದಂತೆ ಏಳು ಬಗೆಯ ಪರಾಮರ್ಶನೆ ಸಾಧ್ಯವಿದೆ ಎಂದು ನಿಖರವಾಗಿ ಸ್ಯಾದ್ವಾದ ಘೋಷಿಸುವುದರಿಂದ ಇದು 'ಸಪ್ತ ಭಂಗಿನಯ' ಎಂದೆನಿಸಿಕೊಳ್ಳುತ್ತದೆ. ಇದರ ರೀತ್ಯಾ ಒಂದೊಂದು ಬಗೆಯ ಪರಾಮರ್ಶೆಯು ಸಾಪೇಕ್ಷ ಅಥವಾ ಸೋಪಾಧಿಕವಾಗಿದೆಯೆಂಬುದನ್ನು ಸೂಚಿಸಲು ಅದರ ಹಿಂದೆ 'ಸ್ಯಾತ್'ನ್ನು ಜೊತೆಗೂಡಿಸಬೇಕು ಎಂದು ಇದು ಉಸುರುವ ಹಿನ್ನೆಲೆಯಲ್ಲಿ ಇದನ್ನು 'ಸ್ಯಾದ್ವಾದ' ಎಂದು ಕರೆಯಬಹುದಾದ್ದು ಉಚಿತವಾಗುತ್ತದೆ.

---

1 ಬುದ್ಧನ ರೀತ್ಯಾ ಜಗತ್ತಿನ ಪ್ರತಿಯೊಂದು ವಸ್ತುವೂ ಪ್ರತಿಕ್ಷಣವೂ ಬದಲಾವಣೆಯ ಗತಿಯಲ್ಲಿರುತ್ತದೆ. ನಿರಂತರ ಬದಲಾಗುವಿಕೆಯೇ ವಸ್ತುವಿನ ಸಹಜ ಸ್ಥಿತಿ. ಯಾವುದೇ ಭೌತಿಕವಸ್ತು ಸ್ಥಿರವಾಗಿರುತ್ತದೆ ಎನ್ನುವುದು ಶುದ್ಧ ಭ್ರಮೆ! ವಸ್ತುವಿನ ಅಸ್ತಿತ್ವ ಅಥವಾ ನಾಸ್ತಿತ್ವಗಳು ಸತ್ಯದ ಪರಿಧಿಯಲ್ಲಿ ಬರಲಾರವು. ಸತ್ಯವೇನಿದ್ದರೂ ಪರಿಣಾಮ ಅಥವಾ ಆಗುವಿಕೆಯಲ್ಲಿಯೇ ಕಾಣಲು ಸಾಧ್ಯವೆಂದು ಹೇಳಿ ಸಂಪ್ರದಾಯಸ್ಥ ವೈದಿಕರ ಹುಬ್ಬುಗಳು ಮೇಲೇರುವಂತೆ ಮಾಡುತ್ತಾನೆ!! ಬುದ್ಧನ ರೀತ್ಯಾ 'ಆಗುವಿಕೆಯೇ ವಸ್ತುವಿಗೆ ಸಹಜ ಭೂಷಣ; ಇಂತಹ ಬದಲಾವಣೆಯ ಪ್ರಕ್ರಿಯೆಯಲ್ಲಿ ವಸ್ತು ಪೂರ್ಣವಾಗಿ ಇನ್ನೊಂದಾಗಿ ಬದಲಾಗುವುದಿಲ್ಲವೆಂಬ ಅಂಶವನ್ನು ನಮ್ಮ ಗಮನಕ್ಕೆ ತರುತ್ತಾನೆ. ಅಂದರೆ ಯಾವುದೇ ವಸ್ತುವು ಅಚಲವಾಗಿರದು ಎಂಬ ವೈಜ್ಞಾನಿಕ ಸಹಜ ಸತ್ಯವನ್ನು ಎತ್ತಿಹಿಡಿಯುವ ಬುದ್ಧ ಈ ವಾದಕ್ಕೆ ಪೂರಕವಾಗಿ ನೀಡುವ ಉದಾಹರಣೆಗಳು ಧ್ವನಿಪೂರ್ಣವೆನಿಸುತ್ತವೆ; ಒಬ್ಬನು ಒಂದು ಹೊಳೆಯಲ್ಲಿ ಎರಡು ಬಾರಿ ಕಾಲಿಡಲಾಗದು. ಏಕೆಂದರೆ ಆ ಎರಡೂ ಕ್ಷಣಗಳಲ್ಲಿ ಆ ಹೊಳೆಯು ಒಂದೇ ಆಗಿರಲಾರದು. ಬದಲಾವಣೆ ನಿರಂತರವಾಗಿರುತ್ತದೆ; ಹೊರನೋಟಕ್ಕೆ ಆ ನದಿಯು ಒಂದೇ ಎಂಬ ಹಾಗೆಯೇ ಭಾಸವಾಗುತ್ತದೆ ಅಷ್ಟೆ......, ಇದೇ ರೀತಿ ದೀಪದ ಕುಡಿಯಾದರೂ ಅಷ್ಟೇ! ಅದು ಸದೃಶರೂಪಗಳನ್ನು ತಾಳುತ್ತಾ, ಅನುಸರಿಸುತ್ತಾ ಸಂತತ ಗತಿಯಲ್ಲಿರುತ್ತದೆ......ಆದರೆ, ಹೊರನೋಟಕ್ಕೆ ಆ ಎರಡೂ ಕ್ಷಣಗಳಲ್ಲಿ ನಮಗೆ ಒಂದೇ ಎಂಬಂತೆ ತೋರುತ್ತದೆಯಲ್ಲವೆ...? ಈ ಅರ್ಥದಲ್ಲಿಯೇ ಬುದ್ಧನ ಕ್ಷಣಿಕವಾದ ಪರಿಕಲ್ಪನೆಯು ಅಭಿವ್ಯಕ್ತಗೊಂಡಿದೆ ಎಂದು ಹೇಳಬಹುದು.

ಸ್ಯಾದ್ವಾದದ ಸ್ವರೂಪದ ಹರಹು ಕುರಿತು ಹೀಗೆ ಬಿಚ್ಚಿಡಬಹುದು :

೧—ಇರಬಹುದು [ಸ್ಯಾತ್ ಅಸ್ತಿ : ಸ್ಯಾದಸ್ತಿ]

೨—ಇಲ್ಲದಿರಬಹುದು [ಸ್ಯಾನ್ನಾಸ್ತಿ]

3. ಇರಲೂಬಹುದು, ಇಲ್ಲದಿರಬಹುದು. [ಸ್ಯಾದಸ್ತಿ ಚನಾಸ್ತಿ ಚ].
4. ಅದನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲದಿರಬಹುದು. [ಸ್ಯಾದವಕ್ತವ್ಯಃ].
5. ಅದು ಇರಬಹುದು ಮತ್ತು ವ್ಯಕ್ತಪಡಿಸಲು ಸಾಧ್ಯವಿಲ್ಲದಿರಬಹುದು. [ಸಾದಸ್ತಿ ಚ ಅವಕ್ತವಃ ಚ].
6. ಅದು ಇಲ್ಲದಿರಬಹುದು ಮತ್ತು ವ್ಯಕ್ತಪಡಿಸಲು ಸಾಧ್ಯವಿಲ್ಲದಿರಬಹುದು. [ಸ್ಯಾನ್ನಾಸ್ತಿ ಚ ಅವಕ್ತವ್ಯಃ ಚ].
7. ಇರಬಹುದು, ಇಲ್ಲದಿರಬಹುದು ಮತ್ತು ವ್ಯಕ್ತಪಡಿಸಲು ಸಾಧ್ಯವಿಲ್ಲದಿರ ಬಹುದು. [ಸ್ಯಾದಸ್ತಿ ಚ ನಾಸ್ತಿ ಚೆ ಅವಕ್ತಂ[1]].

ಈ ಮೇಲಿನ ಅಂಶಗಳು ಜೈನದರ್ಶನಒಪ್ಪುವ ಸ್ಯಾದ್ವಾದ ತಾಂತ್ರಿಕ ತಿರುಳು.

(V)

ಜೈನ ಧರ್ಮದ ಸ್ಯಾದ್ವಾದವನ್ನು ಬೌದ್ಧರು ಖಂಡ–ತುಂಡವಾಗಿ ಖಂಡಿಸಿ 'ಸ್ಯಾದಸ್ತಿನಾಸ್ತಿ' ಎಂಬ ನಾಲ್ಕನೆಯ ಹಂತವನ್ನು ಆತ್ಮವಿರೋಧಿಯಹಾದ ಹುಚ್ಚು ತರ್ಕ ಎಂದು ಅಭಿಪ್ರಾಯ ಪಡುತ್ತಾರೆ.

ಜಗತ್ತಿನ ಸೃಷ್ಟಿಗೆ ಜೈನ ಧರ್ಮವು ಅಣು ಸಿದ್ಧಾಂತವನ್ನು ಮಂಡಿಸುತ್ತದೆ. 'ಅಣು' ಎಂಬ ಶಬ್ದವು ಉಪನಿಷತ್ತುಗಳಲ್ಲಿಯೂ ಕಂಡುಬರುತ್ತದೆ. ಆದರೆ ಜೈನ ದರ್ಶನದ ರೀತ್ಯಾ ಪರಮಾಣುಗಳೆಲ್ಲ ಏಕರೀತಿಯವು, ಆದರೂ ಅವು ಅನೇಕ ವಿಧವಾದ ವಸ್ತುಗಳ ಸೃಷ್ಟಿಗೆ ಕಾರಣವಾಗುತ್ತವೆ. ಈ ಹಿನ್ನೆಲೆಯಲ್ಲಿಯೇ ಇಲ್ಲಿ ಕಲ್ಪಿಸಿಕೊಳ್ಳ ಲಾಗಿರುವ ಭೌತವಸ್ತು ಎನ್ನುವುದು ಅನಿರ್ದಿಷ್ಟ ಸ್ವರೂಪದ್ದು ; ಪೃಥ್ವಿ, ಅಪ್ ಅಗ್ನಿ ಮತ್ತು ವಾಯು–ಈ ನಾಲ್ಕು ಬಗೆಯ ಭೂತಗಳು ಜೈನ ಮತದ ಪ್ರಕಾರ ವಿಭಜನೀಯವಾಗಿವೆ. ಹಾಗೂ ಒಂದು ರಚನೆಯನ್ನು ಹೊಂದಿರುವಂಥದ್ದಾಗಿವೆ ; ಪರಮಾಣುಗಳು ತಮ್ಮಲ್ಲಿಯೇ ತಾವು ಒಂದರಿಂದ ಇನ್ನೊಂದು ಬೇರೆಯಾಗಿ ಕಾಣಿಸ

---

1. ಹಿರಿಯಣ್ಣ, ಎಂ.—ಭಾರತೀಯ ತತ್ತ್ವಶಾಸ್ತ್ರದ ಮೂಲಾಂಶಗಳು– ಪುಟ 71 (ಮೈಸೂರು ವಿಶ್ವವಿದ್ಯಾಲಯ–1971).

2. ಸ್ಯಾದ್ವಾದದ ಒಂದು ಅರ್ಥಪೂರ್ಣ ಘೋಷಣೆ ನಮ್ಮಲ್ಲಿ ಆ. ಪರಿಕಲ್ಪನೆಯ ಬಗ್ಗೆ ಕುತೂಹಲವುಂಟು ಮಾಡುತ್ತದೆ : 'ನಾವು ಯಾವುದೇ ಪದಾರ್ಥದ ಬಗೆಗೆ ಕೇವಲ ಪ್ರತಿಪಾದನೆಯನ್ನಾಗಲೀ, ಕೇವಲ ನಿರಾಕರಣೆಯನ್ನಾಗಲೀ ಮಾಡುವುದು ಎಷ್ಟು ಮಾತ್ರಕ್ಕೂ ಸಮಂಜಸವಲ್ಲ !

ದಿದ್ದರೂ ರಸ, ಗಂಧ, ಮುಂತಾದ ಆಯಾ ಲಕ್ಷಣಗಳನ್ನು ವೃದ್ಧಿಪಡಿಸಿಕೊಳ್ಳುತ್ತವೆ ಯಲ್ಲದೆ ತನ್ಮೂಲಕ ಬಹುವಾಗುತ್ತವೆ. ಈ ಬಗೆಯಾಗಿ ಬೇರೆ ಬೇರೆಯಾದ ಪರಮಾಣು ಗಳಿಂದಲೇ ಉಳಿದ ಭೌತ ಜಗತ್ತು ಸೃಷ್ಟಿಯಾಗಿರುವುದು ಅಂದರೆ ಕ್ವಚಿತ್ತಾಗಿ ಜೈನ ಧರ್ಮವು ಭೌತವಸ್ತುವಿಗೆ ಎರಡು ರೂಪಗಳನ್ನು ನೀಡುತ್ತದೆ. ಮೊದಲನೆಯದು ಸರಳವಾದದ್ದು (ಪರಮಾಣುರೂಪ) ಮತ್ತೊಂದು 'ಸ್ಕಂದ' (ಸಮೂಹ). ದೃಷ್ಟಿಗೆ ಸಿಗುವ ಸರ್ವವಸ್ತುಗಳೂ ಆನುಷಂಗಿಕವಾಗಿ ಸ್ಕಂದ ಗುಂಪಿಗೆ ಸೇರುತ್ತವೆ. ಗುಣಾತ್ಮಕ ಭಿನ್ನೀಕರಣ ಇನ್ನೂ ಆಗಿರದ ಘಟ್ಟದವರೆವಿಗೂ ಅದನ್ನು ನೇಪಥ್ಯಕ್ಕೆ ತಳ್ಳುತ್ತಾ ನಡೆಯುತ್ತದೆ; ಅಂತಿಮ ಘಟ್ಟವು ಇಲ್ಲಿ ಅನಂತವಾದ ಪರಮಾಣು ಎನಿಸಿಬಿಡುತ್ತದೆ. ಅರ್ಥಾತ್ ಇಲ್ಲಿ ಭೌತ ವಸ್ತುವು ಗುಣ ಹಾಗೂ ಪರಿಮಾಣ ದೃಷ್ಟಿಯಿಂದಲೂ ಅನಿರ್ದಿಷ್ಟವಾಗಿ ಬಿಡುವುದು ಸೋಜಿಗವೇನಲ್ಲ! ಏನೂ ಜೊತೆಗೂಡದೆ ಏನನ್ನೂ ಕಳೆದುಕೊಳ್ಳದೆ ಅದರ ಗಾತ್ರದಲ್ಲಿ ವ್ಯತ್ಯಾಸವಾಗುವ ಸಾಧ್ಯತೆಯಂತೂ ಇದ್ದೇ ಇರುತ್ತದೆ. ಭೌತ ವಸ್ತುವು ಸೂಕ್ಷ್ಮ ಸ್ಥಿತಿಯಲ್ಲಿದ್ದಾಗ ಒಂದು ಸ್ಥೂಲ ಪರಮಾಣು ಸ್ಥಳವನ್ನು ಆದರ ಎಷ್ಟು ಕಣಗಳು ಬೇಕಾದರೂ ಆಕ್ರಮಿಸಬಹುದು. ಇಲ್ಲಿ ಸೂಕ್ಷ್ಮ ಸ್ಥಿತಿಯಲ್ಲಿರುವ ಭೌತ ವಸ್ತುವನ್ನೇ ಕರ್ಮವೆಂದು ಕರೆಯಲಾಗಿದೆ. ಕರ್ಮವು ಜೀವ ದೊಳಗೆ ಸೇರಿ ಸಂಸಾರವನ್ನುಂಟು ಮಾಡುತ್ತದೆ.

ಜೈನ ದರ್ಶನವು ಜೀವಾತ್ಮನನ್ನು ಸಾರ್ಥಕಗೊಳಿಸುವ ಅರ್ಥಪೂರ್ಣ ಹಂತಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಕೆಲ ಸಾಧನಾ ಮಾರ್ಗಗಳನ್ನು ಉಪದೇಶಿಸುತ್ತದೆ. ಆ ಮೂಲಕ ಜೀವಾತ್ಮ ಮೋಕ್ಷವನ್ನು ಪಡೆದುಕೊಂಡು ತನ್ನ ಬದುಕನ್ನು ಪೂರ್ಣಗೊಳಿಸಿ ಕೊಳ್ಳುತ್ತಾನೆ.

ಜೈನದರ್ಶನ ಪ್ರತಿಪಾದಿಸುವಂತೆ ಮೋಕ್ಷದ ಹಂತದಲ್ಲಿ ಸಾಧಕ ನವೀನವಾದ ದ್ದೇನೂ ಹೊಂದಲಾರ! ಕರ್ಮದ ಕಾರಣದಿಂದಲೇ ಮುಚ್ಚಿಹೋಗಿದ್ದ ತನ್ನ 'ಅಸಲು' ರೂಪಕ್ಕೆ ಮರುಳುತ್ತಾನೆ, ಅಷ್ಟೇ! ಅರ್ಥಾತ್, ಸಂಸಾರವೆನ್ನುವುದು ಒಂದು ಅನೈಸರ್ಗಿಕ ಸ್ಥಿತಿ. ಇದರಿಂದ ಬಿಡಿಸಿಕೊಂಡು ನೈಸರ್ಗಿಕ ಸಹಜ ಸ್ಥಿತಿಯಾದ 'ಮೋಕ್ಷ' ವನ್ನು ಹೊಂದುವನು, ಈ ಸ್ಥಿತಿ ಪಡೆದ ಸಾಧಕನಿಗೆ ಅನಂತ ಜ್ಞಾನ, ಅನಂತ ವೀರ್ಯ, ಅನಂತ ಶ್ರದ್ಧಾ ಹಾಗೂ ಅನಂತ ಶಾಂತಿಗಳು ತಾವಾಗಿಯೇ ಲಭ್ಯ ವಾಗಿಬಿಡುತ್ತವೆ! ಈ ಹಂತವೇ ಸಾಧಕನ ಅತ್ಯುನ್ನತ ಗುರಿಎನಿಸಿದ 'ಮೋಕ್ಷ' ಸ್ಥಿತಿ. ಬಂಧಮುಕ್ತನಾದ ಜೀವಾತ್ಮನೇ ಜೈನದರ್ಶದ ಪ್ರಕಾರ 'ದೇವರು', 'ಪರಮಾತ್ಮ' ಎನಿಸಿಬಿಡುತ್ತಾನೆ.

ಜೈನದರ್ಶನದ ಅತ್ಯುನ್ನತ ಆದರ್ಶದ ಪರಿಕಲ್ಪನೆಯ ತಾತ್ಪರ್ಯವೆಂದರೆ, ಇಲ್ಲಿ ಪ್ರತಿಯೊಬ್ಬ ಜೀವನೂ ಈಶ್ವರನೇ ಹೌದು! ತನ್ಮೂಲಕ ಇದು ಜೀವನಲ್ಲಿ

ಬದುಕಿನಲ್ಲಿ ಭರವಸೆಯನ್ನೂ, ಸ್ಫೂರ್ತಿಯನ್ನೂ, ಜೊತೆಗೆ ಒಂದು ಜವಾಬ್ದಾರಿಯನ್ನು ತುಂಬಿಕೊಡುತ್ತದೆ. ಜೈನದರ್ಶನವು ಅನೇಕತೆಯಿಂದ ಕೂಡಿದ ವಾಸ್ತವವಾದ ಎನ್ನುವುದರಲ್ಲಿ ಎರಡು ಮಾತಿಲ್ಲ! ಸತ್ಯವನ್ನು ವೈವಿಧ್ಯ ದೃಷ್ಟಿಕೋನದಿಂದ ಕಾಣ ಬಹುದು ಎಂಬ ಮಾತು ಜೈನದರ್ಶನದಲ್ಲಿ ಜ್ವಲಂತವಾಗಿದೆ. ಈ ಎಲ್ಲ ಪರಿಕಲ್ಪನೆಗಳು ಜೈನದರ್ಶನದ ಉದಾರ ನಿಲುವನ್ನು ರುಜುವಾತುಪಡಿಸುತ್ತವೆ. ಈಶ್ವರನನ್ನು ಜೀವಾತ್ಮನ ಮಟ್ಟಕ್ಕಿಳಿಸದೆ, ಜೀವಾತ್ಮನನ್ನೇ ಈಶ್ವರನ ಮಟ್ಟಕ್ಕೇರಿಸಿರುವುದು ಜೈನ ದರ್ಶನದ ಹೆಗ್ಗಳಿಕೆಯಾಗಿದೆ.

ಜೈನದರ್ಶನದಲ್ಲಿ ಮುಕ್ತಿ ಪಡೆಯಲು ಮೂರು ರೀತಿಯ ಸಾಧನೆಗಳಿವೆ. ಅವುಗಳೇ ರತ್ನತ್ರಯಗಳು[1] ಇವುಗಳಲ್ಲಿ ಪ್ರಥಮವಾಗಿ ಕಾಣಸಿಗುವುದು ಸಮ್ಯಕ್ ದರ್ಶನ. ಇಲ್ಲಿ ದರ್ಶನವೆಂದರೆ ಶ್ರದ್ಧೆ ಎನ್ನುವ ಇಂಗಿತ ಎದ್ದು ಕಾಣುತ್ತದೆ. ಹಾಗೆಯೇ ಸಮ್ಯಕ್‌ದರ್ಶನವೇದರೆ ಅಚಲವಾದ ಶ್ರದ್ಧೆಯೆಂದೇ ವ್ಯಾಖ್ಯಾನಿಸಲಾಗಿದೆ.

ಎರಡನೆಯದು ಸಮ್ಯಕ್ ಜ್ಞಾನ, ಅರ್ಥಾತ್ ಸತ್ಯ ಪ್ರತಿಪಾದಿಸುವ ತತ್ತ್ವಗಳ ಯಥಾರ್ಥವಾದ ಜ್ಞಾನ ಮತ್ತು ಅನುಭವಗಳು.

ಸಮ್ಯಕ್ ಚಾರಿತ್ರ್ಯ ಮೂರನೆಯದಾಗಿದೆ. ಅಂದರೆ, ಜೈನದರ್ಶನದಲ್ಲಿ ವಿಧಿಸ ಲಾಗಿರುವ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಮೊದಲಾದ ವ್ರತಗಳನ್ನು ಅಚಲ ನಂಬಿಕೆ, ವಿಶ್ವಾಸದಿಂದ ಅನುಷ್ಠಾನಕ್ಕೆ ತರುವುದೇ ಆಗಿದೆ.

ಈ ಮೇಲೆ ನಿರೂಪಿಸಿದ 'ರತ್ನತ್ರಯ'ಗಳ ಬೆಳಕಿನಲ್ಲಿ ಜೀವಾತ್ಮನು ಭವಬಂಧನ ದಿಂದ ಬಿಡುಗಡೆ ಹೊಂದಿ 'ಜಿನ' ಎನಿಸುತ್ತಾನೆ. ಜೀವಾತ್ಮನು ಮುಕ್ತಿಪದಕ್ಕೇರಲು ಹದಿನಾಲ್ಕು ಹಂತಗಳನ್ನು ಅವಶ್ಯವಾಗಿ ಮಾರ್ಗದರ್ಶಿಸಲಾಗಿದೆ. ಈ ಹಂತಗಳು 'ಗುಣಸ್ಥಾನಗಳು' ಎನಿಸಿಕೊಂಡಿವೆ. ಅವುಗಳು ಹೀಗಿವೆ :

1. ಮಿಥ್ಯಾತ್ವ
2. ಗ್ರಂಥಿಭೇದ
3. ಮಿಶ್ರ
4. ಅವಿರತ ಸಮ್ಯಗ್‌ದೃಷ್ಟಿ
5. ದೇಶ ವಿರತಿ
6. ಪ್ರಮತ್ತ
7. ಅಪ್ರಮತ್ತ
8. ಅಪೂರ್ವಕರಣ
9. ಅನಿವೃತ್ತಕರಣ
10. ಸೂಕ್ಷ್ಮ ಸಾಂಪರಾಯ
11. ಉಪಶಾಂತ ಮೋಹ
12. ಕ್ಷೀಣ ಮೋಹ
13. ಸಂಯೋಗ ಕೇವಲ
14. ಯೋಗ ಕೇವಲ

1. "ಸಮ್ಯಗ್ ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ"– ತತ್ತ್ವಾರ್ಥಸೂತ್ರ, 1.1.

ಈ ಮೇಲಿನ ಹಂತಗಳನ್ನು ಏರುವ ಸಾಧಕನು ಕ್ರಮಕ್ರಮವಾಗಿ ಅಜೀವದ ಸಂಬಂಧದಿಂದ ಪಾರಾಗುತ್ತಾ ನಡೆಯುತ್ತಾನೆ. ಹದಿಮೂರನೆಯ ಮೆಟ್ಟಿಲಿನಲ್ಲಿ 'ಅರ್ಹತ್' ಪದವಿ ಹೊಂದಿ ಆತ್ಯಂತಿಕವೆನಿಸಿದ 'ಅಯೋಗ ಕೇವಲ' ಸ್ಥಾನದಲ್ಲಿ ಸಿದ್ಧಗತಿಯನ್ನು ಪಡೆದು ತನ್ನ ಸಾಧನೆಯನ್ನು ಪರಿಪೂರ್ಣಗೊಳಿಸಿಕೊಳ್ಳುತ್ತಾನೆ.[1]

VI

ಬೌದ್ಧ ಧರ್ಮವು ಪ್ರತೀತ್ಯ ಸಮುತ್ಪಾದವನ್ನು ಸಾರುತ್ತದೆ. ಇದರ ತಥ್ಯ ಎಂದರೆ, ಒಂದು ವಸ್ತುವನ್ನು ಹೊಂದಿದ ಮೇಲೆ ಇತರ ವಸ್ತುಗಳು ಹುಟ್ಟಿಕೊಳ್ಳುತ್ತವೆ. ಅಥವಾ 'ಇದು' ಇದ್ದರೆ 'ಅದು' ಉಂಟಾಗುತ್ತದೆ. ಇದು ಸೂಚ್ಯವಾಗಿ ಎರಡನೇ ಆರ್ಯಸತ್ಯ[2] ದುಃಖ ಸಮುದಾಯದಲ್ಲಿ ಕಾಣಸಿಕ್ಕರೆ, ಮೂರನೆಯ ಆರ್ಯಸತ್ಯ[3] ದುಃಖನಿರೋಧದ ರೀತಿಯನ್ನು ವಿವರಿಸುತ್ತದೆ. ಇದೊಂದು ತೆರನಾಗಿ ಕಾರ್ಯಕಾರಣಗಳ ಸರಪಳಿ ಎನಿಸುವುದಲ್ಲದೆ ಇದರೊಡನೆ ಹನ್ನೆರಡು ಕೊಂಡಿಗಳು ನಮಗೆ ಕಾಣಸಿಗುತ್ತವೆ. ಅವುಗಳನ್ನು ಅನುಕ್ರಮವಾಗಿ ಹೀಗೆ ಜೋಡಿಸಬಹುದಾಗಿದೆ :

ಪೂರ್ವಜನ್ಮ ಹಾಗೂ ಪ್ರಸ್ತುತ ಜನ್ಮಕ್ಕೆ ಸಂಬಂಧಿಸಿವೆ	1. ಅವಿದ್ಯಾ (ಅಜ್ಞಾನ) 2. ಸಂಸ್ಕಾರ (ಪೂರ್ವಜನ್ಮದ ಕರ್ಮಾನುಭವಗಳ ಪರಿಣಾಮ) 3. ವಿಜ್ಞಾನ (ಚಿತ್ತ ಅಥವಾ ಚೈತನ್ಯ) 4. ನಾಮರೂಪ (ಭೌತಿಕ ಶರೀರ ಮತ್ತು ಮನಸ್ಸು) 5. ಷಡಾಯತನ (ಮನಸ್ಸು ಮತ್ತು ಪಂಚ ಜ್ಞಾನೇಂದ್ರಿಯಗಳು) 6. ಸ್ಪರ್ಶ (ವಿಷಯೇಂದ್ರಿಯಗಳ ಸಂಪರ್ಕ) 7. ವೇದನಾ (ಇಂದ್ರಿಯಾನುಭವ) 8. ತೃಷ್ಣಾ (ವಿಷಯ ಸುಖಾಪೇಕ್ಷೆ) 9. ಉಪಾದಾನ (ವಿಷಯ ಸುಖದಲ್ಲಿ ಆಸಕ್ತಿ)
ಮುಂದಿನ ಜನ್ಮಕ್ಕೆ ಸಂಬಂಧಿಸಿದ್ದು	10. ಭವ (ಪ್ರಸ್ತುತ ಜನ್ಮಕ್ಕೆ ಕಾರಣವಾದ ಕರ್ಮ) 11. ಜಾತಿ (ಪ್ರಸ್ತುತ ಧರ್ಮ) 12. ಜರಾಮರಣ (ಮುಪ್ಪು ಮತ್ತು ಸಾವು)

---

1 "ಬಂಧತ್ವಾ ಭಾವನಿರ್ಜರಾಭ್ಯಾಂ ಕೃತ್ಸ್ನಕರ್ಮವಿಪ್ರಮೋಕ್ಷಣಂ ಮೋಕ್ಷಃ"—
ತತ್ವಾರ್ಥಸೂತ್ರ 102

2 ಒಂದನೆಯ ಆರ್ಯಸತ್ಯ–ದುಃಖ; ಎರಡನೆಯ ಆರ್ಯಸತ್ಯ–ಸಮುದಾಯ; ಮೂರನೆಯ ಆರ್ಯಸತ್ಯ–ನಿರೋಧ, ನಾಲ್ಕನೆಯ ಆರ್ಯಸತ್ಯ–ಮಾರ್ಗ.

3 "ಕ್ಷಣಿಕಾಃ ಸರ್ವಸಂಸ್ಕಾರಂ ಇತಿ ಯಾ ವಾಸನಾಸ್ಥಿರಾ ।"
ಸಮಾರ್ಗ ಇತಿ ವಿಜ್ಞೇಯಃ ಸ ಚ ಮೋಕ್ಷೋಽಭಿಧೀಯತೇ ॥
— ವಿವೇಕ ವಿಲಾಸ, 8.265.75

ಇದೇ ಸಂಸಾರ ಚಕ್ರ. ಇದು ಸಾಪೇಕ್ಷಕಾರಣತಾವಾದವಾಗಿದೆ. ಇಲ್ಲಿ 'ಮುಂದಿನದಕ್ಕೆ' 'ಹಿಂದಿನದೇ' ಕಾರಣ. ಈ ನೆಲೆಯಲ್ಲಿ ಮೂಲವಾದ ಹಿಂದಿನದನ್ನೆಲ್ಲಾ ಸ್ಥಗಿತಗೊಳಿಸಿಬಿಟ್ಟರೆ ಭವಿಷ್ಯದ ಸಾಧ್ಯತೆಗಳಿಗೆ ಅವಕಾಶವೇ ಇರದು! ಜರಾ-ಮರಣವು 'ಜಾತಿ'ಯನ್ನು ಕಾರಣವನ್ನಾಗಿ ಹೊಂದಿದೆ. ಜಾತಿಗೆ ಭವವೇ ಮೂಲ; ಭವಕ್ಕೆ ಉಪದಾನವೇ ಕಾರಣ. ಈ ಬಗೆಯಲ್ಲಿ ಈ 'ಚಕ್ರ'ಕ್ಕೆಲ್ಲಾ 'ಅವಿದ್ಯೆ'ಯೇ ಕಾರಣೀಭೂತವಾಗಿದೆ. ಜಾತಿ ಇರದಿದ್ದರೆ ಜರಾ-ಮರಣವಿರದು; ಭವವಿರದಿದ್ದರೆ ಜಾತಿಗೆ ಅವಕಾಶವೇ ಸಿಗದು; ಉಪಾದಾನ ಇಲ್ಲವಾದರೆ ಭವವಿರದು; ಅವಿದ್ಯೆ ಇರದಿದ್ದರೆ ಭವಿಷ್ಯತ್ತಿನಲ್ಲಿ ಯಾವುದೂ ಬರಲೂ ಅವಕಾಶ ಸಿಗದು; ಮಾನವರು ಈ ಜಗತ್ತಿನ ದುಃಖದಿಂದ ಪಾರಾಗಬೇಕೆಂದರೆ ದುಃಖದ ಕಾರಣ ಅದರ ನಿವಾರಣವನ್ನು ಮಾರ್ಗದರ್ಶಿಸುವ ಪ್ರತೀತ್ಯ ಸಮುತ್ಪಾದದ ಆಚರಣೆ ಆವಶ್ಯವೆನ್ನುವುದೇ ಬೌದ್ಧರ ಬಲವಾದ ನಂಬಿಕೆ.

VI

ಬೌದ್ಧಧರ್ಮವು ಸತ್ಯ, ದಯೆ, ಧರ್ಮ, ತ್ಯಾಗ, ಸಚ್ಚಾರಿತ್ರ್ಯ ಹಾಗೂ ಪಾವಿತ್ರ್ಯತೆಗಳೇ ಮೈವೆತ್ತಂತಹ ಧರ್ಮವಾಗಿದೆ. ಬುದ್ಧನ ತಾತ್ತ್ವಿಕತೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಮೂಲದಲ್ಲಿರುವ ರಾಷ್ಟ್ರೀಯ ಏಕತೆಯನ್ನೂ ಮುಖ್ಯ ಉದ್ದೇಶವನ್ನಾಗಿ ಹೊಂದಿರುವುದು ಕಂಡುಬರುತ್ತದೆ. ಭ್ರಾತೃತ್ವ (Brotherhood), ಸ್ತ್ರೀಯರಿಗೆ ಗೌರವಸ್ಥಾನ (Respect for women); ಜಾತ್ಯಾತೀತ ಮನೋಭಾವನೆಗಳು ಶಾಂತಿ, ಪ್ರೇಮಗಳ ಬುನಾದಿಯಮೇಲೆ ದೇಶವನ್ನು ಉನ್ನತಿಯತ್ತ ಕೊಂಡೊಯ್ಯುವ ಸಾಧ್ಯತೆಯನ್ನು ಆತ ಬಲ್ಲವನಾಗಿದ್ದನು. ಬೇರಾವ ಧರ್ಮಗಳ ಮೇಲೆ ಯಾವುದೋ ಪೂರ್ವಾಗ್ರಹ [ ] ಇಟ್ಟುಕೊಂಡಿರದಿದ್ದ ಬುದ್ಧನ, ಕೆಟ್ಟದ್ದನ್ನು ಎತ್ತಿ ತೋರಿಸಿ ಸರಿಪಡಿಸುವುದಷ್ಟೇ ಅವನ ಧ್ಯೇಯವಾಗಿತ್ತು. ಅಸಹಾಯಕ ಮಾನವರ ಬದುಕು ಸಹನೀಯ ಮಾಡುವುದರತ್ತ ಆತನ ಪೂರ್ಣ ಗಮನವಿತ್ತು.

ಬುದ್ಧನದು ಮಾತು ಕಡಿಮೆ[1]; ಮೌನಿ, ದೃಷ್ಟಾರ ಆದರೆ ಮಹಾನ್ ಅನುಷ್ಠಾನ ಪ್ರಧಾನ ಕ್ರಿಯಾಶೀಲ: ಆತ ಏನನ್ನು ನಿಶ್ಚಯವಾಗಿ ಹೇಳುತ್ತಿದ್ದನೋ ಅದರಂತೆಯೇ ಬದುಕಿದವನು; ಆತನ ಬದುಕಿನ ಸಹಜ ಶೈಲಿಯೇ ಆತನ ಉಪದೇಶವಾಗಿತ್ತು. 'ಸಕಲ ಜೀವಿಗಳಿಗೆ ಲೇಸನ್ನು ಬಯಸುವವ ಕುಲಜ' ಎಂದು ನುಡಿದ ಜಗಜ್ಜ್ಯೋತಿ ಬಸವಣ್ಣನವರ ಮಾತು ಬುದ್ಧನಿಗೆ ಚೆನ್ನಾಗಿ ಅನ್ವಯಿಸುತ್ತದೆ.

---

1 'ಆಡದೆ ಮಾಡುವವನು ರೂಢಿಯೊಳಗುತ್ತಮನು; ಆಡಿ ಮಾಡುವವನು ಮಧ್ಯಮನು; ಆಡಿಯೂ ಮಾಡದವ ಅಧಮ'—ಸರ್ವಜ್ಞ.

ಬುದ್ಧ ಭಾರತೀಯ ಎನ್ನುವುದು ಭಾರತೀಯರಿಗೆಲ್ಲಾ ಅಭಿಮಾನದ ಸಂಗತಿ. ಸಹಜವಾಗಿಯೇ ಆತನ ಧರ್ಮ ವಿಶ್ವಧರ್ಮವಾಗಿದ್ದರೂ, ಅದು ಭಾರತೀಯರಿಗೆ 'ರಾಷ್ಟ್ರೀಯ ಧರ್ಮ'; ಬುದ್ಧನ ತಾತ್ತ್ವಿಕತೆಯಿಂದ ಪ್ರಭಾವಿತರಾಗಿ. ಸ್ಫೂರ್ತಿ ಪಡೆದಿದ್ದ ಸ್ವಾಮಿ ವಿವೇಕಾನಂದರು ಒಂದೆಡೆ ಹೇಳಿರುವ ಮಾತುಗಳು ಬುದ್ಧನ ಅಂತರ್ಯದ ಆಶಯವನ್ನು ಬಿಂಬಿಸುತ್ತದೆ : "ಪ್ರತೀ ಜೀವವೂ ಸುಪ್ತ ದೈವವೇ... ಬಾಹ್ಯ ಹಾಗೂ ಆಂತರಿಕ ಪ್ರಕೃತಿಯ ನಿಗ್ರಹದಿಂದ ಈ ಸುಪ್ತ ದೈವತ್ವವನ್ನು ವಿಕಾಸ ಗೊಳಿಸುವುದೇ ಮಾನವನ ಗುರಿ. ಮತಗಳು ಪಂಥಗಳು, ಯಂತ್ರ ತಂತ್ರಗಳು, ಗ್ರಂಥಗಳು—ಇವೆಲ್ಲವೂ ಸಹಾಯಕಾರಿ ಅಂಗಗಳು ಮಾತ್ರ[2]".

ಒಟ್ಟಾರೆ ಬೌದ್ಧ ಮತ್ತು ಜೈನ ಧರ್ಮಗಳೆರಡೂ ಒಂದು ಬಗೆಯ ಮಾನವತಾ ಧರ್ಮಗಳಾಗಿವೆ. ಸಾಮಾನ್ಯವಾಗಿ, ಧರ್ಮಗಳಲ್ಲಿ ಕಂಡುಬರುವ ಕುಟಿಲತೆ, ಶೋಷಣೆಗೆ ಪೂರಕವಾಗುವ ಪರಿಕಲ್ಪನೆಗಳಿಗೆ ವಿಪುಲ ಅವಕಾಶ, ಪಟ್ಟಭದ್ರರ ಅಡೆ-ತಡೆಗಳನ್ನು ಲಕ್ಷಿಸದೆ, ತನ್ನತನದಿಂದ ನಿಲ್ಲುವ ಛಾತಿ ಮತ್ತು ಎದೆಗಾರಿಕೆಯನ್ನು ಇವೆರಡೂ ಧರ್ಮ ಗಳಲ್ಲಿ ನಾವು ಕಾಣಬಹುದು ; ಪ್ರಾಮುಖ್ಯವಾಗಿ ಈ ಧರ್ಮಗಳಲ್ಲಿ ವೈಜ್ಞಾನಿಕ ದೃಷ್ಟಿ ಕೋನದಿಂದ ವ್ಯಕ್ತಿಯ ಆಂತರಿಕ ವಿಕಾಸಕ್ಕೆ ಹುರುಪು ನೀಡುವ ನಾವೀನ್ಯವಿದೆ ; ಮೇಲಾಗಿ 'ವ್ಯಕ್ತಿಯಿಂದ ಸಮಷ್ಟಿಯ ಹಿತ ಕಾಯುವ ನಿಟ್ಟಿನಲ್ಲಿ ಜೀವನ ಅಂತಃ ಪ್ರಜ್ಞೆಗೆ' ಹೊಸ ಆಯಾಮವನ್ನೇ ನೀಡಬಹುದಾದ ಸಾಧ್ಯತೆಯಂತೂ ನಿಚ್ಚಳವಾಗಿದೆ.

---

2 Collected works of Swamy Vivekananda—Vol. 1

ಚಾಣಕ್ಯನ ಹಲ್ಲು ಮುರಿದದ್ದೇಕೆ ?

ಶಿವರಾಮಯ್ಯ

ವಡ್ಡಾರಾಧನೆಯಲ್ಲಿರುವ ಭದ್ರಬಾಹುಭಟ್ಟಾರರ ಹಾಗೂ ಚಾಣಕ್ಯರಿಸಿಯರ ಕಥೆ ಮುಂತಾದ ಕಥೆಗಳು ಇತಿಹಾಸಜ್ಞರಿಗೆ ಕೆಲವು ಅಪೂರ್ವ ಮಾಹಿತಿಗಳನ್ನು ದೊರಕಿಸುತ್ತವೆಯಲ್ಲದೆ ಕೆಲವು ಸಮಸ್ಯೆಗಳನ್ನೂ ಮುಂದೊಡ್ಡುತ್ತವೆ. ಕರ್ನಾಟಕ ಹಾಗೂ ಭಾರತದ ಇತಿಹಾಸದ ಪುನರ್ರಚಿಸುವಲ್ಲಿ ಈ ಕಥೆಗಳು ಮಹತ್ವದ ಪಾತ್ರ ವಹಿಸುತ್ತವೆಯೆಂದು ಪ್ರೊ. ಹಂಪನಾ ಅವರು ಹೇಳಿದ್ದಲ್ಲದೆ ಈ ನಿಟ್ಟಿನಲ್ಲಿ ಅವರು "ಚಾಣಕ್ಯರಿಸಿಯ ಕಥೆಯ ಪರಾಮರ್ಶೆ" (ಸಾಧನೆ–3-4-1974) ಎಂಬ ಲೇಖನವನ್ನು ಬರೆದು ಸಂಶೋಧನೆಗೆ 'ಗುದ್ದಲಿ ಪೂಜೆ'ಯನ್ನು ನೆರವೇರಿಸಿದ್ದಾರೆ. ನಾನಾದರೊ ಈ ಲೇಖನದಲ್ಲಿ ಅಂಥ ಸಂಶೋಧನೆಯ ಗೋಜಿಗೆ ಕೈಹಾಕಲು ಹೋಗುವುದಿಲ್ಲ. ಆದರೆ ಚಾಣಕ್ಯನಂತಹ ಮಹಾ ಮೇಧಾವಿ ಬ್ರಾಹ್ಮಣನನ್ನು ಜೈನಧರ್ಮ ಹೇಗೆ ತನ್ನೊಳಗು ಮಾಡಿಕೊಂಡಿತು–ಎಂಬುದನ್ನೂ ಮತ್ತು ತನ್ಮೂಲಕ ಸಾಂಸ್ಕೃತಿಕ ಕೊಡು ಕೊಳುಗೆ ಹೇಗಾಯಿತೆಂಬುದನ್ನೂ ವಡ್ಡಾರಾಧನೆಯ 'ಚಾಣಕ್ಯರಿಸಿಯ ಕಥೆ'ಯ ಆಧಾರದಿಂದ ವಿವರಿಸಲು ಮಾತ್ರ ಇಲ್ಲಿ ಪ್ರಯತ್ನಿಸಿದ್ದೇನೆ. ಆದಕ್ಕಾಗಿ ಚಾಣಕ್ಯರಿಸಿಯ ಕಥೆಯಲ್ಲಿ ಚಾಣಕ್ಯ ಹುಟ್ಟಿದಾಗ "ಹಲ್ಲು ಮುರಿದ" ಪ್ರಸಂಗವನ್ನು ಮತ್ತು ನಂದ ಮಹಾಪದ್ಮ ನನ್ನು ಆತ ಸೋಲಿಸುವಾಗ ಒಬ್ಬ ಮುದುಕಿಯಿಂದ ಬೈಸಿಕೊಂಡು "ಬುದ್ಧಿಕಲಿತ" ಪ್ರಸಂಗವನ್ನೂ ಆಯ್ದುಕೊಳ್ಳಲಾಗಿದೆ. ಇದಕ್ಕೆ ಪೂರ್ವಪೀಠಿಕೆಯಾಗಿ ಚಾಣಕ್ಯನ ಬಗ್ಗೆ ಜೈನ ಹಾಗೂ ಜೈನೇತರ ಸಾಹಿತ್ಯದಲ್ಲಿ ಸಿಕ್ಕುವ ಕೆಲವು ಮಾಹಿತಿಗಳನ್ನು ಹಂಪನಾ ಅವರ ಪರಾಮರ್ಶೆಯಿಂದ ಸಂಗ್ರಹಿಸಿಕೊಡಲಾಗಿದೆ.

ಜೈನೇತರ ಸಾಹಿತ್ಯದಿಂದ ಲಬ್ಧವಾಗುವ ಮಾಹಿತಿಗಳು :

ಚಾಣಕ್ಯ (ಕೌಟಿಲ್ಯ, ವಿಷ್ಣುಗುಪ್ತ ಇತ್ಯಾದಿ) ಎಂಬುವನು ರಾಜಕೀಯ ನಿರ್ವಹಣೆ ಯನ್ನು ಕುರಿತ 'ಅರ್ಥಶಾಸ್ತ್ರ' ಎಂಬ ಗ್ರಂಥದ ಕರ್ತೃ. ಪ್ರಾಚೀನ ಭಾರತದಲ್ಲಿದ್ದ ಈ ಮಹಾಮೇಧಾವಿಯ ಬಗೆಗೆ ಪಶ್ಚಿಮ ಹಾಗೂ ಪೂರ್ವದೇಶಗಳಲ್ಲಿ ಅನೇಕ ಸಂಶೋಧನೆಗಳನ್ನು ಮಾಡಲಾಗಿದೆ. ಆದರೆ ಯಾವ ಸಂಶೋಧನೆಗಳೂ ಇದುವರೆಗೆ ಈತನ ಕಾಲ ಜೀವನದ ಬಗೆಗೆ ಒಂದು ಕ್ರಮವಾದ ನಿಲುವನ್ನು ತಳೆದಿಲ್ಲ. ಸಾಂಪ್ರ ದಾಯಿಕ ಐತಿಹ್ಯಗಳ ಪ್ರಕಾರ ಭಾರತೀಯರು ಈತನನ್ನು ಮೌರ್ಯವಂಶದ ಸ್ಥಾಪಕ ನಾದ ಚಂದ್ರಗುಪ್ತನ ಮಂತ್ರಿಯಾಗಿದ್ದನೆಂದು ಒಪ್ಪಿಕೊಳ್ಳುತ್ತಾರೆ. ಈ ಮಹಾ

ಬುದ್ಧಿವಂತನೇ ಚಂದ್ರಗುಪ್ತಮೌರ್ಯನನ್ನು ಬಲಾಢ್ಯ ಚಕ್ರವರ್ತಿಯನ್ನಾಗಿಸಿ (313 B.C.) ಅವನ ದೇಶದ ಏಳ್ಗಿಗೆ ನೆರವಾದನೆಂದು ನಂಬಲಾಗಿದೆ. 'ಚಾಣಕ್ಯನ ಕುಟಿಲ ನೀತಿ' (ಚಾಣಾಕ್ಷ=ಸೂಕ್ಷ್ಮಗ್ರಾಹಿ. ಚಾಣಕ್ಯ ಹರಿತವಾದ ಬುದ್ಧಿಯುವನು) ಎಂಬುದೇ ಒಂದು ಬಳಕೆ ಮಾತಾಗಿದೆ ; ಕೆಲವು ಪಂಡಿತರು ಈತನ ಕುಟಿಲತನದ ತಂತ್ರದಿಂದಾಗಿ ಕೌಟಿಲ್ಯನೆಂಬ ಹೆಸರು ಬಂದಿದೆಯೆಂದೂ ಹೇಳುತ್ತಾರೆ. ಆದರೆ ಈ ಮಾತಿಗೆ ಇನ್ನೂ ಸಾಕ್ಷ್ಯಾಧಾರಗಳಿಲ್ಲ". (ಜಾನಪದ ವಿಶ್ವಕೋಶ–ಪುಟ-361).

ಚಾಣಕ್ಯನ 'ಅರ್ಥಶಾಸ್ತ್ರ'ವು ಅವನ ಹೆಸರು ಜಗತ್ಪ್ರಸಿದ್ಧವಾಗುವಂತೆ ಮಾಡಿದೆ. ಅದು ಕೇವಲ ಒಂದು ಗ್ರಂಥವಲ್ಲ. ಪ್ರಾಚೀನ ಭಾರತದ ಅನೇಕ ಗ್ರಂಥಗಳ ಸಾರವೆಂದು ವಿದೇಶಿ ವಿದ್ವಾಂಸರ ಅಭಿಪ್ರಾಯವಾಗಿದೆ. ವಿಶಾಖದತ್ತನ 'ಮುದ್ರಾರಾಕ್ಷಸ' ನಾಟಕದಲ್ಲಿ ಕೌಟಿಲ್ಯ(ಚಾಣಕ್ಯ)ನ ಹೆಸರನ್ನು ಬಳಸಲಾಗಿದೆ. ಕೆಂಪುನಾರಾಯಣನ 'ಮುದ್ರಾಮಂಜೂಷ'ವೆಂಬ ಕನ್ನಡ ಗದ್ಯಕೃತಿಗೆ 'ಮುದ್ರಾರಾಕ್ಷಸ'ವು ಆಧಾರವಾಗಿದೆ. ಒಟ್ಟಿನಲ್ಲಿ ಚಾಣಕ್ಯನು ಅತ್ಯಂತ ಚುರುಕು ಸ್ವಭಾವದವನಾಗಿದ್ದನೆಂದೂ ಹಿಡಿದ ಕೆಲಸವನ್ನು ಸಾಧಿಸುವ ಛಲಗಾರನಾಗಿದ್ದನೆಂದೂ, ನ್ಯಾಯನಿಷ್ಠುರಿಯೆಂದೂ ತಿಳಿದುಬರುತ್ತದೆ. ಈತ ಪೌರಾತ್ಯರಾಷ್ಟ್ರದ ಉನ್ನತ ಪ್ರತಿಭೆಯ ಪ್ರತೀಕವಾಗಿದ್ದನೆಂದು ಹೇಳಬಹುದು. ಅರ್ಥಶಾಸ್ತ್ರದ ಕಾಲ ಕ್ರಿ.ಪೂ. ಸು. 400 ಎಂದು ಆಧುನಿಕ ಸಂಶೋಧನೆ ಗುರುತಿಸುತ್ತದೆ.

ಇನ್ನು ಜೈನಕೃತಿಗಳಿಂದ ದೊರಕುವ ಮಾಹಿತಿಗಳು ಇಂತಿವೆ : ಜೈನ ವಾಙ್ಮಯದಲ್ಲಿ ಮೇಲಿನ ಜೈನೇತರ ವಿವರಗಳನ್ನು ಒಳಗೊಂಡು ಇನ್ನೂ ಸಮಗ್ರವೂ ವ್ಯಾಪಕವೂ ಆದ ಸಂಗತಿಗಳಿವೆ ಎಂಬುದನ್ನು ಪ್ರೊ. ಹಂಪನಾ ಅವರು ತೋರಿಸಿಕೊಟ್ಟಿದ್ದಾರೆ. ಅವುಗಳಲ್ಲಿ ವಡ್ಡಾರಾಧನೆಯ 'ಚಾಣಕ್ಯರಿಸಿಯ ಕಥೆ'ಯೂ ಒಂದು. ಇದರಲ್ಲಿ ವ್ಯಕ್ತವಾಗುವ ಅನೇಕ ಅಂಶಗಳಲ್ಲಿ ಮುಖ್ಯವಾಗಿ ಚಾಣಕ್ಯ ಜೈನನೆಂಬುದು ಒಂದು. ಚಾಣಕ್ಯ ಬ್ರಾಹ್ಮಣನೆಂಬ ರೂಢಿಯಿರುವಾಗ ಈ ಮಾತನ್ನು ಒಪ್ಪಿಕೊಳ್ಳುವುದು ಹೇಗೆ? ಆದರೆ ಇದು ಒಂಟಿದನಿಯಲ್ಲ. ಇದಕ್ಕೆ ಪೂರಕವಾಗಿ ಅನೇಕ ಸಾಹಿತ್ಯಾಧಾರಗಳಿವೆಯೆಂದು ಹಂಪನಾ ತೋರಿಸಿಕೊಟ್ಟಿದ್ದಾರೆ. ವಡ್ಡಾರಾಧನೆಗಿಂತ ಪೂರ್ವರಚಿತ ಕೆಲವು ಸಂಸ್ಕೃತ ಪ್ರಾಕೃತ ಕೃತಿಗಳಲ್ಲಿ ಇದೇ ಚಾಣಕ್ಯನ ಕಥೆ ಕೆಲವು ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಕಂಡು ಬರುತ್ತದೆ. ವಿಶೇಷಾವಶ್ಯಕ ವಾಕ್ಯ ಮತ್ತು ಆವಶ್ಯಕ ಮಲಯಗಿರಿ ವೃತ್ತಿ ಎಂಬುದೂ ಕೂಡ ಆವಶ್ಯಕ ಚೂರ್ಣಿಯಿಂದ ಬರುವ ಸಂಗತಿಗಳನ್ನು ಪುಷ್ಟೀಕರಿಸುತ್ತದೆ. ಆಚಾರ್ಯ ಹರಿಭದ್ರಸೂರಿಯು 'ಉಪದೇಶಪದ'ದಲ್ಲಿ ಚಣಿ (ಚಾಣಕ್ಯನ ತಂದೆ) ಒಬ್ಬ ಶ್ರಾವಕನೆಂಬುದನ್ನು ಇನ್ನು ಅಚ್ಚುಕಟ್ಟಾಗಿ ಪೂರ್ಣ ಪ್ರಮಾಣದಲ್ಲಿ ನಿರೂಪಿಸಲಾಗಿದೆ. ಇದರಲ್ಲಿ ಚಾಣಕ್ಯನ ಕಡೆಯ ದಿನಗಳಿಗೆ ಸಂಬಂಧಿಸಿದಂತೆ ಆತ 'ಇಂಗಿನೀಮರಣ'ಕ್ಕೆ

(ಗೊತ್ತಾದ ಸ್ಥಳದಲ್ಲಿ ಸಾಯುವವರೆಗೆ ಉಪವಾಸವಿರುವುದು) ಆಣೆಯಾದ ವಿಷಯವನ್ನು ತಿಳಿಸುವುದೊಂದು ವಿಶೇಷ. ಒಟ್ಟಿನಲ್ಲಿ ಹಂಪನಾ ಅವರ ಸಮೀಕ್ಷೆ ಪ್ರಕಾರ, ಅವಶ್ಯಕ ಚೂರ್ಣಿ. ಆವಶ್ಯಕ ಮಲಯಗಿರಿವೃತ್ತಿ, ಉಪದೇಶಪದ, ಭಟ್ಟಪಇಣ್ಣಾ. ಸಂತಾರಗಪಇಣ್ಣಾ, ಮರಣವಿಹಿಪಇಣ್ಣಾ. ಬೃಹತ್‌ಕಥಾಕೋಶ, ಪರಿಶಿಷ್ಟಪರ್ವನ್- ಇವು ಚಾಣಕ್ಯ ಜೈನನೆಂಬುದನ್ನು ಅವಿರೋಧವಾಗಿ ಒಪ್ಪಿಕೊಂಡಿವೆ.

ವ್ಯವಹಾರ ಚಾತುರ್ಯದಲ್ಲಿ ಚಾಣಕ್ಯ ಪ್ರಸಿದ್ಧಪುರುಷನಷ್ಟೆ. ವಂಚನೆ ದಗಲಬಾಜಿತನ ಮುಂತಾದುವು ಈ ತಂತ್ರದ ಜ್ಞಾತಿಗಳು. ಈ ಕಾರಣಗಳಿಗಾಗಿ ಕೆಲವು ವಿದ್ವಾಂಸರು ಚಾಣಕ್ಯನನ್ನು ಜೈನನೆಂದು ಒಪ್ಪಲು ಹಿಂಜರಿಯುತ್ತಾರೆ ಎಂದ ಹಂಪನಾ ಇನ್ನು ಹಲವಾರು ಸಮರ್ಥನೆಗಳನ್ನು ನೀಡುವ ಮೂಲಕ ಚಾಣಕ್ಯ ಜೈನನೆಂಬುದನ್ನು ಸ್ಥಿರಪಡಿಸಲು ಪ್ರಯತ್ನಿಸಿದ್ದಾರೆ. ಅಲ್ಲದೆ ಅವರು ಸಾರಾಂಶರೂಪದಲ್ಲಿ ಬರೆಯುತ್ತಾ ಚಂದ್ರಗುಪ್ತ, ಬಿಂದುಸಾರ, ಮಗಧರಾಜ್ಯ. ಪಾಟಲೀಪುತ್ರ, ನಂದವಂಶ, ಚಾಣಕ್ಯನನ್ನು ಸೇರಿಸಿಕೊಂಡು ಅನೇಕ ಚಾರಿತ್ರಿಕ ಸಂಗತಿಗಳಿರುವಾಗ ಚಾಣಕ್ಯನನ್ನು ಜೈನನೆನ್ನುವುದು ಅಸಂಭವನೀಯವಲ್ಲವೇ ಎಂಬುದಾಗಿ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಆದರೆ ಅವರ ಅನುಮಾನಕ್ಕೆ ಕಾರಣವಿಲ್ಲ. ಏಕೆಂದರೆ ಚಾಣಕ್ಯನೆಂಬ ಬ್ರಾಹ್ಮಣ ವ್ಯಕ್ತಿಯೊಬ್ಬ ಇತಿಹಾಸದಲ್ಲಿ ಆಗಿಹೋಗಿರಬೇಕು ; ಆತ ಕುಶಾಗ್ರಮತಿಯೂ ಆಗಿದ್ದಿರಬೇಕು. ಆತನ ಕಾಲಾನಂತರ ಜನಿಸಿದ ಬುದ್ಧಿಯವರಿಗೆ 'ಚಾಣಕ್ಯ' (ಬೃಹಸ್ಪತಿ ಎಂದ ಹಾಗೆ) ನೆಂದು ಅಡ್ಡ ಹೆಸರು ಕರೆಯುವುದು ರೂಢಿಯಾಗಿ ಕ್ರಮೇಣ ಚಾಣಕ್ಯನೆಂಬ ವ್ಯಕ್ತಿಯೆಂದರೆ ಬುದ್ಧಿವಂತಿಕೆಗೆ ಹಿಡಿದ ಪ್ರತಿಮೆಯಾಗಿ ಬೆಳೆದುಬಿಟ್ಟ, ಹಾಗೆ ಇಂಥದೊಂದು ಪೂರ್ವಪರಂಪರೆ ಬ್ರಾಹ್ಮಣಧರ್ಮದಲ್ಲಿತ್ತು. ಮುಂದೆ ಜೈನ ಹಾಗೂ ಬೌದ್ಧಧರ್ಮಗಳು ವೈದಿಕ ಧರ್ಮದ ಯಜ್ಞಯಾಗಾದಿಗಳ ಬಲಿಹಿಂಸೆಗಳನ್ನು ವಿರೋಧಿಸಿ ಜನ್ಮತಾಳಿದವು. ಅವುಗಳು ತಮ್ಮ ಅಹಿಂಸಾತತ್ವಗಳನ್ನು ಪ್ರತಿಪಾದಿಸಿ ಜನಮನವನ್ನು ಗೆಲ್ಲುವ ಕಾಲಕ್ಕೆ ಈಗಾಗಲೆ ಜನಜನಿತವಾಗಿದ್ದ ಕಥಾವಸ್ತುಗಳನ್ನೇ ಸ್ವೀಕರಿಸಿ ಅವುಗಳನ್ನು ತಮ್ಮ ಹೊಸದೃಷ್ಟಿ ನೀತಿಗೆ ಒಗ್ಗಿಸಿ ಬಳಸಿಕೊಂಡವು. ಇದು ಸಹಜವಾದ ಕೊಡುಕೊಳುಗೆಯ ವಿಚಾರವೇ. (ಬುದ್ಧನನ್ನು ದಶಾವತಾರದಲ್ಲಿ ವೈದಿಕನನ್ನು ಸೇರಿಸಿಕೊಂಡರು) ಈ ಸಂದರ್ಭದಲ್ಲಿ ಚಾಣಕ್ಯನ ಜಾಣಬ್ರಾಹ್ಮಣ ಪ್ರತಿಭೆಯನ್ನು ಜಿನಧರ್ಮ ತನ್ನ ಉದ್ದೇಶ ಆಶಯಕ್ಕೆ ತಕ್ಕಂತೆ ಅಳವಡಿಸಿಕೊಂಡು ಸ್ವೀಕರಿಸುವುದರಲ್ಲಿ ಸಂದೇಹವಿಲ್ಲ. ಜೈನವಾಙ್ಮಯ ಪ್ರಪಂಚ ಇಂಥ ಪ್ರಸಿದ್ಧ ಚೇತನದ ಕಥಾಭಿತ್ತಿಗಳ ಮೇಲೆ ತಮ್ಮ ಧರ್ಮದ ಪ್ರಚಾರ ಚಿತ್ರಗಳನ್ನು ಬಿಡಿಸಿ ಜನಮನವನನ್ನು ಸೋರೆಗೊಳ್ಳಲು ಪ್ರಾರಂಭಿಸಿತು. ಇಷ್ಟರಲ್ಲಿ ಚಾರಿತ್ರಿಕ ವ್ಯಕ್ತಿಯಾಗಿದ್ದ ಚಾಣಕ್ಯನ ಬುದ್ಧಿವಂತಿಕೆಯ ಬಗ್ಗೆ ಐತಿಹ್ಯಗಳೂ ದಂತ ಕಥೆಗಳೂ ಹುಟ್ಟಿ

ಕೊಂಡು ಇತಿಹಾಸ ಪುರುಷ ಜನರ ಕಣ್ಣಂಚಿನಿಂದ ಜಾರಿ ಹೋಗುತ್ತಿದ್ದ. ಈ ಸಮಯದಲ್ಲಿ ಜೈನಧರ್ಮ ಆ ಪಾತ್ರದ ಓರೆ ಕೋರೆಗಳನ್ನು ತಿದ್ದಿತೀಡಿ ತನ್ನ ಆಶಯಕ್ಕೆ ತಕ್ಕಂತೆ ಬಳಸಿಕೊಳ್ಳಲು ಹಿಂಜರಿಯಲಿಲ್ಲ. ಪ್ರಾಕೃತ, ಸಂಸ್ಕೃತ, ಜೈನ ವಾಙ್ಮಯದಲ್ಲಿ ಈ ಪ್ರಕ್ರಿಯೆ ಸತತವಾಗಿ ಜರುಗಿತು. ಆ ಸಮಸ್ತ ಫಲವೂ ಹತ್ತನೇ ಶತಮಾನದ ಕನ್ನಡ ವಡ್ಡಾರಾಧನೆಯ 'ಚಾಣಕ್ಯ ರಿಸಿಯ ಕಥೆ'ಯಲ್ಲಿ ಭಟ್ಟಿ ಇಳಿದು ರೂಪಕ ಕಾವ್ಯವಾಗಿ ಪರಿಣಮಿಸಿದೆ. ವಡ್ಡಾರಾಧನೆಯ ಕವಿ ಶಿಷ್ಟದಲ್ಲಿ ಬೆಳೆದು ನಿಂತಿದ್ದ ಚಾಣಕ್ಯನ ಬೌದ್ಧಿಕ ಅಹಂಕಾರವನ್ನು ತಗ್ಗಿಸಿ ಜೈನ ಧರ್ಮದ ವಿನಯಕ್ಕೆ ಬಗ್ಗಿಸಿದ್ದಾನೆ. ಮತ್ತು ನಿತ್ಯ ಫಲವಂತಿಕೆಯ ಜಾನಪದ ಜ್ಞಾನಾನುಭವವನ್ನು ಅವರಿಗೆ ಧಾರೆ ಎರೆಯುವ ಮೂಲಕ ಆತನ ಒಣ ಶಾಸ್ತ್ರಾಧ್ಯಯನ ಜ್ಞಾನಕ್ಕೆ ಜೀವಂತಿಕೆಯನ್ನು ಕೊಟ್ಟಿದ್ದಾನೆ. ಇದನ್ನು ಇನ್ನಷ್ಟು ಸ್ಪಷ್ಟಪಡಿಸಲು ಚಾಣಕ್ಯರಿಸಿಯ ಕಥೆ'ಯ ಎರಡು ಪ್ರಸಂಗಗಳನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ಮೊದಲನೆಯದು ಚಾಣಕ್ಯನ ಹಲ್ಲಿನ ಪ್ರಸಂಗ. 'ಮಗಧ ಎಂಬ ನಾಡಿನಲ್ಲಿ ಶಾಲ್ಮಲಿ ಎಂಬ ಅಗ್ರಹಾರದಲ್ಲಿ ಸೋಮಶರ್ಮ ಮತ್ತು ಕಪಿಲೆ ಎಂಬ ದಂಪತಿಗಳಿಗೆ ಒಬ್ಬ ಮಗನಿದ್ದನು. ನಾಲ್ಕು ಹಲ್ಲಿನೊಂದಿಗೆ ಹುಟ್ಟಿದುದರಿಂದ ಅವನಿಗೆ ಚಾಣಕ್ಯ ಎಂದು ಹೆಸರಾಗಿದ್ದಿತು ಇದನ್ನು ಕೇಳಿದ ವಸಂತಕನೆಂಬ ನೈಮಿತ್ತಿಕನು. "ನಾಲು ಹಲ್ಲುಗಳಿಂದ ಹುಟ್ಟಿದ ಇವನಿಂದ ನಂದವಂಶವು ಕ್ಷಯವಾಗುತ್ತದೆ. ಇದರಲ್ಲಿ ಸಂದೇಹವೇ ಇಲ್ಲ" ಎಂದು ಭವಿಷ್ಯ ನುಡಿದನು. ಅದು ಸೋಮಶರ್ಮನಿಗೆ ತಿಳಿದು ಕೈಸಾಣೆ (ಉಳಿ)ಯಿಂದ ನಾಲ್ಕು ಹಲ್ಲುಗಳನ್ನು ಉಜ್ಜಿಸಿ, ಕೀಳಿಸಿ, ಸಮಮಾಡಿದನು. ಚಾಣಕ್ಯನು ಬೆಳೆದನು. ನಾಲ್ಕು ವೇದ, ಆರು ಅಂಗ, 18 ಧರ್ಮಶಾಸ್ತ್ರಗಳು, ಮೀಮಾಂಸಾ, ವ್ಯಾಕರಣ, ಪ್ರಮಾಣ, ಛಂದ, ಅಲಂಕಾರ, ನಿಘಂಟು, ಕಾವ್ಯ, ನಾಟಕ, ಶಾಲಿಹೋತ್ರ, ವೈದ್ಯ, ಸಾಮುದ್ರಿಕ, ನೀತಿಶಾಸ್ತ್ರ ಮೊದಲಾದ ಎಲ್ಲ ವಿದ್ಯೆಗಳನ್ನು ಕಲಿತು ಋಷಿಗಳ ಬಳಿ ಧರ್ಮವನ್ನು ಕೇಳಿ ಶ್ರಾವಕವ್ರತಗಳನ್ನು ಕೈಕೊಂಡು, ಸಮ್ಯಗ್ ದೃಷ್ಟಿಯಾದನು. ಕೆಲವು ಕಾಲಾನಂತರ ಪಾಟಲಿಪುತ್ರಕ್ಕೆ ಹೋಗಲು ಅವನ ಪಾಂಡಿತ್ಯವನ್ನೂ. ಸಮಗ್ಯ ದೃಷ್ಟಿಯಾಗಿರುವುದನ್ನು ಭವ್ಯವಾದ ಆಕಾರವನ್ನು ನೋಡಿ ಶಕಟಾಳ (ಮಹಾಪದ್ಮನ ಒಬ್ಬ ಮಂತ್ರಿ)ನು ತನ್ನ ಮಗಳು ಯಶೋಮತಿಯನ್ನು ಅವನಿಗೆ ಮದುವೆ ಮಾಡಿಕೊಟ್ಟನು. ಈ ಪ್ರಸಂಗದಲ್ಲಿ ಗಮನಿಸಬೇಕಾದ ಅಂಶವೆಂದರೆ, ಆರೇಳು ತಿಂಗಳ ವಯಸ್ಸಿನ ಮಗುವಿಗೆ ಸಾಮಾನ್ಯವಾಗಿ ಹಲ್ಲು ಹುಟ್ಟಿ ಬರುತ್ತವೆ. ಇವುಗಳನ್ನು ಹಾಲು ಹಲ್ಲು ಎಂದು ಕರೆಯಲಾಗುತ್ತದೆ. 6–7 ವರ್ಷಗಳ ನಂತರ ಇವೂ ಬಿದ್ದುಹೋಗಿ ಬೇರೆ ಹಲ್ಲುಗಳು 12 ವರ್ಷ ತುಂಬುವುದರೊಳಗಾಗಿ ಹುಟ್ಟಿಬರುತ್ತವೆ. 17 ರಿಂದ 21 ವರ್ಷ ವಯಸ್ಸಿನೊಳಗೆ ಎರಡೂ ಕಡೆಯ ದವಡೆಗಳಲ್ಲಿ ಮತ್ತೆ ಹಲ್ಲುಗಳು ಹುಟ್ಟುತ್ತವೆ. ಇವು ಒಂದರಿಂದ ನಾಲ್ಕು ಇರಬಹುದು. ಇವುಗಳನ್ನು ಬುದ್ಧಿವಂತಿಕೆ (wisdom teeth)ಯ ಹಲ್ಲು ಎಂದೂ

ಕರೆಯುವರು. ಈ ವಯಸ್ಸಿನ ವ್ಯಕ್ತಿ ದೈಹಿಕವಾಗಿ ಹಾಗೂ ಬೌದ್ಧಿಕವಾಗಿ ಒಂದು ಪರಿಪಕ್ವ ಮಟ್ಟವನ್ನು ಮುಟ್ಟಿರುತ್ತಾನೆಯಷ್ಟೆ. ಚಾಣಕ್ಯನ ಬಗ್ಗೆ ಹೇಳುವುದಾದರೆ ನಾಲ್ಕು ಹಲ್ಲುಗಳು ಮೊದಲೇ ಬಂದಿದ್ದವು. ಮಗುವಿಗೆ ಮೊದಲೇ ಹಲ್ಲು ಹುಟ್ಟಿರ ಬಹುದಾದರೂ ಅವುಗಳನ್ನು ಅವನ ತಂದೆ ಉಜ್ಜಿಸಿ ಕಿತ್ತು ಸಮಗೊಳಿಸಿದ್ದೇಕೆ ? ಮಗುವಿನ ಹಲ್ಲು ಮುರಿದರೆ ಅವನ ಭವಿಷ್ಯವನ್ನು ತಿದ್ದಿದಂತಾಯಿತೆ ? ಇದು ವಿಚಾರಾರ್ಹ ಅಂಶ. ಇದಕ್ಕೂ ಮೊದಲು ಹಲ್ಲಿನ ಬಗ್ಗೆ ಇರುವ ಜನಪದರ ನಂಬಿಕೆ ಗಳನ್ನು ಕೊಂಚ ವಿವರಿಸಬೇಕು. ಗಂಡು ಮಗುವಿಗೆ ಹುಟ್ಟುವ ಮೊದಲೇ ಹಲ್ಲಿದ್ದರೆ ಅದರ ಸೋದರ ಮಾವನಿಗೆ ಕಂಟಕವೆಂದೂ, ಹೆಣ್ಣು ಮಗುವಿದ್ದರೆ ಅದು ಮುಂದೆ ಮದುವೆಯಾದಾಗ ಗಂಡ ಸತ್ತು ಬೇಗ ವಿಧವೆಯಾಗುತ್ತಾಳೆಂದೂ ನಂಬಿಕೆ ಇದೆ. ಇಂಥ ಅಪರೂಪದ ಮಕ್ಕಳು ಹುಟ್ಟಿದಾಗ ಕೂಡ ಆ ದೋಷ ನಿವಾರಣೆಗಾಗಿ ನಮ್ಮ ಜನಪದರು ಕೆಲವು ವಿಧಿ ತಂತ್ರಗಳನ್ನು ಕಂಡುಕೊಂಡಿದ್ದಾರೆ. ಗಂಡುಮಗುವಿನಿಂದ ಸೋದರಮಾವನಿಗೆ ಉಂಟಾಗುವ ದೋಷನಿವಾರಣೆಗಾಗಿ ಅವರನ್ನು ದೇವಸ್ಥಾನಕ್ಕೆ ಕರೆದೊಯ್ದು ಉಣ್ಣೆಯ ತಣಿಗೆಯಲ್ಲಿ ಮಗುವಿನ ಮುಖವನ್ನು ಅದರ ಸೋದರ ಮಾವನಿಗೆ ತೋರಿಸಲಾಗುವುದು. ಮತ್ತು ಹೆಣ್ಣುಮಗುವಾದರೆ ಗಂಡನ ಪ್ರಾಣಾ ಪಾಯವನ್ನು ನಿವಾರಿಸಲು ಅಂಥ ಹುಡುಗಿಯನ್ನು ಮೊದಲು ಬೇಟೆಗಿಡ ಅಥವಾ ತಂಗಟೆಗಿಡಗಳಿಗೆ ಮದುವೆ ಮಾಡಿಸಿ ನಂತರ ಗಂಡಿಗೆ ಕೊಟ್ಟು ಮದುವೆ ಮಾಡಿಸುವ ರೂಢಿ ಬೆಳೆದುಬಂದಿದೆ. ಅಂತೂ ಹಲ್ಲು ಸಮೇತ ಹುಟ್ಟುವ ಮಕ್ಕಳಿಂದ ಒಂದಲ್ಲೊಂದು ಕಂಟಕ ಇದ್ದದ್ದೇ ಎಂಬ ಕಲ್ಪನೆ ಜನಮತದಲ್ಲಿ ಪ್ರಾಚೀನಕಾಲದಿಂದಲೂ ಬೇರೂರಿದೆ. ಚಾಣಕ್ಯನ ಹಲ್ಲಿನ ಪ್ರಸಂಗವೂ ಇಂಥ ಒಂದು ಜಾನಪದ ನಂಬಿಕೆಯ ಆಧಾರದಿಂದಲೇ ಹೇಳಲ್ಪಟ್ಟಿದೆ. ಜೈನವಾಙ್ಮಯಕಾರರು ಚಾಣಕ್ಯನ ಹಲ್ಲಿನ ಪ್ರಸಂಗವನ್ನು ಒಂದ ಲ್ಲೊಂದು ಬಗೆಯಲ್ಲಿ ಬಳಸಿಕೊಳ್ಳುತ್ತಾರೆ. ಮತ್ತು 17ನೆಯ ವರ್ಷದ ನಂತರ 21 ರೊಳಗೆ ಹುಟ್ಟುವ ದವಡೆ ಹಲ್ಲುಗಳು ಬುದ್ಧಿವಂತಿಕೆಯ ಲಕ್ಷಣವೆಂದು ಹೇಳಿತಷ್ಟೆ. ಆ ಬುದ್ಧಿವಂತಿಕೆ ಚಾಣಕ್ಯನಿಗೆ ಆಜನ್ಮಸಿದ್ಧವಾಗಿತ್ತೆಂಬುದನ್ನು ಅವನಿಗೆ ಹುಟ್ಟುವ ಮೊದಲೇ ನಾಲ್ಕು ಹಲ್ಲು ಮೊಳೆತಿದ್ದವು ಎಂಬುದರಿಂದ ಸೂಚಿಸಲಾಗಿದೆ. ಅವನು ಮುಂದೆ ರಾಜ ಅಥವಾ ಮಂತ್ರಿಯಾಗಿ ಕೆಲವೊಮ್ಮೆ ಆಗ ಅನಿವಾರ್ಯವಾಗಿ ಹತ್ಯಾಕಾರ್ಯ ದಲ್ಲಿ ತೊಡಗಬೇಕಾಗಬಹುದೆಂಬ ಪಾಪಪ್ರಜ್ಞೆಯಿಂದ ಅವನ ತಂದೆ ಚಣಕನು ಚಾಣ (ಉಳಿ) ದಿಂದ ಆ ಮಗುವಿನ ಹಲ್ಲನ್ನು ಉಜ್ಜಿ ಕಿತ್ತು ಸಮಗೊಳಿಸಿದನು ಜೈನೇತರ ವಾಙ್ಮಯದಲ್ಲಿ ಚಾಣಕ್ಯನ ಹಲ್ಲಿನ ಪ್ರಸಂಗ ಎಲ್ಲಿಯೂ ಕಂಡುಬರುವುದಿಲ್ಲ. (ಇದ್ದರೆ ತಿಳಿಸುವುದು) ಹಾಗಾದರೆ ಜೈನವಾಙ್ಮಯದಲ್ಲಿ ಚಾಣಕ್ಯನ ಹಲ್ಲು ಮುರಿದ್ದೇಕೆ ? ಹಲ್ಲು ಬುದ್ಧಿವಂತಿಕೆಯ ಲಕ್ಷಣವಾದ ಪ್ರಯುಕ್ತ ಚಾಣಕ್ಯ ಶಿಶುವಿಗೆ ಹುಟ್ಟುವ ಮುನ್ನ ಹಲ್ಲು ಇತ್ತೆಂದು ಹೇಳಿ, ಆ ಹಲ್ಲನ್ನು ಕಿತ್ತು ಕಳೆಯುವ ಮೂಲಕ ಅದು ತಿದ್ದಲ್ಪಟ್ಟಿತು ಎಂದು ಹೇಳುವ ಮೂಲಕ ಜೈನಕೃತಿಕಾರರು ಚಾಣಕ್ಯನನ್ನು ತಮ್ಮವನನ್ನಾಗಿ ಮಾಡಿ

ಕೊಂಡಿದ್ದಾರೆ. ಅವರ ರೂಪಕಧಾರಣಶಕ್ತಿ ಅಪೂರ್ವವೆನಿಸಿದೆ. 'ಅವನ ಹಲ್ಲು ಉದ್ದವಾದವು ಮುರಿಯಬೇಕು', 'ನಿನ್ನ ಹಲ್ಲು ತುಟಿ ಮೀರಿದವು ಜೋಕೆ', 'ಹಲ್ಲಿಡಿದು ಮಾತಾಡು' ಎಂಬ ಕನ್ನಡ ದೇಶೀ ನುಡಿಗಟ್ಟಿರುವ ವ್ಯಂಗ್ಯವನ್ನು ಎಲ್ಲರೂ ಬಲ್ಲರು. ಎಂದರೆ ಹಲ್ಲು ಬುದ್ಧಿವಂತಿಕೆ ಮಿತಿ ಮೀರುವ ಲಕ್ಷಣ ಎಂದಾಯಿತು. ಅವುಗಳನ್ನು ಮುರಿಯುವುದು ಎಂದರೆ (ವಾಸ್ತವವಾಗಿ ಮುರಿಯುವ ಪ್ರಶ್ನೆಯಿಲ್ಲ). ಅಂಥವನ ಅತಿವರ್ತನೆಯನ್ನು ಹತ್ತಿಕ್ಕುವ ಬಗ್ಗೆ ಎಚ್ಚರಿಕೆ. ಹಾಗೆಯೇ ಚಾಣಕ್ಯನ ಹಲ್ಲು ಮುರಿದ ಪ್ರಸಂಗವನ್ನು ಒಂದು ರೂಪಕವೆಂದು ಗ್ರಹಿಸಬೇಕು. ಅದನ್ನು ಒಡೆದರೆ ಧ್ವನಿ ದಿಗ್ಮಂಡಲವನ್ನು ವ್ಯಾಪಿಸುತ್ತದೆ. ಜನಮನದಲ್ಲಿ ಈ ಮುಂಚೆ ಬೇರುಬಿಟ್ಟಿದ್ದ ಚಾಣಕ್ಯನ ದೈತ್ಯಾಕಾರದ ಪಾತ್ರವನ್ನು ಜನ ಧರ್ಮವರ್ಧನೆಗೆ ಬಳಸಿಕೊಳ್ಳಬೇಕಾಗಿತ್ತು. ಆದ್ದರಿಂದ ಅದರಲ್ಲಿದ್ದ ಅಹಮಿಕೆಯನ್ನು ಹೋಗಲಾಡಿಸಿ ವಿನಮ್ರತೆಗೆ ಒಳಗುಮಾಡುವುದು ಅನಿವಾರ್ಯವಾಯಿತು. ಹಾಗಾಗಿ ಜನಪದದಲ್ಲಿ ಹಲ್ಲಿನ ಬಗ್ಗೆ ಇರುವ ನಂಬಿಕೆಯನ್ನು ತೆಗೆದುಕೊಂಡು ಚಾಣಕ್ಯನಿಗೆ ಆರೋಪಿಸುವ ಮೂಲಕ ಅವನ ಪಾತ್ರವನ್ನು ಸಾಮಾನ್ಯೀಕರಣಗೊಳಿಸಿ ಜನರ ಬಳಿಗೆ ಕೊಂಡೊಯ್ಯಲಾಗಿದೆ. ಚುರುಕುಬುದ್ಧಿಗೆ ಪ್ರತೀಕವಾದ ಹಲ್ಲನ್ನು ಮುರಿಯುವ ಮೂಲಕ ಜನರಿಂದ ದೂರ ಸರಿಯುತ್ತಿದ್ದ ಅತಿಬುದ್ಧಿವಂತಿಕೆಯ ಚಾಣಕ್ಯ ಪಾತ್ರವನ್ನೂ ಜನರ ಮಧ್ಯೆ ತಂದುನಿಲ್ಲಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಒಡಂಬಡಿಕೆಗೆ ಸಮರ್ಥನೆಯಾಗಿ ಚಾಣಕ್ಯನಿಗೆ ಅಂಬಲಿ ಉಣಬಡಿಸಿದ 'ಬಿರ್ದಿ'ಯ ಪ್ರಸಂಗವನ್ನು ಪ್ರಸ್ತಾಪಿಸಬಹುದು: ಚಾಣಕ್ಯ ಚಂದ್ರಗುಪ್ತರು ಶಕ್ತಿಯುತ ಸೈನ್ಯಸಮೇತ ಮಹಾಪದ್ಮನ ಮೇಲೆ ಯುದ್ಧಕ್ಕೆ ಹೋದರು. ಆದರೆ ಕಾಳಗದಲ್ಲಿ ಸೋತು ಓಡಿ ಬದುಕಿದರು. ಹಲವು ವರ್ಷ ಹೀಗೆ, ಯುದ್ಧ ಮಾಡುವುದು – ಸೋಲುವುದು ನಡೆಯಿತು. ಒಂದುಸಲ ಚಾಣಕ್ಯ ಯುದ್ಧಭೂಮಿಯಿಂದ ಓಡಿಬರಲು ದಾರಿಯಿಲ್ಲದೆ ತಾವರೆಕೆರೆಯಲ್ಲಿ ಹಗಲು ತಲೆಮರೆಸಿಕೊಂಡಿದ್ದು ಇರುಳು ಹೊರಬಂದು ಪಾಟಲೀಪುತ್ರ ಹೊಕ್ಕ ಹಸಿವಾಯಿತು. ಒಬ್ಬ ನೇಕಾರನ ಮನೆಗೆ ಹೋದ, ಅಲ್ಲಿದ್ದ ಮುದುಕಿಯೊಬ್ಬಳನ್ನು ಏನಾದರೂ ತಿನ್ನಲು ಕೇಳಿದ. ಅವಳು ಮಣೆಹಾಕಿ ಕಂಚಿನ ತಟ್ಟೆಯಿಟ್ಟು ಬಿಸಿ ಅಂಬಲಿ ಬಡಿಸಿದಳು; ಚಾಣಕ್ಯ ಹಸಿವಿನಿಂದ ಅಂಬಲಿಯನ್ನು ಬಾಯಿಗಿಟ್ಟ. ಬಿಸಿಕ್ಕೆಬಾಯಿಗೆ ತಟ್ಟಿಸುಟ್ಟಿತು. ಕೈ ಒದರುತ್ತಾ ಒದ್ದಾಡಿದ. ಮುದುಕಿ ನೋಡಿ ನಕ್ಕು "ಈ ಲೋಕದಲ್ಲಿ ಮೂವರು ಮೂರ್ಖರನ್ನು ಕಂಡೆ" ಎಂದಳು : ಚಾಣಕ್ಯ ಅವರು ಯಾರ್ಯಾರೆಂದು ಕೇಳಿದ. "ನೀನು, ನಂದ ಮತ್ತು ಚಾಣಕ್ಯ ಎಂದಳು. ಹೇಗೆ ಬಂದುದಕ್ಕೆ ಹೀಗೆ ಉತ್ತರಿಸಿದಳು. ಬುದ್ಧಿಯಿರುವಾತ ಬಿಸಿ ಅಂಬಲಿಯನ್ನು ಕಂಚಿನ ಅಂಚಿನಿಂದ ಕಿರಿಕಿರಿದಾಗಿ ಆರಿಸುತ್ತಾ ಉಣ್ಣುತ್ತಾನೆ. ನೀನು ಅಷ್ಟು ತಿಳಿಯದ ಮೂರ್ಖ ನಂದ ಮಹಾಪದ್ಮ ತಾನು ಕೊಟ್ಟ ದಾನವನ್ನು ಸಲ್ಲಿಸಲಿಲ್ಲ. ಅಲ್ಲದೆ ಸಿಟ್ಟಿಗೆದ್ದು ಹೋಗುತ್ತಿದ್ದ ಚಾಣಕ್ಯನನ್ನು ಅಂದೇ ಕೊಲ್ಲದೆ ಬಿಟ್ಟ. ಆದ್ದರಿಂದ ಅವನೊಬ್ಬ ಮೂರ್ಖ, ಚಾಣಕ್ಯ ಮತ್ತೊಬ್ಬ ಮೂರ್ಖ, ಹೇಗೆಂದರೆ ಆತನಿಗೆ

ತನ್ನ ಕೋಪವೊಂದೇ ಗೊತ್ತು. ಆದರೆ ಕೆಲಸ ಕ್ರಮ ಅರಿಯ ಮೂಲತಂತ್ರ ಬಲ್ಲ ಕ್ಷತ್ರಿಯ ಬಲ್ಲ. ಕ್ಷತ್ರಿಯರ ಜೊತೆ ಯುದ್ಧಮಾಡುವುದು ಗೊತ್ತಿದ್ದರೂ ಬುದ್ಧಿಯಿಲ್ಲ. ಬುದ್ಧಿಯಿದ್ದರೆ ತನ್ನ ಹಗೆಯ ನಾಡನ್ನು ಕೆಡಿಸಿ ಪ್ರತಿಪಕ್ಷಗಳನ್ನು ತನ್ನ ಪಕ್ಷಕ್ಕೆ ತಂದುಕೊಂಡು ಸಾಮಂತರನ್ನು ಹಣದಿಂದ (ಲಂಚಕೊಟ್ಟು) ಭೇದಿಸುವುದು ಮಾಡುತ್ತಿದ್ದ. ಇಷ್ಟು ಮಾಡಿದರೆ ಮಹಾಪದ್ಮ ಒಬ್ಬನೇ ಉಳಿಯುತ್ತಾನೆ. ಆಗ ಅವನನ್ನು ಸೋಲಿಸುವುದು ಸುಲಭ." ಇದನ್ನು ಕೇಳಿದ ಚಾಣಕ್ಯ ಸಂತಸಗೊಂಡು ಅಲ್ಲಿಂದ ಶ್ರೀಪರ್ವಕ್ಕೆ ಓಡಿದ.

ಮುಂದಿನ ಸಲ ಅಜ್ಜಿ ಹೇಳಿದ ಮಾದರಿಯ ಮಾರ್ಗವನ್ನೇ ಮುಂದುಮಾಡಿದ. ಮಹಾಪದ್ಮ ಸೋತು ಓಡಿದ ಸುಬಂಧು ಸೆರೆಯಾದ. ಚಾಣಕ್ಯ ಗೆಲುವಿನಿಂದ, ಪಾಟಲೀಪುತ್ರವನ್ನು ಪ್ರವೇಶಿಸಿದ. ಕನ್ನೆಮಾಡಕ್ಕೂ ಭಂಡಾರಕ್ಕೂ ಕಾವಲಿಟ್ಟು, ಪ್ರಜೆಗಳನ್ನುಸಮಾಧಾನಪಡಿಸಿ, ಚಂದ್ರಭಕ್ತನಿಗೆ ಪಟ್ಟಕಟ್ಟಿದ. ನಂದವಂಶ ನಿರ್ಮೂಲನ ಪ್ರತಿಜ್ಞೆ ನೆರವೇರಿತು. ತಮಟೆ ಹೊಡೆಸುವ ಮೂಲಕ ವಿಜಯೋತ್ಸವವನ್ನು ಆಚರಿಸಿ ತನ್ನ ಹೆಂಡತಿಯನ್ನು ಕರೆಸಿಕೊಂಡು ಸುಖವಾಗಿದ್ದ. ಮೊದಲು ಉಲ್ಲೇಖಿಸಿದ ಪ್ರಸಂಗದಂತೆಯೇ ಇಲ್ಲಿಯೂ ಚಾಣಕ್ಯನ ಮೇಲೆ ಚೆಲ್ಲಿಬರುವ ಬೆಳಕು ಜಾನಪದ ಲೋಕದ್ದೇ. ಶಿಷ್ಟ ಶಾಸ್ತ್ರಾಗಮಗಳು ಕಲಿಕೆ ಅವನ ಸಂಕಷ್ಟ ಸಮಯಕ್ಕೆ ನೆರವಾಗಲಿಲ್ಲ. ತಾನೇ ಬುದ್ಧಿವಂತನೆಂದು ಮೆರೆಯುತ್ತಿದ್ದ ಅವನ ಸೊಕ್ಕನ್ನು ಅಂಬಲಿ ಉಣಬಡಿಸಿದ ಅಜ್ಜಿ ನಗುನಗುತ್ತಾ ಇಳಿಸಿ ಯುದ್ಧೋಪಾಯಗಳನ್ನು ಹೇಳಿಕೊಟ್ಟಳು, (ಅವನೇ ಚಾಣಕ್ಯನೆಂಬುದು ಆಕೆಗೆ ಗೊತ್ತಿಲ್ಲದೆ ಇರುವ ಕಥೆಯ ತಂತ್ರ ಮನೋಜ್ಞವಾಗಿದೆ) ಉಣಲಿಟ್ಟು ಮುಂದಿನ ಬಾಳಿಗೆ ಬುತ್ತಿ ಕಟ್ಟಿಕೊಡುವ ಅಡುಗೂಲಜ್ಜಿಯರ ಕಥೆಗಳು ಕನ್ನಡ ಜಾನಪದದಲ್ಲಿ ಯಥೇಚ್ಛ. 'ಕುರಿತೋದದ ಚದುರಮತಿ' ಅವಳು. ದಾರಿ ಹೋಕ ಬಡವರು ಸಿರಿವಂತರು ಯಾರೇ ಇರಲಿ ಅವರೆಲ್ಲರು ಅವಳಲ್ಲಿಗೆ ಬಂದು ತಂಗಿದ್ದು ಉಂಡು ಮುಂದೆ ನಡೆವರು. ಅಲ್ಲದೆ ಅವಳಲ್ಲಿ ತಮ್ಮ ಕಷ್ಟಸುಖಗಳನ್ನು ಹಂಚಿಕೊಳ್ಳುವರು. ಮುಖಾವಲೋಕನ ಮಾತ್ರದಿಂದಲೇ ಅವರವರ ಭೂತ ಭವಿಷ್ಯವನ್ನು ಓದುವ ದೀರ್ಘಾನುಭವ ಅವಳಿಗಿತ್ತು. ಇಂಥ ಅಜ್ಜಿಯಿಂದ ಚಾಣಕ್ಯ ಕಲಿತನೆಂಬುದರಲ್ಲಿ ಜೈನ ಧರ್ಮದ ವಿನಮ್ರತೆಯೆ ಎದ್ದು ಕಾಣುತ್ತದೆ. ಆಕೆಯ ಬುದ್ಧಿಯ ಫಲಾನುಭವಿಯಾದ ಈತ.

ತಾನೇ ಸರ್ವಜ್ಞನೆಂಬ ಅವನ ಅಹಮಿಕೆಯನ್ನು ಈ ಅಜ್ಜಿಯ ಪಾತ್ರಕ್ಕೆ ಮುಖಾ ಮುಖಿಮಾಡಿ ವಾಸ್ತವಾನುಭವದ ನಿಕಷದ ಮೇಲೆ ಉಜ್ಜಿ ನೋಡಲಾಗಿದೆ. ಹೀಗೆ ಶಿಶುವಿನ ಹಲ್ಲು ಉಜ್ಜಿ ಕೀಳಿಸಿ ಸಮಗೊಳಿಸುವ ಹಾಗೂ ಅಜ್ಜಿಯಿಂದ ಛೀಮಾರಿ ಹಾಕಿಸಿಕೊಂಡು ಬುದ್ಧಿ ಕಲಿತುಕೊಳ್ಳುವ ಪ್ರಸಂಗಗಳು ಜಿನಧರ್ಮದ ಜನರ ಬಳಿಗೆ ಹೋಗುವ ಆಶಯಕ್ಕೆ ಉಚಿತವಾಗಿವೆ. ವಿಶ್ವವಿದ್ಯಾಲಯಗಳಲ್ಲಿ ಶಾಸ್ತ್ರಾದಿಗಳಿಂದ

ಕಲಿತ ವಿದ್ಯೆಗಿಂತ ಜನತಾ ವಿದ್ಯಾಲಯಗಳಲ್ಲಿ ಜನತೆಯ ಮಧ್ಯೆ ಕಲಿತ ಜ್ಞಾನ ಮಹತ್ವದ್ದು ಎಂಬುದನ್ನು ಪ್ರತಿಪಾದಿಸಲಾಗಿದೆ. (ಚೀನಾ ದೇಶದ ಕನ್‌ಫ್ಯೂಷಿಯಸ್‌ನ ಕಲಿಕೆ ಮತ್ತು ಆತ ಕಲಿಸಿದ ರೀತಿಯೂ ಹೀಗೆ ಇತ್ತು.) ಅಜ್ಜಿಯ ಪ್ರಸಂಗ ಇದನ್ನು ಮಾರ್ಮಿಕವಾಗಿ ತಿಳಿಸುತ್ತದೆ. ಆಕೆಯ ಅನುಭವ ಗ್ರಹಿಕೆಯೊಂದಿಗೆ ಈತ ಕಲಿತ ಜ್ಞಾನ ಪರಿಸ್ಫುಟವಾಗಿ ಮುಂದೆ ಫಲಪ್ರದವಾಗುತ್ತದೆ. ಬೌದ್ಧಿಕ ಪ್ರತಿಭಾಗ್ನಿಯಿಂದ ಉಲ್ಕಾಪಾತದಂತೆ ಉರಿದು ಬೀಳುತ್ತಿದ್ದ ಚಾಣಕ್ಯ ಪರಂಪರೆಯನ್ನು ಜಾನಪದ ನಿರ್ಮಲ ತಂಗಾಳಿಗೆ ಒಡ್ಡಿ ಸಂತಸಗೊಳಿಸಲಾಗಿದೆ. ತನ್ನ ಕನ್ಯೆಗೆ ಎದುರಿಲ್ಲ ತನ್ನ ಬುದ್ಧಿಗೆ ಸೋಲಿಲ್ಲ; ತನ್ನ ಶಕ್ತಿಗೆ ಮಿಗಿಲಿಲ್ಲ ಎಂದು ಬೀಗುತ್ತಿದ್ದ ಚಾಣಕ್ಯನ ಸೊಕ್ಕನ್ನು ಇಳಿಸಿ ತನ್ನಲ್ಲಿಗೆ ಬರಮಾಡಿಕೊಂಡ ಜೈನವಾಙ್ಮಯ ಅಹಿಂಸಾತ್ಮಕವಾಗಿ ಆ ದೈತ್ಯಶಕ್ತಿಯನ್ನು ಪಳಗಿಸಿದೆ ಇಂತು. ಈ ರೀತಿ ಚಾಣಕ್ಯ ಎಲ್ಲರೊಳಗೊಂದು ನುಡಿ ಕಲಿತು ಜ್ಞಾನದ ಪರ್ವತವೇ ಆದನೆಂಬುದಕ್ಕೆ ವಡ್ಡಾರಾಧನೆಯ ಕಥೆಯಿಂದ ಇನ್ನೂ ಒಂದೆರಡು ಪ್ರಸಂಗಗಳನ್ನು ಉಲ್ಲೇಖಿಸಬಹುದು. ಹಿಂದೆ ಸುಬಂಧು ಎಂಬ ಮಂತ್ರಿ (ಚಾಣಕ್ಯನ ಹೆಂಡತಿಯ ಅಕ್ಕನ ಗಂಡ) ಚಾಣಕ್ಯ ಬಡತನದಲ್ಲಿದ್ದಾಗ ಅವನು ತನ್ನ ಮಗಳ 'ಚೋಳಂಗಿ'ಯಂದು ಬೇರೆಯವರಿಗೆ ದಿವ್ಯಾಹಾರಗಳನ್ನು ನೀಡಿ, ಚಾಣಕ್ಯ ದಂಪತಿಗಳಿಗೆ ತುಸು ಅನ್ನದ ಗಂಜಿಯನ್ನು ಮಾತ್ರ ಕಳುಹಿಸಿದ್ದ "ಬಡತನಕ್ಕಿಂತ ಮಹಾಪಾಕ ಇನ್ನೊಂದಿಲ್ಲ. ಹರಕು ಬಟ್ಟೆಯವರನ್ನು ಯಾರೂ ಹತ್ತಿರ ಸೇರಿಸುವುದಿಲ್ಲ ಎಂಬ ಲೋಕಸತ್ಯ ಅಗ ಅವನ ಅರಿವಿಗೆ ಬಂತು. ಹಾಗಾದರೆ ಅದಕ್ಕೆ ಪರಿಹಾರವೇನು ಎಂದರೆ ದ್ರವ್ಯ ಸಂಪಾದನೆ. ಆದರೆ ಅದು ಅಷ್ಟು ಸುಲಭದ ಮಾತಲ್ಲವಲ್ಲ. ಅದಕ್ಕೆ ಮನುಷ್ಯ ಪ್ರಯತ್ನಬೇಕು. ಹಾಗಾಗಿ ಅವನು ಶ್ರೀಪರ್ವತಕ್ಕೆ ಹೋಗಿ ಹೊನ್ನಿನ ಅನ್ವೇಷಣೆಗೆ ತೊಡಗಿದ. ಅಲ್ಲಿ ಅಲೆಯುತ್ತಿದ್ದಾಗ ಒಂದು ರಸಬಾವಿ ಕಣ್ಣಿಗೆ ಬಿತ್ತು. ಆದರಲ್ಲಿ ಒಬ್ಬ ರಸವಾದಿ ಇದ್ದ. ಅವನನ್ನು ಮೇಲೆತ್ತಿ ಆತನಿಂದ ಹೊನ್ನು ಮಾಡುವ ಕಲೆಯನ್ನು ತಿಳಿದುಕೊಂಡ. ಆದರೆ ಅವನ ಆಶೆ ಅತಿಯಾಯಿತು. ಅದರ ಫಲವಾಗಿ ದ್ರವ್ಯ ಸಂಪಾದನೆಗೆಂದು ಆತ ಅಪಮಾರ್ಗವನ್ನು ಹಿಡಿಯಬೇಕಾಯಿತು. ಒಂದು ಹೇರು ಮಣ್ಣನ್ನು ಶ್ರೀಪರ್ವತಕ್ಕೆ ತಂದು ಹಾಕಿದವರಿಗೆ ಅಷ್ಟೇ ತೂಕದ ಹೊನ್ನು ಮಾಡಿಕೊಡುವುದಾಗಿ ಸಾರಿಸಿದ. ಹೇರು ತಂದ ಒಬ್ಬ ರೈತನಿಗೆ ವಚನಕೊಟ್ಟಂತೆ ಮಾಡಿಕೊಟ್ಟ. ಅದು ಕಂಡು ನಾಡಿನ ರೈತರೆಲ್ಲ ಹೇರು ಮಣ್ಣು ತಂದು ಹೊನ್ನು ಮಾಡಿಕೊಡಲು ಕೇಳಿಕೊಂಡರು. ಚಾಣಕ್ಯ 'ನನಗೆ ಒಂದೇಹೇರು ಮಣ್ಣು ಬೇಕಿತ್ತು. ನಿಮಗೆಲ್ಲಾ ಯಾರು ಮಣ್ಣು ತರಲು ಯಾರು ಹೇಳಿದರು.' ಎಂದು ತನ್ನ ವಚನಕ್ಕೆ ತಪ್ಪಿದ. ಅವರೆಲ್ಲ ಹೆಚ್ಚಾಗಿ ಮಣ್ಣಿನ ಹೇರುಗಳನ್ನು ಅಲ್ಲಿಯೇ ಬಿಟ್ಟು ಹೋದರು. ಆ ರಾಶಿಮಣ್ಣಿನಿಂದ ಚಾಣಕ್ಯ ಕೋಟೆ. ಪಟ್ಟಣ ಕಟ್ಟಿದ. ಇಂಥದೇ ಇನ್ನೊಂದು ಅಪಮಾರ್ಗವನ್ನು ಪಾಟಲೀಪುತ್ರವನ್ನುಗೆದ್ದ ವಿಜಯೋತ್ಸಾಹದ ಆಚರಣೆಯ ಸಂದರ್ಭದಲ್ಲಿ ಕಾಣಬಹುದು. ಧನಿಕರನ್ನು ಆಹ್ವಾನಿಸಿ ಅವರಿಗೆ ಮತ್ತು

ಬರುವಂತೆ ಕುಡಿಸಿ, ಅವರಲ್ಲಿ ಸಂಗ್ರಹವಾಗಿರುವ ದ್ರವ್ಯ ಎಲ್ಲಿದೆಯೆಂದು ಅವರಿಂದಲೇ ಕೇಳಿ ತಿಳಿದು ನಂತರ ಎಲ್ಲವನ್ನು ತಂದು ಚಂದ್ರಭುಕ್ತನ ಭಂಡಾರಕ್ಕೆ ತುಂಬುತ್ತಾನೆ. ಹೀಗೆ ಕೆಲವು ಅಪಮಾರ್ಗಗಳಿಂದಲೂ ಚಾಣಕ್ಯ ದ್ರವ್ಯ ಸಂಪಾದನೆ ಮಾಡಿದನೆಂಬುದನ್ನು ಹೇಳುವ ಮೂಲಕ ಕಥೆಗಾರ ಆತನೂ ಒಬ್ಬ ಮನುಷ್ಯ ಮಾತ್ರದವ ಏನಾಗಿದ್ದಾನೆಂಬುದನ್ನು ಮರೆಯದಂತೆ ನೋಡಿಕೊಂಡಿದ್ದಾನೆ. ಲೌಕಿಕ ವಿಚಾರಗಳೇ ಸಾರಸರ್ವಸ್ವವೆಂಬ ಪೌರುಷ ಪ್ರಯತ್ನದಲ್ಲಿದ್ದ ಚಾಣಕ್ಯ ತನ್ನ ಪ್ರತಿಜ್ಞೆಯಂತೆ ಚಂದ್ರಭುಕ್ತನನ್ನು ಮಗಧ ರಾಜ್ಯಕ್ಕೆ ಅರಸನನ್ನಾಗಿ ಮಾಡಿದಮೇಲೆ ಕೆಲವು ಕಾಲ ತನ್ನ ಪತ್ನಿಯೊಂದಿಗೆ ಸುಖವಾಗಿದ್ದನು. ಆದರೆ ಅಲ್ಲಿಯೂ ಭ್ರಮನಿರಸನವಾಯಿತು. ಕೆಲ ಕಾಲಾನಂತರ ಅವನಿಗೆ ಸಂಸಾರ, ಶರೀರ, ಭೋಗಗಳಲ್ಲಿ ವಿರಕ್ತಿಯುಂಟಾಗಿ ತಪಸ್ಸು ಮಾಡಬೇಕೆನ್ನಿಸಿತು. ಮನುಷ್ಯ ದೌರ್ಬಲ್ಯಗಳನ್ನು ಗೆಲ್ಲಲು ನಿರ್ಧರಿಸಿದ. ಒಡನೆಯೆ ಸರ್ವಸಂಗ ಪರಿತ್ಯಾಗ ಮಾಡಿ ಆಚಾರ್ಯರ ಬಳಿ ಹೋಗಿ ದೀಕ್ಷೆ ಪಡೆದು ಉಗ್ರೋಗ್ರ ತಪಶ್ಚಾರಣ ಮಾಡಲು ಹೊರಟು ಹೋದ. ಕೊನೆಯಲ್ಲಿ ಆತ 'ಇಂಗಿನೀಮರಣ' ಪೂರ್ವಕವಾಗಿ ದೇಹತ್ಯಾಗಕ್ಕೆ ನಿಂತ ಸ್ಥಳದಲ್ಲಿ ಪೂರ್ವ ವೈರವನ್ನು ನೆನೆದ ಸುಬಂಧು ಚಾಣಕ್ಯ ರಿಸಿಯ ಸುತ್ತ ಬೆರಣಿ ಒಟ್ಟಿಸಿ ಬೆಂಕಿ ಹಚ್ಚಿಸಿಬಿಡುತ್ತಾನೆ. ಹಾಗೆ ತನ್ನಷ್ಟು ಸುಡಿಸಿದರೂ ಆತ ಕ್ಷಮೆಯನ್ನು ಭಾವಿಸುತ್ತಿರುತ್ತಾನೆ. ಹೀಗೆ ಚಾಣಕ್ಯನ ಪಾತ್ರ ಕ್ರಮಕ್ರಮವಾಗಿ ಬೆಳೆದು ನಿಲ್ಲುತ್ತದೆ. ಜೈನೇತರ ವಾಙ್ಮಯದಲ್ಲಿದ್ದಂತೆ ಚಾಣಕ್ಯ ಒಮ್ಮೆಗೆ ಸಿದ್ಧ ಪಾತ್ರವಾಗಿ ಕಾಣಿಸುವುದಿಲ್ಲ. ಕಲಿಕೆಯೆಂಬುದು ಮೇಲಿನಿಂದ ಕೆಳಕ್ಕೆ ಇಳಿದು ಬರುವುದಷ್ಟೇ ಅಲ್ಲ ; ಕೆಳಗಿನಿಂದಲೂ ಅಂತರ್ಜಲದಂತೆ ಉಕ್ಕಿ ಹರಿಯಬಲ್ಲದು ಎಂಬುದನ್ನು ಚಾಣಕ್ಯರಿಸಿಯ ಕಥೆಯ ಮೂಲಕ ಮನವರಿಕೆ ಮಾಡಲಾಗಿದೆ. ಪರಂಪರೆಯನ್ನು ಗೌರವಪೂರ್ವಕವಾಗಿ ಮುರಿದು ಪ್ರಗತಿಯತ್ತ ಹೆಜ್ಜೆಯಿಟ್ಟ ಜಿನಧರ್ಮದ ಆಶಯಗಳಿಗೆ ಚಾಣಕ್ಯರಿಸಿಯ ಕಥೆ ಉಚಿತ ಲಕ್ಷ್ಯವಾಗಿದೆ. ಜಾನಪದ ಸತ್ವವನ್ನು ಹೀರಿ ಬೆಳೆದ ವಡ್ಡಾರಾಧನೆಯ ಕಥೆಗಳು ಹೀಗೆ ಮುಟ್ಟಿದರೆ ರಸದ ತೊಟ್ಟಿಳಿಸುವ ಹಾಲು-ಕೆಚ್ಚಲಿನಂತಿವೆ. ಮಾರ್ಗದೇಸಿಗಳನ್ನು ಬೆಸೆದ ಪಂಪನಿಗೆ ಇವು ಮಾದರಿ ಎನಿಸಿರಬೇಕು.

ಚಾಣಕ್ಯರಿಸಿಯ ಕಥೆಯನ್ನು ಈ ಹಿನ್ನೆಲೆಯಿಂದ ಪರಿಶೀಲಿಸಿದರೆ ಚಾಣಕ್ಯನೆಂಬ ವ್ಯಕ್ತಿ ಜೈನ ಧರ್ಮದಲ್ಲಿ ಹುಟ್ಟದಿದ್ದರೂ ಏನಂತೆ. ಸಾಂಸ್ಕೃತಿಕವಾಗಿ ಅವನನ್ನು ತನ್ನವನನ್ನಾಗಿ ಅದು ಮಾಡಿಕೊಂಡಿದೆ. ಜೈನೇತರ ಪರಂಪರೆಯಿಂದ ಅವನನ್ನು ಬಿಡಿಸಿ ಜೈನ ಪರಂಪರೆಗೆ ಕಸಿಗೊಳಿಸಿಕೊಂಡಿದೆ. ಚಾಣಕ್ಯರಿಸಿಯ ಕಥೆಯ ಕಥಾರೂಪಕಗಳನ್ನು ಒಡೆದು ನೋಡಿದರೆ ಆತನ ಹುಟ್ಟಿನ ಬಗ್ಗೆ ತಡಕಾಟವೇ ಅನಗತ್ಯವೆನಿಸುತ್ತದೆ. ಪ್ರಥಮತಃ ಚಾಣಕ್ಯನು ಕನ್ನಡ ದೇಶೀಯನೂ ಜೈನಧರ್ಮೀಯನೂ ತನ್ಮೂಲಕ ಅಖಂಡ ಭರತಖಂಡಕ್ಕೆ ಸೇರಲ್ಪಟ್ಟವನೂ ಆಗಿದ್ದಾನೆ. ಸಮಾಧಾನಕ್ಕಾಗಿ ಹೇಳುವುದಾದರೆ ಬ್ರಾಹ್ಮಣ್ಯದಲ್ಲಿ ಹುಟ್ಟಿದ ಬಸವಣ್ಣ ವೀರಶೈವಕ್ಕೆ ಶರಣಾದಂತೆ ಚಾಣಕ್ಯನೂ ಬ್ರಾಹ್ಮಣನಾಗಿ ಹುಟ್ಟಿ ಜಿನಧರ್ಮವನ್ನು ಸ್ವೀಕರಿಸಿದನೆಂದು ಹೇಳಬಹುದು. ಆತನ

ಮೂಲಕ ಒಂದು ಪರಂಪರೆಯನ್ನು ಇತ್ತ ಸೆಳೆಯಲಾಯಿತು. ಆದರೆ ಜೈನವಾಙ್ಮಯವು ಇದನ್ನು ವಾಚ್ಯ ಮಾಡದೆ ರೂಪಕ ವಿಧಾನವನ್ನು ಅನುಸರಿಸುವುದು ಮೆಚ್ಚತಕ್ಕದ್ದಾಗಿದೆ.

ಕೊನೆಯದಾಗಿ ಮತ್ತೊಂದು ಮಾತು, ಚಾಣಕ್ಯನ ಹಲ್ಲು ಮುರಿದ ಹಾಗೂ ಅಜ್ಜಿಯು ಅಂಬಲಿ ನೀಡಿದ ಪ್ರಸಂಗಗಳು ವೈದಿಕ ಭಾಷಾ ಸಂಸ್ಕೃತಿಯ ಜ್ಞಾನಪರಂಪರೆಯನ್ನು ಅದಕ್ಕೆ ಸಮಾನಾಂತರವಾಗಿರುವ ದೇಶ ಭಾಷಾ ಸಂಸ್ಕೃತಿ ಜ್ಞಾನಪರಂಪರೆಗೆ ತಗುಳ್ಚಿ ಎರಡನ್ನು ಸಮನ್ವಯಗೊಳಿಸುವ ಪ್ರಕ್ರಿಯೆಗಳಾಗಿ ಕಂಡುಬರುತ್ತವೆ. ಮಹಾಕಾವ್ಯಗಳ ಶಿಷ್ಟ ಪರಂಪರೆಯೊಂದಿಗೆ ಜನಪದ ಮಹಾಕಾವ್ಯಗಳ ಪರಂಪರೆಯೊಂದು ಉಂಟಲ್ಲವೆ ? ಹಾಗೆಯೇ ಚಾಣಕ್ಯನ ಬಗ್ಗೆ ಜಾನಪದ ಪರಂಪರೆಯೊಂದಿರುವುದನ್ನು ವಡ್ಡಾರಾಧನೆಯ ಕಥೆಯಿಂದ ಅರಿಯಬಹುದಾಗಿದೆ. ಪೂರ್ವಸೂರಿಗಳು ಚಾಣಕ್ಯನ ಬಗ್ಗೆ ಗ್ರಹಿಸಿದ ಜ್ಞಾನವನ್ನು ವಡ್ಡಾರಾಧನೆಯ ಕರ್ತೃ ಕನ್ನಡ ಭಾಷಾ ಮಾಧ್ಯಮದಲ್ಲಿ ಹೇಳಿ ದೇಶೀ ಪರಂಪರೆಯ ಬಗ್ಗೆ ಅಭಿಮಾನವನ್ನು ತನ್ನ ಸೋಪಜ್ಞತೆಯನ್ನು ಮೆರೆದಿದ್ದಾನೆ. ಈ ದೃಷ್ಟಿಯಿಂದ ವಡ್ಡಾರಾಧನೆಯ ಕಥೆಗಾರ ಕನ್ನಡ ದೇಶೀ ಸಂಸ್ಕೃತಿಯ ಹರಿಕಾರ.

ಸಂಜೆ ಮಬ್ಬಿನ ನಡುವೆ

ಶಾಂತಲಕ್ಷ್ಮಿ

ಬದುಕಿನ ಹಂದರವ ನಿರ್ಮಿಸುತ್ತಲೇ
ಪರಕೀಯನಾಗಿಯೆ ಕರಗಿದ ನನ್ನೀ ಕಥೆ
ನನ್ನೊಬ್ಬನದಲ್ಲ.
ಸಂಜೆ ಮಬ್ಬಿನಲಿ ಈಗ ಹಿನ್ನೆಲೆಯ ಅಲೆಗಳು
ಮತ್ತೆ ಮತ್ತೆ ಹುಟ್ಟಿ ಅಳಿಯುತ್ತಾ
ಬಣ್ಣಗಳು ಕರಗಿ ಸುಕ್ಕು ಮೂಡುವ ಕಾಲ.
ಸಾವಿನ ಹೊಸ್ತಿಲಲಿ ಕೂತಿರುವ ನನಗೋ
ನಿರಂತರ ಪಯಣಕ್ಕಾಗಿ
ತೆರೆದ, ಕೊನೆಯಿರದ ಇನ್ನಷ್ಟು ದಾರಿಗಳು !

ಹಿಂದೆಲ್ಲ ಅದೆಂಥ ಕಾಲ !
ಪ್ರತಿವರ್ಷದ ಬೆಚ್ಚನೆಯ ಚಳಿಗಾಲದ ತುಂಬ
ವಸಂತದ ಹೊಂಗನಸು !
ಗಾಳಿ ತುಂಬ ಹಕ್ಕಿಗಳ ಹಾಡು,
ಹಿತವಾದ ಸಂಜೆಗಳು !
ಸಣ್ಣಗಿಡದ ಮೇಲೆ ಕುಳಿತಿದ್ದ
ಈ ಹಕ್ಕಿಗೆ
ಆಕಾಶಕ್ಕೇರಿದ್ದೇನೆಂಬ ಹಮ್ಮಿತ್ತು !

ಈಗ ಕನಸೆಲ್ಲ ಒಡೆದು
ಹಂದರದ ತುಂಬ ತುಕ್ಕು ಹಿಡಿದ ಸರಪಳಿಗಳು
ಆಷಾಢದ ಗಾಳಿಯ ನಡುವೆ ನಿಸರ್ಗದ ಕಣ್ಣುಮುಚ್ಚಾಲೆ.
ಹಸಿದ ಹೆಬ್ಬುಲಿಯಂತೆ ವೈಶಾಖದ ಛಟ್ಟಿ.
ಒಣಗಿ ಹೆಕ್ಕಳಿಕೆಯಾದ ಕಂಗಳಲೀಗ ಯಾವ ಸೂರ್ಯನೂ ಇಲ್ಲ !

ಸುತ್ತಲೂ ನನ್ನಂತೆಯೇ ಕುರಿಮರಿಯಹಾಗಿ
ಸಾಗುವ ಬೇರುಕಿತ್ತ, ಜೀವವಿರದ ಮುಖಗಳು
ಆಸೆಗೆ ಸಾವಿರ ನಾಲಗೆಯಿದ್ದರೂ
ಹೇಳಲಾಗದ ಕಥೆಗಳು, ವ್ಯಥೆಗಳು, ನೆನಪಿನ ಭೂತಗಳು ;
ರಬ್ಬರಿನಿಂದ ಉಜ್ಜಿ ಅಳಿಸಲಾಗದ ಅಸಂಗತಗಳು.
ಎಡವಿ ಬಿದ್ದರೂ,
ಸರಕು ಹೇರಿದ ಒಡನಕೆಯಂತೆ
ಸಾಗುತ್ತಿದ್ದೇನೆ.

ತತ್ವಪದಗಳಲ್ಲಿ ಅನುಭಾವ : ಒಂದು ವಿವೇಚನೆ

ಡಾ. ವ್ಹಿ. ಜಿ. ಪೂಜಾರ

ಶರಣರ ವಚನಗಳಂತೆ ಹರಿದಾಸರ ಕೀರ್ತನೆಗಳಂತೆ ಅನುಭಾವಿ ಕವಿಗಳ ತತ್ವ ಪದಗಳು ಕನ್ನಡದಲ್ಲಿ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿವೆ. ವಚನಗಳು ಕೀರ್ತನೆಗಳು ನಿತ್ಯದ ಜನರಾಡುವ ಭಾಷೆಯಲ್ಲಿಯೇ ರಚನೆಗೊಂಡಂತೆ ಇವೂ ಸರಳವಾದ ಭಾಷೆಯಲ್ಲಿ ರಚನೆಗೊಂಡಂಥವು. ಈ ಮೂರೂ ಸಾಹಿತ್ಯ ಪ್ರಕಾರಗಳು ಜನಸಮ್ಮುಖಿ ಧೋರಣೆಗಳನ್ನು ಒಳಗೊಂಡರೂ ಇವುಗಳ ಒಳ ಹೂರಣ ಅಧ್ಯಾತ್ಮವೇ ಆಗಿದೆ. ತತ್ವಪದಗಳಲ್ಲಂತೂ ಪರಮಾತ್ಮನ ಬಗೆಗೆ ಭಕ್ತತಾಳಿದ ಭಕ್ತಿ, ಶ್ರದ್ಧೆ, ಚಿಂತನೆ, ಧ್ಯಾನಾದಿ ಆಧ್ಯಾತ್ಮಿಕ ಅನುಭಾವ ಬಗೆಬಗೆಯಾಗಿ ಜನಸಾಮಾನ್ಯರಿಗೆ ತಿಳಿಯುವಂತೆ ವರ್ಣಿತಗೊಂಡುದನ್ನು ಕಾಣುವೆವು. ಪರಮಾತ್ಮನ ಬಗೆಗಿನ ಅನುಭವ ಈ ಪದಗಳಲ್ಲಿ ವ್ಯಕ್ತಗೊಂಡುದರಿಂದ ಇವಡಕ್ಕೆ ಅನುಭಾವ ಪದಗಳೆಂದೂ. ಇವನ್ನು ಏಕತಾರಿಯಂತಹ ವಾದ್ಯದೊಂದಿಗೆ ಸ್ವರವೆತ್ತಿ ಹಾಡುವುದರಿಂದ ಇವಕ್ಕೆ ಸ್ವರವಚನ ಗಳೆಂದೂ, ಅಂತರಂಗದ ಅರಿವಿನ ಮೂಲಭೂತ ತತ್ವಗಳನ್ನು ಆಧ್ಯಾತ್ಮಿಕ ತತ್ವಗಳನ್ನು ಇವು ಒಳಗೊಂಡುದರಿಂದ ಇವಕ್ಕೆ ತತ್ವಪದಗಳೆಂದೂ, ಇವನ್ನು ಜನಸಾಮಾನ್ಯರು ಭಜನಾ ಸಂದರ್ಭದಲ್ಲಿ ಹಾಡುವುದರಿಂದ ಇವಕ್ಕೆ ಭಜನೆಯ ಹಾಡುಗಳೆಂದೂ ಕರೆಯುವುದುಂಟು. ಒಟ್ಟಿನಲ್ಲಿ ಇವು ಪರಮಾತ್ಮನ ಸ್ವರೂಪವನ್ನು ಅರಿಯಲು ಸಹಾಯಕವಾಗುವಂಥವು. ಭಕ್ತಿ ಸಾಧನೆಯಲ್ಲಿ ತೊಡಗಿದ ಜೀವಾತ್ಮನ ಅಂತರಂಗದ ಕರೆಯೇ ಇವುಗಳ ವಸ್ತು. ಭಕ್ತನ ಆತ್ಮಾನುಭವಕ್ಕೆ ಇವು ಸಂಬಂಧಿಸಿದುದರಿಂದ ಇವಕ್ಕೆ ಕೈವಲ್ಯಪದಗಳೆಂದೂ ಕರೆದಿದ್ದಾರೆ. ಇವನ್ನು ಕಟ್ಟಿ ಹಾಡಿದವರು ಶರಣ ಮಾರ್ಗಾವಲಂಬಿಗಳಾದ ಅನುಭಾವಿ ಕವಿಗಳು, ಮಠಾಧಿಪತಿಗಳು ಹಾಗೂ ಸಾಧು ಸಂತರು. ಕನ್ನಡದಲ್ಲಿ ಮೊಟ್ಟ ಮೊದಲು ಈ ಬಗೆಯ ಪದಗಳನ್ನು ಹನ್ನೆರಡನೇ ಶತಮಾನದ ಬಸವಾದಿ ಶರಣರೇ ಬರೆದವರಾದರೂ ಅವರ ವಚನಗಳು ಪ್ರಚಾರಕ್ಕೆ ಬಂದಷ್ಟು ಇವು ಬರಲಿಲ್ಲ. ಬಹುಶಃ ಇದಕ್ಕೆ ಕಾರಣ ಇವು ತತ್ವ ಜಡತ್ವಗೊಂಡುದೂ ಹಾಗೂ ಗೇಯತಾಂಶವನ್ನು ಒಳಗೊಳ್ಳದೆ ಇರುವುದೂ ಆದಂತಿದೆ. ಮುಂದೆ 15ನೇ ಶತಮಾನದ ನಿಜಗುಣ ಶಿವಯೋಗಿ ಈ ಬಗೆಯ ಪದಗಳನ್ನು ಬರೆದು ಈ ಪದಗಳ ಪ್ರಕಾರಕ್ಕೆ ಆದ್ಯನೆನ್ನಿಸಿದ. ಈತನ ತರುವಾಯ 19ನೇ ಶತಮಾನದವರೆಗೂ ಅನೇಕ ಅನುಭಾವಿ ಕವಿಗಳು ಗಹನವಾದ ಆಧ್ಯಾತ್ಮತತ್ವಗಳು ಜನತೆಗೆ ಸುಲಭವಾಗಿ ತಿಳಿಯುವಂತೆ ಅವರ ನಿತ್ಯದ ಅನುಭವಕ್ಕೆ ಬರುವ ವ್ಯಕ್ತಿ,

ವಸ್ತು, ಪ್ರಾಣಿ ಹಾಗೂ ಪಕ್ಷಿಗಳ ಸಂಕೇತಗಳನ್ನು ಬಳಸಿ ಇವನ್ನು ರಚಿಸುತ್ತ ಬಂದುದನ್ನು ಅರಿಯುವೆವು. ಈ ಪದಗಳು ಜನತೆಯು ನಿತ್ಯದ ಜೀವನ ವಿವರಗಳನ್ನೇ ಮೇಲ್ನೋಟಕ್ಕೆ ಒಳಗೊಂಡಂತೆ ಕಂಡರೂ ಇವಕ್ಕೆ ಬೇರೊಂದು ಪಾರಮಾರ್ಥಿಕ ಅರ್ಥವೂ ಇರುತ್ತದೆ.

ಈ ಪದಗಳನ್ನು ರಚಿಸಿದ ನಿಜಗುಣ ಶಿವಯೋಗಿಯ ತರುವಾಯದ ಪ್ರಮುಖ ಅನುಭಾವಿ ಕವಿಗಳೆಂದರೆ ಮುಪ್ಪಿನ ಷಡಕ್ಷರಿ (1500), ಚಿದಾನಂದ ಅವಧೂತರು (1750) ರಾಮಪುರದ ಬಕ್ಕಪ್ಪಯ್ಯ (1750), ಸಾರವಾಡ ಚಿಕ್ಕಪ್ಪಯ್ಯ (1758) ಹಾಗಲ್ವಾಡಿ ಮದ್ವೀರಸ್ವಾಮಿ (1750), ಮೈಲಾರದ ಬಸವಲಿಂಗ ಶರಣರು (1780) ನಿಂಬರಗಿ ಮಹಾರಾಜರು (1750) ಶಂಕರಾನಂದರು (1780) ನೀರಲಕೇರಿ ಪಂಚಾಕ್ಷರಿ (1800) ಕೂಡಲೂರು ಬಸವಲಿಂಗ ಶರಣರು (1800) ಸರ್ಪಭೂಷಣ ಶಿವಯೋಗಿ (1825) ಬಾಲಲೀಲಾ ಮಹಾಂತ ಶಿವಯೋಗಿಗಳು (1850), ಘನಮಠ ಶಿವಯೋಗಿ (1850), ಕಡಕೋಳ ಮಡಿವಾಳಪ್ಪ, ಬೈನೂರ ಕೃಷ್ಣಪ್ಪ, ಕಡ್ಲೆವಾಡ ಸಿದ್ದಪ್ಪ, ಚೆನ್ನೂರ ಜಲಾಲ ಸಾಹೇಬ (1850), ಮೋಟನಹಳ್ಳಿ ಹಸನ ಸಾಹೇಬ (1840), ಶಿಶುನಾಳ ಷರೀಪ (1850) ಮುಂತಾದವರು. ಇವರೆಲ್ಲರ ತತ್ವಪದಗಳಲ್ಲಿ ಭಕ್ತಿ ಜ್ಞಾನ, ವೈರಾಗ್ಯ ಜೀವದ ಅನಿತ್ಯತೆ ಮುಕ್ತಿಯ ಹಂಬಲ, ಅಧ್ಯಾತ್ಮ ನೀತಿ, ಯೋಗ ವಿಚಾರ, ಸಮಾಜ ವಿಡಂಬನೆ ಬಂದಂತೆ ಅನುಭಾವವೂ ಪ್ರಮುಖವಾಗಿ ವ್ಯಕ್ತಗೊಂಡಿದೆ. ಇಲ್ಲಿ ಅನುಭಾವ ಎಂದರೇನು ? ಎಂಬುದನ್ನು ಮೊದಲು ನೋಡಿ ಅನಂತರ ಇವರ ತತ್ವಪದಗಳಲ್ಲಿ ವ್ಯಕ್ತಗೊಂಡ ಅನುಭಾವದ ಸ್ವರೂಪ ಹಾಗೂ ಅದರ ಹಂತಗಳನ್ನು ಗುರುತಿಸಬಹುದು.

"ಅನುಭಾವವೆಂದರೆ ಜೀವಾತ್ಮ-ಪರಮಾತ್ಮರ ಏಕರಸತ್ವದ ಶಿವ-ಜೀವರ ಐಕ್ಯದ ಲಿಂಗಾಂಗದ ಸಮರಸತ್ವದ ಅನುಭವ"[1] ಅನುಭವವೆಂದರೆ ಇಂದ್ರಿಯ ಜನ್ಯವಾದಂಥದಲ್ಲ. ಲೋಕ ವಿಲಕ್ಷಣವಾದಂಥದು. ಮಾತು-ಮನಂಗಳಿಗೂ ನಿಲುಕದಂಥದು. ಅಂತರಂಗ ಸಂಬಂಧಿಯಾದ ಅದು ಕೇವಲ ಸಾಧಕರ ಅನುಭವಕ್ಕೆ ವೇದ್ಯವಾಗುವಂಥದು. ಅದರ ಸ್ವರೂಪವನ್ನು ಕೂಡಲೂರು ಬಸವಲಿಂಗ ಶರಣರು ತಮ್ಮ ತತ್ವಪದವೊಂದರಲ್ಲಿ ಹೀಗೆ ಬಣ್ಣಿಸಿದ್ದಾರೆ.

"ಕಾಣಬಾರದ ವಸ್ತು ಕಂಡೆನೊ ಗುರುರಾಯಾ
ಕಂಡ ಸುಖವ ಕೇಳಿದರೆ ಹೇಳಲಿಕ್ಕೆ ಬಾರದಯ್ಯಾ"[2]

---

1. ದಿವಾಕರ ಆರ್. ಆರ್. : "ಶರಣರ ಅನುಭವ-ಅನುಭಾವ-ಅನುಭೂತಿ" ಪುಟ : 2.
2. ದೇಶಪಾಂಡೆ ಎಂ. ಎಸ್. (ಸಂ) 'ಪರಮಾರ್ಥ ಸೋಪಾನ', ಪುಟ-54

ಅದು "ಕಾಲಿಲ್ಲದೆ ನಡೆವುದು ಕರವಿಲ್ಲದೆ ಹಿಡಿವುದು
ಗುಹ್ಯವಿಲ್ಲದೆ ಇಂದ್ರಿಯ ಸುಖಿಸುವುದು
ಮೈಯಲ್ಲಿ ಮುಸುಕಿತು ಮಲಮೂತ್ರ ಬಿಡಿಸಿತು
ಹುಯ್ಯಲಾಡುತ-ಬಂದು ತಾನೆ ತಾನಾದದ್ದು"[3]

ಅನುಭಾವ ಮೂಗ ಸಿಹಿ ತಿಂದಂತೆ. ತಿನ್ನುವಾಗ ಸಿಹಿಯ ಅನುಭವವು ಆತನಿಗೆ ಆದರೂ ಅದನ್ನಾತನಿಗೆ ಬಿಡಿಸಿ ಹೇಳಲಿಕ್ಕೆ ಬಾರದು. ಬಾಹ್ಯ ಕುರುಹುಗಳಿಂದಲೂ ಆತ ತೋರಲಾರ. ಸಕ್ಕರೆ ಹೇಗಿದೆಯೆಂದರೆ ಸಿಹಿಯಿದೆಯೆಂದಷ್ಟೇ ಹೇಳಬಹುದು. ಸಿಹಿ ಹೇಗಿದೆಯೆಂಬುದನ್ನು ತಿನ್ನದೆ ಹೇಳಲಿಕ್ಕೆ ಬಾರದು. ಅದನ್ನು ನಾಲಿಗೆಯ ಮೇಲಿಟ್ಟು ಕೊಂಡಾಗಲೇ ನಮಗೆ ಸಿಹಿಯ ಅನುಭವವಾಗುವುದು. ಹೀಗೆಯೇ ಅನುಭಾವವೂ ಅನುಭವ ಜನ್ಯವೇ ಹೊರತು, ಬಾಯಿಯಿಂದ ಹೇಳುವಂಥದಲ್ಲ.

ಅನುಭಾವವು ಮಾನವನ ಬುದ್ಧಿಶಕ್ತಿ, ತರ್ಕ ಮತ್ತು ಪ್ರಯೋಗ-ಪರೀಕ್ಷೆಗಳಿಗೆ ನಿಲುಕುವಂಥದಲ್ಲ. ಇವೆಲ್ಲದಕ್ಕೆ ಒಂದು ಮಿತಿ ಇದೆ. ಇವು ಅಂತರಂಗದ ರಹಸ್ಯವನ್ನು ಬೇಧಿಸಲಾರವು. ಅಂತರಂಗದ ಅರಿವು ಆಗಬೇಕಾದರೆ ನಾವು ಸಾಧನೆಯಲ್ಲಿ ತೊಡಗ ಬೇಕು. ಆಗ ನಮ್ಮ ದೃಷ್ಟಿ ಅಂತರ್ಮುಖವಾಗುವುದು. ಅಂದರೆ ನಮ್ಮ ಒಳಗಣ್ಣು ತೆರೆಯುವುದು. ಆಗ ನಮಗೊಂದು ನೂತನ ಪ್ರಪಂಚ ಕಾಣಿಸುವುದು. ಪ್ರಯೋಗ, ಪರೀಕ್ಷೆ, ಬುದ್ಧಿ ಹಾಗೂ ತರ್ಕಗಳಿಗೆ ಹೊಳೆಯದ ಭಾವವೊಂದು ನಮ್ಮ ಹೃದಯವನ್ನು ಜಾಗೃತಗೊಳಿಸುವುದು. ಆ ಭಾವವೇ ಅನುಭಾವ 'ಅದೊಂದು ಪ್ರತಿಭಾಶಕ್ತಿಯನ್ನು ಸೂಚಿಸುವ ಹಾಗೂ ಅದನ್ನು ಒಳಗೊಂಡ ಪರಮಾತ್ಮನ ಸಾಕ್ಷಾತ್ ದರ್ಶನವು"[4] ಇದನ್ನು ಶರಣರು ನೆಲದ ಮರೆಯ ನಿಧಾನ, ಅಂತರಂಗದ ರತ್ನ, ಶಿಶು ಕಂಡ ಕನಸು,[5] ಆತ್ಮ ವಿದ್ಯೆ,[6] ಆತ್ಮ-ಅತ್ಮಗಳ ಮಥನದಿಂದುದಿಸುವ ಜ್ಞಾನಾಗ್ನಿ[7] ಎಂದೆಲ್ಲ ಕರೆದಿದ್ದಾರೆ. ಒಟ್ಟಿನಲ್ಲಿ ಅನುಭಾವವೆಂದರೆ ಅತೀಂದ್ರಿಯವೂ, ಅತಿಮಾನಸವೂ ಆದ ದಿವ್ಯಜ್ಞಾನ ವಾಗಿದೆ. ಇಂಥ ಜ್ಞಾನಿಗಳು ಹಾಡಿದ ಹಾಡುಗಳೇ ತತ್ವಪದಗಳಾಗಿವೆ.

ಅನುಭಾವವು ಮೂಲತಃ ವ್ಯಕ್ತಿಯೊಬ್ಬನ ವೈಯಕ್ತಿಕ ಅನುಭವ ವಿಶೇಷವಾಗಿದೆ. ಆತ "ಬಾಹ್ಯ ಸೌಂದರ್ಯದ ಹಿಂದಿರುವ ಚಿರಂತನ ಸೌಂದರ್ಯವನ್ನು, ಈ ಜೀವನದ ಆಚೆಗಿರುವ ನಿರಂತರ ಎಚ್ಚರದ ಬೆಳಗನ್ನು ಎಲ್ಲೆಲ್ಲಿಯೂ ಕಂಡುಕೊಂಡು, ಅದರ ಕಂಪನಕ್ಕೆ ಅನುಗುಣವಾಗಿ ತನ್ನ ಹೃದಯದ ವೀಣೆಯನ್ನು ವೀಣೆಯನ್ನು ಮಿಡಿದಾಗ

---

3. ದೇಶಪಾಂಡೆ ಎಂ. ಎಸ್. (ಸಂ) 'ಪರಮಾರ್ಥ ಸೋಪಾನ', ಪುಟ : 55
4. ದೇಶಪಾಂಡೆ ಎಂ. ಎಸ್. (ಸಂ) : ಕನ್ನಡ ಪರಮಾರ್ಥ ಸೋಪಾನ. ಪುಟ : 2.
3. ಹಿರೇಮಠ ಆರ್. ಸಿ. (ಸಂ) : ಚೆನ್ನಬಸವಣ್ಣನವರ ವಚನಗಳು.
6. ಮಲ್ಲೇದೇವರು ಎಚ್. ಪಿ. (ಸಂ) : ಸ್ವತಂತ್ರ ಸಿದ್ಧಲಿಂಗೇಶ್ವರರ ವಚನಗಳು. ವಚನ-244.
7. ಹಿರೇಮಠ, ಆರ್. ಸಿ. (ಸಂ) : ಮಹಾದೇವಿಯಕ್ಕನ ವಚನಗಳು.

ಅದು ನಿಜವಾದ ಅರ್ಥದಲ್ಲಿ ಅನುಭಾವವಾಗುತ್ತದೆ. ಆ ನಿಲವಿನಲ್ಲಿ ಹೊರ ಹೊಮ್ಮಿದ ಹೃದಯಗೀತೆ ಅನುಭಾವ ಸಾಹಿತ್ಯವಾಗಿ ಪರಿಣಮಿಸುತ್ತದೆ."[8] ಈ ಬಗೆಯ ಸಾಹಿತ್ಯ ಕನ್ನಡದಲ್ಲಿ ವಿಪುಲವಾಗಿ ಬೆಳೆದು ಬಂದಿದೆ. ಅನುಭಾವಿ ಕವಿಗಳು ತಮಗಾದ ಅನುಭಾವವನ್ನು ಈ ಸಾಹಿತ್ಯರೂಪದಲ್ಲಿ-ತತ್ವಪದಗಳಲ್ಲಿ ಹಲವು ವಿಧದಲ್ಲಿ ವ್ಯಕ್ತಪಡಿಸಿದ್ದಾರೆ. ಅವರು ವ್ಯಕ್ತಪಡಿಸಿದ ಅನುಭಾವದ ಸ್ವರೂಪವನ್ನು ಇಲ್ಲಿ 1) ಆತ್ಮನ ಮೊರೆ-ಪ್ರಾರ್ಥನೆ, ಸಾಧನೆ 2) ಸತಿಪತಿ ಭಾವದ ಅನುಭಾವ 3) ಜೀವಾತ್ಮ-ಪರಮಾತ್ಮರ ಐಕ್ಯ ಎಂದು ಮೂರು ಹಂತಗಳಲ್ಲಿ ವಿಭಜಿಸಿ ಗುರುತಿಸಲು ಯತ್ನಿಸಲಾಗಿದೆ.

ಅನುಭಾವಿಯು ಸಾಧಕಾವಸ್ಥೆಯ ಪ್ರಾರಂಭದಲ್ಲಿ ಪರಮಾತ್ಮನ ಸರ್ವಾಂತರ್ಯಾಮಿ ವ್ಯಕ್ತಿತ್ವಕ್ಕೆ (omnipresance personality) ಮಾರು ಹೋಗಿ ಆತನ ಸ್ವರೂಪ ಜ್ಞಾನವನ್ನು ಮಾಡಿಕೊಳ್ಳಲು ತವಕ ಪಡುವನು. ಆತನ ಸಾನಿಧ್ಯದ ಅನುಭವ ಪಡೆಯಲು ನಾನಾವಿಧವಾಗಿ ಆತನನ್ನು ಭಜಿಸುವನು, ಪ್ರಾರ್ಥಿಸುವನು, ಮೊರೆ ಇಡುವನು. ಇಂಥ ಸಾಧಕನ ಕರೆ–ಮೊರೆ ಜಗತ್ತಿನ ಎಲ್ಲ ಅನುಭಾವ ಸಾಹಿತ್ಯದಲ್ಲೂ ವ್ಯಕ್ತಗೊಂಡುದನ್ನು ಕಾಣುವೆವು. ಅಸತೋಮಾ ಸದ್ಗಮಯ ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ ಎಂಬ ಉಪನಿಷತ್ತಿನ ನುಡಿಗಳಲ್ಲೂ ಸಾಧಕನ ಮೊರೆ ಇರುವುದನ್ನು ಗುರುತಿಸಬಹುದು. ಸಾಧಕನ ಮನೋಸ್ಥಿತಿಯನ್ನು ಬಿಂಬಿಸುವ ಇಂಥ ಪ್ರಾರ್ಥನಾ ರೂಪದ ಪದಗಳು ಅನುಭಾವದ ಮೊದಲ ಮೆಟ್ಟಿಲುಗಳಾಗಿವೆ. ಇದನ್ನೇರಿಕೊಂಡೇ ಸಾಧಕ ಅನುಭಾವ ಮಾರ್ಗದಲ್ಲಿ ಮುನ್ನಡೆಯಬೇಕು. ಅನುಭಾವ ಮಾರ್ಗದಲ್ಲಿ ನಡೆಯಲು ಮೊದಲು ಆತನ ಮನಸ್ಸು ದೃಢಗೊಳ್ಳಬೇಕು. ಮನಸ್ಸಿನ ದೃಢತೆಯೇ ಎಲ್ಲ ಸಾಧನೆಗಳಿಗೆ ಮೂಲ. ನಿಜಗುಣ ಶಿವಯೋಗಿ ತನ್ನ ತತ್ವಪದವೊಂದರಲ್ಲಿ ಮನಸ್ಸನ್ನು ಕೋಗಿಲೆಗೆ ಹೋಲಿಸಿದುದನ್ನಿಲ್ಲಿ ನೋಡಬಹುದು.

"ಕೋಗಿಲೆ ಚೆಲ್ವಕೋಗಿಲೆ ಮುದ್ದು
ಕೋಗಿಲೆ, ಜಾಣಕೋಗಿಲೆ ॥ಪ॥
ಹಿಂದೆ ತಪದೊಳೀಶನೊಂದಿರುತಿರಲೆಚ್ಚು
ಬೆಂದ ಕಾಮನ ಬಿಟ್ಟು ಕೋಗಿಲೆ
ಬಂದು ಬೇಗದಿ ಬಾಲೇಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ"[9]

ಲೋಕದ ಕಷ್ಟಕಾರ್ಪಣ್ಯಗಳಿಗೆ ಮೂಲಕಾರಣವಾದ ಕಾಮನೆಗಳನ್ನು ತ್ಯಜಿಸಿ ಶಿವಭಾವವನ್ನು ಪಡೆಯುವಂತೆ ಮನವೆಂಬ ಕೋಗಿಲೆಗೆ ತಿಳಿಸುತ್ತದೆ ; ಈ ತತ್ವಪದ.

---

8) ತಿಪ್ಪೇರುದ್ರಸ್ವಾಮಿ, ಎಚ್—ಕನ್ನಡದಲ್ಲಿ ಅನುಭಾವ ಸಾಹಿತ್ಯ, ಪುಟ : 12

9) ತಿಪ್ಪೇರುದ್ರಸ್ವಾಮಿ, ಎಚ್—ಕನ್ನಡದಲ್ಲಿ ಕೈವಲ್ಯ ಸಾಹಿತ್ಯ, ಪುಟ : 15

ಸರ್ಪಭೂಷಣ ಶಿವಯೋಗಿಗಳೂ ಇದೇ ಭಾವವನ್ನು ತಮ್ಮ ತತ್ವಪದವೊಂದರಲ್ಲಿ ವ್ಯಕ್ತಪಡಿಸಿದ್ದಾರೆ :

"ಮನವೆಂಬ ಮರ್ಕಟನ ತಡೆಯಲಾರೆನು ದೇವ
ಎನಿತಿದರ ಚಪಲ ಚೇಷ್ಟೆಗಳ ವರ್ಣಿಸಲಿ"10

ಮನಸ್ಸು ಹಲವು ಕೊಂಬೆಗಳಿಗೆ ಹಾರುವ ಮರ್ಕಟವಾದರೆ ಸಾಧನೆ ಹೇಗೆ? ಎಂದು ಚಿಂತಿಸುವುದರ ಮೂಲಕ ಸರ್ಪಭೂಷಣರು ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳ ಬೇಕೆಂದು ಪರೋಕ್ಷವಾಗಿ ಎಚ್ಚರಿಸಿದ್ದಾರೆ. ಅನುಭಾವ ಸಾಧನೆಗೆ ದೃಢ ಮನಸ್ಸು ಅಗತ್ಯವಾದಂತೆ ದೇಹದ ಪರಿಶುದ್ಧಿಯೂ ಅಗತ್ಯ. ದೇಹವು ಅನುಭಾವವೆಂಬ ಅಡಿಗೆಯನ್ನು ಸಿದ್ಧಪಡಿಸಲು ಗಡಿಗೆಯಾಗಬೇಕೆಂಬುದನ್ನು ಸರ್ಪಭೂಷಣರು ತಮ್ಮ ತತ್ವಪದವೊಂದರಲ್ಲಿ ಹೇಳಿದುದನ್ನಿಲ್ಲಿ ನೋಡಬಹುದು.

"ಅನುಭಾವದಡಿಗೆಯ ಮಾಡಿ । ಅದ
ಕನುಭಾವಿಗಳು ಬಂದು ನೀವೆಲ್ಲ ಕೂಡಿ ॥ ಪ ॥

ತನುವೆಂಬ ಭಾಂಡವ ತೊಳೆದು । ಕೆಟ್ಟ
ಮನದ ಜಂಡಡವೆಂಬ ಮುಸುರೆಯು ಕಳೆದು
ಘನವೆಂಬ ಮನೆಯನೆ ಬಳಿದು । ಅಲ್ಲಿ
ಬಿನಗು ತ್ರಿಗುಣವೆಂಬ ಒಳಗುಂಡು ತಳೆದು॥"11

ಅನುಭಾವದಡಿಗೆಯನ್ನು ದೇಹವೆಂಬ ಗಡಿಗೆಯಲ್ಲಿ ಮಾಡುವ ಕ್ರಿಯೆ ರೂಪಕ ಯುಕ್ತವಾದ ಈ ತತ್ವಪದದಲ್ಲಿ ಅರ್ಥಪೂರ್ಣವಾಗಿ ನಡೆದಿದೆ. ದೇಹವಿಡಿದೇ ಅದರ ಮೂಲಕವೇ ನಾವು ಅನುಭಾವವನ್ನು ಸಾಧಿಸಬೇಕೆಂದುದನ್ನು ಈ ಪದ ಸಾಂಕೇತಿಕಾರ್ಥದಲ್ಲಿ ಹಿಡಿದಿಟ್ಟಿದೆ. ನಿಂಬರಗಿ ಮಹಾರಾಜರು ತಮ್ಮ ಪದವೊಂದರಲ್ಲಿ ನೆಲ್ಲನ್ನು ಕಲಟ್ಟಿ ಅಡುಗೆ ಮಾಡುವ ಕ್ರಿಯೆಯನ್ನು ಅಧ್ಯಾತ್ಮ ಸಾಧನೆಯ ರೂಪಕವನ್ನಾಗಿ ಮಾಡಿಕೊಂಡುದನ್ನಿಲ್ಲಿ ನೋಡಬಹುದು,

ನೆಲ್ಲು ಕುಟ್ಟುಣ ಬಾರವ್ವಾ । ಇಬ್ಬರೂ ಕೂಡಿ । ಪ ।
ನೆಲ್ಲು ಕುಟ್ಟುಣ ಬಾರೆ ।
ತನುವೆಂಬ ಬಳ್ಳವ ಮಾಡಿ । ಪ್ರಾಣವೆಂಬ
ಒನಕಿಲೆ ಹೇರು ಹಾಕಿ
ವಿವೇಕವೆಂಬ ಅಕ್ಕಿ ಹಸನ ಮಾಡಿ
ಹಳ್ಳತಗಿಯವ್ವ ಜ್ಞಾನದೃಷ್ಟಿಲೆ ನೋಡಿ ॥ ೧ ॥

ವಾಸನಾತ್ರಯುಗಳೆಂಬ । ಒಲೆಗುಂಡು ಮಾಡಿ
ಪ್ರಾರಬ್ಧ ಗಡಿಗೆ ಹೇರಿ ॥
ಕಾಮ ಕ್ರೋಧವೆಂಬ ಕಟ್ಟಿಗೆ ಉರಿ ಮಾಡಿ
ಪ್ರಚಂಡ ಪಾರಮಾರ್ಥ ಒಳ ಹೊರಗೆ ನೋಡಿ ॥ ೨ ॥

---

10) ತಿಪ್ಪೇರುದ್ರಸ್ವಾಮಿ ಎಚ್. ಕನ್ನಡದಲ್ಲಿ ಕೈವಲ್ಯ ಸಾಹಿತ್ಯ, ಪುಟ–52
11) ,, ಅದೇ ಪುಟ : 70.

ಕುದಿಯುವ ಸಮಯದಲಿ । ಮದದ ಉಕ್ಕ
ಮೀರೆ ಬರುತದಲಮ್ಮ
ಸತ್ವಧೀರ ಎಂಬ ಹುಟ್ಟಿಲೆ ಹೊಡೆದು
ನೆಟ್ಟಗೆ ಅಡಿಗೆಯ ಧಿಟ್ಟಾಗಿ ಮಾಡಮ್ಮ ॥೩॥"[12]

ಅನುಭಾವದಡಿಗೆಯ ಮಾಡುವ ಕ್ರಿಯೆ ಇಲ್ಲಿ ಸೊಗಸಾಗಿ ಚಿತ್ರಣಗೊಂಡಿದೆ. ಈ ಪದ ಅಂತರಂಗ ಸಾಧನೆಗೆ ಕನ್ನಡಿ ಹಿಡಿಯುತ್ತದೆ. ಅಂತರಂಗದಲ್ಲಿ ನಡೆಯಬೇಕಾದ ಕ್ರಿಯೆಗಳನ್ನು ಬಹಿರಂಗಕ್ಕೆ ತಂದು ಲೌಕಿಕ ರೀತಿಯ ಸಾದೃಶ್ಯಗಳನ್ನಿಲ್ಲಿ ಕೊಟ್ಟುದು ಪರಿಣಾಮಕಾರಿಯಾಗಿದೆ. ಸಾಧಕನು ಅನುಭಾವ ಸಾಧನೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ಇದು ತಿಳಿಸುತ್ತದೆ. ಕಡಕೋಳ ಮಡಿವಾಳಪ್ಪನು ಇಂಥದೇ ತತ್ವಪದವೊಂದನ್ನು ರಚಿಸಿದ್ದು, ಅದರಲ್ಲಿ ದೇಹವನ್ನು ಗಡಿಗೆಗೆ ಅನುಭಾವವನ್ನು ಅಡಿಗೆಗೆ ಹೋಲಿಸಿದ್ದಾನೆ. ಮುಂದುವರಿದು ಆತ ಅನುಭಾವದಡಿಗೆಯನ್ನು ಮಾಡಲು ಕರ್ಮವೆಂಬ ಜೋಳಬೀಸಿ ಧರ್ಮವೆಂಬ ಜಲಡಿಯಿಂದ ಹಿಟ್ಟುಸಾಣಿಸಿ ಅದರಲ್ಲಿ ನಿರ್ಮಳಾತ್ಮ ನೀರು ಹಾಕಿ ನಾದಬೇಕು, ನಾದಿ ಸಂಚಿತ ಕರ್ಮದ ಹಂಚನ್ನು ತೊಳೆದುಹಂಚಿನಿಂದ ಜ್ಞಾನದ ಅಗ್ನಿ ಉರಿಸಿ ಸಂಚಿನಿಂದ ಪರರೊಟ್ಟಿ ಬೇಯಿಸಬೇಕೆನ್ನುತ್ತಾನೆ."[13]

ಶಿಶುನಾಳ ಷರೀಪ ಸಾಹೇಬನ ತತ್ವಪದಗಳಲ್ಲಿ ಜೀವನ ಮತ್ತು ಅಧ್ಯಾತ್ಮ ಹಾಸುಹೊಕ್ಕಾಗಿ ಬೆರೆತಿವೆ. ದೈನಂದಿನ ಬದುಕಿನ ಎಲ್ಲ ಅನುಭವಗಳನ್ನೂ ಸಾಂಕೇತಿಕವಾಗಿ ಅಧ್ಯಾತ್ಮಿಕ ನೆಲೆಗೆ ಏರಿಸಿದ ಸಾಧನೆ ಆತನ ಪದಗಳಲ್ಲಿದೆ, ಆತನೊಬ್ಬ ಜನಪ್ರಿಯ ಅನುಭಾವಿ ಕವಿ, ಆತ ತನ್ನ ಪದಗಳಲ್ಲಿ ಏನೇ ಹೇಳಿದರೂ ಅವುಗಳಲ್ಲಿ ಅನುಭಾವ ಅಡಕಗೊಂಡಿರುವುದನ್ನು ಗುರುತಿಸಬಹುದು.

"ಹಾವು ತುಳಿದೇನೆ ಮಾನಿನಿ । ಮಾನಿನಿ
ಹಾವು ತುಳಿದೇನೆ ॥ಪ॥"[14]

ಹಾವು ಇಲ್ಲಿ ಮಾಯೆಯ ಪ್ರತೀಕವೂ, ಸಂಸಾರದ ಸಂಕೇತವೂ ಆಗಿದೆ. ಆತ ಸಂಸಾರವೆಂಬ ಹಾವು ತುಳಿದೂ ಕಚ್ಚಿಸಿಕೊಳ್ಳದೆ ಪಾರಾದ ಅನುಭವವನ್ನು ಇಲ್ಲಿ ಅನುಭಾವದ ನೆಲೆಗೇರಿಸಿ ಹಾಡಿದ್ದಾನೆ. ಜೀವನದಲ್ಲಿ ಬರುವ, ಸಹಜವಾಗಿ ನಡೆದು ಹೋಗುವ ಪ್ರತಿಯೊಂದು ಘಟನೆಗಳೂ ಆತನ ಪದಗಳಿಗೆ ವಸ್ತುವಾಗಿ ಅಧ್ಯಾತ್ಮದ ವಿಶೇಷಾರ್ಥ ಪಡೆದಿವೆ. ಗಂಡನ ಮನೆಗೆ ಹೋಗಲು ಸಿದ್ಧಳಾಗಿ ನಿಂತ ಹೆಣ್ಣೊಬ್ಬಳ ಅಣ್ಣನ ಸ್ಥಾನದಲ್ಲಿ ನಿಂತು ಷರೀಪ ಹೀಗೆ ಹಾಡುತ್ತಾನೆ;

"ಅಳಬ್ಯಾಡ ತಂಗಿ ಅಳಬ್ಯಾಡ । ನಿನ್ನ
ಕಳುಹ ಬಂದವರೆಲ್ಲ ಉಳುಹಿಕೊಂಬುವರೇನೆ॥"[15]

---

12) ದೇಶಪಾಂಡೆ ಎಂ.ಎಸ್. (ಸಂ); "ಕನ್ನಡ ಪರಮಾರ್ಥ ಸೋಪಾನ", ಪುಟ 80-81.
13) ಲತ್ಕೆ ಎಂ. ಎಸ್(ಸಂ); "ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು", ಪುಟ 192-193.
15) ಲಕ್ಷ್ಮೀನಾರಾಯಣಭಟ್ಟ ಎನ್. ಎಸ್(ಸಂ) "ಷರೀಪ ಸಾಹೇಬರ ಗೀತೆಗಳು"

ಈ ಪದದಲ್ಲಿನ ಸಂಗತಿ ನಿತ್ಯ ನಡೆಯುವಂಥದೇ, ಪ್ರಪಂಚದಲ್ಲಿ ಯಾರುಯಾರನ್ನೂ ಉಳಿಸಿಕೊಳ್ಳಲಾರರು ಎಂಬ ತನ್ನ ನಿಜ ನೆಲೆಯ ಅರಿವಿರುವ ಅನುಭಾವಿಯೊಬ್ಬನ ಅನುಭಾವವನ್ನು ಈ ಪದ ಒಳಗೊಂಡಿದೆ. "ವಿವಾಹವಾದ ಹೆಣ್ಣು ಮೊದಲು ಸಲ ಅತ್ತೆಯ ಮನೆಗೆ ಹೋಗುವ ಭಾವಮಯವಾದ ಸನ್ನಿವೇಶವನ್ನು ಬಳಸಿ ಬರೆದ ಈ ಪದ್ಯ ಬೇರೆ ಒಂದು ಅರ್ಥಕ್ಕೆ ಹಬ್ಬುವುದನ್ನೂ ಕಾಣಬಹುದು. ಮಿಡಿಕ್ಯಾಡಿ ಮದಿವ್ಯಾದಿ ಹಂಡುಕಾಡಿ ಮಾಯದ ಮರವೇರಿದಿ ಎಂಬೆಲ್ಲ ಮಾತುಗಳು ಜೀವ ತಾನಾಗಿ ಭೋಗಕ್ಕೆ, ಮಾಯೆಗೆ ಒಲಿದದ್ದನ್ನು ಸೂಚಿಸುತ್ತವೆ. ತವರುಮನೆ ಜೀವದ ನಿಜ ನೆಲೆಗೆ ರೂಪಕವಾಗುತ್ತದೆ."[16] ಷರೀಫನ ಕೈಯಲ್ಲಿ ಎಂಥ ಸಾಮಾನ್ಯ ವಿಷಯಗಳೂ ಹಾಡಾಗಿವೆ, ವಿಶೇಷಾರ್ಥಪಡೆದು ನೂತನ ಆಯಾಮ ಪಡೆದುಕೊಂಡಿವೆ. ಮಳೆ ಬಂದಾಗ ಮನೆ ಸೋರುವುದೇನೂ ವಿಶೇಷವಲ್ಲ. ಆದರೆ ಷರೀಫನ ಹಾಡಿನಲ್ಲಿ ಅದು ವಿಶೇಷಾರ್ಥ ಪಡೆದುಕೊಂಡು ಸಾರವಿಲ್ಲದ ಈ ಬದುಕಿಗೆ ಪ್ರತೀಕವಾದುದನ್ನಿಲ್ಲಿ ನೋಡಬಹುದು ;

"ಸೋರುತಿಹುದು ಮನೆಯ ಮಾಳಿಗಿ । ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗಿ । ದಾರುಗಟ್ಟಿ ಮಾಳ್ಪರಿಲ್ಲ॥

ಮುರುಕು ತೊಲೆಯು ಹುಳುಕು ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕು ಚಪ್ಪರ ಜೇರಗಿಂಡಿ
ಮೇಲಕೇರಿ ಮೆತ್ತಲಾರದೆ"[17]

ಹುಳುಕು ತೊಲೆ ಮುರುಕು ಜಂತಿಗಳಂತಿರುವ ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡಾಗಲೇ ದೇಹವೆಂಬ ಮನೆ ಭದ್ರವಾಗುತ್ತದೆ; ಬದುಕು ಅರ್ಥಪೂರ್ಣವಾಗುತ್ತದೆ. ಎನ್ನುವ ಆತನ ಮಾತು ಅಲೌಕಿಕ ಅನುಭವದತ್ತ ಬೆರಳು ಮಾಡಿ ತೋರುವುದು. ಇಂಥ ಭಾವವನ್ನು ಸಾಮಾನ್ಯವಾಗಿ ಆತನ ಎಲ್ಲ ಹಾಡುಗಳಲ್ಲೂ ಕಾಣುವೆವು ಆತ ನುಡಿದುದೆಲ್ಲ ಅನುಭಾವವೇ ದೇಹವನ್ನು ತಂಬೂರಿಗೆ ಗುಡಿಗೆ ಹೋಲಿಸಿ ರಚಿಸಿದ ಈತನ ತತ್ವಪದಗಳಲ್ಲಿ ಅನುಭಾವದ ಎತ್ತರವನ್ನು ಕಾಣುವೆವು, ಈತನಂತೆಯೇ ಊರೂರು ಅಲೆದು ತತ್ವಪದಗಳನ್ನು ರಚಿಸಿದವರೆಂದರೆ ಘನಮಠದ ನಾಗಭೂಷಣ ಶಿವಯೋಗಿಗಳು ಇವರ ತತ್ವಪದವೊಂದು ಹೀಗಿದೆ;

---

16) " ಅದೇ ಪುಟ-34.
17) " ಅದೇ "

"ಹೊತ್ತಿರಲಿಕೆ ಊರಿಗೆ ಸೇರೋ ದಾರಿ
ಕತ್ತಲೆಯೊಳಗರು ಪುವರಾರೋ ॥ ಪ ॥
ಮೂರು ಬೆಟ್ಟಗಳ ಮುಕ್ಕಿಲಿ ದಾಟೋ ಅಲ್ಲಿ
ದಾರಿ ತಪ್ಪಿದರೆ ಪುಲಿಯ ಕಾಟೊ
ಆರು ಮಂದಿ ಕಳ್ಳರಿರುವ ಮಾಟೊ ಮಹಾ
ಧೀರತ್ವದಿಂದಲಾಚೆಗೆ ದಾಟೊ
ಎಡಬಲದಲಿ ವಿವರಿಸಿ ನೋಡೊ ನಟ್ಟ
ನಡುದಾರಿ ಹಿಡಿದು ಮುಂದಕೆ ನೋಡೊ
ಅಡವಿ ಹಣ್ಣುಗಳ ಬಯಕೆ ಬೇಡೋ ಗಡ
ಗಡ ಪೋಗಿ ಘನ ಮಠೇಶನ ಕೂಡೊ"[18]

ಜೀವ ವಿಕಾಸಗೊಳ್ಳುತ್ತ ಮೇಲು ಮೇಲಕ್ಕೇರಲು ಹಿಡಿಯಬೇಕಾದ ಮಾರ್ಗವನ್ನು ಈ ಪದ ತಾತ್ವಿಕಾರ್ಥದಲ್ಲಿ ಸೂಚಿಸಿದೆ. ಜೀವಾತ್ಮನು ಸಾಧನಾಮಾರ್ಗದಲ್ಲಿ ಮುನ್ನಡೆದಾಗ ಎದುರಾಗುವ ಅಡ್ಡಿ ಆತಂಕಗಳನ್ನು ಧೈರ್ಯದಿಂದ ಎದುರಿಸಿ ಆತ ಪರಶಿವನಲ್ಲಿ ಬೆರೆಯುವ ಬಗೆಯನ್ನು ಈ ಪದ ಬೆಡಗಿನ ರೂಪದಲ್ಲಿ ಹಿಡಿದಿಟ್ಟಿದೆ. ಜೀವವನ್ನು ಉದ್ದೇಶಿಸಿ ಹೇಳಿದ ಅನುಭಾವ ಈ ಪದದಲ್ಲಿದೆ.

ಅಧ್ಯಾತ್ಮ ಸಾಧನೆಯಲ್ಲಿ ತೊಡಗಿದ ಅನುಭಾವಿ ಕವಿಗಳು ತಮ್ಮ ಅನೇಕ ತತ್ವಪದಗಳಲ್ಲಿ ತಾವು ಸತಿಯೆಂದು ಪರಮಾತ್ಮನು ತಮ್ಮ ಪತಿಯೆಂದು ಬಗೆದು ವರ್ಣಿಸಿದ್ದಾರೆ. ಲೌಕಿಕ ರೀತಿಯ ಪ್ರೀತಿ ಪ್ರಣಯ ಸತಿಪತಿಗಳ ದಾಂಪತ್ಯ ಜೀವನದ ವಿವಿಧ ಕ್ರಿಯೆಗಳು ಅವರ ಅನೇಕ ಪದಗಳಲ್ಲಿ ವರ್ಣನೆಗೊಂಡದ್ದುಂಟು. ಅನುಭಾವಿ ಕವಿಗಳು ಸದಾ ಪರಮಾತ್ಮನ ಧ್ಯಾನದಲ್ಲಿಯೇ ಇರುವಂಥವರು. ಪ್ರಣಯಿಗಳ ಸರಸ–ಪ್ರೀತಿಯ ಒಡನಾಟಗಳು ಅವರ ಪದಗಳಲ್ಲಿ ಎಡೆ ಪಡೆದಿವೆ. ಮೇಲ್ನೋಟಕ್ಕೆ ರತಿ ಭಾವನೆಯನ್ನು ಉಕ್ಕಿಸುವ ಈ ಪದಗಳ ಅಂತರಾಳ ಅಲೌಕಿಕ ಸತಿ-ಪತಿ ಭಾವದ ಅನುಭಾವವೇ ಆಗಿದೆ. ನಿಜಗುಣ ಶಿವಯೋಗಿಗಳು ತಾವು ಶಂಭುಲಿಂಗನ ಪ್ರೇಯಸಿಯಾಗಿ ಹಾಡಿಕೊಂಡ ತತ್ವಪದವೊಂದು ಹೀಗಿದೆ :

"ಸಲೆ ಸಮಾಲೆಯೊಳೊಲಿಸಿ ಮೆಚ್ಚಿಸಿದನೊಮ್ಮೆ
ತೊಲಗಿದಿನಿಯಳು ಧ್ಯಾನಿಸುವಂತೆ ॥
ನೆಲಸಿ ತತ್ವಾನುಭಾವನೆಯೆನ್ನ ಮನದೊಳು
ಚಲಿಸದೋಲಿರಿಸು ಭಾವಜ ಭಂಗ
ವಿಲಸಿತ ವಿಮಲಾಂಗ । ಸುಲಭನೆ ಶಂಭುಲಿಂಗ
ಬೇಗ ಕರುಣಿಸು ॥"[19]

18 ಸವದತ್ತಿಮಠ ಸಂಗಮೇಶ ಸಂ : ಘನಶ್ರೀ, ಪುಟ-94.
19 ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ'

ನಿಜಗುಣರು ಪ್ರೇಯಸಿಯಾಗಿ ಶಂಬುಲಿಂಗನಲ್ಲಿ ತತ್ವಾನುಭಾವನೆಯನ್ನು ತಮ್ಮಲ್ಲಿ ನೆಲೆಗೊಳಿಸಬೇಕೆಂದು ಪ್ರಾರ್ಥಿಸುವರು. ಅವರ ಈ ಕೆಳಗಿನ ತತ್ವಪದವೊಂದರ ಸಾಲುಗಳಲ್ಲಿ ಸತಿ-ಪತಿ ಭಾವದ ಭಕ್ತಿಯ ಉನ್ನತ ಸ್ಥರವನ್ನು ಕಾಣುವೆವು.

"ಶರಣಸತಿಯ ಮದುವೆಯ ಸಂಭ್ರಮವನು । ನೋಡಿರಮ್ಮ
ಪರಮಾನಂದ ಪಯೋನಿಧಿಯೊಳಗೋಲಾಡಿರಮ್ಮ"[20]

ನೀರಲಕೇರಿ ಪಂಚಾಕ್ಷರಿ ತನ್ನ ಗುರುವನ್ನೇ ಸತಿಯಾಗಿಸಿಕೊಂಡುದನ್ನು ಆತನ ಈ ಕೆಳಗಿನ ಪದದಿಂದ ತಿಳಿಯಬಹುದು.

ಎಂಥಾತ ಗುರುನಾಥನೋ । ಬಹ
ಳಂತಃಕರಣುಳ್ಳಾತನೋ ॥
ಕಾಂತೆ ನೀ ಬಾರೆಂದು ಏಕಾಂತದೊಳು । ಕರೆದು
ಎಂಥ ಮಾತ್ಹೇಳಿದನೋ । ಸದ್ಗುರುರಾಯ
ಎಂಥ ಮಾತ್ಹೇಳಿದನೋ ॥"[21]

ಸತಿ-ಪತಿ ಭಾವದನುಭಾವವು ಕೂಡಲೂರು ಬಸವಲಿಂಗ ಶರಣರ ತತ್ವಪದಗಳಲ್ಲಿ ಪರಿಣಾಮಕಾರಿಯಾಗಿ ಬರುವುದನ್ನು ಕಾಣುವೆವು. ತಮ್ಮೊಂದು ಪದದಲ್ಲಿ ಅವರು ಹೀಗೆ ಹೇಳಿದ್ದಾರೆ :

"ಎಂಥ ಶ್ರೀಮಂತನ ಮಾಡಿಕೊಂಡೆನವ್ವ
ಸಂತೋಷದಿಂದ ಸುಖಪಟ್ಟೆನವ್ವ
ಚಿಂತೆಯೆಲ್ಲ ಅಳಿದು ಬಿಟ್ಟನವ್ವ
ಇಂಥ ಪಂಥುಳ್ಳ ಪುರುಷ ಈತನವ್ವ"[22]

ಭಕ್ತ ತಾನು ಸತಿಯಾಗಿ ಭಗವಂತನನ್ನು ಪತಿಯಾಗಿ ಭಾವಿಸಿ ನುಡಿಯುವ ನುಡಿ, ನಡೆಯುವ ನಡೆ ಲೋಕವಿಲಕ್ಷಣವಾದುದು. ಇದೊಂದು ಬಗೆಯ ಮಧುರಭಕ್ತಿಯ ಪರಿಯಾಗಿದೆ. ಬಸವಲಿಂಗರು ಲೌಕಿಕದ, ಮೋಹದ, ಸರಸದ ಅನೇಕ ಉದಾಹರಣೆಗಳನ್ನು ಬಳಸಿ ಅಲೌಕಿಕ ಸೌಂದರ್ಯವನ್ನು ಆತ್ಮಿಕ ಚೆಲುವನ್ನು ತಮ್ಮ ಪದಗಳಲ್ಲಿ ಹೊರಹೊಮ್ಮಿಸಿದ್ದಾರೆ. ಪರಮಾತ್ಮ ಪತಿಯೊಡನೆ ಕೂಡುವ–ಅಗಲುವ–ಕ್ರಿಯೆಗಳು ಲೌಕಿಕರ ಕಣ್ಣಿಗೆ ಪ್ರೀತಿ-ಪ್ರಣಯ-ವಿರಹಗಳಾಗಿ ಕಾಣುತ್ತವೆ. ಪರಮಾತ್ಮ ಪತಿಯ ಪ್ರೀತಿಯನ್ನು ಅತಿಯಾಗಿ ಹಚ್ಚಿಕೊಂಡ ಭಕ್ತ ಸತಿಯಾದ ಕೂಡಲೂರು ಬಸವಲಿಂಗರು ಅಲೌಕಿಕ ವಿರಹದ ದಳ್ಳುರಿಯಲ್ಲಿ ಬೇಯುವ ಪರಿಯಂತೂ ಅನ್ಯಾದೃಶವಾದ ರೀತಿಯಲ್ಲಿ ಚಿತ್ರಣಗೊಂಡುದನ್ನಿಲ್ಲಿ ಕಾಣಬಹುದು.

"ಮರೆಯಲಾರೆ ನಾನು ಅವನ
ಮರುಳು ಮಾಡಿ ಪೋದನಮ್ಮಾ
ಇರುಳು ಹಗಲು ನಿದ್ರೆ ಕಾಣೆ
ಕರೆದು ತಾರೆ ಮೋಹದ ಜಾಣೆ"[23]

ಎಂದು ಆತನಿಗಾಗಿ ಹಂಬಲಿಸುವರು. ಅತ ಸಿಕ್ಕೊಡನೆ ಏನು ಮಾಡಿದ ಎಂಬುದನ್ನು ತಮ್ಮ ಪದವೊಂದರಲ್ಲಿ ಹೀಗೆ ವರ್ಣಿಸಿದ್ದಾರೆ :

---

20 ನಿಜಗುಣ ಶಿವಯೋಗಿಗಳ ಅದೇ
21 ತಿಪ್ಪೇರುದ್ರಸ್ವಾಮಿ ಎಚ್. : 'ಕನ್ನಡದಲ್ಲಿ ಕೈವಲ್ಯ ಸಾಹಿತ್ಯ', ಪು. 114-115
22 ಶಾಂತರಸ (ಸಂ) : ಕೂಡಲೂರು ಬಸವಲಿಂಗ ಶರಣರ ಸ್ವರ ವಚನಗಳು.
23 ಶಾಂತರಸ (ಸಂ): ಕೂಡಲೂರು ಬಸವಲಿಂಗ ಶರಣರ ಸ್ವರವಚನಗಳು

"ಅರಿಯದಂಥ ಮೂಗುತಿಟ್ಟ
ಸೀರೆ ಸೆಳೆದು ಮುದ್ದುಕೊಟ್ಟ
ಚೆಲುವ ಕೂಡಲೂರೇಶ ನಮ್ಮ
ಕುಲವ ಕೆಡಿಸಿ ಒೀಗೆ ಮಾಡಿಬಿಟ್ಟ"[24]

ಲೌಕಿಕ ರೀತಿಯ ದಂಪತಿಗಳ ಪ್ರಣಯ ವ್ಯಾಪಾರದ ಚಿತ್ರವನ್ನಿಲ್ಲಿ ಬಸವಲಿಂಗರು ಚಿತ್ರವತ್ತಾಗಿ ಚಿತ್ರಿಸಿದ್ದಾರೆ. ಮೈಲಾರ ಬಸವಲಿಂಗ ಶರಣರ, ಹಾಗಲ್ವಾಡಿ ಮುದ್ವೀರಸ್ವಾಮಿಗಳ ಹಾಗೂ ಕಡಕೋಳ ಮಡಿವಾಳಪ್ಪನ ಪದಗಳಲ್ಲೂ ಸತಿ–ಪತಿ ಭಾವದ ಅನುಭಾವವು ತೀವ್ರ ತರವಾಗಿ ಬರುವುದನ್ನು ಕಾಣುವೆವು. ಶಿಶುನಾಳ ಷರೀಫನ ಪದಗಳಲ್ಲಂತೂ ಈ ಬಗೆಯ ಅನುಭಾವ ಪರಾಕಾಷ್ಠೆ ತಲುಪಿದುದನ್ನು ಕಾಣುವೆವು. ಸತಿ–ಪತಿಗಳ ಶೃಂಗಾರ ಚೇಷ್ಟೆಗಳ ಚಿತ್ರಣ ಇವರೆಲ್ಲರ ಹಾಡುಗಳಲ್ಲಿ ಸೌಮ್ಯ ರೀತಿಯಲ್ಲಿ ಬಂದರೆ ಷರೀಫನ ಪದಗಳಲ್ಲಿ ಈತನಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಸತಿ–ಪತಿಯರನ್ನು ಅಂಕಿತದಲ್ಲಿರಿಸಿ ಕೊಂಡುದನ್ನು ಭಕ್ತ ಸತಿಯಳ ಚಂಚಲತೆಯನ್ನು ಹೋಗಲಾಡಿಸಿ ಆಕೆಯನ್ನು ಆಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿದುದನ್ನು ಸಾಮಾನ್ಯರಿಗೆ ಪರಿಣಾಮಕಾರಿಯಾಗಿ ತಿಳಿಯುವ ಹಾಗೆ ಹೇಳಿದುದನ್ನು ಕಾಣುವೆವು.

"ಎಲ್ಲರಂಥವನಲ್ಲ ನನಗಂಡಾ
ಬಲ್ಲಿದನು ಪುಂಡ
ಎಲ್ಲರಂಥವನಲ್ಲ ನನಗಂಡಾ ಕೇಳೇ
ಸೊಲ್ಲು ಸೊಲ್ಲಿಗೆ ಬಯ್ದು ನನ್ನ
ಎಲ್ಲಿಗ್ಹೋಗದ್ಹಾಂಗ ಮಾಡಿಟ್ಟಾ
ಕಾಲ್ಮುರಿದು ಬಿಟ್ಟ
ಎಲ್ಲರಂಥವನಲ್ಲ ನನಗಂಡ ॥"[25]

ಪತಿಯ ಪ್ರೀತಿಯನ್ನು ಸಂಪಾದಿಸಿದವಳೊಬ್ಬಳು ತನ್ನ ಗೆಳತಿಗೆ ಆತ್ಮೀಯವಾಗಿ ಹೇಳುವ ಪರಿ ಇಲ್ಲಿ ಮೇಲ್ನೋಟಕ್ಕೆ ಕಂಡರೂ ಒಳ ಅರ್ಥ ಬೇರೆಯೇ ಇದೆ. ಭಕ್ತ ಸತಿಯ ಲೌಕಿಕ ಬದುಕಿನ ಚಂಚಲತೆಯ ಕಾಲನ್ನು ಪರಮಾತ್ಮ ಪತಿ ಮುಂದು ಅಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿದ ಸಂಗತಿಯಲ್ಲಿ ಸಾಂಕೇತಿಕಾರ್ಥದಲ್ಲಿ ಸಮಾವೇಶಗೊಂಡಿದೆ. ಅಧ್ಯಾತ್ಮ ಸಾಧನೆಯಲ್ಲಿ ತೊಡಗಿಸಿದ ಲಿಂಗ ಪತಿಯ ಅನುಗ್ರಹ ತನಗಾಯಿತೆಂದು ಷರೀಫನು ಇಲ್ಲಿ ಲೌಕಿಕರ ಮಾತಿನಲ್ಲಿ ಪರಿಣಾಮಕಾರಿಯಾಗಿ ಹೇಳಿದ್ದಾನೆ.

ಸತಿ–ಪತಿ ಭಾವದ ಮುಂದಿನ ಹಂತವೇ ಜೀವಾತ್ಮ-ಪರಮಾತ್ಮರ ಐಕ್ಯ ಅಥವಾ ಭಕ್ತ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದಾಗಿದೆ. ಅನುಭಾವಿ ಕವಿಗಳು ಪರಮಾತ್ಮನ ಸಾಕ್ಷಾತ್ಕಾರದ ಅನುಭವದಿಂದ ಆನಂದ ತುಂದಿಲರಾಗಿ ಹಾಡಿದ ತತ್ವ ಪದಗಳಂತೂ ಕನ್ನಡದಲ್ಲಿ ಹೇರಳವಾಗಿ ಸಿಗುತ್ತವೆ. "ಅನುಭಾವಿ ಕವಿಗಳು ಒಂದರ್ಥದಲ್ಲಿ ಧಾರ್ಮಿಕ ಸಾಧಕರು, ಮುಮುಕ್ಷುಗಳು, ಅನುಭಾವ ಮಾರ್ಗದಲ್ಲಿ ಮುನ್ನಡೆದವರು. ಅವರು ಪಡೆಯುವ ಅನುಭಾವ–ಆನಂದದ ನಿಲುವು ಅನುಪಮವಾದುದು. ಮಾತು–ಮನಂಗಳಿಗೆ ನಿಲುಕದಂಥದು. ನಾರದ ಭಕ್ತಿಸೂತ್ರ ಹೇಳುವಂತೆ "ಮೂಕಾಸ್ವಾದನವತ್" ಮೂಕನು ರುಚಿ ನೋಡಿದಂತೆ."[26] ಪರಮಾತ್ಮ ಸಾಕ್ಷಾತ್ಕಾರದ ಇಂಥ ಅನುಭಾವವನ್ನು ಅನುಭಾವಿಗಳು ತಮ್ಮ ಪದಗಳಲ್ಲಿ ವಿಧ ವಿಧವಾಗಿ ಬಣ್ಣಿಸಿದ್ದಾರೆ. ನಿಜಗುಣರು ಅದನ್ನು 'ವಿಮಲ ಪರಂಜ್ಯೋತಿ' ಎಂದು ಕರೆದರೆ, ಚಿದಾ

---

24 „ ಅದೇ
25 ಲಕ್ಷ್ಮೀನಾರಾಯಣ ಭಟ್ಟ ಎನ್. ಎಸ್. (ಸಂ): ಷರೀಫ್ ಸಾಹೇಬರ ಗೀತೆಗಳು
26 ತಿಪ್ಪೇರುದ್ರಸ್ವಾಮಿ ಎಚ್. ಕನ್ನಡದಲ್ಲಿ ಅನುಭಾವ ಸಾಹಿತ್ಯ, ಪು. 13.

ನಂದ ಅವಧೂತರು "ಮುತ್ತು" ಎಂದು ಕರೆದಿದ್ದಾರೆ. ಅದೆಂಥ ಮುತ್ತು ಎಂಬುದನ್ನಿಲ್ಲಿ ನೋಡಬಹುದು.

"ಮುತ್ತು ಬಂದಿದೆ ಕೊಳ್ಳಿರಣ್ಣ । ಆದಕೆ
ಎಜ್ಜೆಲ್ಲಾ ಏಣೆಲ್ಲಾ ಬೆಲೆಮಾಗದಣ್ಣಾ
ಥಳ ಥಳ ಹೊಳೆಯುತಾದಣ್ಣಾ । ಅದು
ಬಲ್ಲ ಜಾಣರಿಗೆ ಬಯಲೊಳಗಣ್ಣಾ ॥
ಅದು ಕೂದಲ ಎಳೆಗಿಂತ ಸಣ್ಣಾ ಅದು
ಬಣ್ಣ ಬಣ್ಣದ ಬ್ರಹ್ಮಲೋಕಣ್ಣಾ ॥"[27]

ಅನುಭಾವಿಗಳ ದೃಷ್ಟಿಯಲ್ಲಿ ಅನುಭಾವವು ಬ್ರಹ್ಮವೇ ಆಗಿದೆ. ಪರಬ್ರಹ್ಮದ ಅನುಭವವಾದಾಗ ಅವರು ಅತಿಶಯವಾದ ಆನಂದವನ್ನು ಪಡೆಯುವರು. ಶಂಕರಾನಂದರು, ಹಾಗಲ್ವಾಡಿ ಮದ್ವೀರಸ್ವಾಮಿಗಳು ಅನುಭಾವವನ್ನು ರತ್ನವೆಂದು ಕರೆದಿದ್ದಾರೆ. ಆ ರತ್ನವನ್ನಾರೂ ಕದಿಯರು. ಅದು ಪೃಥ್ವಿಯಲ್ಲಿ ಅಧಿಕವಾದುದು. ಮದ್ವೀರ ಸ್ವಾಮಿಗಳು ತಮಗೆ ಎಲ್ಲೆಲ್ಲೂ ಅದೇ ಕಾಣುವುದೆನ್ನುವರು :

"ಸರಸಿಜಾನನೆ ಕೇಳೊಂದು ರತ್ನವನು ಕಂಡೆ
ಪರಿಕಿಸಲಸದಳವೆ
ಒಂದು ರೂಪಾಗಿ ಕಾಣುತಲಿಹುದು
ನೋಡಲೆರೆಡು ರೂಪಾಗಿಹುದು.
ಮುಂದೆ ಮೂವಿಧವಾಗಿ ಶೋಭಿಸುತಿಹುದಿದ
ರಂದವ ತಿಳಿದನುಭವಿಪ ಕೋವಿದರಾರು ?
ಹಲವು ಬಣ್ಣಗಳಾಂತು ಸುಳಿದಾಡುತಿಹುದದು
ಥಳಿಲನುಲಿವುತಿಹುದು
ಕಲವಲವಾಗಿಹುದಮಲ ಶ್ರೀ ಗುರು ಸಂಗ
ನೊಲುಮೆಯ ಶರಣ ಜನಕ್ಕೆ ಚೋದ್ಯತರವಲ್ಲ ॥[28]

ಅನುಭಾವ ಸುಖವನ್ನನುಭವಿಸಿದ ನಾಗಲಿಂಗಜ್ಜರು ತಮ್ಮ ತತ್ವ ಪದವೊಂದರಲ್ಲಿ ಅದನ್ನು ಹೀಗೆ ಬಣ್ಣಿಸಿರುವರು.

"ಆನಂದವಾದ ಚಿದ್ಘನ ವಸ್ತು ನಾ ಕಂಡೆ
ಭಾನುವಿಲ್ಲದ ಬಿಸಿಲೇನಮ್ಮಾ
ನಡುವೀರ ಮಧ್ಯದಿ ವಟವೃಕ್ಷ ನಾ ಕಂಡೆ
ಹೂವಿಲ್ಲ ಮಿಡಿಗಾಯಿ ಹಣ್ಣವಮ್ಮಾ
ಅಖಂಡ ವನದೊಳು ಅಮೃತಕೊಡ ಉಕ್ಕಿ
ಉಂಡುಂಡು ಸುಖಿಸಿ ಬಾಳುವೇನಮ್ಮಾ"[29]

ಅನುಭಾವ ಸುಖವನ್ನು ಅನುಭವಿಸಿದ ಪರಿ ಇಲ್ಲಿ ಬೆಡಗಿನ ರೂಪದಲ್ಲಿದೆ. ನಿಂಬರಗಿ ಮಹಾರಾಜರು ಅನುಭಾವವು ಕಲ್ಲು ಸಕ್ಕರೆಗಿಂತ ಸಿಹಿಯಾದುದೆನ್ನುವರು. 'ಕೂಡಲೂರು ಬಸವಲಿಂಗ ಶರಣರ ಹಾಡುಗಳು ಅನುಭಾವ, ಸತ್ವ, ಸೌಂದರ್ಯಗಳ ದೃಷ್ಟಿಯಿಂದ ಬಹಳ ಮೇಲ್ಮಟ್ಟದವುಗಳಾಗಿವೆ. ಜನರ ಆಡು ನುಡಿಯಲ್ಲಿ ಪರತತ್ವದ, ಅಧ್ಯಾತ್ಮದ ಆತ್ಮಾನುಭೂತಿಯ ವಿವರಣೆ ಸಹಜ ಸುಂದರವಾಗಿದೆ. ಜನಜೀವನದಿಂದ ಅತಿ ಸಾಮಾನ್ಯ ವಿಷಯ, ಘಟನೆಗಳನ್ನು ಎತ್ತಿಕೊಂಡು ಅನುಭಾವವನ್ನು ಅಭಿವ್ಯಕ್ತಗೊಳಿಸುವಲ್ಲಿ ಅವರ ಕಾವ್ಯದ ಸತ್ವ ಸೌಂದರ್ಯಗಳ ದರ್ಶನವಾಗುತ್ತದೆ. ಸಾಮಾನ್ಯ ಜನರ ನಿತ್ಯ ಬಳಕೆಯ ವಿಷಯಗಳು, ವಸ್ತುಗಳು ಅವರ ಅಂತರಂಗದಲ್ಲಿ ಮಿಂದು ಕಾವ್ಯ

27. ದೇಶಪಾಂಡೆ ಎಂ. ಎಸ್. (ಅನು) : ಕನ್ನಡ ಪರಮಾರ್ಥ ಸೋಪಾನ, ಪುಟ : 75
28. ರಾಜೂರ ವೀರಣ್ಣ (ಸಂ) : ಹಾಗಲ್ವಾಡಿ ಮದ್ವೀರ ಸ್ವಾಮಿಯ ಸ್ವರ ವಚನಗಳು.
29 ದೇಶಪಾಂಡೆ ಎಂ. ಎಸ್. (ಅನು) : ಕನ್ನಡ ಪರಮಾರ್ಥ ಸೋಪಾನ, ಪುಟ-82

ವಸನವನ್ನುಟ್ಟು ಅನುಭಾವದ ನಾಲಗೆ ಪಡೆಯುತ್ತವೆ."[30] ಯೆಂಬ ಶಾಂತರಸರ ನುಡಿ ದಿಟವಾದುದಾಗಿದೆ. ಅನುಭಾವ ಸುಖವನ್ನನುಭವಿಸುತ್ತ ಪರಾಕಾಷ್ಠೆ ತಲುಪಿದಾಗ ಲೌಕಿಕರ ದೃಷ್ಟಿಗೆ ಹುಚ್ಚನಂತೆಯೇ ಕಾಣುವನು. ಅತನ ಇರವನ್ನು ಬಸವಲಿಂಗ ಶರಣರು ತಮ್ಮೊಂದು ಪದದಲ್ಲಿ ಹೀಗೆ ವರ್ಣಿಸಿದ್ದಾರೆ.

"ಎಂಥ ಹುಚ್ಚು ಹಿಡಿದಿತ ಈತಗ
ಕಟ್ಟಿದ ಗ್ವಾಡೆಯು ಕೆಡವು ತಾನ
ಉಟ್ಟ ಅರಿವಿ ಹರಿವು ತಾನ
ಹೊಟ್ಟೆ ತುಂಬ ಉಂಡು ಇನ್ನು
ಹುಟ್ಟು ಮುರಿದು ಬಿಟ್ಟಾತನಮ್ಮ."[31]

ಜೀವಾತ್ಮ-ಪರಮಾತ್ಮನಲ್ಲಿ ಐಕ್ಯವಾಗುವ ಸ್ಥಿತಿಯನ್ನು ತಲುಪಿದಾಗ ಹೀಗಾಗುವುದು, ಎಂದರ್ಥ ಈ ಪದದ ಹಿನ್ನೆಲೆಗೆ ಇದೆ. ತನ್ನನ್ನು ತಾನು ಪೂರ್ಣ ಅರಿತಾಗ ತಾನೇ ದೇವನಾಗುವನು. ಆಗ ಈ ಪ್ರಪಂಚವೆಲ್ಲ ತಾನೇ ತಾನಾಗಿ ಬಿಡುವನು. ಎಲ್ಲೆಲ್ಲೂ ತಾನೇ ವ್ಯಾಪಿಸಿ ಬಿಡುತ್ತಾನೆಂಬುದನ್ನು ಕಡಕೋಳ ಮಡಿವಾಳಪ್ಪನವರು ತಮ್ಮ ತತ್ವಪದವೊಂದರಲ್ಲಿ ಹೀಗೆ ಹೇಳಿದ್ದಾರೆ.

ತನ್ನ ತಾನು ತಿಳಿದ ಮೇಲೆ ಇನ್ನೇನಿನ್ನೇನೊ ।
ತನ್ನಂತೆ ಸರ್ವರ ಜೀವ ಮನ್ನಿಸಿ ಮೂಕಾದ ಮೇಲೆ ॥
ತಾನೆ ಪೃಥ್ವಿ ಅಪ್ಪು ತೇಜ ತಾನೆ ವಾಯು ಆಕಾಶಾತ್ಮ ।
ತಾನೆ ಸೂರ್ಯ ಚಂದ್ರತಾರೆ ತಾನೆ ಬ್ರಹ್ಮಾಂಡಾದ ಮೇಲೆ ॥
ತಾನೆ ಘ್ರಾಣ ಜಿಹ್ವೆನೇತ್ರ ತಾನೆ ತ್ವಕ್ಕು ಶ್ರೋತೃಹೃದಯ ।
ತಾನೆ ಕಾಯ ಕರಣ ಹರಣ ತಾನೆ ಪಿಂಡಾಂಡಾದ ಮೇಲೆ ॥
— — — — —
ತಾನೆ ನೀನು ನೀಗು ತಾನು ತಾನೆ ಅಲ್ಲ ತಾನೆ ಇಲ್ಲ ।
ತಾನೆ ಮಹಾಂತ ತಾನೆ ತಾನು ಏನೊ ಏನೊಂದಾದ ಮೇಲೆ ॥[32]

ಈವರೆಗೆ ಅನುಭಾವದ ಸ್ವರೂಪ, ಹಾಗೂ ಅನುಭಾವಿಗಳ ತತ್ವಪದಗಳಲ್ಲಿ ವ್ಯಕ್ತಗೊಂಡ ಅನುಭಾವದ ವಿವಿಧ ಹಂತಗಳನ್ನು ಉದಾಹರಣೆಗಳೊಂದಿಗೆ ನೋಡಿದೆವು. ಅನುಭಾವವು ಅಂತರಂಗಕ್ಕೆ ಸಂಬಂಧಿಸಿದುದಾಗಿದ್ದು, ಪರಮಾತ್ಮನನ್ನು ಅರಿಯುವ ಜ್ಞಾನವಾಗಿದೆ. ಆ ಅರಿವು, ಜ್ಞಾನ ಒಮ್ಮೆಲೇ ಎಲ್ಲರಿಗೂ ಸಾಧ್ಯವಾಗುವಂಥದಲ್ಲ, ಸಾಧನೆಯ ಮೂಲಕ ಕ್ರಮ ಕ್ರಮೇಣ ಸಿದ್ಧಿಸುವಂಥದು. ಅನುಭಾವದ ಸಿದ್ಧಿಗಾಗಿ ಸಾಧನೆಯಲ್ಲಿ ತೊಡಗಿದವರು ಹೆಚ್ಚಾಗಿ ಮಠಾಧಿಪತಿಗಳು, ಸಾಧು ಸತ್ಪುರುಷರು, ಸಂತರು ಹಾಗೂ ಅನುಭಾವಿ ಕವಿಗಳು. ಇವರೆಲ್ಲರಿಗೂ ಲೌಕಿಕ ಬದುಕಿನ ಹಂಗನ್ನು ಹರಿದುಕೊಂಡವರು ; ಕೈವಲ್ಯಾನುಭಾವಕ್ಕೇ ತಮ್ಮನ್ನು ಮೀಸಲಾಗಿಟ್ಟುಕೊಂಡವರು. ಒಂದರ್ಥದಲ್ಲಿ ಇವರೆಲ್ಲ ಸನ್ಯಾಸಿಗಳೇ, ಆದರೂ ಇವರ ಅನೇಕ ತತ್ವಪದಗಳು ಲೌಕಿಕರ ಬದುಕನ್ನು ಹಸನುಗೊಳಿಸುವ ಉದ್ದೇಶವಿರಿಸಿಕೊಂಡುದನ್ನೂ ಗುರುತಿಸಬಹುದು. ಲೌಕಿಕ ಅಲೌಕಿಕ ಎರಡೂ ವಿಷಯಗಳನ್ನು ಈ ಪದಗಳು ಒಳಗೊಂಡರೂ ಅಲೌಕಿಕದತ್ತ ಇವುಗಳ ಒಲವುಜಾಸ್ತಿ. ಅನುಭಾವವೇ ಇವುಗಳ ಜೀವಾಳವಾಗಿದೆಯೆನ್ನಬಹುದು.

30 ಸುಂಕಾಪುರ ಎಂ. ಎಸ್. (ಸಂ) : ಜಾನಪದ ಸಾಹಿತ್ಯದರ್ಶನ, ಭಾಗ-5, ಪುಟ-107
31 ಶಾಂತರಸ (ಸಂ) : ಕೊಡಲೂರು ಬಸವಲಿಂಗ ಶರಣರ ಸ್ವರವಚನಗಳು.
32. ಲಠ್ಠೆ. ಎಂ. ಎಸ್. (ಸಂ.) ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು.

ಪ್ರಚಾರ ಮಾಧ್ಯಮಾವಾಗಿ ಬೀದಿನಾಟಕ

ಡಿ. ಬಿ. ಮಲ್ಲಿಕಾರ್ಜುನ ಸ್ವಾಮಿ

ಆದಿ ಮಾನವ ಅದೇನನ್ನೋ ಹೇಳಬೇಕು ಎಂದಾಗಲೆ ಮಾತುಗೆ-ಮಾತು ಎದುರು-ಬದರು ನಿಂತಾಗಲೇ, ನಾಟಕವಾಗಿದೆ ಬೇಟೆಯನ್ನು-ಆಟಮಾಡಿ, ಹೆಜ್ಜೆಗೆ ಹೆಜ್ಜೆ ಹಾಕಿ, ದನಿಗೆ ದನಿ ಸೇರಿಸಿ, ಭಾವಕ್ಕೆ ರಾಗ ಹಾಕಿ-ಆದಿ ಮಾನವ ಕುಣಿಯುತ್ತಿದ್ದಂತೆಯೇ ಸುತ್ತ ನೆರೆದ ಜನ ಅದನ್ನು ನೋಡುತ್ತಿದ್ದಂತೆಯೇ ಬೀದಿನಾಟಕದ ಉಗಮವಾಗಿದೆ ತಂತಿಯ ಮೇಲೆ ಅಡ್ಡ-ಕಡ್ಡಿ ಹಿಡಿದು ನಡೆವ ಹುಡುಗಿಯನ್ನು ನೋಡುತ್ತಲೇ ಹೊಟ್ಟೆಪಾಡಿನ ಬೀದಿನಾಟಕ ನೋಡಿದ್ದೇವೆ. ಹಲ್ಲು ಕಿತ್ತ ಹಾವು ಪುಂಗಿಯನಾದಕ್ಕೆ ಹೆಡೆಯಾಡುವಾಗ ಹಾವಾಡಿಗನ ಆಟ ನೋಡಿದ್ದೇವೆ ದೇವಾನು ದೇವತೆಗಳು ಬೀದಿಗೆ ಬಂದವರೆಂಬಂತೆ-ಪುರಾಣ ಪುರುಷರ ವೇಷ ಹಾಕಿ-ಬೀದಿ ಬೀದಿಯಲ್ಲಿ ಕತೆ ಮಾಡಿದ ಹಗಲು ವೇಷದವರ ಬಗ್ಗೆ ಬಹುರೂಪಿಗಳ ಬಗ್ಗೆ ತಿಳಿದಿದ್ದೇವೆ ನಮ್ಮ ಹುಟ್ಟಿನಿಂದಲೇ ಬೀದಿನಾಟಕದ ಹುಟ್ಟು ಪ್ರಾರಂಭವಾಗಿದೆ ಎನ್ನಬಹುದು ಆದರೆ ಬೀದಿನಾಟಕದ ಕಲ್ಪನೆ-ಸ್ಪಷ್ಟ ರೂಪ ಇತ್ತೀಚಿನದು ಪ್ರತಿಭಟನೆಗೆ ಹುಟ್ಟಿಕೊಂಡ ಬೀದಿನಾಟಕಗಳು ಯಥಾಪ್ರಕಾರ ಪಾಶ್ಚಿಮಾತ್ಯರ ಕೊಡುಗೆ ಭಾರತದಲ್ಲಿ, ದೆಹಲಿ, ಬಂಗಾಳದಲ್ಲಿ ಮೊದಲು ಪ್ರದರ್ಶನಗೊಂಡ ಬೀದಿನಾಟಕಗಳು ಚಿತ್ರಾ ಸಮುದಾಯ ತಂಡಗಳ ಮೂಲಕ ಕರ್ನಾಟಕದಲ್ಲಿ ಪ್ರವೇಶ ಪಡೆದ ಇವು ಈಗ, ನಾಡಿನಾದ್ಯಂತ ವಿವಿಧ ತಂಡಗಳಿಂದ ಪ್ರದರ್ಶನಗೊಂಡಿವೆ. ಬೀದಿನಾಟಕ ಒಂದು ನಾಗರಿಕತೆಯ ಸಂಸ್ಕೃತಿಯೊಂದಿಗೆ ಬೆಳೆದುಬಂದ ಒಂದು ಭಾಷೆ ಒಂದು ಸುದೀರ್ಘ ರಂಗಯಾತ್ರೆ ಹರಿವ-ಹರಿವ ಒಂದು ರಂಗಕ್ರಿಯೆ.

ಆದಿಯಲ್ಲಿ ಬಂದಿರುವ ಯಾವುದೇ ವಿಶ್ವಸಾಹಿತ್ಯವನ್ನು ಅವಲೋಕಿಸಿದಾಗ ಅದು ಧರ್ಮದ ಪ್ರಚಾರ ಮಾಧ್ಯಮವಾಗೆ ಇದ್ದದ್ದು ಕಂಡ ಬರುತ್ತದೆ. ಪ್ರವಾದಿಗಳು ಕಾಡು ಪುರುಷರು ಕಂಡುಕೊಂಡ ಸತ್ಯಗಳು ವಿಚಾರಗಳು ಜನರನ್ನು ತಲುಪಿದ್ದು ಸಾಹಿತ್ಯ ಪ್ರಕಾರಗಳಲ್ಲಿ ಸಾಹಿತ್ಯದ ಮೂಲ ಉದ್ದೇಶ ಧರ್ಮದ ಪ್ರಚಾರ ಮಾಡುತ್ತಾ ಜನರಲ್ಲಿ ಧರ್ಮದಲ್ಲಿ ನಂಬಿಕೆ ಮತ್ತು ವಿಶ್ವಾಸ ಬೇರೂರುವಂತೆ ಮಾಡುವುದೇ ಆಗಿತ್ತು ಧಾರ್ಮಿಕ ತತ್ವಗಳ ಪ್ರಚಾರವನ್ನು ಅಧಿಕಗೊಳಿಸುವಲ್ಲಿ ಸಾಹಿತ್ಯ ಪ್ರಕಾರಗಳ ಪಾತ್ರ ಅತಿ ಮುಖ್ಯ.

ಅನಂತರ ಬಂದ ಸಾಹಿತ್ಯವು ಮೌಲ್ಯ ಆದರ್ಶಗಳನ್ನು ಬಿಂಬಿಸುತ್ತಾ ಮನುಷ್ಯನ ಎಲ್ಲಾ ಒಳಿತು-ಕೆಡುಕುಗಳನ್ನು ಪ್ರಕಟಗೊಳಿಸುತ್ತ ಧರ್ಮದ ಔನತ್ಯವನ್ನು ಪ್ರಚಾರ ಮಾಡುತ್ತಲೆ ಬಂದವು. ಧರ್ಮ ಪ್ರಚಾರವೇ ಸಾಹಿತ್ಯ ರಚನೆಗೆ ಪ್ರೇರಣೆ ಕೊಟ್ಟದ್ದು ಉಂಟು.

ಸಾಹಿತ್ಯದ ಅವಿನಾವ ಸಂಬಂದವನ್ನು ಪಡೆದಿರುವ ನಾಟಕಗಳು ಸಹ ಆದಿಯಲ್ಲಿ ಸಾಮಾಜ
ಮೌಲ್ಯಗಳನ್ನು ಪ್ರವಾದಿ ಪುರುಷರ ಉಪದೇಶಗಳನ್ನು ಧಾರ್ಮಿಕ ನೆಲೆಯಲ್ಲಿಯೆ ಪ್ರಚಾ
ಮಾಡಲಿಕ್ಕೆ ರಚನೆಯಾದವು ಎಂದರೆ ತಪ್ಪಾಗಲಿಕ್ಕಿಲ್ಲ.

ಕೈಗಾರಿಕಾ ಕ್ರಾಂತಿ ಪುರುಜ್ಜೀವನ, ಕೈಗಾರಿಕರಣ-ವಸಾಹತೀಕರಣದ ಅನಂತರ ಬಂ
ಸಾಹಿತ್ಯದ ವಿವಿಧ ಪ್ರಕಾರಗಳು-ನಾಟಕಗಳು-ಕಲೆ ಇವೆಲ್ಲವು ಧಾರ್ಮಿಕ ಚೌಕಟ್ಟಿನಿಂ
ಹೊರಬಂದು ಬೇರೆಯದೆ ಆದ ಸ್ವರೂಪವನ್ನು ಪಡೆದವು. ಇಂತಹ ಒಂದು ಸ್ಥಿತ್ಯಂತ
ಅವಧಿಯಲ್ಲಿ ಸಮಾಜ ತಲುಪಿದ ದುಃಸ್ಥಿತಿ-ಕೊಳೆತು ನಾರಲು ಪ್ರಾರಂಭಿಸಿದ ವ್ಯವಸ್ಥೆ-ಸಮಾಜ
ಆರ್ಥಿಕ ಅಸಮಾನತೆ, ಭ್ರಷ್ಟ ರಾಜಕೀಯ ವ್ಯವಸ್ಥೆ ಇವುಗಳಿಗೆ ಪ್ರತಿಭಟನಾತ್ಮಕವಾಗಿ ಬಂದದ
ಬೀದಿನಾಟಕಗಳು.

ಕಲಾ ಪ್ರಕಾರವಾದ ಬೀದಿ ನಾಟಕಗಳನ್ನು ಪ್ರಚಾರಮಾಧ್ಯಮಕ್ಕೆ ಬಳಸುವುವಾದಲ್ಲಿ ಅದ
ಸಾಧಕ-ಬಾದಕಗಳೇನು ಎಂಬುದನ್ನು ವಿಚಾರ ಮಾಡುತ್ತಾ ಹೋದಂತೆ ನನ್ನಲ್ಲಿ ಉದ್ಭವಿಸಿ
ಪ್ರಶ್ನೆಗಳನ್ನು ತಮ್ಮ ಮುಂದೂ ಇಡುತ್ತೇನೆ.

ಪ್ರಚಾರ ಮಾಧ್ಯಮವಾಗಿ ಬೀದಿನಾಟಕದ ಸ್ಥಾನ-ಮಾನ

1. ಪ್ರಚಾರದ ಪರಿಕಲ್ಪನೆ
2. ಆಧುನಿಕ ಪ್ರಚಾರ್ಧ ಕಲೆಯ ಹುಟ್ಟು-ಬೆಳವಣಿಗೆ
3. ಬೀದಿನಾಟಕಕ್ಕೆ ಪ್ರಚಾರ ಮಾಧ್ಯಮವಾಗಿ ಆಧುನಿಕ ಯಂತ್ರಯುಗದಲ್ಲಿ ಇರುವ ಸೀಮಿ
   ಚೌಕಟ್ಟು
4. ಯಾಂತ್ರಿಕೃತ ಮಾಧ್ಯಮಕ್ಕೆ ಇರುವ ವಿಶಾಲ ಭೂಮಿಕೆಯಲ್ಲಿ
5. ಬೀದಿನಾಟಕ ಏನನ್ನ ಪ್ರಚಾರ ಮಾಡಬೇಕು ಮೌಲ್ಯವನ್ನೆ-ಮಾರುಕಟ್ಟೆಯ ಸರಕುಗಳನ್ನ
6. ಬೀದಿನಾಟಕ ಒಂದು ಕಲಾಪ್ರಕಾರ ಅದನ್ನು ನೇರವಾಗಿ ವ್ಯವಹಾರಿಕ ಜಗತ್ತಿಗೆ
   ತೊಡಗಿಸಿದರೆ ಆಗುವ ಲಾಭ ಮತ್ತು ನಷ್ಟ.
7. ಬೀದಿನಾಟಕಗಳನ್ನು ಪ್ರಚಾರ ಮಾಧ್ಯಮವಾಗಿ ತೊಡಗಿಸಬೇಕೆ?

ಪ್ರಚಾರದ ಪರಿಕಲ್ಪನೆ ನೆನ್ನೆ-ಮೊನ್ನೆ ಯದೇನಲ್ಲ ಶಿಲಾಶಾಸನ (ಅಶೋಕ ಶಿಲಾಶಾಸನಗಳ
ಧರ್ಮವನ್ನು ಆಧರಿಸಿದ ಸಾಹಿತ್ಯಾಕೃತಿಗಳು ಇಲ್ಲಿಯೆ ಇದರ ಮೂಲವಿದೆ ಎನ್ನಬಹುದು ಧಾಮಿ
ನೆಲೆಗಟ್ಟಿನಲಿಯ ಬಳಕೆಯಲ್ಲಿದ್ದ ಧರ್ಮ ಪ್ರಚಾರಕಷ್ಟೆ ಬಹಳಷ್ಟು ಸೀಮಿತವಾಗಿದ್ದ ಪ್ರಚಾರ
ನಾನು ಮೊದಲೇ ತಿಳಿಸಿದಂತೆ ಕೈಗಾರಿಕರಣ ಮತ್ತು ವಸಾಹತೀಕರಣ ನಂತರದ ಆಧುನಿಕ ಯು
ಸಮಾಜ ಅಡಿ ಇಡುತ್ತಿದ್ದಂತೆಯೆ ಪ್ರಚಾರಕಲೆ-ಪ್ರಚಾರಶಾಸ್ತ್ರವಾಗಿ ಬೆಳೆದು ಅ
ಸ್ವರೂಪ-ಅರ್ಥ ವಿಸ್ತಾರಗಳು ಬದಲಾಗಿ ವ್ಯವಹಾರಿಕ ಜಗತ್ತಿನ ಒಂದು ಪ್ರಮುಖ ಅಂಗವ

ಬೆಳೆಯಿತು. ಪ್ರಚಾರಕ್ರಮದಲ್ಲಿ ಸ್ಪರ್ಧಾತ್ಮಕ ಯುಗ ಪ್ರಾರಂಭವಾಯಿತು.

ಸಿದ್ಧಾಂತವನ್ನು-ಮೌಲ್ಯಗಳನ್ನು ತತ್ವಗಳನ್ನು-ಉಪದೇಶಗಳನ್ನು ಹೇಳಿಕೆಗಳನ್ನು ಪ್ರಚಾರಮಾಡುತ್ತಿದ್ದ ಮಾಧ್ಯಮಗಳು, ಆಧುನಿಕ ಯಂತ್ರಯುಗದಲ್ಲಿ ಸರಕುಗಳನ್ನು-ಸೇವೆಯನ್ನು ಪ್ರಚಾರ ಮಾಡಲಿಕ್ಕೆ ಪ್ರಾರಂಭಿಸಿದವು.

ಆಧುನಿಕ ಜಗತ್ತಿನ ಆವಿಷ್ಕಾರಗಳಾದ ಪ್ರಚಾರಕ್ಕೆ ತಮ್ಮನ್ನು ಒಳಗು ಮಾಡಿಕೊಳ್ಳುತ್ತಿರುವ ಮಾಧ್ಯಮಗಳೆಂದರೆ ಪ್ರಿಂಟಿಂಗ್ ಮೀಡಿಯಾದಲ್ಲಿ ನ್ಯೂಸ್‌ಪೇಪರ್ ಮ್ಯಾಗಜಿನ್‌ಗಳು ಪುಸ್ತಕಗಳು ಇತ್ಯಾದಿ ಹಾಗೂ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ-ರೇಡಿಯಾ ಟಿ.ವಿ ಫೀಲಮ್ ವಿಡಿಯೋ ಟೇಪ್ ಇತ್ಯಾದಿ ಹಾಗೂ ಫೋಟೋಗ್ರಾಪ್ಸ್, ಕಲೆ (ಆರ್ಟ್) ಕ್ಯಡ್ ಬೋಡ್, ಇಂತಹ ಮಾಧ್ಯಮಗಳೊಡನೆ ಪ್ರಚಾರ ಮಾಧ್ಯಮವಾಗಿ ಬೀದಿನಾಟಕ ಸ್ಪರ್ಧಿಸುವ ಶಕ್ತಿ ಪಡೆದಿವೆಯೆ ಎಂಬ ಪ್ರಶ್ನೆ ಎತ್ತುವುದಾದರೆ ಇಲ್ಲ ಎಂಬ ನಿಖರವಾದ ಉತ್ತರ ದೊರೆಯುತ್ತದೆ ಬೀದಿನಾಟಕಕ್ಕೆ ಇರುವ ಸೀಮಿತ ಚೌಕಟ್ಟೇ, ಅದಕ್ಕಿರುವ ವಿಶಾಲವಲ್ಲದ ಪರಿಧಿ ಇವೆ ಮೇಲೆ ಕಾಣಲ್ಪಟ್ಟ ಪ್ರಚಾರ ಮಾಧ್ಯಮದೊಡನೆ ಬೀದಿನಾಟಕಗಳು ಪ್ರಚಾರ ಮಾಧ್ಯಮವಾಗಿ ಸ್ಪರ್ಧಿಸಲಾರದು ಎಂದು ಸ್ಪಷ್ಟ ಪಡಿಸುತ್ತದೆ. ಇವತ್ತಿನ ಗ್ರಾಹಕ ಕ್ಷಣದರ್ಶದಲ್ಲಿ ಸರಕು-ಸೇವೆಗಳ ಪ್ರಚಾರವನ್ನು ತನ್ನ ಕೊಠಡಿಯಲ್ಲೆ ಕೂತು ವೀಕ್ಷಿಸಬಹುದಾದ ಸಂದರ್ಭವಿದೆ. ಕೊಟ್ಯಾಂತರ ಜನರನ್ನು-ಗ್ರಾಹಕರನ್ನು ಅತಿ ಕಡಿಮೆ ಕಾಲವಧಿಯಲ್ಲಿ ತಮ್ಮ ವೈವಿಧ್ಯಪೂರ್ಣ-ವಿಸ್ಮಯ-ಪ್ರಚಾರ ತಂತ್ರಗಳ ಮೂಲಕ ತಲುಪಬಹುದಾದ ಮಾಧ್ಯಮಗಳನ್ನು ನಾವು ಇಂದು ಕಾಣುತ್ತಿದ್ದೇವೆ ಇಂತಹ ಮಾಧ್ಯಮಗಳೊಡನೆ ಬೀದಿನಾಟಕದ ಸ್ಥಾನವೇನು ಬೀದಿನಾಟಕಗಳನ್ನು ವೀಕ್ಷಿಸುವ ಪ್ರೇಕ್ಷಕರ ಬೀದಿನಾಟಕ ಪ್ರದರ್ಶನಗೊಳ್ಳಲು ನಿರೀಕ್ಷಿಸುವ ಕಾಲ ಮಾತ್ರ ಸುಳ್ಳು ಇವೆಲ್ಲವು ಬೇರೆ ಮಾಧ್ಯಮಗಳಿಗಿಂತ ಬಹಳ ಭಿನ್ನವಾಗಿರುತ್ತದೆ.

''ಲೈಫ್‌ಬಾಯ್ ಎಲ್ಲಿದಿಯೋ ಅಲ್ಲಿದೆ ಆರೋಗ್ಯ'' ನಾನು ಚಿಕ್ಕಂದಿನಲ್ಲಿ ಕೇಳುತ್ತಿದ್ದ ಎಲ್ಲರೂ ಕೇಳಿರಬಹುದಾದ ಲೈಫಬಾಯಿ ಸೋಪಿನ ಈ ಪ್ರಚಾರ ಲೈಫ್ ಬಾಯ್ ಸೋಪೆ ತಮ್ಮ ಆರೋಗ್ಯದ ರಕ್ಷಕ ಎಂದು ಭಾವಿಸದೆ ಅದನ್ನು ಬಳಸದೆ ಇದ್ದ ಎಷ್ಟೋ ಜನರ ಮನದಲ್ಲಿ ಆ ಸಾಲುಗಳು ಗುನುಗುತ್ತಿದ್ದದ್ದು ಅದು ನೆಲೆ ನಿಂತದ್ದು ತಮಗೆಲ್ಲರಿಗೂ ತಿಳಿದಿದೆ. ಇಂಥಹ ಒಂದು ಪರಿಣಾಮವನ್ನು ಬೀದಿನಾಟಕ ಮಾಡಲು ಸಾಧ್ಯವೆ?

ಪ್ರಚಾರದ ಭಾಷೆ ಬೇರೆ-ಅದರ ತಂತ್ರ ಬೇರೆ -ಅದು ತೆಗೆದುಕೊಳ್ಳುವ ಕಾಲ ಬೇರೆ ಆದರೆ ಅದರ ಪರಿಣಾಮ ವಿಸ್ತೃತವಾದದ್ದು-ವಿಸ್ತಾರವಾದದ್ದು. ಈ ನಿಟ್ಟನಲ್ಲಿ ಆಲೋಚಿಸುವುದಾದರೆ ಇದು ಬೀದಿನಾಟಕದಿಂದ ಸಾಧ್ಯವಿಲ್ಲದ್ದು.

ಹಾಗದರೆ ಬೀದಿ ನಾಟಕಗಳಿಂದ ಸಾಧ್ಯವಾಗುವುದರತ್ತ ನಾವು ದೃಷ್ಟಿ ಹರಿಸೋಣ ನಾನು

ಮೊದಲೆ ತಿಳಿಸಿದಂತೆ ಇದು ಒಂದು ನಾಗರಿಕತೆಯ ಸಂಸ್ಕೃತಿಯೊಂದಿಗೆ ಬೆಳದು ಬಂದ ಒಂದು ಭಾಷೆ ಒಂದು ರಂಗಕ್ರಿಯೆ ಈ ರಂಗಕ್ರಿಯೆ ಅದನ್ನೂ ದಾಟಿ ಅದು ಒಂದು ಸಾಮಾಜಿಕ ಕ್ರಿಯೆಯಾಗಬೇಕಾಗುತ್ತದೆ.

ಪ್ರತಿಭಟನೆಗೆ ಹುಟ್ಟಿಕೊಂಡ ಬೀದಿನಾಟಕಗಳು ತನ್ನಲ್ಲೆ ಹೊಸತನವನ್ನು ರೂಪಿಸಿಕೊಂಡು ಪ್ರತಿಭಟನೆಗಷ್ಟೆ ಸೀಮಿತವಾಗದೆ ಈಗಿರುವ ತನ್ನ ಸ್ವರೂಪದ ಗಟ್ಟಿತನವನ್ನು ಉಳಿಸಿಕೊಂಡು ಉದ್ದೇಶವನ್ನು ವಿಸ್ತರಿಸಬೇಕಾಗಿದೆ. ಇಂತಹ ಕುರುಹುಗಳು ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಲೂ ಇವೆ. ಕುರೂಪಗೊಳ್ಳುತ್ತಿರುವ ಮನುಷ್ಯನ ಮನಸ್ಸಿನ ವಿರುದ್ಧ ಸಮಾಜದ ಅನಿಷ್ಟಗಳ ವಿರುದ್ಧ ಬೀದಿನಾಟಕಗಳು ಇಂದು ದನಿ ಎತ್ತಬೇಕಾಗಿದೆ ಕಂದಾಚಾರಗಳ ಮೌಢ್ಯಗಳ ವಿರುದ್ಧ ನಿಶ್ಚಿತವಾದ ದೋರಣೆಯೊಡನೆ ಕ್ರಿಯಾಶೀಲವಾಗಬೇಕಾಗಿದೆ. ಸಾಕ್ಷರರಲ್ಲಿ-ನಿರಕ್ಷರರಲ್ಲಿ ಪ್ರಜ್ಞೆಯನ್ನು ಮೂಡಿಸಬೇಕಾಗಿದೆ. ಈ ಒಂದು ಕ್ರಿಯೆಗೆ ಪ್ರಚಾರ ಅನ್ನುವ ಪದವನ್ನಾದರೂ ಬಳಸಿ ಅಥವಾ ಏನನ್ನಾದರೂ ಬಳಸಿ ಆದರೆ ಈ ರಂಗಕ್ರಿಯೆ-ಸಮಾಜಿಕ ಕ್ರಿಯೆ ನೆಡೆಯಲೇಬೇಕು.

'ನಾವಿಬ್ಬರೂ ನಮಗಿಬ್ಬರು' -ಮಿತ ಕುಟುಂಬ ಹಿತ ಕುಟುಂಬ' ಇಂತಹ ಹೇಳಿಕೆಗಳನ್ನೊಳಗೊಂಡ ಕುಟುಂಬ ಯೋಜನೆ ಪರ ಮಾಡುವ ಬೀದಿನಾಟಕ, ಮಾದಕ ಪಾನೀಯಗಳು ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಎಚ್ಚರ ಮೂಡಿಸುತ್ತ ಮನುಷ್ಯನ ದುಶ್ಚಟದ ವಿರುದ್ಧ ಪ್ರಚಾರ ಮಾಡುವ ನಾಟಕಗಳು ಪರಿಸರ ಕಾಳಜಿಯನ್ನೊಳಗೊಂಡ ಪರಿಸರಪರ ಮಾಡುವ ನಾಟಕಗಳು ಸಾಕ್ಷರತೆಯ ಸಾರಲಿಕ್ಕೆ ಬಂದಿರುವ ನಾಟಕಗಳು ಇಂತಹ ಸವಕಲು ವಿಷಯಗಳನ್ನು ಪ್ರಚಾರ ಮಾಡಲಿಕ್ಕೆ ಹುಟ್ಟಿಕೊಂಡ ಬೀದಿನಾಟಕಗಳು ಈ ಪ್ರಕಾರವನ್ನು ಗೌಣವಾಗಿ ಕಾಣಲಿಕ್ಕೆ ಅನುವು ಮಾಡಿಕೊಟ್ಟವೇನೊ? ಈ ಪ್ರಕಾರದಲ್ಲಿ ಪ್ರಭುತ್ವವಿಲ್ಲದ ತಂಡಗಳು, ನಿರ್ದೇಶಕರು-ಸಂಘಟನಕಾರರು-ನಟರು ಇಲ್ಲಿ ಬಂದಿದ್ದರಿಂದಲೇ ಇಂತಹ ನಾಟಕಗಳು ಗೇಲಿಗೆ-ಅವಹೇಳನಕ್ಕೆ ಒಳಗಾದವು. ಚುನಾವಣೆಯ ಕಾಲದಲ್ಲಿ ದಿಢೀರ್ ಹುಟ್ಟುಕೊಂಡು ಪಕ್ಷಪರ-ವ್ಯಕ್ತಿಪರ ಪ್ರಚಾರ ಮಾಡಿದ ಯಾವುದೇ ಕಾಳಿಜಿಯ ಇಲ್ಲದ ದಿಢೀರ್ ತಂಡಗಳು ಈ ಮಾಧ್ಯಮವನ್ನು ಕುಲಗೇಡಿಸುವುದಕ್ಕೆ ಶ್ರಮಿಸಿದವು ಎಂದರೆ ತಪ್ಪಾಗಲಿಕ್ಕಿಲ್ಲ.

ಆದರೆ ಸಮರ್ಥವಾದ ನಾಟಕಕಾರ-ನಿರ್ದೇಶಕ-ತಂಡ ಮೇಲೆ ಕಾಣಿಸಿದ ವಿಷಯಗಳನ್ನೊಳಗೊಂಡ ನಾಟಕಗಳನ್ನು ಪ್ರಚಾರಮಾಡಲಿಕ್ಕೆ ಬೀದಿನಾಟಕವನ್ನು ಮಾಧ್ಯಮವಾಗಿ ಬಳಸಿದರೆ ತಪ್ಪೇನಿಲ್ಲ ಸಮರ್ಥವಾದ ತಂಡಗಳು ಇಂತಹ ವಿಷಯವನ್ನು ಪ್ರಚಾರ ಮಾಡಲಿಕ್ಕೆ ತೊಡಗಿದರೆ ಹಂತ ಹಂತವಾಗಿ ಜನರನ್ನು ಸಾಮಾಜಿಕ ಪಿಡುಗಗಳಿಂದ ದೂರ ಮಾಡಬಹುದೇನೊ? ಚಳುವಳಿಯ ರೂಪದಲ್ಲೆ ಈ ಕ್ರಿಯೆ ನೆಡೆಯಬೇಕು. ಸಂಘಟಿತ ಯತ್ನ ಇಂತಹ ಪ್ರಚಾರಮಾಧ್ಯಮಕ್ಕೆ ಅಗತ್ಯ. ಅಲ್ಲೊಂದು ಇಲ್ಲೊಂದು ತಂಡಗಳು ಈ ನಿಟ್ಟಿನಲ್ಲಿ ಕೆಲಸ

ಮಾಡಿದರೆ ಅದರ ಪರಿಣಾಮ ಶೂನ್ಯ.

ಬೀದಿನಾಟಕಗಳನ್ನು ಮೇಲ್ಕಂಡ ವಿಷಯುಗಳ ಮಟ್ಟಿಗೆ ಪ್ರಚಾರ ಮಾಧ್ಯಮಕ್ಕೆ ತೊಡಗಿಸುತ್ತೇವೆ ಅನ್ನುವುದಾದಲ್ಲಿ ಸುವ್ಯವಸ್ಥಿತವಾದಂತಹ ಯೋಜನೆ ಬೇಕು. ಆ ಯೋಜನೆ ಸಾಕ್ಷರತಾ ಯೋಜನೆಯಂತೆ ಖಂಡಿತ ಇರಕೊಡದು, ಕಾರ್ಯರೂಪಕ್ಕೆ ಬರಕೊಡದು.

ಬೀದಿ ನಾಟಕಗಳು ಸಾರ್ವಕಾಲಿಕ ಅಲ್ಲ ಅವು ಏನಿದ್ದರೂ ವರ್ತಮಾನದಲ್ಲಿ ಮಾತ್ರ ನಿಲ್ಲುವಂತಹವು ವರ್ತಮಾನದ ಸಮಸ್ಯೆಗಳಿಗೆ ತೀಕ್ಷ್ಣವಾಗಿ ಸ್ಪಂದಿಸುವಂತಹವು ಇಂತಹ ನಾಟಕಗಳನ್ನು ಅಭಿನಯಿಸುವ ತಂತ್ರವು ಬಹು ಎಚ್ಚರಿಕೆಯಿಂದ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. ಸ್ವಲ್ಪ ವಿಚಾರ ತಪ್ಪಿದರೂ ಸಹ ಆ ನಾಟಕಗಳು ತಲುಪಿಸಬೇಕಾದ ವಿಷಯವು ತಲುಪದೆ ಗಂಬೀರ ವಿಚಾರವು ಸಹ ನೆಗೆಪಾಟಲಿಕೆ ಎಡೆಮಾಡಿಕೊಡುತ್ತವೆ. ಅಂದಮೇಲೆ ಪ್ರಾಚಾರಕಷ್ಟೆ ಸೀಮಿತವಾದ ಬೀದಿನಾಟಕಗಳು ಅವನ್ನು ಅಭಿನಯಿಸಿದ ತಂಡಗಳ ಜವಾಬ್ದಾರಿ ಹೆಚ್ಚಿನದಾಗಿರುತ್ತದೆ.

ಕಾವೇರಿ

- ಡಾ. ವಿಜಯ ಕುಮಾರ ಮಹಾನುಭಾವಿಗಳು-

ಉಳಿವಿಲ್ಲವು ಅಳಿವಾಗಿದೆ ಎದ್ದೇಳಿರಿ ಅಣ್ಣ
ಜಲವೆಲ್ಲವು ನೆಲೆ ತಪ್ಪಿದೆ ಒಂದಾಗಿ ಎಲ್ಲ
ಬಾಳೆಲ್ಲವು ಬಲವಾಗಲು ಶ್ರಮದಾನಕೇ ಬನ್ನಿ
ಅರಿವಿಲ್ಲವು ತಿಳಿ ಹೇಳಿರಿ ಕನ್ನಡಿಗರಿಗೆಲ್ಲ

ದುಡಿವಿಲ್ಲವು ಮನೆಯಿಲ್ಲವು ಸಂಸಾರದ ಚಿಂತೆ
ಬಾಳಿಲ್ಲವು ಧನಇಲ್ಲವು ನಡೆಯುತ್ತಿದೆ ಸಂತೆ
ಹಾಲೋಗರ ಉಣ ಲ್ಲೆವೆ ಬಲ ದುಡಿಮೆಯ ನಡೆಸು
ಕೈತಪ್ಪುವ ನೆಲಜಲವು ಸಮೃದ್ಧಿಗೆ ಬೇಕು.

ಕಾವೇರಿಗೆ ಕಾವೇರಿದೆ ಎದ್ದೇಳಿರಿ ಇಲ್ಲ
ಝುಲ್ಲೆನ್ನುವ ದನಿಯೇಳಲಿ ಕೃಷ್ಣ, ತುಂಗ, ಭದ್ರ
ಎದ್ದೇಳಿರಿ ಜಡ ಹೊಂಗಲಿ ಝಾಡಿಸಿ ಜಡ ನಿದ್ದೆ
ಸಮೃದ್ಧಿಯ ಅಣೆಕಟ್ಟೆಗೆ ಧರೆಯಾಗಲಿ ಗದ್ದೆ.

ನಾಡೆಲ್ಲವು ಬೀಡೆಲ್ಲವು ಕಗ್ಗತ್ತಲ ಖಂಡ
ವಿದ್ಯುತ್ತಿಗು ಬರ ಬಂದಿದೆ ತೆರಬೇಕಿದೆ ದಂಡ
ಹಾಕಿದ ಬಲು ಯೋಜನೆ ಎಡತಾಕಿದೆ ಬೀರಲ್ಲಿ
ಕೋಟಿಯ ಹಣವೆಲ್ಲವು ಕೋಟಿನ ಕಿಸೆಯಲ್ಲಿ

ಬಡ ಬೋರನ ಬಲು ದುಃಖ ಕೇಳುವರಾರಿಲ್ಲಿ
ಉಸಿರಾಟಕು ವಿಷತುಂಬಿದೆ ಎಲ್ಲೆಲ್ಲು ವಿಷ ಗಾಳಿ
ಉಸಿರಾಟದ ಈ ಗಾಳಿಯು ವಿಷವಾಯಿತೆ ಅಕಟ
ನಿದ್ದೆಯಲಿದ್ದರೆ ಪ್ರಾಣವೆ ಹೋಯಿತು ಅಕಟಕಟ

ರಟ್ಟೆಯ ಕಸವನು ಅರಿವಿಗೆ ತನ್ನಿರಿ ಕನ್ನಡಿಗರೆಲ್ಲ
ನೆಲ ಬೇಕಿದೆ ಜಲ ಬೇಕಿದೆ ಬೆಳೆ ಬೇಕಿದೆ ಅಣ್ಣ
ಹೇಗಿದ್ದೆವು ಹೇಗಾದೆವು ಇತಿಹಾಸದ ಪುಟನೋಡಿ
ಇಲ್ಲದ ಇಲ್ಲವೆ ಬಾಳನು ತುಂಬಿದೆ ಅವಲೋಕನ ಮಾಡಿ.

ಹಸಿವಾಗಿದೆ ಒಲೆಹಚ್ಚಿದೆ ತಳಒಡೆದಿದೆ ಮಡಕೆ
ಅಟ್ಟುಣ್ಣಲು ಬಲುಸಡಗರ ಉಣಬಲ್ಲೆವೆ ರಸಪಾಕ
ಮನಕನ್ನಡಿ ಜುಬಾಬಯಿತೆ ಮರೆವಿನ ಬಾಳು
ಬಾಳಿದು ಅರಳಲಿ ಪರಿಮಳ ಬೀರಲಿ ಬಯಲ ಮಾನಸದೇವ

15-8-1995-ಬೆಂಗಳೂರು.

ತೀರ್ಥಹಳ್ಳಿಯ ಜೋಗಿ ಗುಡ್ಡದ ಜೈನ ಅವಶೇಷಗಳು :

ಜ.ಕೆ. ದೇವರಾಜ ಸ್ವಾಮಿ
ರಘುವೀರ ಹೆಗಡೆ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯು ಒಂದು ತಾಲ್ಲೂಕು ಕೇಂದ್ರವಾಗಿದೆ. ತನ್ನ ರಮಣೀಯವಾದ ನಿಸರ್ಗ ಸೌಂದರ್ಯದಿಂದ ಪ್ರಸಿದ್ಧವಾಗಿರುವಂತೆಯೇ ಐತಿಹಾಸಿಕ, ಹಾಗೂ ಸಾಂಸ್ಕೃತಿಕ ಮಹತ್ವವನ್ನು ಪಡೆದಿರುವ ಹಲವಾರು ಸ್ಥಳಗಳಿಗೆ ಪ್ರಸಿದ್ಧವಾಗಿದೆ.

ತೀರ್ಥಹಳ್ಳಿ ಪಟ್ಟಣದ ಆಗ್ನೇಯ ದಿಕ್ಕಿನಲ್ಲಿ ಶ್ರೀ ರಾಮೇಶ್ವರ ದೇವಾಲಯವಿದೆ. ಆ ದೇವಾಲಯದ ಹಿಂಭಾಗದಲ್ಲಿ ಒಂದು ಸಣ್ಣ ಗುಡ್ಡವಿದೆ. ಜೋಗಿಕುತ್ರ (ಜೋಗಿಗುಡ್ಡ) ವೆಂದು ಸ್ಥಳೀಯರಿಂದ ಕರೆಯಲ್ಪಡುವ ಆ ಗುಡ್ಡವು ತುಂಗಾ ನದಿಯು ಹರಿಯುವ ಪಾತ್ರದೊಳಗೆ ಒಂದು ಸಣ್ಣ ದ್ವೀಪದಂತೆ ಕಂಡು ಬರುತ್ತದೆ. ಆ ಗುಡ್ಡದಲ್ಲಿನ ಹಲವಾರು ಬಂಡೆಗಳು ಹೊರಗೆ ಚಾಚಿ ಕೊಂಡಿದ್ದು ಸುಮಾರು ಅರ್ಧ ಕಿ.ಮೀ. ವರೆಗೆ ನದಿಯ ಪಾತ್ರದಲ್ಲೆಲ್ಲಾ ಹರಡಿಕೊಂಡಿದೆ. ಆ ಬಂಡೆಗಳು ಅನಾದಿ ಕಾಲದಿಂದಲೂ ಹರಿಯುತ್ತಿರುವ ತುಂಗೆಯ ಪ್ರವಾಹದ ಹೊಡೆತಕ್ಕೆ ಸಿಕ್ಕಿ ಸವೆದು ನೈಸರ್ಗಿಕ ಕಲ್ಲಾಸರೆ, ಅಥವಾ ಗುಹೆಗಳಂತೆ ಕಲ್ಲಿನ ಪೊಟರೆಗಳು ಸೃಷ್ಟಿಯಾಗಿವೆ.


ಇತ್ತೀಚಿನ ನಮ್ಮ ಕ್ಷೇತ್ರಕಾರ್ಯದ ವೇಳೆಯಲ್ಲಿ ಈ ಕಲ್ಲಿನ ಪೊಟರೆ/ಗವಿ ಗಳಲ್ಲಿ ಜೈನ ತೀರ್ಥಂಕರರ ಕೆಲವು ಚಿತ್ರಗಳು ಹಾಗೂ ಮೂರು ಶಾಸನಗಳು ಪತ್ತೆಯಾದವು. ಅವುಗಳ ಬಗ್ಗೆ ನಾವು ನಡೆಸಿದ ಅಧ್ಯಯನದ ಫಲಿತವಾಗಿ ಈ ಸಂಶೋಧನಾ ಪ್ರಬಂಧವು ರೂಪುಗೊಂಡಿದೆ.

ಮೊದಲಿಗೆ ಶಾಸನ ಪಾಠಗಳನ್ನು ಗಮನಿಸೋಣ

1. ಶ್ರೀ ಮ್ಮ (ತು) ಚಲ್ಲದೇವಿ ಮಾಡಿಸಿದ ದೇವರು ॥
2. ಮಗಳು ಲಕುಮ್ಮಾ ದೇವಿ ಮಾಡಿಸಿದ ದೇವರು ॥
3. ವಿ.ಜೆ. ಪಟ್ಟಾಚಾರಿ ಮಡಿದ ದೇವರು.

ಮೂರು ಸಾಲುಗಳುಳ್ಳ ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ ಲಿಪಿ ಸ್ವರೂಪದ ಆಧಾರದಿಂದ ಇದು ಸುಮಾರು ಕ್ರಿ.ಶ. 11ನೆಯ ಶತಮಾನದ್ದೆಂದು ನಿರ್ಧರಿಸಬಹುದು.

ಚಲ್ಲದೇವಿ, ಮತ್ತು ಆಕೆಯ ಮಗಳು ಲಕುಮಾದೇವಿಯರು ತೀರ್ಥಂಕರರ ಚಿತ್ರಗಳನ್ನು ಮಾಡಿಸಿದ ಬಗ್ಗೆ ಈ ಶಾಸನವು ವಿವರಿಸುತ್ತದೆ. ಅವರು ಈ ಶಾಸನದ ಪಕ್ಕದಲ್ಲಿಯೇ ಎರಡು



ಜೋಗಿಗುಡ್ಡದ ತೀರ್ಥಂಕರ ಚಿತ್ರಗಳು

ತೀರ್ಥಂಕರರ ಚಿತ್ರಗಳನ್ನು ಮಾಡಿಸಿದ್ದಾರೆ. ಅವುಗಳಲ್ಲಿ ಒಂದು ಪಾರ್ಶ್ವನಾಥರ ಚಿತ್ರ. ಮತ್ತೊಂದು ಯಾವ ತೀರ್ಥಂಕರರದ್ದೆಂದು ಖಚಿತವಾಗಿ ಗುರುತಿಸಲು ಸಾಧ್ಯವಿಲ್ಲದಂತಹ ಜಿನಮೂರ್ತಿ. ಈ ತೀರ್ಥಂಕರರ ಚಿತ್ರಗಳನ್ನು ವಿಜಯ ಪಟ್ವಾಚಾರಿ (ವಿಜಿ ಪಟ್ವಾಚಾರಿ) ಎಂಬ ಶಿಲ್ಪಿಯು ಕೆತ್ತಿದುದಾಗಿ ಶಾಸನದಿಂದ ತಿಳಿದು ಬರುತ್ತದೆ.

1. ಕಂಡರಣೆಕಾರು 'ಳು' ಎಂಬುದಾಗಿ ಕೆತ್ತಿದ್ದಾನೆ.
2. 'ಮ್ಮಾ' ಎಂದು ಕೊರೆಯಲಾಗಿದೆ.

1. ಪಟ್ಟದಾ ಹಣ ಕಲೆಯನ
2. ಮಡದಿ ಧಾಗಿ ಮಾಡಿಸಿದ (ಳು)

ಎರಡು ಸಾಲುಗಳುಳ್ಳ ಈ ಶಾಸನದಲ್ಲಿಯೂ ಸಹ ಕಾಲದ ನಿರ್ದೇಶವಿಲ್ಲ. ಲಿಪಿಸ್ವರೂಪದ ಆಧಾರದಿಂದ ಇದೂ ಸಹ ಸುಮಾರು ಕ್ರಿ.ಶ. 11 ನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದು. ಪಟ್ಟಸಹಣಿಯಾದ ಕಲೆಯನ ಪತ್ನಿಯಾದ ಧಾಗಿ (ಆಕೆಯ ಹೆಸರಿನ ಪೂರ್ಣಪಾಠ ದೊರೆತಿಲ್ಲ) ಯು, ಈ ಶಾಸನದ ಪಕ್ಕದಲ್ಲಿರುವ ತೀರ್ಥಂಕರರ ಚಿತ್ರವನ್ನು ಮಾಡಿಸಿದಳೆಂದು ಶಾಸನವು ಉಲ್ಲೇಖಿಸುತ್ತದೆ.

1. ನಿಕರಸನ ಧರ್ಮ

ಒಂದೇ ಸಾಲಿನ ಈ ಶಾಸನವು, ನಿಕರಸ ಎಂಬುವನು ಶಾಸನದ ಪಕ್ಕದಲ್ಲಿರುವ ಪಾರ್ಶ್ವನಾಥ ತೀರ್ಥಂಕರರ ಚಿತ್ರವನ್ನು ನಿರ್ಮಿಸಿದ್ದಾಗಿ ತಿಳಿಸುತ್ತದೆ, ಕಾಲದ ಉಲ್ಲೇಖವಿಲ್ಲದಿರುವುದರಿಂದ ಲಿಪಿಯ ಆಧಾರದಿಂದ ಇದು ಹನ್ನೊಂದನೆಯ ಶತಮಾನದ ಅಂತ್ಯಕಾಲದ್ದೆಂದು ನಿರ್ಧರಿಸಬಹುದಾಗಿದೆ.

ಪ್ರಸ್ತುತ ಶಾಸನೋಕ್ತ ಚಲ್ಲದೇವಿ, ಲಕುಮ್ಮಾದೇವಿ, ಪಟ್ಟಸಹಣಿ ಕಲೆಯ, ಹಾಗೂ ನಿಕರಸರ ಬಗ್ಗೆ ತೀರ್ಥಹಳ್ಳಿಯ ಆಸುಪಾಸಿನಲ್ಲಾಗಲೀ ಅಥವಾ ಮತ್ತಾವುದೇ ಸ್ಥಳದಲ್ಲಿಯ ಸಮಕಾಲೀನ ಶಾಸನಗಳಲ್ಲಿ ಯಾವುದೇ ವಿವರಗಳು ದೊರೆಯುವುದಿಲ್ಲ.

ಅಲ್ಲಿಯ ಚಿತ್ರಗಳ ಬಗ್ಗೆ ಗಮನಿಸೋಣ.

ಜೋಗಿ ಗುಡ್ಡದ ಶಿಲಾ ಪೊಟರೆ/ಹೊಂಡಗಳಲ್ಲಿ ಒಟ್ಟು ಐದು ಕಡೆಗಳಲ್ಲಿ ತೀರ್ಥಂಕರರ ರೇಖಾ ಚಿತ್ರಗಳಿವೆ. ಮೂರು ಅಡಿ ಅಗಲ, ಹಾಗೂ ಸುಮಾರು 8 ಅಡಿ ಎತ್ತರದ ಒಂದನೇ ಶಾಸನವಿರುವ ಹೊಂಡ (ಕುಳಿ) ದ ಸನಿಹದಲ್ಲಿ ಎರಡು ಚಿತ್ರಗಳಿವೆ. ಅವುಗಳಲ್ಲಿ ಮೊದಲನೆಯದು ಪಾರ್ಶ್ವನಾಥ ತೀರ್ಥಂಕರರ ಚಿತ್ರವಾಗಿದೆ ಎರಡನೆಯದು ಯಾವುದೇ ಲಾಂಛನಗಳಿಲ್ಲದ್ದರಿಂದ

ಯಾವ ತೀರ್ಥಂಕರದ್ದೆಂದು ನಿರ್ಧಿಷ್ಟವಾಗಿ ಗುರುತಿಸಲು ಅಸಾಧ್ಯವಾಗಿದೆ.

ಈ ಚಿತ್ರಗಳು ಸುಮಾರು ಎರಡು ಅಡಿ ಎತ್ತರವಾಗಿದ್ದು ಖಡ್ಗಾಸನದಲ್ಲಿವೆ (ಸ್ಥಾನಕಭ ಪಾರ್ಶ್ವನಾಥ ತೀರ್ಥಂಕರನ ಶಿರಸ್ಸಿನ ಮೇಲೆ ಏಳು ಹೆಡೆಗಳುಳ್ಳ ಸರ್ಪವು ನೆರಳನ್ನು ಉಂಟುಮಾಡುತ್ತಿದೆ. ಆ ಸರ್ಪದ ಬಾಲವು ಸುರುಳಿಯಂತೆ ಸುತ್ತಿ ಪಾರ್ಶ್ವನಾಥ ಹಿಂಭಾಗದಲ್ಲಿ ಪಾದದವರೆಗೆ ಇದೆ. ಇಕ್ಕೆಲಗಳಲ್ಲಿ ಧರಣೇಂದ್ರ ಯಕ್ಷ, ಹಾಗೂ ಪದ್ಮಾವತಿ ಯಕ್ಷಿಯರ ಚಿತ್ರಗಳಿವೆ. ಪಾರ್ಶ್ವನಾಥರ ಮಗ್ಗುಲಿನಲ್ಲಿರುವ ಚಿತ್ರವು ಯಾವ ತೀರ್ಥಂಕರದೆಂದು ನಿರ್ಧಿಷ್ಟವಾಗಿ ಹೇಳಲು ಅಸಾಧ್ಯವಾಗಿದೆ.


1. ಕಂಡರಣೆ ಕಾರನು 'ಸಹಣಿ' ಎಂದು ಬರೆದಿದ್ದಾನೆ.

2. 'ಳು' ಊಹಾಪಾಠ (ಆಭಾಗದಲ್ಲಿ ಚಕ್ಕೆ ಎದ್ದಿದೆ)

ಎರಡನೆಯ ಹೊಂಡ (ಪೊಟರೆ)ದಲ್ಲಿ ಒಟ್ಟು ನಾಲ್ಕು ಚಿತ್ರಗಳಿವೆ. ಅವುಗಳಲ್ಲಿ ಮೂರು ಖಡ್ಗಾಸನದಲ್ಲಿದ್ದು ಒಂದು ಪದ್ಮಾಸನದಲ್ಲಿ ಕುಳಿತ ತೀರ್ಥಂಕರರ ಚಿತ್ರಗಳಿವೆ. ಈ ತೀರ್ಥಂಕರರ ತಲೆಯ ಮೇಲೆ ಮುಕ್ಕೊಡೆ ಗಳಿವೆ. ಈ ಚಿತ್ರಗಳು ಯಾವ ತೀರ್ಥಂಕರರಿಗೆ ಸಂಬಂಧಿಸಿದ್ದೆಂದು ಖಚಿತವಾಗಿ ಗುರುತಿಸಲು ಸಾಧ್ಯವಿಲ್ಲದಂತಾಗಿದೆ. ಈ ಚಿತ್ರಗಳ ಬಳಿಯಲ್ಲಿ ಎರಡು ಸಾಲಿನ ಒಂದು ಶಾಸನವಿದ್ದು ಆದು ನೀರಿನ ಹೊಡತಕ್ಕೆ ಸಿಕ್ಕಿ ತೀರಾ ಸವೆದಿರುವುದರಿಂದ ಓದಲು ಅಸಾಧ್ಯವಾಗಿದೆ.

ಮೇಲೆ ತಿಳಿಸಿರುವ ನಾಲ್ಕು ಚಿತ್ರಗಳುಳ್ಳ ಬಂಡೆಯ ಬಲಭಾಗದಲ್ಲಿನ ಮತ್ತೊಂದು ದೊಡ್ಡ ಬಂಡೆಯ ಮೇಲೆ ತೀರ್ಥಂಕರರ ಒಂದು ರೇಖಾ ಚಿತ್ರವಿದೆ. ಈ ತೀರ್ಥಂಕರ ಚಿತ್ರವು $2^{1/2}$ ಅಡಿ ಎತ್ತರವಿದ್ದು ಅಸಮಗ್ರವಾಗಿದೆ. ಶಿಲ್ಪಿಯು ಚಿತ್ರವನ್ನು ಸಂಪೂರ್ಣವಾಗಿ ಕೊರೆದಿಲ್ಲ ಹಾಗೂ ಈ ಚಿತ್ರವು ಯಾವ ತೀರ್ಥಂಕರರದ್ದೆಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಈ ಹಿಂದೆ ತಿಳಿಸಿದ ಒಂದನೆಯ ಕಲ್ಲಾಸರೆಯ ಎದುರಿನಲ್ಲಿ ಬಂಡೆಯ ಮೇಲೆ ಸುಮಾರು 5 ಅಡಿ ಎತ್ತರದ ಪಾರ್ಶ್ವನಾಥ ತೀರ್ಥಂಕರರ ಚಿತ್ರವಿದೆ. ಪಾರ್ಶ್ವನಾಥರ ತಲೆಯ ಮೇಲ್ಭಾಗದಲ್ಲಿ ಏಳು ಹೆಡೆಯ ಸರ್ಪವು ನೆರಳನ್ನು ನೀಡುತ್ತಿರುವ ಭಂಗಿಯಲ್ಲಿದೆ. ಹಾಗೂ, ತೀರ್ಥಂಕರರ ಹಿಂಭಾಗದಲ್ಲಿ ಸುರುಳಿಯಾಕಾರದಲ್ಲಿ ಸುತ್ತಿದ ಬಾಲವು ಪಾರ್ಶ್ವನಾಥ ತೀರ್ಥಂಕರರ ಪಾದದವರೆಗೂ ಇದೆ. ಈ ಚಿತ್ರವನ್ನು ಪಟ್ಟ ಸಹಣಿ ಕಲಿಯನ ಮಡದಿಯು ಮಾಡಿಸಿವಳೆಂಬುದು ಪಕ್ಕದಲ್ಲಿರುವ ಶಾಸನದಿಂದ ತಿಳಿಯುತ್ತದೆ. ಈ ಶಾಸನವನ್ನು ಹಾಗೂ ತೀರ್ಥಂಕರರ ಚಿತ್ರವನ್ನು ತೀರಾ ಕಡಿದಾದ ಸ್ಥಳದಲ್ಲಿ ಕೊರೆಯಲಾಗಿದೆ. ಈ ಸ್ಥಳವು ಹತ್ತಿರದಲ್ಲೇ ಹರಿಯುವ ತುಂಗಾ ನದಿಯ ಪಾತ್ರದೊಳಗೇ ಇದ್ದು. ಅತೀ ಸಾಹಸದಿಂದಲ್ಲದೆ ಸುಲಭ ಸಾಧ್ಯವಾಗಿ ಗಮನಿಸಲೂ



ಜೋಗಿಗುಡ್ಡದ ಜೈನ ತೀರ್ಥಂಕರರ ಚಿತ್ರಗಳು ಹಾಗೂ ಶಾಸನ

ಹರಿಯುವಂತಾದಾಗ, ಈ ಗುಹಾಲಯಗಳು ಹಾಗೂ ಬಸದಿಯು, ಜೈನ ಮುನಿಗಳ ಪ್ರವೇಶ ಅಸಾಧ್ಯ ಸ್ಥಳಗಳಾದವು. ಏಕೆಂದರೆ ಜೈನ ಮುನಿಗಳು ನೀರು ಹರಿಯುವ ಸ್ಥಳದ ಸಂಚರಿಸುವುದಿಲ್ಲ. ಅಲ್ಲಿ ಜೀವ ಹಿಂಸೆಗೆ ಅವಕಾಶವಿರುವುದರಿಂದ ಅವರು ಸದಾ ನೀ ಹರಿಯುವ ಇಂತಹ ಸ್ಥಳಗಳಲ್ಲಿ ಸಂಚರಿಸುವುದಿಲ್ಲ. ಆದ್ದರಿಂದ ಇದು ಕ್ರಮೇಣ ನಿರ್ಲಕ್ಷ ಪ್ರದೇಶವಾಗಿದೆ. ಇಲ್ಲಿ ಹರಿಯುವ ನೀರಿನ ಪ್ರವಾಹದಿಂದಲೇ ಜೋಗಿ ಗುಡ್ಡದ ಬಸದಿ ಮೇಲ ಬಸದಿ ಹಾಗೂ ಗುಹೆ ಕಾಲಾಂತರದಲ್ಲಿ ಶಿಥಿಲವಾಗಿ ನೆಲಸಮವಾಗಿರಬಹುದು. ಆ ಸಮಯದ ಬಹುಶಃ ಇಲ್ಲಿನ ಬಸದಿಯಲ್ಲಿದ್ದ ತೀರ್ಥಂಕರ ವಿಗ್ರಹವನ್ನು ಭಕ್ತಾದಿಗಳು ಬೇರೆ ಪ್ರದೇಶ ಸಾಗಿಸಿರಬಹುದಾದ ಸಾಧ್ಯತೆ ಇದೆ.

ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಪ್ರಖ್ಯಾತ ಜೈನಕ್ಷೇತ್ರವಾದ ಹುಂ (ಹೊಂಬುಜ) ಕ್ಕೆ ಸುಮಾರು ಮುವತ್ತು ಕಿಲೊ ಮೀಟರುಗಳಷ್ಟು ದೂರದಲ್ಲಿದೆ. ಸಾಂತಳ ಸಹಸ್ರವನ್ನು ಆಳುತ್ತಿದ್ದ ಸಾಂತರರ ರಾಜಧಾನಿಯಾದ ಹೊಂಬುಜ (ಹುಂಚ) ವು ಕ್ರಿ.ಶ. 7ನೇ ಶತಮಾನ ದಿಂದಲೂ ಒಂದು ಮುಖ್ಯ ಜೈನ ಕ್ಷೇತ್ರವಾಗಿದ್ದುದರಿಂದ ಸುತ್ತಮುತ್ತಲಿ ಪ್ರದೇಶವೆಲ್ಲಾ ಹೊಂಬುಜದ ಪ್ರಭಾವಲಯದಿಂದ ಬೆಳಗಿ ಜೈನ ಧರ್ಮವನ್ನು ಪ್ರಸರಿಸಿತ್ತು.

'ಸಾಂತಳಿಗೆ ಸಾವಿರ' ಪ್ರದೇಶಕ್ಕೇ ಸೇರಿಕೊಂಡಿದ್ದ ತೀರ್ಥಹಳ್ಳಿ ಮತ್ತು ಇತರ ಪ್ರದೇಶದಲ್ಲಿ ಜನರಲ್ಲಿ ಬಹು ಸಂಖ್ಯಾತರು ತಮ್ಮನ್ನು ಆಳುತ್ತಿದ್ದ ಸಾಂತರ ರಾಜಧರ್ಮವಾದ ಜೈನಧರ್ಮವನ ಅವಲಂಬಿಸಿದ್ದರು. ಆದ್ದರಿಂದ ಆ ಪ್ರದೇಶದಲ್ಲಿ ಇಂದಿಗೂ ಹಲವಾರು ಜೈನ ಬಸದಿಗಳು, ಹಾಗ ಜೈನರಿಗೆ ಸಂಭಂದಿಸಿದ ಶಾಸನಗಳು ಕಂಡು ಬರುತ್ತವೆ. ಮೇಳಿಗೆ, ದಾನಶಾಲೆ, ಕುಂದಾದ್ರಿ, ಕಣ ಆರಗ-ಮುಂತಾದ ಪ್ರದೇಶದಲ್ಲಿ ಈಗಲೂ ಜೈನಬಸದಿಗಳು, ಶಾಸನಗಳು ಕಂಡುಬರುತ್ತವೆ.

ಪ್ರಸ್ತುತ ತೀರ್ಥಹಳ್ಳಿ ಜೋಗಿ ಗುಡ್ಡದಲ್ಲಿ ದೊರೆತಿರುವ ಶಾಸನಗಳು ಹಾಗೂ ತೀರ್ಥಂಕರ ಚಿತ್ರಗಳು 10-11ನೇ ಶತಮಾನಕ್ಕೆ ಸೇರಿದವುಗಳೆಂದು ಅಲ್ಲಿನ ಶಾಸನಗಳ ಲಿಪಿಯ ಆಧಾರದಿಂ ಹೇಳಬಹುದು. ಈ ಕಾಲಘಟ್ಟದಲ್ಲಿಯೇ ಸಾಂತರಸರು ಹೊಂಬುಜ (ಹುಂಚ) ವನ ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆ ನೆಡೆಸುತ್ತಿದ್ದರು. ಆದ್ದರಿಂದ ಜೋಗಿ ಗುಡ್ಡದ ಶಾಸನಗ ಹಾಗೂ ಚಿತ್ರಗಳು ಸಾಂತರ ಅರಸರ ಕಾಲಕ್ಕೆ ಸೇರಿದವುಗಳೆಂದು ಹೇಳಬಹುದು.

ಕರ್ನಾಟಕದ ಬೇರೆ ಯಾವುದೇ ಸ್ಥಳದಲ್ಲಿ ಈ ರೀತಿಯ ನೀರಿನ ಕೊರೆತದಿಂದ ಉಂಟಾ ಕುಳಿ(ಹೊಂಡ)ಗಳಲ್ಲಿ ಜೈನ ತೀರ್ಥಂಕರರ ಚಿತ್ರಗಳಾಗಲೀ ಶಾಸನಗಳಾಗಲೀ ಇದುವರೆಗ ಪತ್ತೆಯಾಗಿರಲಿಲ್ಲ ಎಂಬುದು ಗಮನಾರ್ಹ ಅಂಶವಾಗಿದೆ.

ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಕೆ.ಎನ್. ವಿಠೋಬ ನಾಯಕ್‌ರವರಿಗೆ ಕೃತಜ್ಞತೆಗಳ

ಅರೆಹಳ್ಳಿಯ ಒಂದು ಅಪ್ರಕಟಿತ ಶಾಸನ

ಆರ್. ಜಗದೀಶ,
ಎಂ. ಜಿ. ಮಂಜುನಾಥ 12 ಖಿ.

ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ಅನುಗೊಂಡಹಳ್ಳಿ ಹೋಬಳಿಗೆ ಸೇರಿದ ಅರೆಹಳ್ಳಿ ಎಂಬ ಗ್ರಾಮದಲ್ಲಿ ಒಂದು ಅಪ್ರಕಟಿತ ಶಾಸನ ದೊರೆತಿದೆ. ಅದು ಕೇವಲ ಐದು ಸಾಲುಗಳ ಪುಟ್ಟ ಶಾಸನವೇ ಆದರೂ ಸಹ ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಶಾಸನವಾಗಿದೆ. ಆ ಶಾಸನವನ್ನು ಎಲ್ಲ ಆಯಾಮಗಳಿಂದ ಅಭ್ಯಸಿಸಿ ಪ್ರಸ್ತುತ ಸಂಪ್ರಬಂಧವನ್ನು ರಚಿಸಲಾಗಿದೆ.

ಆ ಶಾಸನವನ್ನು ಐದು ಅಡಿ ಎತ್ತರ ಹಾಗೂ ಮೂರು ಅಡಿ ಅಗಲದ ಕಠಿಣವಾದ ಕಣಶಿಲೆಯ (ಗ್ರಾನೈಟ್) ಚಪ್ಪಡಿಯಮೇಲೆ ಕೊರೆಯಲಾಗಿದೆ. ಶಾಸನ ಫಲಕದ ಒಂದು ಬದಿಯಲ್ಲಿ ಕನ್ನಡ ಭಾಷೆ ಹಾಗೂ ಕನ್ನಡಲಿಪಿಯಲ್ಲಿ ಶಾಸನವನ್ನು ಕೊರೆಯಲಾಗಿದೆ. ಮತ್ತೊಂದು ಬದಿಯಲ್ಲಿ ತಮಿಳು ಭಾಷೆ ಹಾಗೂ ಪ್ರಾಚೀನ ಗ್ರಂಥ ಲಿಪಿಯಲ್ಲಿ ಶಾಸನವನ್ನು ಕೊರೆಯಲಾಗಿದೆ. ಗ್ರಂಥಲಿಪಿ ಹಾಗೂ ತಮಿಳು ಭಾಷೆಯ ಬಗ್ಗೆ ನಮಗೆ ಹೆಚ್ಚಿನ ತಿಳಿವಳಿಕೆಯಿಲ್ಲದಿರುವುದರಿಂದ ಪ್ರಸ್ತುತ ಸಂಪ್ರಬಂಧದಲ್ಲಿ ಕನ್ನಡ ಶಾಸನವನ್ನು ಮಾತ್ರ ಕುರಿತಂತೆ ಚರ್ಚಿಸಲಾಗಿದೆ. ಕನ್ನಡ ಶಾಸನ ಪಠ್ಯವಿರುವ ಭಾಗದಲ್ಲಿಯೇ, ಶಾಸನಾಕ್ಷರಗಳ ಮಧ್ಯದಲ್ಲಿಯೇ ಶಾಸನ ಫಲಕದ ಎರಡೂ ಮಗ್ಗುಲಲ್ಲಿ ಸೂರ್ಯ ಹಾಗೂ ಚಂದ್ರರ ಚಿತ್ರಗಳಿವೆ. ಸೂರ್ಯಚಂದ್ರರ ಮಧ್ಯೆ ಸುಮಾರು ಒಂದೂವರೆ ಅಡಿಗಳಷ್ಟು ಎತ್ತರದ ತ್ರಿಶೂಲದ ಚಿತ್ರವಿದೆ.

ಈ ಶಾಸನ ಫಲಕದ ಹತ್ತಿರದಲ್ಲಿಯೇ ಒಂದು ವೀರಗಲ್ಲನ್ನು ನಿಲ್ಲಿಸಲಾಗಿದೆ. ಆ ವೀರಗಲ್ಲು ಬಹುಶಃ ಪ್ರಸ್ತುತ ಶಾಸನಕ್ಕೆ ಸಂಬಂಧಪಟ್ಟದ್ದೇ ಇರಬಹುದೆಂದು ತೀರ್ಮಾನಿಸಲಾಗಿದೆ. ಪ್ರಾಯಃ ಈ ಶಾಸನ ಫಲಕದ ಎರಡೂ ಬದಿಯಲ್ಲಿ ಒಂದೊಂದು ಭಾಷೆಯಲ್ಲಿ ಶಾಸನ ಬರೆಸಿರುವುದರಿಂದ ಈ ವೀರಗಲ್ಲನ್ನು ಮತ್ತೊಂದು ಚಪ್ಪಡಿಯಲ್ಲಿ ಕೆತ್ತಿದ್ದಾರೆಂದು ಊಹಿಸಬಹುದು.

ವೀರಗಲ್ಲಿನ ಶಿಲ್ಪ : ಮೂರು ಅಡಿ ಅಗಲ ಹಾಗೂ ಮೂರು ಅಡಿ ಎತ್ತರದ ಕರಿ ಶಿಲೆಯ (ಗ್ರಾನೈಟ) ಫಲಕದ ಮೇಲೆ ಈ ವೀರಗಲ್ಲನ್ನು ಕೆತ್ತಿದ್ದಾರೆ. ಸೂಕ್ಷ್ಮವಾಗಿ ಗಮನಿಸಿದರೆ ಆ ಶಾಸನಫಲಕಕ್ಕೆ, ಹಾಗೂ ಈ ವೀರಗಲ್ಲಿಗೆ ಎರಡಕ್ಕೂ ಒಂದೇ ರೀತಿಯ ಕಲ್ಲನ್ನು ಬಳಸಿರುವುದನ್ನು ಸುಲಭವಾಗಿ ಗುರ್ತಿಸಬಹುದು.

ವೀರಗಲ್ಲಿನ ಬಲಭಾಗದಲ್ಲಿ ಒಬ್ಬ ವೀರ ತನ್ನ ಎಡಗಾಲನ್ನು ಮುಂದಕ್ಕೆ ಇಟ್ಟುಕೊಂಡು

ಆಲೀಢಾಸನದಲ್ಲಿ ನಿಂತಿದ್ದಾನೆ. ಆತನು ಬಲಗೈಯ್ಯಲ್ಲಿ ಒಂದು ಖಡ್ಗವನ್ನು ಹಿಡಿದು ಕೊಂಡು ಆವೇಶದಿಂದ ಬೀಸುತ್ತಿದ್ದಾನೆ. ಎಡಗೈಯ್ಯಲ್ಲಿ ಉದ್ದನಾದ ಒಂದು ಈಟಿಯನ್ನು ಹಿಡಿದುಕೊಂಡು ಕೆಳಗೆ ಬಿದ್ದಿರುವ ಒಬ್ಬ ಶತ್ರುವನ್ನು ತಿವಿಯುತ್ತಿದ್ದಾನೆ. ತನ್ನ ಮೈಯ್ಯಲ್ಲಿ ಹಲವಾರು ಬಾಣಗಳು ಚುಚ್ಚಿಕೊಂಡಿದ್ದರೂ ಸ್ವಲ್ಪವೂ ಹೆದರದೆ ಮುನ್ನುಗ್ಗುತ್ತಿರುವ ವೀರನ ಮನೋಸ್ಥೈರ್ಯ ಶಿಲ್ಪದಲ್ಲಿ ಅತ್ಯಂತ ಸಹಜವಾಗಿ ಮೂಡಿ ಬಂದಿದೆ. ಈ ವೀರನ ಎದುರಿನಲ್ಲಿ ಮೂವರು ಶತ್ರು ಸೈನಿಕರು ತಮ್ಮ ಕೈಗಳಲ್ಲಿ ಹಿಡಿದಿರುವ ಬಿಲ್ಲುಗಳಿಂದ ಬಾಣಗಳನ್ನು ಬಿಡುತ್ತಿದ್ದಾರೆ. ಅವರು ಸತ್ತಿದ್ದರೂ ಸಹ, ಯುದ್ಧದ ಆವೇಶದಲ್ಲಿ ತಮ್ಮ ಕೈಯ್ಯಲ್ಲಿನ ಆಯುಧವನ್ನೂ ಹಾಗಯೇ ಬಿಗಿಯಾಗಿ ಹಿಡಿದಿದ್ದಾರೆ. ಹೀಗೆ ಯುದ್ಧರಂಗದ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಮಾಡುವಲ್ಲಿ ಶಿಲ್ಪಿಯು ಯಶಸ್ವಿಯಾಗಿದ್ದಾನೆಂದ ಹೇಳಬಹುದು.

ಶಾಸನ ಪಾಠ-

1. ಸ್ವಸ್ತಿಶ್ರೀ ಸತ್ಯವಾಕ್ಯ ಪೆರ್ಮ್ಮಾನಡಿಗಳ್
2. (ಪ್ರಿಥುವೀ ರಾಜ್ಯಮ್‌ಗೆಯೆ)
3. ನಾಗ ಗಂಗರಸ
4. ಪಲ್ಲವನನೇರೆಸತ್ತು
5. ಸ್ವರ್ಗಸ್ಥನಾದಂ॥

ಐದು ಸಾಲುಗಳ ಈ ಪುಟ್ಟ ಶಾಸನವು ಅತೀಟಿ ಶಾಸನವಾಗಿದೆ. ಶಾಸನದಲ್ಲಿ ಕಾಲ ಉಲ್ಲೇಖವಿಲ್ಲದಿದ್ದರೂ ಶಾಸನದ ಆಂತರಿಕ ಹಾಗೂ ಬಾಹ್ಯ ಆಧಾರಗಳಿಂದ ಪ್ರಸ್ತುತ ಶಾಸನ ಕಾಲವನ್ನು ನಿರ್ಧಿಷ್ಟವಾಗಿ ಗುರ್ತಿಸಬಹುದು. ಶಾಸನದ ಸಾರಾಂಶ: ಗಂಗರ ಅರಸನಾದ ಸತ್ಯವಾ ಪೆರ್ಮಾನಡಿಯು ಗಂಗವಾಡಿಯನ್ನು ಆಳುತ್ತಿರುವಾಗ ಗಂಗರು ಪಲ್ಲವರ ಮೇಲೆ ಯುದ್ಧ ನಡೆಸಿದಾಗ ನಾಗ ಎಂಬುವವನು ಯುದ್ಧದಲ್ಲಿ ಸತ್ತು ಸ್ವರ್ಗಸ್ಥನಾದನು ಎಂದು ಶಾಸನ ತಿಳಿಸುತ್ತದೆ. ('ನಾಗ' ನ ಹೆಸರಿನ ಪೂರ್ಣ ಪಾಠವು ಉಪಲಬ್ಧವಾಗಿಲ್ಲ) ಶಾಸನದ ಐತಿಹಾಸಿಕ ಮಹತ್ವ ಕರ್ನಾಟಕದ ಪ್ರಾಚೀನ ರಾಜವಂಶಗಳಲ್ಲೊಂದಾದ 'ಗಂಗರು' ಮೊದಲಿಗೆ ಕುವಲಾಲ ಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರೂ ಸಹ ತದನಂತರದ ಕಾಲದಲ್ಲಿ ತಲಕಾಡನ್ನು ಕೇಂದ್ರವಾಗಿಸಿಕೊಂಡು ಗಂಗವಾಡಿ ತೊಂಬತ್ತಾರು ಸಾವಿರ ಪ್ರದೇಶವನ್ನು ಆಳ್ವಿ ಮಾಡತೊಡಗಿದರು. ಸ್ವತಂತ್ರ ಚಕ್ರವರ್ತಿಗಳೆನ್ನಿಸಿಕೊಳ್ಳದಿದ್ದರೂ ಸಹ ತಮ್ಮ ಸ್ವಾತಂತ್ರ್ಯಕ್ಕೆ ಕುಂದು ತಂದುಕೊಳ್ಳದಂತೆ ಮಾಂಡಲಿಕ ರಾಜರಾಗಿಯೇ ದೀರ್ಘಕಾಲ ಆಳ್ವಿಕೆ ನಡೆಸಿದ ಗಂಗರು ತಮ್ಮ ಸ್ವಾತಂತ್ರ್ಯ ಕಾಯ್ದು ಕೊಳ್ಳಲು ಆಗಾಗ್ಗೆ ಹಲವಾರು ಯುದ್ಧಗಳನ್ನು ನಡೆಸಬೇಕಾಯಿತು. ರೀತಿ ನಡೆಸಿದ ಯುದ್ಧವೊಂದರಲ್ಲಿ ಗಂಗರಾಜ ಶ್ರೀಪುರುಷನು ಕ್ರಿ.ಶ. 8ನೆಯ ಶತಮಾನದ ಪಲ್ಲವಾರಾದ ಕಾಡುವೆಟ್ಟಿಯ ಮೇಲೆ ಜಯಗಳಿಸಿ ಅವನ ಪೆರ್ಮಾನಡಿ ಎಂಬ ಬಿರುದ



ಅರೆಹಳ್ಳಿಯ ವೀರಗಲ್ಲು

ಗಳಿಸಿದನು. ಅಂದಿನಿಂದ 'ಸತ್ಯವಾಕ್ಯ ಪೆರ್ಮಾನಡಿ' ಎಂಬ ಬಿರುದನ್ನು ಗಳಿಸಿದನು ಅಂದಿನಿಂದ 'ಸತ್ಯವಾಕ್ಯ ಪೆರ್ಮಾಮನಡಿ' ಎಂಬ ಬಿರುದನ್ನು ಗಂಗ ದೊರೆಗಳೆಲ್ಲರೂ ಧರಿಸುತ್ತಿದ್ದರು. ಪ್ರಸ್ತುತ ದೊರೆತಿರುವ ಅರೆಹಳ್ಳಿಯ ಶಾಸನದಲ್ಲಿಯೂ ಸಹ 'ಸತ್ಯ ವಾಕ್ಯ ಪೆರ್ಮಾನಡಿಗಳ್' ಎಂಬ ಉಲ್ಲೇಖವಿದೆ ಆದ್ದರಿಂದ ಈ ಶಾಸನದ ಕಾಲವನ್ನು ಕ್ರಿ.ಶ. 8ನೆಯ ಶತಮಾನದ ನಂತರದ ಕಾಲದ್ದೆಂದು ನಿರ್ಣಯಿಸಬಹುದು.

ಗಂಗರು ಪಲ್ಲವರ ಮೇಲೆ ಹಲವಾರು ಭಾರಿ ಯುದ್ಧಮಾಡಿದ್ದುದನ್ನು ಗಂಗರ ಶಾಸನಗಳು ಉಲ್ಲೇಖಿಸುತ್ತವೆ. ಗಂಗರಾಜ ದುರ್ವಿನೀತನು ಪಲ್ಲವರ ಮೇಲೆಯುದ್ಧಮಾಡಿ ಅವರನ್ನು ಸೋಲಿಸಿ ಅವರ ರಾಜ್ಯವನ್ನು ಒತ್ತರಿಸಿ ತನ್ನ ರಾಜ್ಯದ ಮೇರೆಗಳನ್ನು ವಿಸ್ತರಿಸಿದ್ದನು. ನಂತರ ಕ್ರಿ.ಶ. 670ರಲ್ಲಿ ಗಂಗದೊರೆ ಭೂವಿಕ್ರಮನು ವಿಳಂದವೆಂಬಲ್ಲಿ ನಡೆದ ಯುದ್ಧದಲ್ಲಿ ಪಲ್ಲವರನ್ನು ಮತ್ತೊಮ್ಮೆ ಸೋಲಿಸಿದನು. ತದನಂತರ ಶ್ರೀಪುರುಷನು ವಿಳಿರ್ದೆ ಎಂಬಲ್ಲಿ ನಡೆದ ಯುದ್ಧದಲ್ಲಿ ಪಲ್ಲವರನ್ನು ಮತ್ತೊಮ್ಮೆ ಸೋಲಿಸಿದನು. ಈ ಯುದ್ಧದಲ್ಲಿಯೇ ಪಲ್ಲವ ದೊರೆ ಕಾಡುವೆಟ್ಟಿಯನ್ನು ಸೋಲಿಸಿ ಪೆರ್ಮಾನಡಿ ಎಂಬ ಬಿರುದನ್ನು ಗಂಗರು ಕಿತ್ತುಕೊಂಡರು.

ಪ್ರಸ್ತುತ ದೊರೆತಿರುವ ಅರೆಹಳ್ಳಿಯ ಶಾಸನದಲ್ಲಿ ಹಲವಾರು ತೊಡಕುಗಳಿವೆ. ಪ್ರಸ್ತುತ ಶಾಸನೋಲ್ಲೇಖಿತ ಗಂಗದೊರೆ ಸತ್ಯವಾಕ್ಯ ಪೆರ್ಮಾನಡಿ ಯಾರೆಂಬುದೇ ಖಚಿತವಾಗಿ ತಿಳಿಯುತ್ತಿಲ್ಲ. ಆ ಹೆಸರಿನ ಭಾಗವಷ್ಟೂ ತ್ರುಟಿತವಾಗಿದೆ. ಹಾಗೂ ಗಂಗರು ಪಲ್ಲವರೊಡನೆ ನಡೆಸಿದ ಯುದ್ಧದ ಬಗ್ಗೆ ಹೆಚ್ಚಿನ ವಿವರಗಳೂ ದೊರೆಯುವುದಿಲ್ಲ. ಆ ಯುದ್ಧ ನಡೆದ ಸ್ಥಳದ ಬಗೆಗೂ ವಿವರಗಳಿಲ್ಲ. ಹಾಗೂ ಈ ಶಾಸನೋಕ್ತ ಪಲ್ಲವರು ಯಾರೆಂಬುದೂ ಖಚಿತವಿಲ್ಲ. ತಮಿಳುನಾಡಿನ ಪಲ್ಲವರೇ ? ಅಥವಾ ನೊಳಂಬ ಪಲ್ಲವರೇ ? ಅಥವಾ ಮತ್ತೊಬ್ಬ ಪಲ್ಲವ ಅರಸರೇ ಎಂಬ ಬಗ್ಗೆ ಖಚಿತವಾದ ಮಾಹಿತಿ ದೊರೆಯುವುದಿಲ್ಲ. ಬಹುಶಃ ಈ ಶಾಸನೋಲ್ಲೇಖಿತ ಪಲ್ಲವರು ತಮಿಳು ನಾಡಿನ ಪಲ್ಲವರಾಗಲೀ ಅಥವಾ ನೊಳಂಬ ಪಲ್ಲವರಾಗಲೀ ಅಲ್ಲ. ನೊಳಂಬರೊಂದಿಗೆ ರಕ್ತಸಂಬಂಧವನ್ನು ಹೊಂದಿದ್ದ ಗಂಗಪಲ್ಲವ ಎಂದು ಹೆಸರನ್ನು ತಳೆದಿದ್ದ ಪಲ್ಲವರ ಒಂದು ಶಾಖೆಯು ಕೋಲಾರ ಜಿಲ್ಲೆಯ ಮುಳಬಾಗಿಲು ತಮಿಳುನಾಡಿನ ತಂಜಾವೂರು, ತಿರುಚನಾಪಳ್ಳಿ ಮುಂತಾದ ಪ್ರದೇಶಗಳನ್ನು ಆಳುತ್ತಿತ್ತು. ಈ ಗಂಗಪಲ್ಲವರೊಡನೆ ಗಂಗರು ನಡೆಸಿದ ಯಾವುದೋ ಯುದ್ಧಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅರೆಹಳ್ಳಿಯ ಶಾಸನ ರಚನೆಯಾಗಿದ್ದಿರಬಹುದೆಂದು ಊಹಿಸಬಹುದು ಗಂಗಪಲ್ಲವರ ಕೇಂದ್ರವಾದ ಮುಳಬಾಗಿಲು ಅರೆಹಳ್ಳಿಗೆ ಹತ್ತಿರದ ಪ್ರದೇಶವೂ ಹೌದು. ಈ ಯುದ್ಧಕ್ಕೆ ಸಂಬಂಧಿಸಿದಂತೆಯಾಗಲೀ ಅಥವಾ ಅರೆಹಳ್ಳಿಯ ಪ್ರಸ್ತುತ ಶಾಸನಕ್ಕೆ ಸಂಬಂಧಿಸಿದಂತೆಯಾಗಲೀ ಇದೇ ಸತ್ಯ ಎಂದು ಖಚಿತವಾಗಿ ಹೇಳುವುದು ಅಸಾಧ್ಯ. ಈ ಬಗ್ಗೆ ಮತ್ತಷ್ಟು ಹೆಚ್ಚಿನ ಆಧಾರಗಳಾಗಲೀ ಅಥವಾ ಬೇರೆ ಶಾಸನಗಳಾಗಲೀ ದೊರೆತರೆ ಆ ಬಗ್ಗೆ ಖಚಿತವಾಗಿ ಹೇಳಬಹುದು.

ಇದುವರೆಗಿನ ಚರ್ಚೆಯ ಫಲಿತವನ್ನು ಹೀಗೆ ಹೇಳಬಹುದು. ಈಗ ದೊರೆತಿರುವ ಆರೆಹಳ್ಳಿಯ ಶಾಸನವು ಕ್ರಿ.ಶ.ಸು. 9ನೆಯ ಶತಮಾನದ ಅಂತ್ಯ ಭಾಗದ ಶಾಸನ. ಗಂಗರಿಗೂ ಹಾಗೂ ಗಂಗಪಲ್ಲವರಿಗೂ ನಡೆದ ಒಂದು ಯುದ್ಧದಲ್ಲಿ ನಾಗ ಎಂಬ ವ್ಯಕ್ತಿ ಮರಣಿಸಿದುದನ್ನು ಈ ಶಾಸನ ದಾಖಲಿಸುತ್ತದೆ. ಪ್ರಾಯಃ ಈ ಯುದ್ಧ ನಡೆದ ವೇಳೆಯಲ್ಲಿ ಎಟೆ ಗಂಗನು ಗಂಗರ ಅರಸನಾಗಿದ್ದನು. ಈ ಯುದ್ಧದ ಬಗೆಗಿನ ಮತ್ತಾವುದೇ ವಿವರಗಳಾಗಲೀ ಅಥವಾ ಪ್ರಸ್ತುತ ಶಾಸನೋಲ್ಲೇಖಿತ ನಾಗನ ಬಗ್ಗೆಯಾಗಲೀ ಮತ್ತಾವುದೇ ಸಮಕಾಲೀನ ಶಾಸನಗಳಲ್ಲಿ ಹೆಚ್ಚಿನ ಮಾಹಿತಿ ಉಪಲಬ್ಧವಿಲ್ಲ ಎಂದು ಹೇಳಬಹುದು.

ನೆನಪುಗಳ ಸಂಕೋಲೆಯಲಿ

ದೇ. ಸ್ವಿತಾರೆಡ್ಡಿ.

ಮೌನಾಲಾಪದ
ಗುಂಗುನಾದದ ರಾಗಕ್ಕೆ
ತಲೆದೂಗಿ
ಜಗದಿರುವ ಮರೆತಿರುವಾಗ
ಆಲಿಂಗನದ
ಸಂಕೋಲೆಯಲಿ ಬಂಧಿಸಿ
ಮುದ್ದಾಡುವ ಬೇತಾಳಗಳಂತೆ
ನೆನಪುಗಳೇ ನೀವೇಕೆ ನನ್ನ
ಬೆನ್ನಟ್ಟಿ ಬಂದು
ಹೃದಯದ ನಾಟ್ಯ ವೇದಿಕೆಯಲ್ಲಿ
ರುದ್ರ ನರ್ತನವ
ಮಾಡುವಿರಿ ?

ತಂತಿ ಕಡಿದ ವೀಣೆಯ ಮೀಟಿ
ಅಪಸ್ವರದ
ರಾಗದಲೆಗಳ ಚಿಮ್ಮಿಸಿ
ಭಾವನಾತರಂಗಗಳ
ಅಲ್ಲೋಲ ಕಲ್ಲೋಲ
ಮಾಡುವಿರಿ,
ನೆನಪುಗಳೇ
ನಿಮ್ಮ ವಿಕಟ ನರ್ತನತ
ಅಪಶಕುನದ ಅಬದ್ಧ
ಆಲಾಪನೆಯ
ಸಪಿಮೂ
ಸವಿಮೂ ನನ್ನತನವ
ನಾ ಬಿರುಗಾಳಿಗೊಡ್ಡಿರುವಾಗ
ನೀವು ನನಗೆ

ಅಪ್ಪಾಯಿಯವರಿಗಾನವೇನು ?

ಗತಕಾಲದ ವೈಭವದ
ನಡುವೆಯೇ
ನಿಮ್ಮ ಸಮಾಧಿಯ ಮಾಡಿ
ಸುಖಸ್ವಪ್ನದರಮನೆಯ
ಹಾದಿಯೆಡೆ ಕಾಲಿಟ್ಟಾಗ
ಸಮಾಧಿಯ ಗೋಡೆಗಳ ಕೊಡವಿ
ಭೀಮಾಕೃತಿಯ ತಾಳಿ
ಬೆಂಬಿಡದ ಭೂತದಂತೆ
ನನ್ನ ನೆರಳಲ್ಲೇ ಒಂದಾಗಿ
ನಿಮ್ಮ ಬಿಗಿಮುಷ್ಟಿಯಲಿ
ಸಿಲುಕಿಸಿ
ಒಡಲ ಸುಡುವಗ್ನಿಗೆ
ಒಡ್ಡಿ
ನನ್ನನ್ನೇಕೆ ದಹಿಸುತ್ತಿರುವಿರಿ ?

ಇಂದು ನಗುವಿರೇ ನೀವು
ನನ್ನ ದಹಿಸಿ! ?
ಹೃದಯ ಛಿದ್ರಛಿದ್ರವಾಗಿ
ಒಡಲ ಪದರಗಳು
ಕಳಚಿಕೊಂಡಾಗ,
ನೆನಪುಗಳೇ ಸುಟ್ಟು ಬಿಡುವರು
ನಿಮ್ಮ
ನನ್ನ ದೇಹದೊಟ್ಟಿಗೇ

ಕ್ರೈಸ್ತ ದರ್ಶನದಲ್ಲಿ ಶಿಕ್ಷಣ

-ವಿಲ್ಯ ಮಾಡ್ತ

ಸ್ಥೂಲವಾಗಿ, ಕ್ರೈಸ್ತದರ್ಶನವೆಂದರೆ, ಕ್ರೈಸ್ತ ಅಧ್ಯಾತ್ಮದಿಂದ ಫಲಿತಗೊಂಡ ಜೀವನ-ದೃಷ್ಟಿ (Weltan Chauung). ಕ್ರೈಸ್ತದರ್ಶನದಲ್ಲಿ ಜೀವಾತ್ಮನಿಗೆ ಪರಮಾತ್ಮನೇ ಅಂತಿಮ ಗುರಿ; ಉಳಿದುದೆಲ್ಲವೂ ಆ ಗುರಿ ಸಾಧನೆಗಾಗಿ ಇರುವ ಸಾಧನಗಳು. ಶಿಕ್ಷಣ, ಈ ನಿಯಮಕ್ಕೆ ಅಪವಾದವಲ್ಲ. ಸಾಮಾಜಿಕ ಜೀವಿಯಾದ ಮಾನವನಿಗೆ ತನ್ನ ಸಾಮಾಜೀಕರಣದಿಂದಲೇ ತನ್ನ ಜೀವನದ ಗುರಿಸಾಧನೆ ಸಾಧ್ಯವಾಗುತ್ತದೆ. ಸ್ವಾಭಾವಿಕವಾಗಿ ಅಹಂಕೇಂದ್ರೀಯವಾಗಿರುವ ಮಾನವ, ಪರಕೇಂದ್ರೀಯವಾಗಿ ರೂಪಾಂತರ ಹೊಂದಿದಾಗ ಮಾತ್ರ ಸ್ವಮುಖೀ ಸಮಾಜ, ಪರಮುಖೀ ಸಮಾಜವಾಗಿ ಮಾರ್ಪಾಡಾಗುತ್ತದೆ. ಈ ಮೂಲಭೂತ ಬದಲಾವಣೆಯಿಂದ ಹೊಸ ಸಮಾಜ ನಿರ್ಮಾಣಗೊಳ್ಳುತ್ತದೆ. ಈ ಹೊಸ ಸಮಾಜವನ್ನು ಧಾರ್ಮಿಕ ಪರಿಭಾಷೆಯಲ್ಲಿ ದೈವೀ ಸಾಮ್ರಾಜ್ಯ (God's Kingdom/Reign of God) ಎಂದು ಕರೆಯುತ್ತಾರೆ. ಕ್ರೈಸ್ತದರ್ಶನದಲ್ಲಿ ಈ ಹೊಸ ಸಮಾಜ (New Society) ದ ನಿರ್ಮಾಣವೇ ಶಿಕ್ಷಣದ ಗುರಿ. ನಮ್ಮ ಶಿಕ್ಷಣ, ಹೊಸ ಸಮಾಜದ ನಿರ್ಮಾಣಕ್ಕೆ ಸಾಧನವಾಗಬೇಕಾದರೆ ಅದು ಸತ್ಯ, ನ್ಯಾಯ, ಪ್ರೀತಿ ಮತ್ತು ಸ್ವಾತಂತ್ರ್ಯಗಳೆಂಬ ನಾಲ್ಕು ಮೌಲ್ಯಗಳ ಆಧಾರದ ಮೇಲೆ ಭದ್ರವಾಗಿರಬೇಕು.

ಶಿಕ್ಷಕ ಶಿಕ್ಷಕಿಯರನ್ನು ವಿಮರ್ಶಾತ್ಮಕ ವಿಚಾರಕ್ಕೆ ಅಣಿಗೊಳಿಸುವುದೇ ಪ್ರಸ್ತುತ ಅಧ್ಯಯನದ ಪ್ರಧಾನ ಆಶಯ. ಮಾನವನ ಹಾಗೂ ಆತನ ಸಮಾಜದ ಪರಿವರ್ತನೆ (Metanoia) ಯನ್ನು ಅಪೇಕ್ಷಿಸುವ ಶಿಕ್ಷಣ ಅತ್ಯಂತ ಜವಾಬ್ದಾರಿಯುಳ್ಳದ್ದು. ಅಂತಯೇ ಸಮಸ್ಯಾತ್ಮಕವಾದದ್ದು. ಈ ಸಮಸ್ಯೆಗಳನ್ನು ಪರಸ್ಪರ ಚರ್ಚಿಸಿ ಅವುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಹಿಡಿದು ಅವುಗಳನ್ನು ಕ್ಷಿಪ್ರವಾಗಿ ಕಾರ್ಯರೂಪದಲ್ಲಿ ತರುವುದು ಪ್ರಸ್ತುತ ಸಂದರ್ಭದಲ್ಲಿ ಅನಿವಾರ್ಯ.

1.0 ಆಧುನಿಕ ಕಾಲದಲ್ಲಿ ಶಿಕ್ಷಣ

ಆಧುನಿಕ ಕಾಲದಲ್ಲಿ ಶಿಕ್ಷಣವೆಂಬುದು ಮಾನವ ಹಕ್ಕುಗಳ್ಲಿ ಒಂದು (PCJP : 114). ಆದುದರಿಂದ ಪ್ರತಿಯೊಂದು ಮಗುವಿಗೂ ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕಾಗಿದೆ. ಈ ಶಿಕ್ಷಣದಿಂದಾಗಿ ಹೊಸ ಸಮಾಜ ರೂಪಿತಗೊಂಡು ಪ್ರಪಂಚದಲ್ಲೆಲ್ಲ ಶಾಂತಿ ಹಾಗೂ ಭ್ರಾತೃತ್ವ ಉಂಟಾಗಬೇಕೆಂಬ ಉದ್ದೇಶ (PT : 31-8) ದಿಂದಲೇ ಅಲ್ಪ ಸಂಖ್ಯಾತ ಕ್ರೈಸ್ತ ಸಮಾಜ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ತನ್ನ ಅಮೂಲ್ಯ ಸೇವೆಯನ್ನು ಸಮಾಜಕ್ಕೆ ಧಾರೆ ಎರೆಯುತ್ತಿದೆಯಾದರೂ ಮಾಡಬೇಕಾದ ಕೆಲಸ ಇನ್ನೂ ಸಾಕಷ್ಟಿದೆ. ನಮ್ಮ ದೇಶದಲ್ಲಿ ಹಾಗೂ ನಾಡಿನಲ್ಲಿ ಇನ್ನೂ ಪ್ರಾಥಮಿಕ ಶಿಕ್ಷಣ ಲಭ್ಯವಿಲ್ಲದ ಸಹಸ್ರಾರು ಮಕ್ಕಳಿದ್ದಾರೆ. ಇವರ ಕೂಗು

ಸಮಾಜ ಸೇವಾ ಸಂಸ್ಥೆಗಳ ಹಾಗೂ ಸರಕಾರದ ಪ್ರಯತ್ನಗಳನ್ನು ತಟ್ಟಬೇಕು, ಕ್ರಿಯಾಶೀಲಗೊಳಿಸಬೇಕು.

1.1 ಶೈಕ್ಷಣಿಕ ಸಮಸ್ಯೆಗಳು :

ನಮ್ಮ ಸಮಾಜದಲ್ಲಿ ಹಲವಾರು ಶೈಕ್ಷಣಿಕ ಸಮಸ್ಯೆಗಳಿವೆ. ಅವುಗಳಲ್ಲಿ ಪ್ರಮುಖವಾದ ಕೆಲವುಗಳನ್ನು ಮಾತ್ರ ಸೂಚಿಸಬಯಸುತ್ತೇನೆ :

ನಮ್ಮ ಇಂದಿನ ಶಿಕ್ಷಣದಲ್ಲಿ, ನಮ್ಮ ಪ್ರಗತಿಪರ ಸಮಾಜಗಳ ಅಭಿವೃದ್ಧಿಗೆ ಅಗತ್ಯವಾಗಿರುವ ಕೃಷಿಕ, ತಾಂತ್ರಿಕ, ಔದ್ಯೋಗಿಕ ಕೌಶಲಗಳ ಸೇರ್ಪಡೆ ಸಾಕಷ್ಟು ಪ್ರಮಾಣದಲ್ಲಿ ಕಂಡು ಬರುವುದಿಲ್ಲ; ಸ್ಥಳೀಯ ಬೇಡಿಕೆ ನೀಡಿಕೆಗಳತ್ತ ಅಲ್ಲಿ ಗಮನವಿಲ್ಲ. ಆಯಾ ಪ್ರದೇಶದ ಬಡ ಜನರಿಗೆ, ದಲಿತವರ್ಗದವರಿಗೆ ಶಿಕ್ಷಣ ಪಡೆಯುವ ಅವಕಾಶಗಳು, ಪ್ರೋತ್ಸಾಹಗಳು ಕ್ರಿಯಾತ್ಮಕವಾಗಿರುವುದು ಕಡಿಮೆ. ಶಿಕ್ಷಣ ಕ್ಷೇತ್ರದ ಸಮಗ್ರ ಬೆಳವಣಿಗೆಯಲ್ಲಿ ಇಂದು ಕುಂದುಕೊರತೆಗಳೇ ಜಾಸ್ತಿ.

ಸಾಕ್ಷರತಾ ಅಂದೋಲನ, ಕಡ್ಡಾಯ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಹಾಗೂ ಸ್ನಾತಕಪೂರ್ವ ಹಾಗೂ ಸ್ನಾತಕೋತ್ತರ ಶಿಕ್ಷಣ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳವಿದ್ದರೂ ಅವುಗಳಿಂದ ಉದ್ದೇಶಿತ ಶೈಕ್ಷಣಿಕ ಗುರಿ ಮುಟ್ಟಲು ಸಾಧ್ಯವಾಗಿಲ್ಲ ; ಶಿಕ್ಷಣದಿಂದ ಸಮಗ್ರ ಸಾಮಾಜಿಕ ಕ್ರಾಂತಿ ಬದಲಾವಣೆ ನಮ್ಮಲ್ಲಿ ಮೂಡಿಬಂದಿಲ್ಲ. ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳಲ್ಲಿ ಪ್ರಜಾಪ್ರಭುತ್ವದ ಸೋಗು ಇದ್ದರೂ ಅದರ ಪರಿಪೂರ್ಣತೆಯ ಲಕ್ಷಣ ಕಂಡುಬರುವುದು ವಿರಳ. ಧರ್ಮನಿರಪೇಕ್ಷತೆ, ಸಾಮಾಜೀಕರಣ, ಮಾನವೀಕರಣ ಮೊದಲಾದ ಮೌಲ್ಯಗಳು ಇನ್ನೂ ಬಹು ದೂರ. ಅವುಗಳ ಬದಲಾಗಿ ಧರ್ಮಾಂಧತೆ, ಜಾತೀಯತೆ, ಪ್ರಾದೇಶಿಕತೆ ಮೊದಲಾದ ಅಪಾಯಕಾರಿ ಸಂಕುಚಿತ ಮನೋಭಾವಗಳು ಶಿಕ್ಷಿತರಲ್ಲಿ ಕಡಿಮೆಯಾಗುವುದರ ಬದಲು ಹೆಚ್ಚಾಗುತ್ತಿರುವುದು ಇಂದಿನ ದುರ್ದೈವವೇ ಸರಿ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಇಂದಿನ ಉಚ್ಚ ಶಿಕ್ಷಣ ಪಡೆದಿರುವವರಿಗಿಂತ, ನಿರಕ್ಷರ ಕುಕ್ಷಿಗಳಾದ ಹಳ್ಳಿಗಳ, ಗ್ರಾಮಾಂತರ ಪ್ರದೇಶದ, ಜನರೇ ಎಷ್ಟೋ ರೀತಿಯಲ್ಲಿ ಉತ್ತಮ ಸಂಸ್ಕೃತಿಯುಳ್ಳವರು, ಹೆಚ್ಚು ಮಾನವೀಯರು ಎಂದರೆ ಬಹುಮಟ್ಟಿಗೆ ತಪ್ಪಾಗಲಾರದು. ನಮ್ಮ ಶೈಕ್ಷಣಿಕ ಸಂಸ್ಥೆಗಳಿಂದ ರಾಜಕೀಯ ವಲಯಕ್ಕೆ ಹೋದ ವ್ಯಕ್ತಿಗಳೆಷ್ಟು? ಅವರ ಮೌಲ್ಯಗಳೇನು? ಅವರಿಗೆ ಸಮಾಜದ ಬಗೆಗೆ, ಕೆಳಗಿನ ಸ್ತರಗಳಲ್ಲಿರುವ ಸಮುದಾಯಗಳ ಬಗೆಗೆ ಇರುವ ಕಳಕಳಿ ಆಸಕ್ತಿಗಳೇನು ? ಸಾಮಾಜಿಕ ಹಾಗೂ ಧಾರ್ಮಿಕ ರಂಗಗಳಲ್ಲಿರುವ ವ್ಯಕ್ತಿಗಳ ಪಾಡಾದರೂ ಬಹು ಭಿನ್ನವಾಗಿದೆಯೆ ? ಅಥವಾ ಎಲ್ಲವೂ 'ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಧರಿಸಿದ ವೇಷಗಳೆ ? ಎಂಬಿತ್ಯಾದಿ ಸೂಕ್ಷ್ಮ ವಿಷಯಗಳ ಬಗೆಗೆ ಅಧ್ಯಯನ ಸಂಶೋಧನೆಗಳನ್ನು ಮಾಡಿದರೆ ಶೈಕ್ಷಣಿಕ ಸಂಸ್ಥೆಗಳನ್ನು ಮುಚ್ಚಿ ಸಾಮಾಜಿಕ ಸೇವಾ ಸಂಸ್ಥೆಗಳಲ್ಲಿ ದುಡಿಯುವುದೇ ಶ್ರೇಷ್ಠ ಎಂಬ ಮನೋಭಾವನೆ ತಳೆಯಬೇಕಾದೀತು; ಲ್ಯಾಟಿನ ಅಮೇರಿಕೆಯಂತಹ ಅಭಿವೃದ್ಧಿಪರ ದೇಶಗಳಲ್ಲಿ

ಈ ಭಾವನೆ ಈಗಾಗಲೇ ವ್ಯಕ್ತವಾಗಿದೆ.

ಅರ್ಥ, ಕಾಮ, ಪ್ರತಿಷ್ಠೆಗಳೇ ಇಂದಿನ ಜೀವನದ ಮೌಲ್ಯಗಳಾಗಿವೆ. ಎಲ್ಲೆಡೆಯಲ್ಲಿಯೂ ಆಡಳಿತದಲ್ಲಿ ಲಂಚ ಪ್ರಭಾವಗಳು ತಾಂಡವವಾಡುತ್ತಿವೆ. ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಯೇ ಈ ಪ್ರವೃತ್ತಿಗಳ ಮೂಲಕ ನಡೆಯುತ್ತವೆ. ಕಾರಣ, ಶಿಕ್ಷಣ ವ್ಯಾಪಾರೀ ಮನೋಭಾವದಿಂದ ತುಂಬಿದೆ. ಕಾಯಬೇಕಾದ ಬೇಲಿಯೇ ಹೊಲವನ್ನು ಮೆಯ್ದಾಗ ಹೇಳುವುದೇನು ಉಳಿಯಿತು?

ಇಂತಹ ಸಂದಿಗ್ಧ ಪರಿಸ್ಥಿತಿಯಿಂದ ಶಿಕ್ಷಣವನ್ನು ಮುಕ್ತಗೊಳಿಸಬೇಕಾದರೆ ಜೀವನ ದರ್ಶನದ ಋಜುಮಾರ್ಗ ಶಿಕ್ಷಣರಂಗಕ್ಕೆ ಪ್ರಾಪ್ತವಾಗಬೇಕು. ಈ ಸಂದರ್ಭದಲ್ಲಿ ಕ್ರೈಸ್ತ ದರ್ಶನ ಪ್ರಮುಖವಾಗಿ ಶಿಕ್ಷಣರಂಗಕ್ಕೆ ಐದು ಪಾತಳಿಗಳನ್ನು ಸೂಚಿಸುತ್ತದೆ.

ಮೊದಲನೆಯದಾಗಿ : ಶಿಕ್ಷಣ, ಸಮಾಜಕ್ಕೆ ತಾರಕಪ್ರಾಯವಾಗಬೇಕಾದರೆ ಅದು ಸಾಂಸ್ಕೃತಿಕ, ಸಮಾಜೊ-ಆರ್ಥಿಕ ಹಾಗೂ ರಾಜಕೀಯ ನೆಲೆಗಳಿಂದ ಕೂಡಿಕೊಂಡಿರಬೇಕು. ಶಿಕ್ಷಣ, ಸಾಮಾಜಿಕ ಬದಲಾವಣೆಗೆ (Perestroika) ದಾರಿದೀಪವಾಗಬೇಕು. ಅದು ಹೊಸ ಸಮಾಜದ ನಿರ್ಮಾಣದ ಬಗೆಗೆ ಜನಜಾಗೃತಿಯನ್ನುಂಟು ಮಾಡಬೇಕು.

ಎರಡನೆಯದಾಗಿ : ಶಿಕ್ಷಣ, ಇಂದಿನ ಹಾಗೂ ನಾಳಿನ ಸಮಾಜವನ್ನು ಹೆಚ್ಚೆಚ್ಚು ಮಾನವೀಯ, ವೈಜ್ಞಾನಿಕ ಹಾಗೂ ತಾಂತ್ರಿಕ ಬೆಳವಣಿಗೆಯತ್ತ ಕೊಂಡೊಯ್ದು ಮಾನವನ ಪೂರ್ಣತೆಗೆ ಸಹಕಾರಿಯಾಗುವಂತಿರಬೇಕು. ಶಿಕ್ಷಣದಲ್ಲಿ ಈ ನೆಲೆಗಳು ಇಲ್ಲದೆ ಹೋದಲ್ಲಿ ಮುಂದಿನ ಜನಾಂಗದ ಜೀವನ ಅಮಾನವೀಯ ಹಾಗೂ ಅವೈಜ್ಞಾನಿಕವಾಗುವುದಲ್ಲದೆ ಮೂಢಸಂಪ್ರದಾಯ ಹಾಗೂ ನಂಬಿಕೆಗಳಿಂದಾಗಿ ಅಭಿವೃದ್ಧಿಯಾಗಲಾರದು. ಈ ಕಾರಣದಿಂದಾಗಿ ಸೂಕ್ತ ಶೈಕ್ಷಣಿಕ ವಾತಾವರಣ, ತಂತ್ರಗಾರಿಕೆ ಹಾಗೂ ಅಭ್ಯಾಸಕ್ರಮದತ್ತ ಗಮನ ಹರಿಯಿಸುವುದು ಅತ್ಯಗತ್ಯ.

ಮೂರನೆಯದಾಗಿ ಶಿಕ್ಷಣದಲ್ಲಿ ದಲಿತರಿಗೆ, ಪರಿಶಿಷ್ಟರಿಗೆ, ದೀನದಲಿತರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಅಗ್ರಸ್ಥಾನ ಸಿಗಬೇಕು. ಶತಶತಮಾನಗಳಿಂದ ನಿರ್ಲಕ್ಷ್ಯಕ್ಕೆ ಒಳಪಟ್ಟು ಇತರರ ತುಳಿತಕ್ಕೆ ಒಳಗಾದ ಈ ಜನಾಂಗಗಳಿಗೆ ಅದ್ಯತೆ ನೀಡಬೇಕು. ಆಗ ಮಾತ್ರ ಅವರು ಕಳೆದುಕೊಂಡ ಆತ್ಮಗೌರವ ಅವರು ಮರಳಿ ಪಡೆದುಕೊಳ್ಳಬಹುದು. ಪ್ರಾಥಮಿಕ ಶಿಕ್ಷಣದಿಂದಲಾದರೂ ಅವರು ವಂಚಿತರಾಗಬಾರದು. ಅದು ಅವರ ಜನ್ಮಹಕ್ಕೂ ಹೌದು.(PT : 12-3)

ಈ ವ್ಯವಸ್ಥೆಯಿಂದಾಗಿ ಶಿಕ್ಷಣದ ಗುಣಮಟ್ಟ ಕುಸಿದುಬಿಳುತ್ತದೆ ಎಂಬ ಕೂಗಿಗೆ ಕಿವಿ ಕೊಡಬಾರದು; ಕುಸಿದುಬೀಳುವ ಸಂಭವಗಳನ್ನು ಬೇರೆ ಸಕಾರಾತ್ಮಕ ಪ್ರಯೋಗಗಳಿಂದ

ತಪ್ಪಿಸಬೇಕು. (NFE 1980, No. 3).

ನಾಲ್ಕನೆಯದಾಗಿ 12 ಬಿ : ಯಾವುದೇ ರೀತಿಯ ಶೋಷಣೆ, ದಬ್ಬಾಳಿಕೆ ಹಾಗೂ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವ ಸಾಮರ್ಥ್ಯ ಕೊಡುವ ಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡಬೇಕು. ಅವರು ಜಾತೀಯತೆ, ಪ್ರಾದೇಶಿಕತೆ, ಭಾಷಾಂಧತೆ ಮೊದಲಾದ ಬಂಧನಗಳನ್ನು ಕಡಿದುಹಾಕಿ ಮುಕ್ತ ರೀತಿಯಲ್ಲಿ ವಿಚಾರ ಮಾಡುವಂತೆ ಹಾಗೂ ಜೀವಕ್ರಮವನ್ನು ರೂಪಿಸಿಕೊಳ್ಳುವಂತೆ ಶಿಕ್ಷಣ ತರಬೇತಿ ಹಾಗೂ ಮಾರ್ಗದರ್ಶನ ನೀಡಬೇಕು. ಆಗ ಮಾತ್ರ ಅನೇಕತೆಯಲ್ಲಿ ಏಕತೆ ಸಾಧಿಸಿ ಬಲಾಢ್ಯ ರಾಷ್ಟ್ರವನ್ನು ಕಟ್ಟುವುದು ಸಾಧ್ಯವಾಗುತ್ತದೆ. ಈ ರೀತಿಯ ಪ್ರಜ್ಞೆ ಬೆಳೆಯಿಸದ, ಮುಕ್ತ ಮನಸ್ಸನ್ನು ಬೆಳೆಯಿಸಿದ, ಶಿಕ್ಷಣ ಶಿಕ್ಷಣವೇ ಅಲ್ಲ.

ಐದನೆಯದಾಗಿ : ಹೊಸ ಸಮಾಜ ನಿರ್ಮಾಣ ಶಿಕ್ಷಣದ ಗುರಿಯಾದರೆ, ಶಿಕ್ಷಣದ ರೂಪರೇಷೆಯನ್ನು ಗುರುತಿಸುವಲ್ಲಿ, ಶೋಷಣೆಗೆ ಒಳಗಾದ ಜನರು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯ ಪ್ರವೃತ್ತರಾಗಬೇಕು. ಆಗ ಮಾತ್ರ ಸಮಾಜದ ಕೆಳಸ್ತರದ ವ್ಯಕ್ತಿಗಳನ್ನು ಮೇಲಕ್ಕೆತ್ತುವುದು ಸಾಧ್ಯವಾಗಬಲ್ಲುದು.

3.0 ಕ್ರೈಸ್ತ ಶೈಕ್ಷಣಿಕ ಸಿದ್ಧಾಂತ :

ಕ್ರೈಸ್ತದರ್ಶನದಲ್ಲಿ ಶಿಕ್ಷಣವೆಂಬುದು ವ್ಯಕ್ತಿಯ ಹಾಗೂ ಸಮಾಜದ ಪರಿಪೂರ್ಣ ವಿಕಾಸಕ್ಕೆ ನೀಡುವ ಸಮಗ್ರ ಸ್ವರೂಪದ ತರಬೇತಿ (Clune, 284 : Sequeira, 150). ಅದು ಜೀವನೋಪಾಯಗಳನ್ನು ಕೊಡಬೇಕಲ್ಲದೆ ಜ್ಞಾನ ಹಾಗೂ ಜೀವನ ಮೌಲ್ಯಗಳನ್ನು ಒದಗಿಸಬೇಕು. ದೈನಂದಿನ ಜೀವನವನ್ನು ಸುಗಮವಾಗಿ ಸಾಗಿಸುವ ಕಲೆಯನ್ನು ಸೂಚಿಸಬೇಕು. ಸಾಮಾಜಿಕ ಅಭ್ಯುದಯಕ್ಕೆ ಬೇಕಾಗುವ ಸಾಮಗ್ರಿಯನ್ನು ಒದಗಿಸುವುದರ ಜೊತೆಗೆ ಯುವ ಪೀಳಿಗೆಗೆ ಜೀವನದರ್ಶನವನ್ನೂ ನೀಡಬೇಕು. (CED : 68-70) .

ಕ್ರೈಸ್ತ ಶಿಕ್ಷಣ ಸಿದ್ಧಾಂತಕ್ಕೆ ಯೇಸು ಕ್ರಿಸ್ತನ ಶಿಕ್ಷಣಶಾಸ್ತ್ರ (Pedagloly) ವೇ ಮಾದರಿ. ಇದು ಮೂಲತಃ ಜನಸಾಮಾನ್ಯಪರ, ಪರಿವರ್ತನಾಶೀಲ, ಭವಿಷ್ಯವಾದಿ, ಸಂವಾದಾತ್ಮಕ ಹಾಗೂ ವಿಮರ್ಶಾತ್ಮಕ; ಎಲ್ಲಕ್ಕಿಂತಲೂ ಮಿಗಿಲಾಗಿ ಕ್ರಿಯಾತ್ಮಕ ಹಾಗೂ ಮುಕ್ತಿಯಾತ್ಮಕ (Liberative). ಅದು ತಮ್ಮ ಸುಪ್ತಶಕ್ತಿಯ ಅರಿವನ್ನು ವಿದ್ಯಾರ್ಥಿಗಳಲ್ಲಿ ಉಂಟುಮಾಡಿ ಅವರನ್ನು ಸಮಸ್ತ ಬಂಧನಗಳಿಂದ ಮುಕ್ತಗೊಳಿಸುತ್ತದೆ. ಅವರನ್ನು ಅದುಮಿ ಹಿಡಿಯುವ, ಶೋಷಣೆಗೊಳಪಡಿಸುವ ಹಲವಾರು ಪುರಾಣಗಳನ್ನು ಅದು ಅನಾವರಣಗೊಳಿಸುತ್ತದೆ (Morisette, 85-101 ; 106-15 & 238-40).

2.1 ಕ್ರೈಸ್ತ ಶಿಕ್ಷಣದ ಗುರಿ :

ಪರೀಕ್ಷೆಯಲ್ಲಿ ಅಧಿಕ ಗುಣಗಳನ್ನು ಪಡೆದು ಉತ್ತೀರ್ಣರಾಗುವುದು ಕ್ರೈಸ್ತ ಶಿಕ್ಷಣದ ಗುರಿಯಲ್ಲ. ಸ್ವಾಭಾವಿಕವಾಗಿ ಅಹಂಕೇಂದ್ರೀಯ ಸ್ವರೂಪದ ನಮ್ಮ ಪ್ರಜ್ಞೆಯನ್ನು ಪರಕೇಂದ್ರೀಯವನ್ನಾಗಿ ರೂಪಾಂತರಿಸಿ ಜನಪದ ಹಾಗೂ ಜನಹಿತ ಕಾರ್ಯಗಳಲ್ಲಿ ಸರ್ವಾರ್ಪಣ ಭಾವದಿಂದ ದುಡಿಯುವಂತೆ ವ್ಯಕ್ತಿತ್ವವನ್ನು ರೂಪಿಸುವುದೇ ಇಲ್ಲಿಯ ಶೈಕ್ಷಣಿಕ ಹೆಗ್ಗುರಿ. ವೈಯಕ್ತಿಕ ಪೈಪೋಟಿಯ ಬದಲಾಗಿ ಪರಸ್ಪರ ಸಹಕಾರ ಮನೋವೃತ್ತಿ ವಿದ್ಯಾರ್ಥಿಗಳಲ್ಲಿ ಬೆಳೆಯಬೇಕು. (CBCI GM 1974 : 153-4). ನಿಷ್ಕಾಮ ಕರ್ಮದಿಂದಲೇ ಯುವಕ ಯುವತಿಯರಲ್ಲಿ ಪ್ರೌಢಿಮೆ ಬೆಳೆಯುವುದು ಸಾಧ್ಯ. ಸಾಮಾಜಿಕ ಪುನರ್‌ನಿರ್ಮಾಣದಲ್ಲಿ ನ್ಯಾಯಪರವಾದಂತಹ ಅನ್ಯೋನ್ಯತೆಯನ್ನುಂಟು ಮಾಡುವ ಶಿಕ್ಷಣ ಅನಿವಾರ್ಯ.

ಇಂದು ಧರ್ಮಾತೀತ, ಜಾತ್ಯಾತೀತ ರಾಷ್ಟ್ರ ಕಟ್ಟುವಲ್ಲಿ ಮತಾಂಧತೆಯನ್ನು ಹಾಗೂ ಮೂಲಭೂತವಾದವನ್ನು ತಳ್ಳಿಹಾಕುವ ಪ್ರಜ್ಞಾವಂತ ಜನಸಮುದಾಯಗಳನ್ನು ಸೃಷ್ಟಿಸುವ ಶಿಕ್ಷಣ ಭಾರತಕ್ಕೆ ಅವಶ್ಯವೆನಿಸಿದೆ. ಸ್ವಸಾಮರ್ಥ್ಯವುಳ್ಳ, ಮೌಲ್ಯಾಧಾರಿತ ಹಾಗೂ ಕರುಣೆ ಸಹನೆಗಳುಳ್ಳ ಸುಶಿಕ್ಷಿತ ವರ್ಗ ನಮ್ಮ ಶೈಕ್ಷಣಿಕ ಸಂಸ್ಥೆಗಳಿಂದ ಪ್ರೋತ್ಸಾಹ ರೂಪದಲ್ಲೂ ಹೊರಧುಮುಕಬೇಕಾಗಿದೆ. ಆಗ ಮಾತ್ರ ನಮ್ಮ ಸಮಾಜಕ್ಕೆ, ನಮ್ಮ ರಾಷ್ಟ್ರಕ್ಕೆ ತಕ್ಕುದಾದ ನಾಯಕರನ್ನು ಶಿಕ್ಷಣ ರೂಪಿಸಿದಂತಾಗುತ್ತದೆ.

ಶಿಕ್ಷಣದ ಈ ಕೊಡುಗೆಯೇ ಇಂದಿನ ಅವಶ್ಯಕತೆ. ಈ ಅವಶ್ಯಕತೆ ಪೂರೈಸಿದಾಗ ನಮಗೆ ಶಕ್ತಿಯುತ ಹಾಗೂ ಸರ್ವಾರ್ಪಣಭಾವದ ಮುಖಂಡರು ರಾಷ್ಟ್ರಮಟ್ಟದಲ್ಲಿ ದೊರಕುವುದು ಸಾಧ್ಯವಾಗುತ್ತದೆ. (Miranda, 24-5; Mathias, 1978 : 4-6).

ಕ್ರೈಸ್ತ ಶೈಕ್ಷಣಿಕ ಸಿದ್ಧಾಂತದಲ್ಲಿ ಸಮಾಜಮುಖೀ ಕ್ರಿಯಾತ್ಮಕತೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ದ್ವಿತೀಯ ವಿಶ್ವಸಭೆಯ ಪ್ರಕಾರ, ಶಿಕ್ಷಣ ಕೇವಲ ವೈಯಕ್ತಿಕ ವ್ಯಕ್ತಿತ್ವವನ್ನು ಬೆಳೆಯಿಸುವುದಕ್ಕೆ ಮಾತ್ರ ಸೀಮಿತವಾಗಿರದೆ, ವಿದ್ಯಾರ್ಥಿನಿ ತನ್ನ ಸಾಮಾಜಿಕ ಅಭಿವೃದ್ಧಿಗೋಸ್ಕರ ಪ್ರೌಢ ರೀತಿಯಲ್ಲಿ ದುಡಿಯುವಂತೆ ಆತನನ್ನು ಆಕೆಯನ್ನು ರೂಪಿಸುವುದೇ ಅದರ ಗುರಿ. ನೈರೆರೆಯವರು (Nyrere) ಇನ್ನೂ ಸ್ಪಷ್ಟವಾಗಿ ಹೀಗೆ ಹೇಳುತ್ತಾರೆ:

ಕೋಟಿಗಟ್ಟಲೆ ಜನ ಹಸಿವಿನಿಂದ ಹಾಗೂ ಅನಾರೋಗ್ಯದಿಂದ ಸಾವನ್ನಪ್ಪುತ್ತಿರುವಾಗ, ಕೆಲವೇ ಕೆಲವು ಬೆರಳೆಣಿಕೆಯಷ್ಟು ಶ್ರೀಮಂತವರ್ಗದವರನ್ನು ದಂತಗೋಪುರದಲ್ಲಿ ಕುಳ್ಳಿರಿಸಿ ತಂತಮ್ಮ ಮಾನಸಿಕ ಬೆಳವಣಿಗೆಗಾಗಿ ಹಾಗೂ ಖಾಸಗಿ ಸಮಸ್ಯೆಗಳನ್ನು ಕುರಿತಾಗಿ ಸಂಶೋಧನೆ ಮಾಡುವಲ್ಲಿ ತಮ್ಮನ್ನು ತೊಡಗಿಸಲು ಅಧಿಕ ಪ್ರಮಾಣದಲ್ಲಿ ಧನ ವ್ಯಯಮಾಡುವುದರಲ್ಲಿ ನ್ಯಾಯವೆಲ್ಲಿದೆ ? ರಾಷ್ಟ್ರೀಯ ಅಭಿವೃದ್ಧಿಗೆ ನೆರವಾಗದ ಉಚ್ಚ ಶಿಕ್ಷಣ ಕೇವಲ ಅನ್ಯಾಯದ ಉಪಭೋಗ.

(Mathias, Ibid : 6-8).

ಶಿಕ್ಷಣದ ಗುರಿಯ ಈ ಹಿನ್ನೆಲೆಯಲ್ಲಿ ಸತ್ಯ, ನ್ಯಾಯ, ಪ್ರೀತಿ ಹಾಗೂ ಸ್ವಾತಂತ್ರ್ಯವೆಂಬ ಮೌಲ್ಯಗಳ ಆಧಾರದ ಮೇಲೆ ಹೊಸ ಸಮಾಜವನ್ನು ಕಟ್ಟಬೇಕೆಂಬ ವಿಚಾರ ಅರ್ಥಪೂರ್ಣವಾಗುತ್ತದೆ. (Mathias, 1969). ಈ ಹಿಂದೆ, ವೈಯಕ್ತಿಕ ಬೆಳವಣಿಗೆಗೆ ಹೆಚ್ಚು ಪ್ರಾಶಸ್ತ್ಯವಿದ್ದರೆ ಈಗ ಅದು ಸಾಮಾಜಿಕ ಬೆಳವಣಿಗೆಯ ಕಡೆ ವಾಲಿದೆ. ಶಿಕ್ಷಣ ಇಂದು ಮಾನವ ಪ್ರಜ್ಞೆಯನ್ನು ಊಳಿಗಮಾನ್ಯ (Feudal) ವ್ಯವಸ್ಥೆಯಿಂದ ಮುಕ್ತಗೊಳಿಸಿ ಭ್ರಾತೃತ್ವಭಾವದತ್ತ ಒಯ್ಯಬೇಕಾಗಿದೆ. ಪ್ರತಿಯೊಬ್ಬ ಪ್ರಜೆಯೂ ಅಪ್ಪಟ ಭಾರತೀಯನಾಗಿದ್ದುಕೊಂಡೇ ಆಧುನಿಕ ಮನೋವೃತ್ತಿಯುಳ್ಳವನಾಗಿರ ಬೇಕಲ್ಲದೆ ಅತ್ಯಂತ ಮಾನವೀಯನಾಗಿ ಬಾಳಬೇಕು.

2.2 ಪಠ್ಯಕ್ರಮ

ಶಿಕ್ಷಣದಲ್ಲಿರುವ ಪಠ್ಯಕ್ರಮ (Curriculum) ಜೀವನ-ಪರವಾಗಿರಬೇಕು. ಅದು ನಮ್ಮ ರಾಷ್ಟ್ರೀಯ ಸಂಸ್ಕೃತಿಯನ್ನು, ಸರ್ವಸಾಮಾನ್ಯತೆಯನ್ನು, ಪ್ರಜಾಪ್ರಭುತ್ವವನ್ನು ಧರ್ಮನಿರಪೇಕ್ಷತೆಯನ್ನು, ಲೈಂಗಿಕ ಸಮಾನತೆಯನ್ನು, ಪರಿಸರ ಪ್ರೇಮವನ್ನು, ಜಾತ್ಯಾತೀತತೆಯನ್ನು ಕೌಟುಂಬಿಕ ಯೋಜನೆಯನ್ನು, ವೈಜ್ಞಾನಿಕ ಮನೋಭಾವನೆಯನ್ನು ಹಾಗೂ ಮೌಲ್ಯಾಧಾರಿ ಜೀವನಕ್ರಮವನ್ನು ರೂಪಿಸಬೇಕು. ಅದು ನಮ್ಮ ಯುವಜನಾಂಗದ ಮನಸ್ಸಿನಲ್ಲಿ ಕುತೂಹ ಆಸಕ್ತಿಗಳನ್ನು ಕೆರಳಿಸಿ, ಕ್ರಿಯಾಶೀಲತೆಯನ್ನು ಜಾಗೃತಗೊಳಿಸಬೇಕು; ನಿನ್ನೆಯದನ್ನು ಪ್ರಶ್ನಿಸಿ ಇಂದಿನದನ್ನು ಅರ್ಥೈಸಿ, ನಾಳೆಯತ್ತ ಧಾವಿಸುವಂತಹ ಪ್ರಗತಿಶೀಲರನ್ನಾಗಿ ಮಾಡಬೇಕು ಜೀವನದ ಸಿಹಿಕಹಿಗಳನ್ನುಂಡು ಸಮಚಿತ್ತ ಬಾಳ್ವೆಯನ್ನು ಬಾಳುವಂತಹ ಮನೋಸ್ಥೈರ್ಯವನ್ನು ಕೊಡುವಂತಾಗಬೇಕು; ಅಲ್ಲದೆ ಇಂದಿನ ಕಾಲಮಾನಕ್ಕೆ ಅನುಗುಣವಾಗಿರುವಂತಹ ಸಮಾಜೊ-ಆರ್ಥಿಕ ಹಾಗೂ ರಾಜಕೀಯ ಜೀವನಕ್ಕೆ ಆಧಾರವಾಗಿರುವಂತಹ ತರಬೇತಿಯನ್ನು ಅದು ನೀಡಬೇಕು.

ಈ ರೀತಿಯ ಜೀವನಪರ ಪಠ್ಯಕ್ರಮವುಳ್ಳ ಶಿಕ್ಷಣ ನೀಡಿದಾಗ ಮಾತ್ರ ನಮ್ಮ ಸಾಮಾಜಿ ಸಮಸ್ಯೆಗಳ, ನಮ್ಮ ಬಡತನದ, ದಾರಿದ್ರ್ಯತನದ, ಮೌಲ್ಯಶೂನ್ಯವಾದ ಜೀವನದ ಅರಿವು ನಮ್ಮ ವಿದ್ಯಾರ್ಥಿಗಳಲ್ಲಿ ಮೂಡುವ ಸಾಧ್ಯತೆ ಇದೆ. ಈ ಅರಿವು ಮೂಡಿದಾಗ ಈ ಪಿಡುಗುಗಳ ನಿವಾರಣೆ ಏನು ಮಾಡಬೇಕೆಂಬ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆಯುಂಟಾಗುತ್ತದೆ. ಇಂತ ಶಿಕ್ಷಣದಿಂದಾಗಿ ಒಬ್ಬ ವ್ಯಕ್ತಿ ಭಾರತೀಯನಾಗಿದ್ದುಕೊಂಡು ವಿಶ್ವಮಾನವನಾಗಿ ಬೆಳೆದು ತುಳಿ ಒಳಪಟ್ಟವರ ವಿಮೋಚನೆಗಾಗಿ ಹೋರಾಡಿ ಸರ್ವೋದಯಕ್ಕಾಗಿ ವರ್ಣವರ್ಗಭೇದವಿಲ್ಲ ದುಡಿಯುವುದು ಸಾಧ್ಯವಾಗುತ್ತದೆ. (PCJP : 94).

ಪಠ್ಯಕ್ರಮ ವಿದ್ಯಾರ್ಥಿಗಳಲ್ಲಿ ಮನೋಸ್ಥೈರ್ಯ ಧೈರ್ಯಗಳನ್ನು ಉಂಟು ಮಾಡದಿದ್ದರೆ, ಚಿಕಿತ್ಸಕ ಬುದ್ಧಿಯನ್ನು ಬೆಳೆಯಿಸದಿದ್ದರೆ (Freire, 1972 & 1973), ಹಾಗೂ ಸ್ವಾಸಾಮರ್ಥ್ಯವನ್ನು ವೃದ್ಧಿಪಡಿಸದಿದ್ದರೆ ಮುಂದಿನ ಜನಾಂಗ ವೈಚಾರಿಕತೆಯಲ್ಲಿ ಮುಂದೆ ಸಾಗುವ ಬದಲು ವಿಚಾರಹೀನವಾದ ಸಮುದಾಯವಾಗಿ ಉಳಿಯಬಹುದು. ಯುವಶಕ್ತಿ ಬೆಳೆಯಬೇಕಾದರೆ ಸಾಮೂಹಿಕ ಯೋಜನೆಗಳು, ಸಾಮಾಜಿಕ ಸೇವಾ ಕಾರ್ಯಗಳು, ಸಾಕ್ಷರತಾ ಕಾರ್ಯಕ್ರಮಗಳು ಮೊದಲಾದ ಉಪಯುಕ್ತ ಸೇವಾ ಯೋಜನೆಗಳಿಗೆ ಕ್ರಮಾಂಕಗಳನ್ನು ನಿಗದಿಪಡಿಸುವುದು ಉಪಯುಕ್ತ. ಹೀಗೆ ಮಾಡಿದಾಗ ಮಾತ್ರ ನಮ್ಮ ಶಿಕ್ಷಣದಿಂದಾಗಿ ಹೊಸ ಸಮಾಜವನ್ನು, ಮುಕ್ತ ಸಮಾಜವನ್ನು ಕಟ್ಟಿಕೊಂಡು ಜನಸಮುದಾಯಗಳನ್ನು ವಿವಿಧ ದಾಸ್ಯತನದಿಂದ ವಿಮೋಚಿಸುವುದು ಸಾಧ್ಯಗೊಳ್ಳುತ್ತದೆ.

2.3 ಮೌಲ್ಯಾಧಾರಿತ ಶಿಕ್ಷಣ :

ಹಲವು ಧರ್ಮಗಳ ಹಾಗೂ ಸಂಸ್ಕೃತಿಗಳ ಬೀಡಾದ ನಮ್ಮ ದೇಶದಲ್ಲಿ ಹಾಗೂ ನಾಡಿನಲ್ಲಿ ಯಾವುದಾದರೊಂದು ಧರ್ಮದ ಬೋಧನೆ ಮಾಡುವುದಕ್ಕಿಂತ ಮಾನವ ಜೀವನ ಮೌಲ್ಯಗಳನ್ನು ಬೋಧಿಸುವುದು ಉತ್ತಮ ಹಾಗೂ ಪ್ರಯೋಜನಕಾರಿ. ಜೀವನ ಮೌಲ್ಯಗಳ ಬೋಧನೆಯ ಜೊತೆ ಉತ್ತಮ ಮಾದರಿಗಳನ್ನು ಸಹ ವಿದ್ಯಾರ್ಥಿಗಳಿಗೆ ದೊರಕುವಂತಾಗಬೇಕು. (DEC, 7). ಸಣ್ಣ ವಯಸ್ಸಿನಿಂದಲೇ ನಮ್ಮ ಶೈಕ್ಷಣಿಕ ಸಂಸ್ಥೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣ ಹಾಗೂ ಮಾದರಿಗಳು ಸಿಕ್ಕರೆ ಮುಂದೆ ಸಮಾಜದಲ್ಲಿರುವ ಕೇಡುಗಳನ್ನು ಎದುರಿಸಲು ಅವರಿಂದ ಸಾಧ್ಯವಾಗುತ್ತದೆ. ಈ ರೀತಿಯ ನೈತಿಕ ಜೀವನದ ಬದಲು ಧಾರ್ಮಿಕ ಹಾಗೂ ಪೌರಾಣಿಕ ವಿಷಯಗಳನ್ನು ಬಾಯಿಪಾಠ ಕಲಿಸುವುದರಿಂದ ಯಾವ ಪ್ರಯೋಜನವೂ ಆಗಲಾರದು ; ಅಷ್ಟೇ ಅಲ್ಲದೆ ಅವರ ವೈಚಾರಿಕ ಮನೋಭಾವನೆಗೂ ತೊಡಕುಂಟಾಗುವುದು. ನಮ್ಮಲ್ಲಿರುವ ಅನೇಕ ಧರ್ಮಗಳ ಮೌಲ್ಯಗಳು ಜೀವನ ರೀತಿಗಳಾಗಿ ಮಾರ್ಪಾಡು ಹೊಂದಿ ನಮ್ಮ ದೈನಂದಿನ ಜೀವನವನ್ನು ಮಾನವೀಯನನ್ನಾಗಿ ಮಾಡದಿದ್ದಲ್ಲಿ ಈ ಧರ್ಮಗಳೇ ನಮ್ಮ ಸಮಾಜದ ವಿಭಜನೆಗೆ, ಮಾನವೀಯತೆಯ ನಾಶಕ್ಕೆ ಪ್ರಬಲ ಕಾರಣಗಳಾಗುತ್ತವೆಂಬುದು ಸತ್ಯದ ಮಾತು.

3.0 ಕ್ರೈಸ್ತ ಶಿಕ್ಷಣ - ವಿಜ್ಞಾನ

ಕ್ರೈಸ್ತಧರ್ಶನದ ಪ್ರಕಾರ ಹೊಸಸಮಾಜವನ್ನು ನಿರ್ಮಿಸಬೇಕಾದರೆ ಸೂಕ್ತ ಶಿಕ್ಷಣವಿಜ್ಞಾನ (Pedagogy of education) ವನ್ನು ರೂಪಿಸಿಕೊಳ್ಳಬೇಕು. ಈ ಶಿಕ್ಷಣ-ವಿಜ್ಞಾನ ಜ್ಞಾನಾಭಿಮುಖಿವಾಗಿ ದುಡಿಯುವ ಯುವಶಕ್ತಿಯನ್ನು ಬೆಳೆಯಿಸುವಂತೆ ಪ್ರೇರೇಪಿಸಬೇಕು. ಈ ಜನಪದ ಮನೋವೃತ್ತಿ ಹುಟ್ಟಬೇಕಾದರೆ ಶಿಕ್ಷಣ ನೇರವಾಗಿ ಸೋಷಿತರಪರವಾಗಿರಬೇಕು (de Souza 1984 : 34); ಶೋಷಣೆಗೆ ಒಳಗಾದವರನ್ನು, ತುಳಿತಕ್ಕೆ ಒಳಪಟ್ಟವರನ್ನು, ಬಡತನರೇಖೆಗಿಂತ ಕೆಳಗಿದ್ದವರನ್ನು ಮುಕ್ತಗೊಳಿಸುವ ಶಿಕ್ಷಣ ಜಾರಿಯಲ್ಲಿ ಬರಬೇಕು.

3.1 ಶಿಕ್ಷಣದ ಸಾಮಾಜಿಕ ನೆಲೆ :

ಶಿಕ್ಷಣದ ಮೂಲಕ ಹೊಸ ಸಮಾಜವನ್ನು ನಿರ್ಮಿಸಬೇಕಾದರೆ ಅದರ ಸಾಮಾಜಿಕ ನೆಲೆ ಭದ್ರವಾಗಿರಬೇಕು. ಮಾನವನ ಮಾನವೀಕರಣವನ್ನು ಸಾಧಿಸಬೇಕಾದರೆ ಆತನ ಸಾಮಾಜೀಕರಣ ಅತ್ಯಗತ್ಯ ಎಂಬ ಅರಿವು ನಮ್ಮ ಯುವಜನಾಂಗದಲ್ಲಿ ಬೇರೂರಿ ಇರಬೇಕು. ಸಮಾಜ ವಿವಿಧ ಶೋಷಣೆಗಳಿಂದ ಮುಕ್ತಗೊಳ್ಳುವಂತೆ ಅನೇಕ ಹೋರಾಟಗಳಿಗೆ ಯುವಜನ ಸಿದ್ಧಗೊಳ್ಳಬೇಕು. ಈ ಹೋರಾಟದ ಪ್ರವೃತ್ತಿ ಇಲ್ಲದೆ ಹೋದರೆ ನಮ್ಮ ಶಿಕ್ಷಣ ತನ್ನ ಹರಿತವನ್ನು ಕಳೆದುಕೊಳ್ಳುತ್ತದೆ. ಅದು ಮೊಂಡುಗೊಳ್ಳುತ್ತದೆ. ಸಮಾಜ, ಆಗಬೇಕಾದ ಬದಲಾವಣೆಗೆ ಸ್ಪಂದಿಸುವುದು ಅಸಾಧ್ಯವಾಗುತ್ತದೆ.

ನಮ್ಮ ಶೈಕ್ಷಣಿಕ ಸಂಸ್ಥೆಗಳು ಸಮಾಜಕ್ಕೆ, ಅದರ ಸಾಮಾಜೀಕರಣಕ್ಕೆ, ಅದರ ಮುಕ್ತತೆಗೆ ದಾರಿದೀಪವಾಗಬೇಕು. ಅಜ್ಞಾನ, ಅವಿದ್ಯೆ, ಮೂಢನಂಬಿಕೆಗಳು ಮೊದಲಾದ ಪಿಡುಗುಗಳು ತುಂಬಿರುವಂತಹ ಹಳ್ಳಿಗಾಡುಗಳಲ್ಲಿ, ಒಳಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳು ಸಾಮಾಜಿಕ ಕ್ರಾಂತಿಯ ತಾಣವಾಗದಿದ್ದರೆ ಅವು ನಿಷ್ಫಲ. ಅವು ಗಾಢ ನಿದ್ರೆಯಲ್ಲಿರುವ ಸಮಾಜವನ್ನು ಬಡಿದೆಬ್ಬಿಸಬೇಕು; ಜನಮನಗಳಲ್ಲಿ ಜಾಗೃತಿಯನ್ನುಂಟುಮಾಡಬೇಕಲ್ಲದೆ ಕೇವಲ ಅಕ್ಷರಜ್ಞಾನಕ್ಕೆ ತಮ್ಮನ್ನು ಸೀಮಿತಗೊಳಿಸಬಾರದು.

3.2 ಪ್ರಜ್ಞಾವಿಕಾಸ ಶಿಕ್ಷಣ

ಉಚ್ಚ ಮಟ್ಟದಲ್ಲಿ ಶಿಕ್ಷಣ ವಿದ್ಯಾರ್ಥಿಗಳ ಪ್ರಜ್ಞೆಯನ್ನು ವಿಕಾಸಗೊಳಿಸಬೇಕು. ಅವರಲ್ಲಿ ಸಾಮಾಜಿಕ ಕಳಕಳಿ ಹಾಗೂ ಪರಿಸರ ಜವಾಬ್ದಾರಿ ಹುಟ್ಟಿಸುವ ವ್ಯಾಸಂಗಕ್ರಮವನ್ನು ಸಿದ್ಧಗೊಳಿಸಬೇಕು. ಸಾಮಾಜಿಕ ವಿರೋಧಾಭಾಸಗಳನ್ನು ಗಮನಿಸಿ, ಮೌಲ್ಯರಹಿತ ವ್ಯವಸ್ಥೆಗಳನ್ನು ಪರಿಶೀಲಿಸಿ ಅವರು ಸಮನ್ವಯದೃಷ್ಟಿಯನ್ನು ಬೆಳೆಯಿಸುವಂತೆ ಯುವಜನಾಂಗಕ್ಕೆ ಸೂಕ್ತ ನಿರ್ದೇಶನವನ್ನು ನೀಡಬೇಕು. ತಾವು ಬದುಕಿಕೊಂಡಿರುವ ಸಮಾಜವನ್ನು ಊರ್ಧ್ವಮುಖಿಯಾಗಿ ವಿಕಸನಗೊಳ್ಳುವಂತೆ ಯುವಶಕ್ತಿ ದುಡಿಯಬೇಕು. ಹೀಗಾಗಬೇಕಾದರೆ ಅವಲ್ಲಿ ವಿವೇಕ ಮೂಡಿಸುವಂತಹ ವಿಮರ್ಶಾಶಕ್ತಿ ಸ್ಫುಟಗೊಳ್ಳಬೇಕು.

ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಅನುಭವಗಳನ್ನು ಪಡೆಯುವ ಅವುಗಳನ್ನು ಪರಾಮರ್ಶಿಸುವ ಹಾಗೂ ಅದಕ್ಕೆ ತಕ್ಕಂತೆ ತಮ್ಮ ಜೀವನಕ್ರಮವನ್ನು ಬದಲಾಯಿಸಿಕೊಳ್ಳುವ ಯೋಜನೆ ರೂಪಿತಗೊಳ್ಳುವುದು ಇಲ್ಲವೆನ್ನುವಷ್ಟು ಕಡಿಮೆ. ಹಲವು ಸಲ ತದ್ವಿರುದ್ಧವಾದುದನ್ನೇ ಕಾಣುತ್ತೇವೆ. ವಿದ್ಯಾರ್ಥಿಗಳಿಗೆ ತಮ್ಮ ಸುತ್ತುಮುತ್ತಲಿನ ಸಮಾಜದಲ್ಲಿರುವ ಕರಾಳ ಪರಿಸ್ಥಿತಿಯ, ಬಡತನದ, ದಾರಿದ್ರ್ಯತನದ, ಶೋಷಣೆಯ, ಅನಿಷ್ಟ ಜಾತಿಪದ್ಧತಿಯ, ಮೂಲಭೂತವಾದದ ಪರಿಚಯವೇ ಇರುವುದಿಲ್ಲ. ಎಷ್ಟೋ ಮೂಢನಂಬಿಕೆಗಳ, ಆಚರಣೆಗಳ ಅರಿವೇ ಇರುವುದಿಲ್ಲ.

ನಿರುದ್ಯೋಗಿಗಳ ಬವಣೆ, ಬಾಲಕಾರ್ಮಿಕರ ಕಷ್ಟಗಳು, ದೇವದಾಸಿಯರ ಹಾಗೂ ವೇಶ್ಯೆಯರ ಕರಾಳ ಜೀವನ, ಕೊಳಚೆ ನಿವಾಸಿಗಳ ಕಷ್ಟಕಾರ್ಪಣ್ಯಗಳು, ನಿರಕ್ಷರಕುಕ್ಷಿಗಳ ಪರದಾಟವೇ ಮೊದಲಾದ ಹಲವಾರು ಸಮಸ್ಯೆಗಳ ಸುಳಿವೇ ಇಲ್ಲದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕ್ರಾಂತಿಯ ಜ್ವಾಲೆ ಹುಟ್ಟುವುದಾದರೂ ಹೇಗೆ? ಹೊಸ ಸಮಾಜ ನಿರ್ಮಾಣಕ್ಕೆ ಅವರಲ್ಲಿ ಆಸಕ್ತಿಯಾದರೂ ಹುಟ್ಟುವುದು ಹೇಗೆ? ನಾಲ್ಕು ಗೋಡೆಗಳ ಮಧ್ಯದಲ್ಲಿ ಕನಸುಗಾರ ಕವಿಗಳ ಸಾಹಿತ್ಯವನ್ನಷ್ಟು ಓದಿಸಿದರೆ ಅವರು ಪ್ರಜ್ಞಾವಂತರಾಗುವುದು ಸಾಧ್ಯವೆ? ಅವರಲ್ಲಿ ವೈಜ್ಞಾನಿಕ ಹಾಗೂ ಮಾನವೀಯ ದೃಷ್ಟಿಕೋನವಾದರೂ ಬೆಳೆಯುವುದು ಹೇಗೆ? ಕಾರಣ, ನಮ್ಮ ವಿದ್ಯಾರ್ಥಿಗಳಿಗೆ ಆರಂಭದಿಂದಲೇ ಅವರ ಸುತ್ತುಮುತ್ತಲಿನ ಸಮಾಜದ ಪರಿಚಯವನ್ನು ಉಂಟುಮಾಡುವ ಸಂದರ್ಭಗಳನ್ನು ಹೆಚ್ಚಿಸಿ ಆ ಸಂದರ್ಭಗಳ ಹಿನ್ನೆಲೆಯಲ್ಲಿ ಸಂವಾದಾತ್ಮಕ ರೂಪದ ಚರ್ಚೆಗಳ ಮೂಲಕ ಶಿಕ್ಷಣ ನೀಡಿದರೆ ಸಮಾಜಕ್ಕೆ ತಾರಕವಾಗುವ ಶಿಕ್ಷಣ ಅವರಿಗೆ ದೊರಕುತ್ತದೆ. ಇಲ್ಲವಾದರೆ ಶಿಕ್ಷಣವೇ ಮಾರಕಶಕ್ತಿಯಾಗುವ ಸಂಭವವೇ ಹೆಚ್ಚು.

4.0 ಕ್ರೈಸ್ತ ಶಿಕ್ಷಣದ ತಂತ್ರಗಾರಿಕೆ

ಕ್ರೈಸ್ತ ಶಿಕ್ಷಣ ಸಿದ್ಧಾಂತವನ್ನು ಕ್ರಿಯಾಶೀಲಗೊಳಿಸಬೇಕಾದರೆ ಅದಕ್ಕೆ ಸೂಕ್ತವಾದ ತಂತ್ರ ಅಥವಾ ಕ್ರಮ ಅವಶ್ಯಕ. ನಿಮ್ನ ವರ್ಗದವರಿಗೆ, ತುಳಿತಕ್ಕೆ ಒಳಪಟ್ಟವರಿಗೆ, ಶೋಷಿತರಿಗೆ ಅನುಕೂಲವಾಗುವ ಹಾಗೆ ಶಿಕ್ಷಣವನ್ನು ಯೋಜಿಸಿಕೊಳ್ಳುವುದೇ ಈ ತಂತ್ರಗಾರಿಕೆ.

4.1 ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀತಿ :

ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡುವಾಗ ಪರಿಶಿಷ್ಟ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಪ್ರಾಧಾನ್ಯತೆ ನೀಡಬೇಕು. ಆರಂಭದಲ್ಲಿ ಕ್ರೈಸ್ತ ಶಾಲೆ ಕಾಲೇಜುಗಳು ಬಡಬಗ್ಗರಿಗಾಗಿಯೇ ಹೆಚ್ಚಾಗಿ ಪ್ರಾರಂಭಗೊಂಡಿದ್ದರೂ, ಇತ್ತೀಚೆಗೆ ಬಡತನದ ರೇಖೆಯ ಕೆಳಗಿನವರಿಗೆ ಈ ಸಂಸ್ಥೆಗಳಲ್ಲಿ ಪ್ರವೇಶ ಸಿಗುವುದು ದುರ್ಲಭವಾಗಿದೆ. ಅಲ್ಪಸಂಖ್ಯಾತ ಸಂಸ್ಥೆಗಳಿಗೆ ಆಯಾಯ ಅಲ್ಪಸಂಖ್ಯಾತರಿಗೆ ಪ್ರಪ್ರಥಮ ಆದ್ಯತೆ ಸಿಗಬೇಕಾದುದು ನ್ಯಾಯ; ಆ ಬಳಿಕ ಇತರ ದುರ್ಬಲ ವರ್ಗದವರಿಗೆ ಪ್ರಾಶಸ್ತ್ಯ ನೀಡಬೇಕಾದುದು ಸಾಮಾಜಿಕ ಧರ್ಮ (Desrochers, 1987 : 313 f.n.6). ಶ್ರೀ ಯೇಸುವಿಗೆ ಬಡಬಗ್ಗರ ಬಗ್ಗೆ ಇದ್ದ ಅನುಕಂಪೆ ಕರುಣೆಗಳು ಶಿಕ್ಷಣದ ವಿಷಯದಲ್ಲಿ ನಮ್ಮ ಹೃದಯಗಳನ್ನು ಪರಿವರ್ತಿಸಬೇಕು.

ದುರ್ಬಲವರ್ಗದವರಿಗೆ ಪ್ರವೇಶ ಮೀಸಲು ಇಡುವುದರಿಂದ ಶಿಕ್ಷಣದ ಮಟ್ಟ ಕುಸಿಯುವುದು ಸ್ವಾಭಾವಿಕ. ಆದರೆ ಅದನ್ನು ತಪ್ಪಿಸಲು ಸರಿಯಾದ ಮಾರ್ಗಗಳನ್ನು ಕಂಡುಹಿಡಿಯಬೇಕು. ಅವರ ಶೈಕ್ಷಣಿಕ ಮಟ್ಟವನ್ನು ಸುಧಾರಿಸುವಂತೆ ಬೋಧನಾ ಕ್ರಮದಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಬೇಕು; ಅವರ ಅಧ್ಯಯನದತ್ತ ಹೆಚ್ಚಿನ ಗಮನ ನೀಡಬೇಕು; ಗ್ರಂಥಾಲಯಗಳಲ್ಲಿ ಹೆಚ್ಚಿನ

ಸೌಲಭ್ಯತೆ ಸಿಗುವಂತಾಗಬೇಕು. ಸಕಲ ಪ್ರಯತ್ನಗಳ ಬಳಿಕವೂ ಶಿಕ್ಷಣ ಮಟ್ಟ ಸ್ವಲ್ಪ ಕುಸಿದರ ವಿವಂಚನೆಗೊಳಗಾಗಬಾರದು. ಶಿಕ್ಷಣಕ್ಕಿಂತ ಮಾನವೀಯತೆಯ ಮಟ್ಟ ಅತ್ಯಗತ್ಯವಾದದ್ದು ಹಾಗೂ ಸಾಮಾಜಿಕ ಸ್ವಾಸ್ಥ್ಯದಲ್ಲಿ ಹೆಚ್ಚು ನಿರೀಕ್ಷಿಸುವಂಥಾದ್ದು.

4.2. ಬೋಧನಾ ಮಾಧ್ಯಮ :

ನಮ್ಮ ಶೈಕ್ಷಣಿಕ ಸೇವೆ ಕೆಳಗಿನವರಿಗೆ, ಬಡವರಿಗೆ, ಶೋಷಿತರಿಗೆ, ಇಲ್ಲದವರಿಗೆ ಪ್ರಪ್ರಥಮವಾಗಿ ತಲುಪಬೇಕಾದರೆ ನಮ್ಮ ಶಿಕ್ಷಣದ ಮಾಧ್ಯಮ ರಾಜ್ಯಭಾಷೆಯಾಗಿರುವುದು ಹೆಚ್ಚು ಹಿತಕರ. ಬಹುಸಂಖ್ಯಾತರ ಭಾಷೆಯೇ ರಾಜ್ಯಭಾಷೆಯಾಗಿರುವುದರಿಂದ ಅವರ ಮನವನ್ನು ವ್ಯಕ್ತಿತ್ವವನ್ನು ಅರಳಿಸಲು ಅದು ಯೋಗ್ಯವಾದ ಮಾಧ್ಯಮವೆಂಬುದರಲ್ಲಿ ಎರಡು ಮಾತಿಲ್ಲ. ನಮ್ಮ ಯುವಕ ಯುವತಿಯರ ಬುದ್ಧಿ ಹರಿತಗೊಳ್ಳಬೇಕಾದರೆ, ಅವರು ವಿವೇಕಿಗಳಾಗಿ ಬೆಳೆಯಬೇಕಾದರೆ ಅವರ ಹೊಸತನವನ್ನು ಅಭಿವ್ಯಕ್ತಪಡಿಸಬೇಕಾದರೆ ಪರಕೀಯದ ದಾಸ್ಯತನದಿಂದ ಅವರು ವಿಮುಕ್ತರಾಗಬೇಕು. ಸ್ವದೇಶಿ ಭಾಷೆ, ವಿಚಾರ, ಸಂಸ್ಕೃತಿಗಳಿಂದ ಅವರು ತುಂಬಿ ತುಳುಕಾಡಬೇಕು ಸ್ವದೇಶಿತನದಿಂದ ಮಾತ್ರ ನಮ್ಮ ಸಾಮಾಜಿಕ ವೈರುಧ್ಯಗಳು ಕಡಿಮೆಯಾಗಿ ಸಾಮಾಜಿಕ ಅಂತಸ್ತುಗಳ ಬದಲಾಗಿ ಸಾಮಾಜಿಕ ಸಮಾನತೆ ಹುಟ್ಟಲು ಸಾಧ್ಯವಾಗುತ್ತದೆ. ಈ ಕಾರಣಕ್ಕಾಗಿ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆ ಅಥವಾ ರಾಜ್ಯ ಭಾಷೆ ಶಿಕ್ಷಣ ಮಾಧ್ಯಮವಾಗಿರುವುದೇ ಸರಿಯಾದ ಧೋರಣೆ. ಆ ಬಳಿಕ ಯಾವುದೇ ಪ್ರಥಮ ಭಾಷೆಯನ್ನು ಆರಿಸುವ ಹಕ್ಕು ವಿದ್ಯಾರ್ಥಿಗಳಿಗಿರಬೇಕು ಈ ವಿಚಾರದ ಹಿನ್ನೆಲೆಯಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ನಾಯಿಕೊಡೆಗಳಂತೆ ಸ್ಥಾಪಿಸುವುದು ತಾತ್ವಿಕವಾಗಿ ಒಪ್ಪಬಾರದಂತಹ ವಿಷಯ. ಈ ದೆಸೆಯಲ್ಲಿ ಕ್ರೈಸ್ತ ಸಂಸ್ಥೆಗಳು ಮಾರ್ಗದರ್ಶನ ನೀಡಬೇಕಾಗಿದೆ. ಇದು ಇಂದಿನ ಪರಿಸ್ಥಿತಿಯಲ್ಲಿ ಅತ್ಯಾವಶ್ಯಕವೂ ಹೌದು.

4.3 ಶೈಕ್ಷಣಿಕ ಸಂಸ್ಥೆಗಳ ಸ್ವರೂಪ ಮತ್ತು ರಚನೆ

ಶೈಕ್ಷಣಿಕ ಸಂಸ್ಥೆಗಳು ಹೆತ್ತವರ ಜೊತೆ ವಿದ್ಯಾರ್ಥಿಗಳ ಶೈಕ್ಷಣಿಕ ಜವಾಬ್ದಾರಿಯನ್ನು ಪಡೆಯುತ್ತವೆಯೇ ಹೊರತು ಅವರನ್ನು ಬಿಟ್ಟು ಅಲ್ಲ. ಈ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನೇರವೇರಿಸಬೇಕಾದರೆ ಸರಕಾರ ಶೈಕ್ಷಣಿಕ ಸಂಸ್ಥೆಗಳ ನೆರವಿಗೆ ಬರಬೇಕು ಅದರಲ್ಲಿಯೂ ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳಿಗೆ ಅದು ಬೆನ್ನೆಲುವಾಗಿ ನಿಲ್ಲಬೇಕು. ಹಲವು ಸಲ ಅಲ್ಪಸಂಖ್ಯಾತರ ಸಂವಿಧಾನಾತ್ಮಕ ಹಕ್ಕುಗಳಿಗೆ ಚ್ಯುತಿ ಬಂದಾಗಿ ಸರಕಾರ ಹಾಗೂ ನ್ಯಾಯಾಲಯಗಳು ಅವುಗಳಿಗೆ ಸೂಕ್ತ ರಕ್ಷಣೆ ನೀಡಬೇಕಾಗುತ್ತದೆ; ಅಥವಾ ಈ ಸಂಸ್ಥೆಗಳು ಮನಬಂದಂತೆ ನಡೆದುಕೊಳ್ಳುವಾಗ ಅವುಗಳನ್ನು ಸರಿದಾರಿಗೆ ತರುವ ಜವಾಬ್ದಾರಿಯೂ ಸರಕಾರ ಹಾಗೂ ನ್ಯಾಯಾಲಯಗಳಿಗಿವೆ ಎಂದು ಒತ್ತಿ ಹೇಳಬೇಕಾಗಿಲ್ಲ. ಹೀಗೆ ಸಹಕರಿಸದಿದ್ದ ಅಲ್ಪಸಂಖ್ಯಾತರ ಹಕ್ಕುಗಳೆಂಬ ರಕ್ಷೆಯ ಕೆಳಗೆ ಸಾಮಾಜಿಕ ಅನ್ಯಾಯಗಳು ನಡೆಯು ಪ್ರಸಂಗಗಳೂ ಹುಟ್ಟಬಹುದು.

ಧಾರ್ಮಿಕ ಸಂಸ್ಥೆಗಳು ಬಡವರನ್ನು ಕೇಂದ್ರವನ್ನಾಗಿಟ್ಟುಕೊಂಡು ಆದರ್ಶ ಶಾಲೆಗಳನ್ನು ಸ್ಥಾಪಿಸಿಬೇಕು. ಕ್ರೈಸ್ತ ಸುವಾರ್ತೆ ಅರ್ಥಪೂರ್ಣವಾಗುವಂತೆ ಕ್ರೈಸ್ತ ಶೈಕ್ಷಣಿಕ ಸಂಸ್ಥೆಗಳ ಸ್ವರೂಪವಿರಬೇಕೇ ಹೊರತು ಅದಕ್ಕೆ ಮಾರಕವಾಗುವಂತೆ ಅಲ್ಲ. ದಲಿತರಿಗೆ, ಬಡವರಿಗೆ ಪುಷ್ಕಳವಾಗಿ ವಿದ್ಯಾರ್ಥಿವೇತನಗಳು ಸಿಗಬೇಕು. ಸ್ಥಾವರ ರೂಪಿಗಳಾದ ಗುಡಿಗುಂಡಾರಗಳಿಗೆ ಹರಿದುಹೋಗುವ ದ್ರವ್ಯ ಪ್ರವಾಹ, ಜಂಗಮಸ್ವರೂಪಿ ವಿದ್ಯಾರ್ಥಿಗಳ ಕಲ್ಯಾಣಕ್ಕೆ ಹರಿಯುವಂತಾಗಬೇಕು. ಆಧುನಿಕ ಶೈಕ್ಷಣಿಕ ತಂತ್ರಜ್ಞಾನ ಹಳ್ಳಿಕೇರಿಗಳಿಗೆ ತಲುಪಬೇಕು. ಅವು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಮಕ್ಕಳ ಅಭಿವೃದ್ಧಿಗೆ ಪೋಷಕವಾಗಬೇಕು (MM, 61). ಆಗ ಮಾತ್ರ ಶೋಷಿತ ಸಮಾಜ, ಮುಕ್ತ ಸಮಾಜವಾಗಿ ಎದ್ದೇಳಲು ಸಾಧ್ಯವಾಗುತ್ತದೆ.

5.0 ಶೈಕ್ಷಣಿಕ ಸವಾಲುಗಳು

ಶೋಷಿತ ಸಮಾಜ ಪರವಾಗಿ, ಅಂತ್ಯೋದಯಕ್ಕನುಗುಣವಾಗಿ, ಜನಪರವಾಗಿದ್ದುಕೊಂಡು ಹೊಸ ಸಮಾಜದ ಸೃಷ್ಟಿಗಾಗಿ ತ್ರಿಕರಣಪೂರ್ವಕವಾಗಿ ದುಡಿಯುತ್ತಿರುವ ಶೈಕ್ಷಣಿಕ ಸಂಸ್ಥೆಗಳು ಅನೇಕ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಇದು ಅನಿವಾರ್ಯ. ಅವುಗಳಲ್ಲಿ ಪ್ರಮುಖವಾದ ಕೆಲವುಗಳ ಪ್ರಸ್ತಾಪ ಈ ಕೆಳಗೆ ಮಾಡಲಾಗಿದೆ :

5.1 ಸಂಸ್ಥೆಗಳ ಪುನರ್ರಚನೆ

ಕ್ರೈಸ್ತ ಶಿಕ್ಷಣ-ಸಿದ್ಧಾಂತವನ್ನು ಕಾರ್ಯಗತಗೊಳಿಸಲು ಶಿಕ್ಷಣ-ವಿಜ್ಞಾನಕ್ಕೆ ಹೊಂದುವಂತೆ (Morisette, 135) ಸಧ್ಯದ ಶೈಕ್ಷಣಿಕ ಸಂಸ್ಥೆಗಳನ್ನು ಅಮೂಲಾಗ್ರವಾಗಿ ಬದಲಾಯಿಸಬೇಕಾಗುತ್ತದೆ. ಧರ್ಮದ ತಳಹದಿಯಲ್ಲಿ ನ್ಯಾಯಸಮ್ಮತವಾದ ಶಿಕ್ಷಣ ಎಲ್ಲರಿಗೂ ಸಮಾನ ಅವಕಾಶ ನೀಡುವಂತಾಗಬೇಕಾದರೆ ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಹೆತ್ತವರಿಗೆ ಅವಕಾಶಗಳನ್ನು ಕಲ್ಪಿಸಬೇಕು. ಶೈಕ್ಷಣಿಕ ಅಭಿವೃದ್ಧಿಗೋಸ್ಕರ ಈ ಮೂರು ಘಟಕಗಳು ಸರ್ವಾರ್ಪಣಾಭಾವದಿಂದ ದುಡಿಯದಿದ್ದರೆ ಶಿಕ್ಷಣ ನ್ಯಾಯಬದ್ಧವಾಗಿ ಉಳಿಯುವುದು ಕಠಿಣ. ಆದರೆ ಇಂತಹ ಸಹಭಾಗಿತ್ವ ಇವತ್ತಿಗೂ ಸವಾಲಾಗಿಯೇ ಉಳಿದಿರುವುದು ದುರ್ದೈವ. ಈ ಸಹಭಾಗಿತ್ವ, ಆಡಳಿತ ಹಾಗೂ ಶೈಕ್ಷಣಿಕ ಮಟ್ಟಗಳೆರಡರಲ್ಲಿಯೂ ಇರಬೇಕು. ಆಗ ಮಾತ್ರ ಹೊಸಸಮಾಜ ನಿರ್ಮಾಣ ಸಾಧ್ಯ. (PT : 31, 40, 53, 73 & 146).

5.2 ಶೈಕ್ಷಣಿಕ ಸ್ವಾಯತ್ತತೆ :

ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಾಯತ್ತತೆ ದೊರಕಬೇಕು. ಪಠ್ಯಕ್ರಮ, ಬೋಧನಾ ಕ್ರಮ ಹಾಗೂ ಸಂಶೋಧನೆಗಳನ್ನು ರೂಪಿಸುವಲ್ಲಿ, ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಾತಂತ್ರ್ಯವಿರಬೇಕು. ಸ್ಥಳೀಯ ಅಗತ್ಯತೆ, ನೀಡಿಕೆ ಬೇಡಿಕೆಗಳಿಗನುಗುಣವಾಗಿ ಶಿಕ್ಷಣ ರೂಪಿಸುವ ಸ್ವಾತಂತ್ರ್ಯವಿದ್ದರೆ ಮಾತ್ರ ಅರ್ಥಪೂರ್ಣ ಶಿಕ್ಷಣ ನೀಡುವುದು ಸಾಧ್ಯ. ಸಾಮಾಜಿಕ ಪ್ರಜ್ಞೆ, ಪರಿಸರ ಪ್ರಜ್ಞೆ, ಮಾನವೀಯ

ಮೌಲ್ಯಗಳು, ಸಾಮಾಜಿಕ ನ್ಯಾಯ ಇತ್ಯಾದಿಗಳು ನಮ್ಮ ಶೈಕ್ಷಣಿಕ ಶಿಸ್ತುಗಳಾಗಿ ಪಠ್ಯಕ್ರಮದ
ಸೇರಬೇಕಾದರೆ ಹಾಗೂ ಅವುಗಳ ಅನುಷ್ಠಾನಕ್ಕೆ ಯೋಗ್ಯರಾದ ಶಿಕ್ಷಕರನ್ನು ನೇಮಿಸಿಕೊಳ್ಳಲಿಕ್ಕೆ
ಬೋಧನಾವಧಿಗಳನ್ನು ಇತ್ಯರ್ಥಪಡಿಸಲಿಕ್ಕೆ ಶೈಕ್ಷಣಿಕ ಸಂಸ್ಥೆಗಳಿಗೆ ಸ್ವಾಯತ್ತತೆ ಅತ್ಯಗತ್ಯ. ಇಂದಿ
ಸಾಮಾಜಿಕ ಹೋರಾಟಗಳಲ್ಲಿ ಯುವಶಕ್ತಿ ಕ್ರಿಯಾತ್ಮಕವಾಗಿ ಪಾಲುಗೊಳ್ಳಬೇಕಾದರೆ ಈ ಸ್ವಾತಂತ್
ಅನಿವಾರ್ಯ. ಕ್ರೈಸ್ತ ಸಂಸ್ಥೆಗಳು ಈ ದೆಸೆಯಲ್ಲಿ ಸಕಾರಾತ್ಮಕವಾದ ಪಾತ್ರವನ್ನು ವಹಿಸಬೇಕು.

5.3 ಶಿಕ್ಷಕ ವೃಂದ

ಶಿಕ್ಷಕರಲ್ಲಿ ಉತ್ತಮ ವ್ಯಕ್ತಿತ್ವವುಳ್ಳವರಾಗುವುದರ ಜೊತೆಗೆ ಉತ್ತಮ ಶಿಕ್ಷಣ ಪದವಿಗಳನ
ಪಡೆದವರಾಗಿದ್ದು ವಿಷಯಗಳಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಆಸಕ್ತರಾಗಿರಬೇಕು. ಇಂತ
ಶಿಕ್ಷಕರು ಇಂದು ಬಹುಮಟ್ಟಿಗೆ ಸವಾಲಾಗಿಯೇ ಉಳಿದಿದ್ದಾರೆ. (DCE :5) ಶಿಕ್ಷಕವೃಂದ ತನ
ಜವಾಬ್ದಾರಿಗಳನ್ನು ತಕ್ಕುದಾದ ರೀತಿಯಲ್ಲಿ ನೆರವೇರಿಸುವಂತೆ ಸಹಕರಿಸಲು ಬೇಕಾ
ಸಲಕರಣೆಗಳನ್ನೆಲ್ಲ ಅವರಿಗೆ ಒದಗಿಸುವಲ್ಲಿ ಔದಾರ್ಯತೆಯನ್ನು ತೋರಿಸಬೇಕು.

ಶಿಕ್ಷಕರು ಸರಕಾರಕ್ಕೆ, ವಿದ್ಯಾ ಇಲಾಖೆಗೆ ಅಥವಾ ವಿಶ್ವವಿದ್ಯಾಲಯಕ್ಕೆ ಜವಾಬ್ದಾರರಾಗಬೇಕು
ಇಲ್ಲದಿದ್ದಲ್ಲಿ ಅವರಲ್ಲಿ ಬೇಜವಾಬ್ದಾರಿತನ ಹುಟ್ಟುವುದು ಸಾಧ್ಯ (DCE 6). ಅತ್ಯುತ್ತಮ
ಶಿಕ್ಷಕರಿಗೆ ಪ್ರೋತ್ಸಾಹ ಕೊಟ್ಟರೆ ಅಧಮ ಶಿಕ್ಷಕರಿಗೆ ದಂಡ ವಿಧಿಸುವ ಪರಿಪಾಠವಿರಬೇಕು. ತಮ
ಸಂಶೋಧನೆಗಳ ಮೂಲಕ ತಾವು ಕಂಡುಹಿಡಿದ ವಿಷಯಗಳನ್ನು ಪ್ರಸ್ತಾಪಿಸುವ ಸ್ವಾತಂತ್ರ
ಶಿಕ್ಷಕರಿರಬೇಕು. ಅವರು ಪಠ್ಯಕ್ರಮದ ದಾಸಗಳಾಗಿ ಬದುಕಬಾರದು; ಬೋಧನಾ ಪದ್ಧತಿಗಳಲ್ಲಿ
ಪರೀಕ್ಷಾ ರೀತಿಗಳಲ್ಲಿ ಪ್ರಯೋಗಶೀಲರಾಗಬೇಕು. ತಾವು ಕಲಿಸುವ ವಿಷಯಯುವನ್ನು, ಬೋಧನ
ಸಮಯವನ್ನು ನಿರ್ಧರಿಸುವ ಸ್ವಾತಂತ್ರ್ಯ ಅವರಿಗಿರಬೇಕು. ಈ ಸ್ವಾತಂತ್ರ್ಯ, ಸಂಸ್ಥೆಯ ಶಿಸ್ತ
ಭಂಗತರುವಂತಹದ್ದಾಗಿರಬಾರದಷ್ಟೆ.

ಶಿಕ್ಷಕರು, ವಿದ್ಯಾರ್ಥಿಗಳಿಗೆ ಪ್ರಚೋದಕರು, ಮಾರ್ಗದರ್ಶಕರು, ಸವಾಲುಗಳನ್ನು ಎದುರಿಸು
ಸ್ಥೈರ್ಯವಂತರು ಆಗಬೇಕು, ಎಲ್ಲದಕ್ಕಿಂತಲೂ ಹೆಚ್ಚಾಗಿ ಉತ್ತಮ ಮಾದರಿಗಳಾಗಬೇಕು. ಶಿಕ್ಷಕ
ವಿದ್ಯಾರ್ಥಿಗಳಿಗೆ ಲಭ್ಯವಾಗಿರಬೇಕು, ಮಿತ್ರರಾಗಿರಬೇಕು, ಜ್ಞಾನದಿಗಂತಗಳಾಗಬೇಕು; ಉತ್ತಮ
ಬೋಧಕರಾಗಬೇಕು, ಜೀವನದಲ್ಲಿ ಆದರ್ಶರಾಗಬೇಕು. (Morisette : 53, 116 &
118 ; DCE:8). ಅವರು ವಿದ್ಯಾರ್ಥಿಗಳಿಗೆ ಆಧುನಿಕ, ಮಾನವೀಯ, ಪ್ರಜಾಪ್ರಭುತ್ವ
ಸಾಮಾಜಿಕ ಮೌಲ್ಯಗಳ ಆಧಾರದ ಮೇಲೆ ಶಿಕ್ಷಣವನ್ನು ನೀಡಬೇಕು.

ಎಷ್ಟೋ ಶಿಕ್ಷಕರಲ್ಲಿ ಹೊಸಸಮಾಜದ ದರ್ಶನ ಹಾಗೂ ಅದನ್ನು ಸ್ಥಾಪಿಸಲು ಅಗತ್ಯವಾಗಿರು
ಹೋರಾಟಗಳ ಬಗೆಗೆ ಸರಿಯಾದ ಕಲ್ಪನೆಗಳು ಇಲ್ಲದೆ ಇರುವುದು ಶೋಚನೀಯ ಸಂಗತಿಯಾಗಿ

ಬಾಯಿ ಇಲ್ಲದವರ ಅಳಲನ್ನು ಗುರುತಿಸಿ ಅವರಿಗೆ ನ್ಯಾಯವನ್ನು ದೊರಕಿಸಿ ಕೊಡುವ ಶಿಕ್ಷಣ ಇಂದಿನ ವಿದ್ಯಾರ್ಥಿಗಳಿಗೆ ಸಿಗಬೇಕಾದರೆ ಸಾಮಾಜಿಕ ನ್ಯಾಯವನ್ನು ಕುರಿತು ಶಿಕ್ಷಕರಿಗೆ ಕಾಲಕಾಲಕ್ಕೆ ತರಬೇತಿ ಶಿಬಿರಗಳನ್ನು ಏರ್ಪಡಿಸಬೇಕು. ಆಗ ಮಾತ್ರ ಸಾಮಾಜಿಕ ಪ್ರಜ್ಞೆಯುಳ್ಳ, ಸರ್ವಾರ್ಪಣ ಮನೋಭಾವದ ಶಿಕ್ಷಕರ ತಂಡ ಬೆಳೆಯಬಲ್ಲದು. ಇಂತಹ ಶಿಕ್ಷಕರ ವರ್ಗ ಬೆಳೆಯಬೇಕಾದರೆ ಉತ್ತಮ ವಿದ್ಯಾರ್ಥಿಗಳನ್ನು ಶಿಕ್ಷಣದತ್ತ ಸೆಳೆಯಬೇಕು.

5.4 ವಯಸ್ಕರ ಶಿಕ್ಷಣ

ಇತ್ತೀಚೆಗೆ ವಯಸ್ಕರ ಶಿಕ್ಷಣಕ್ಕೆ ಚಾಲನೆ ಹಾಗೂ ಪ್ರಾಶಸ್ತ್ಯ ಸಿಕ್ಕಿದೆ. ಸಾಕ್ಷರತೆ, ವೃತ್ತಿಪರ ಶಿಕ್ಷಣ, ಸಮಾಜೊ ಆರ್ಥಿಕ ಜಾಗೃತಿ, ಮಹಿಳಾ ಶಿಕ್ಷಣ ಇತ್ಯಾದಿಗಳು ವಯಸ್ಕರ ಶಿಕ್ಷಣದ ಪ್ರಮುಖ ಅಂಗಗಳು. ಅನಕ್ಷರತೆಯಿಂದ ನಮ್ಮ ದೇಶದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ನೆಲೆಗಳು ಅಸ್ಥಿರಗೊಂಡದ್ದು ಎಲ್ಲರಿಗೂ ತಿಳಿದ ವಿಷಯವೇ ಅನಕ್ಷರಸ್ಥರು ಯಥಾಸ್ಥಿತಿಯನ್ನು ಕಾಪಾಡುವುದರಲ್ಲಿ ಅಗ್ರಗಣ್ಯರು. ಸಾಮಾಜಿಕ ಬದಲಾವಣೆಗಳಿಗೆ ಸಾಮೂಹಿಕ ಸಾಕ್ಷರತೆ ಅತ್ಯಗತ್ಯವಾದದ್ದು. ವಯಸ್ಕರ ಶಿಕ್ಷಣದಲ್ಲಿ ಸಾಕ್ಷರತೆಯೊಂದಿಗೆ ಸಾಂಸ್ಕೃತಿಕ ಶಿಕ್ಷಣವನ್ನು ಕೂಡ ಒದಗಿಸಬೇಕು. ತಂತಮ್ಮ ಸಂಸ್ಕೃತಿಯ ಅಭಿಮಾನ ಅವರಲ್ಲಿ ಮೂಡಬೇಕು; ಗ್ರಾಮಾಭಿವೃದ್ಧಿಯ ಕಡೆ ಅವರು ಗಮನ ಹರಿಯಿಸುವಂತಾಗಬೇಕು (EFP:26). ಇವು ಸಾಧ್ಯವಾಗಬೇಕಾದರೆ ಜನಸಾಮಾನ್ಯರ ಅರಿವಿನ ಜಾಗೃತಿ(Consientization) ಆಗಬೇಕು ಹಾಗೂ ರಾಜಕೀಯ ಶಿಕ್ಷಣ ದೊರಕಬೇಕು (MDJ:17) ಗ್ರಾಮಾಂತರ ಮಹಿಳೆಯರ ಹಾಗೂ ದಲಿತರ ಶಿಕ್ಷಣಕ್ಕೆ ಆದ್ಯತೆ ನೀಡಬೇಕು.

ಕ್ರೈಸ್ತ ಶಿಕ್ಷಣ ಸಂಸ್ಥೆಗಳು ಉಳ್ಳವರ ಶಿಕ್ಷಣಕ್ಕಾಗಿ ತಮ್ಮ ಮಾನವ ಹಾಗೂ ಆರ್ಥಿಕ ಸಂಪನ್ಮೂಲಗಳನ್ನು ಯಥೇಷ್ಟವಾಗಿ ವ್ಯಯಮಾಡುವ ಬದಲಾಗಿ ಇನ್ನು ಮುಂದೆ ವಯಸ್ಕರ, ಮಹಿಳೆಯರ, ದಲಿತರ ಶಿಕ್ಷಣಕ್ಕಾಗಿ ಅವುಗಳನ್ನು ವಿನಿಯೋಗಿಸುವುದು ಶ್ರೇಯಸ್ಕರ (JEA 1972:124-5). ಇಂಡಿಯಾದಂತಹ ಬೃಹತ್ ದೇಶದಲ್ಲಿ ವಯಸ್ಕರ ಅರಿವಿನ ಜಾಗೃತಿಗೆ ಪ್ರಯತ್ನಿಸುವುದು ಸವಾಲು ಎಸಗಿದಂತಿದೆ. ಇದನ್ನು ಸರಿಯಾದ ರೀತಿಯಲ್ಲಿ ಎದುರಿಸಲು ಸರ್ವಾರ್ಪಣಭಾವದಿಂದ ದುಡಿಯುವ ವ್ಯಕ್ತಿಗಳ ಕೊರತೆಯೂ ಇದೆ.

5.5 ಸಂಘಟಿತ ಕಾರ್ಯ :

ಶಿಕ್ಷಣರಂಗದಲ್ಲಿ ಇಂದಿನ ಯಥಾಸ್ಥಿತಿಯನ್ನು ಬದಲಾಯಿಸಬೇಕಾದರೆ ಈಗಾಗಲೇ ಮಥಿಸಿ ಸ್ವೀಕರಿಸಿದ ವಿಚಾರಗಳನ್ನು, ಸೂಕ್ತ ಸಾಮಾಜಿಕ ಬದಲಾವಣೆಯನ್ನುಂಟುಮಾಡುವುದಕ್ಕೋಸ್ಕರ, ಕಾರ್ಯರೂಪಕ್ಕೆ ತರಲು ಸಂಘಟಿತ ಪ್ರಯತ್ನಗಳನ್ನು ತೆಗೆದುಕೊಳ್ಳಬೇಕು. (PD: 474, 477-8, 485). ಶೈಕ್ಷಣಿಕ ಸುಧಾರಣೆ ಉಂಟು ಮಾಡಬೇಕಾದರೆ ಬಡವರ ಸಂಘಟಿತ ಸಾಮೂಹಿಕ

ಚಳುವಳಿ ಅತ್ಯಗತ್ಯ. ನ್ಯಾಯಕ್ಕಾಗಿ ಸಂಘಟಿತಗೊಳ್ಳುವುದು ಮಾನವನ ಮೂಲಭೂತ ಹಕ್ಕು ಕೂಡಾ ಹೌದು (PD 1162-3 & 1244). ಸಮಾಜದ ಮೂಲ ಸೆಲೆನೆಲೆಗಳಿಂದ ಸಂಘಟನೆ ಪ್ರಾರಂಭಗೊಂಡು ಅದು ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟಕ್ಕೆ ವಿಸ್ತಾರಗೊಳ್ಳಬೇಕು. (PD: 1137 & 1220). ಸಾಮಾಜಿಕ ಭ್ರಷ್ಟಾಚಾರ, ಅದಕ್ಷತೆಗಳ ವಿರುದ್ಧ ಸಮರ ಹೂಡಬೇಕಾದರೆ ಸಾಮೂಹಿಕ ಸಂಘಟನೆ ಅತ್ಯಗತ್ಯ. ಈ ಬಗೆಗೆ ಇಲ್ಲಿಯ ತನಕ ಆದ ಕೆಲಸ ಅತ್ಯಲ್ಪ (PT 155-6).

6.0 ಸಮರೋಪ

ಕ್ರೈಸ್ತದರ್ಶನದ ಪ್ರಕಾರ 'ಹೊಸ ಸಮಾಜ' ದ ನಿರ್ಮಾಣವೇ ಶಿಕ್ಷಣದ ಪರಮ ಧ್ಯೇಯ. ಈ ಹೊಸ ಸಮಾಜದಲ್ಲಿ ಸರ್ವಸದಸ್ಯರೂ ಸಮಾನ ವ್ಯಕ್ತಿಗಳು. ಇಂತಹ ಮುಕ್ತ ಸಮಾಜವನ್ನು ದೈವೀ ಸಾಮ್ರಾಜ್ಯ (Kingdom of God) ಎಂದೂ ಕರೆಯುವುದುಂಟು. ಈ ಸಮಗ್ರ ದರ್ಶನದ ಬೆಳಕಿನಲ್ಲಿ ಇಂಡಿಯಾ ದೇಶದ ಶಿಕ್ಷಣವನ್ನು ಗಮನಿಸಿದಾಗ ಶಿಕ್ಷಣದ ಈ ಗುರಿಯ ಸಾಧನೆಯ ಕಡೆ ನಾವು ಸಾಗುತ್ತಿದ್ದೇವೆ ಎಂದು ಹೇಳಲಿಕ್ಕಾಗದು. ಇದೇ ಇಂದಿನ ಶಿಕ್ಷಣ ವ್ಯವಸ್ಥೆಯ ದುರ್ದೈವ. ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತವೆ; ಪ್ರವಾಹೋಪಾದಿಯಲ್ಲಿ ವಿದ್ಯಾರ್ಥಿಗಳು ಈ ಸಂಸ್ಥೆಗಳನ್ನು ಸೇರುತ್ತಾರೆ. ಆದರೆ ಈ ವ್ಯಕ್ತಿಗಳಿಂದ ಹೊಸ-ಮುಕ್ತ ಸಮಾಜ ನಿರ್ಮಾಣಗೊಳ್ಳುತ್ತಿಲ್ಲ. ಇದು ವಿಷಾದನೀಯ. ಶಿಕ್ಷಕರಿಗೆ ಅಶಿಕ್ಷಿತರ ಬಗೆಗೆ ಕಳಕಳಿ ಇಲ್ಲ. ನಿರಕ್ಷರಸ್ಥರು ಸಾಕ್ಷರರಾಗುತ್ತಾರೆಯೇ ಹೊರತು ಶಿಕ್ಷಣದಿಂದು ಹೆಚ್ಚೆಚ್ಚು ಮಾನವೀಯರಾಗುತ್ತಿಲ್ಲ; ವ್ಯಕ್ತಿತ್ವದ ವಿಕಾಸವಾಗುತ್ತಿಲ. ಶಿಕ್ಷಣದಿಂದ ವ್ಯಕ್ತಿ ಇಂದು ಒಂದೋ ಕುಬ್ಜನಾಗುತ್ತಾನೆ ಅಥವಾ ದಾನವನಾಗುತ್ತಾನೆ ; ಆದರೆ, ಮಾನವನಾಗುವುದು ಬಹು ವಿರಳ. ಕಾಯಕನಿಷ್ಠೆ, ದಾಸೋಹ ಮನೋಭವ, ಸರ್ವಾರ್ಪಣ ಬುದ್ಧಿ, ಇಲ್ಲದವರ ಬಗೆಗೆ ಅನುಕಂಪ, ದಲಿತರ ವಿಮೋಚನೆಯನು ಕುರಿತು ಕಾರ್ಯತತ್ಪರತೆ, ಜಾತಿಮತಗಳ ಗೋಡೆಗಳನ್ನು ಕೆಡವಿ ವಿಶ್ವಮಾನವನಾಗುವ ಹಂಬಲ-ಇಂತಹ ಯಾವುದೇ ಮೌಲ್ಯಗಳನ್ನು ಸಂಪಾದಿಸುವ ಚಪಲ ಶಿಕ್ಷಿತರಲ್ಲಿ ಕಾಣಬರುವುದಿಲ್ಲ. ಅವುಗಳ ಬದಲಾಗಿ ಹಣ ಹಾಗೂ ಸ್ಥಾನಮಾನಗಳಿಗೆ ಮಾತ್ರ ಅವರು ಸೀಮಿತರಾಗುವುದೇ ಹೆಚ್ಚು. ಮೋಸತನ, ಅಹಮಿಕೆ, ದುಷ್ಟತನ, ಸೋಗು ಮೊದಲಾದ ಅವಗುಣಗಳ ಆಗರ ಅವರಾಗುವುದೇ ಅಧಿಕ. ಇದರಿಂದಾಗಿ ಯುವ ಪೀಳಿಗೆಗೆ ಸಮಾಜದ ಯಾವುದೇ ರಂಗದಲ್ಲಿ ಉತ್ತಮ ಆದರ್ಶ ಅಥವಾ ಮಾದರಿಗಳು ಸಿಗುವುದು ದುರ್ಲಭವಾಗಿದೆ (Madtha, 1978:55).

ಅಂತಸ್ತು ಪ್ರಜ್ಞೆಯ ರಾಜಕೀಯ ನೇತೃತ್ವ ಅಥವಾ ಸರ್ವಾಧಿಕಾರಿ ಮನೋಭಾವದ ಧಾರ್ಮಿಕ ನಾಯಕತ್ವಗಳ ಬದಲಾಗಿ ಈಗ ಬೇಕಾಗಿರುವುದು ಆತ್ಮಾರ್ಪಣ ಭಾವದ, ಸಮಾಜ ಸೇವಾ ಮನೋಭಾವದ ಧುರೀಣರು. ಯಂತ್ರಸಾದೃಶ ಮಾನವ ಸಮಾಜವನ್ನು ಜಾಗೃತಗೊಳಿಸಿ ಅದನ್ನು ಧೀಮಂತ ಶಕ್ತಿಯನ್ನಾಗಿ, ವಿಶ್ವ-ಜೀನವನ್ನಾಗಿ ರೂಪಾಂತರಿಸುವ ಆಧ್ಯಾತ್ಮಿಕ ಸಾಮರ್ಥ್ಯವುಳ್ಳ

ಜನನಾಯಕರ ಅಗತ್ಯ ಇಂದು ತೀರಾ ಅವಶ್ಯವಾಗಿದೆ.

"ವಾಸ್ತವತೆಯನ್ನು ಪ್ರಜ್ಞಾಪಾತಳಿಯಲ್ಲಿ ಬದಲಾಯಿಸಲಾಗುವುದಿಲ್ಲ. ಅದನ್ನು ಕ್ರಾಂತಿಯ ಮೂಲಕ ಐತಿಹಾಸಿಕವಾಗಿ ಸಮೂಹದಲ್ಲಿ ಬದಲಾಯಿಸಬೇಕಾಗುತ್ತದೆ". (Freire, 1983:24). ಈ ಕಾರಣದಿಂದಾಗಿ ಶಿಕ್ಷಣ ಬಡವರ ಹಾಗೂ ದಲಿತ ಸಮಾಜಕ್ಕೆ ಮುಟ್ಟಿಸುವುದೇ ಪ್ರಥಮ ಕಾರ್ಯ. ತುಳಿತಕ್ಕೊಳಪಟ್ಟವರಲ್ಲಿ ಸಾಮೂಹಿಕ ಜಾಗೃತಿಯನ್ನುಂಟು ಮಾಡುವುದರಿಂದ ಸಮಾಜದ ಪುನರ್ನಿರ್ಮಾಣ (Perestroika) ಸಾಧ್ಯ. ಇದಕ್ಕಾಗಿ ಜನಸಮುದಾಯ ಸೂಕ್ತವಾದ ರೀತಿಯಲ್ಲಿ ವಿವೇಚಿಸಿ ತಮ್ಮ ಅಭಿವೃದ್ಧಿಗೆ ಯುಕ್ತವಾದ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ (PD:1244).

ಇಲ್ಲಿ ನಿಜಕ್ಕೂ ಸಮಸ್ಯೆಗಳು ಅಧಿಕ. ಸುಸಂಘಟಿತ ಪ್ರಯತ್ನಗಳಿಂದ ಮಾತ್ರ ಶಿಕ್ಷಣದ ಮೂಲಕ ಹೊಸ ಸಮಾಜ ಕಟ್ಟುವಲ್ಲ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಾಧ್ಯ. ಈ ದೆಸೆಯಲ್ಲಿ ಜನಸಮುದಾಯಗಳಲ್ಲಿ ಪ್ರಭಾವವಿರುವ ಧಾರ್ಮಿಕ ಸಂಸ್ಥೆಗಳು ಮಾರ್ಗದರ್ಶನ ಮಾಡುವುದು ಸುಲಭ ಹಾಗೂ ಯೋಗ್ಯ. ಈ ಸಂಸ್ಥೆಗಳಲ್ಲಿ ಸರ್ವಾರ್ಪಣ ಭಾವದಿಂದ ಫಲಾಪೇಕ್ಷೆ ಇಲ್ಲದೆ ದುಡಿಯುವ ಜನಬಲವಿರುವುದರಿಂದ ಸಮಾಜದ ಪುನರ್‌ನಿರ್ಮಾಣದಲ್ಲ ಈ ಸಂಸ್ಥೆಗಳ ಪಾತ್ರ ಬಹಳ ಹಿರಿದಾಗಿದೆ (TUR:38). ಆದರೆ ಅಲ್ಲಿಯ ಶ್ರೇಣಿಯಾತ್ಮಕ ವ್ಯವಸ್ಥೆ (Hierarchy) ಪ್ರಜಾಪ್ರಭುತ್ವ ಹಾದಿಯನ್ನು ಹಿಡಿಯಬೇಕಾಗುತ್ತದೆ. ಸರ್ವಾಧಿಕಾರ ಕಳಚಿ ಪರಸ್ಪರ ಸಂವಾದದ ಮೂಲಕ ನಿರ್ಣಯಗಳನ್ನು ಸ್ವೀಕರಿಸಬೇಕಾಗುತ್ತದೆ (TNA: 81-84).

ಒಟ್ಟಿನಲ್ಲಿ, ಕ್ರೈಸ್ತದರ್ಶನದ ಪ್ರಕಾರ ಶಿಕ್ಷಣವೆಂಬುದು ಯಾರದ್ದೂ ಗುತ್ತಿಗೆಯಲ್ಲ. ಸಮಾಜದ ಎಲ್ಲ ಸದಸ್ಯರೂ ಸಕ್ರಿಯವಾಗಿ ಶಿಕ್ಷಣ ಕ್ಷೇತ್ರದಲ್ಲಿ ಭಾಗಿಗಳಾಗಬೇಕು. ಜನರ ಹಕ್ಕು ಹಾಗೂ ಕರ್ತವ್ಯಗಳ ಬಗೆಗೆ ಅವರನ್ನು ಜಾಗೃತಗೊಳಿಸುವ ತಮ್ಮ ವಾಸ್ತವ ಸ್ಥಿತಿಗತಿಗಳನ್ನು ಅರಿತುಕೊಂಡು ಅಲ್ಲಿಯ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವ, ಸಂಘಟಿತರಾಗಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ರಂಗಗಳಲ್ಲಿ ಸೂಕ್ತವಾಗಿ ಪ್ರತಿನಿಧಿಸುವ ಜನಶಕ್ತಿಯನ್ನು ರೂಪಿಸಿಕೊಳ್ಳುವ ಸಾಧ್ಯತೆ ಶಿಕ್ಷಣದಿಂದ ದೊರಕಬೇಕು (G:1045, 1029). ಆಗ ಮಾತ್ರ ಶಿಕ್ಷಣ ಸಮಾಜಕ್ಕೆ ತಾರಕವಾಗುತ್ತದೆ; ಇಲ್ಲದಿದ್ದಲ್ಲಿ ಅದು ಮಾರಕವೆಂಬುದಕ್ಕೆ ಇಂದಿನ ಪರಿಸ್ಥಿತಿಯೇ ಮೂಕಸಾಕ್ಷಿ;

6.0 ಸಂಕ್ಷೇಪಸೂಚಿ

AICUF	All India Catholic University Federation
AISCIIT	All India Seminar : Church in India Today

BISA	Bishop's Institute for Social Action
CBCI	Catholic Bishops' Conference of India
CCA	Christian Conferrence of Asia
CED	Challanges of Education Document (1935)
DCE	"Declaration on Christian Education "/Gravisimus Edu-cation is" (Vat-II)
EFP	Education for our People (1978)
GC	General Congregation (of Society of Jesus)
GM	General Meeting
GS	"Gandium et Spes"/" The Church in the Modern World Vat-II
JEA	Jesuit Educational Association of India Seminar
JW	Justice in the World
MDJ	Medellin Document, Justice
MDP	Medellin Document, Peace
MM	Mater at Maqistra : Mother and Teacher
NEF	New Frontiers in Education
CHIMAF	"Oh, How the mighty are fallen" in light of life (No 1993 : 13-22)
PCJP	Pantifical Commission Justice and Peace
PD	Puebla Document
PT	Pacem in Terris : Peace on Earth

TGCR The Geneva Conference Report

TNA The Nairobi Assembly

TNR The Nairobi Report

TUR The Uppsala Report

XBHEI Xavier Board of higher education in India

BARETTO, DUARTE

1976 The Indian Situation. Bangalore : Centre for Social Action Publications.

BATCHELOR, C.S.

1927 (April) "John Heinrich Pestalozzi", in The Sower, No. 83.

CLUNE, GEORGE

1940 Christian Social Reorganization. Dublin : Brown and Nolan Ltd., The Rechview press.

CURRIE (S.J.), A.

1984 Christian Colleges and a more human society Delhi : Indian Social Institute.

DESROCHERS, JOHN

1982 The social teaching of the church. Bangalore : John Desrochers, C.S.C., 64 Miller's Road.

1987 Education for social change. Bangalore : Centre for social action.

FLANNERY (O.P.), AUSTIN (GEN ED.)

1975 vatican council II : The Conciliar and Post conciliar documents. Minnestoa : The Liturgical Press.

FREIRE, PAULO

1972 Cultural Action for Freedom, Penguin.

1973 Pedagogy of the opressed, penguin.

1974 Education for critical consciousness, London : Sheed & Ward.

1983 Education for Liberation. Bangalore : Ecumenical Christian Centre.

KOLVENBACH (S.J.), PETER-HANS

1993 Ignatian Pedagogy : APractical Approach. Rome : The International Centre for Jesuit Education.

MADTHA, WILLIAM

1963 The Catholic Theory of Education (An unpublished dissertation submitted to Sacred Heart College, Shembaganur for the award of the Degree of Licentiate in Philosophy.

1977 "Conscientization : The Aim of University Education " in The Journal of Higher Education (2.3)Delhi : University Grants Commission.

1978 "Development and Education" in New Dimensions in the Study of Tamil Culture (60th Birthday Felicitation Volume of Prof. N.Vanamamalai), Palayamkattai : Arraichi.

MATHIAS(S.J.), T.A. (ED.)

1969 Education and Social Concern. Delhi : JEA.

1978 "The College and the community" In NFE (No.1)

MARIQUE, P.J.

1939 The Philosophy of Christian Education, New York : Prentice Hall Inc.

MIRANDA, A.

1975 "An Ideology and Programme for the NSS" in NEF (No.2).

MORISETTE, H. (ED.)

1986 Christian Perspectives in Education : mission of the Catholic College in India Today, Bangalore : Xbhei.

PIUS XI

1929 (31, Dec.) "Divini Illius Magistri", in Acta Apostolicae Sedis, 22 (1930).

SEQUEIRA (S.J.), T.N.

1952 The Education of India, Bombay : Oxford University Press.

ಜಿಲ್ಲಾ ಆಡಳಿತ

ಕಾ॥ ಎಂ.ಪಿ. ಭುವನೇಶ್ವರ ಪ್ರಸಾದ

ನವೀನ ರಾಜ್ಯ ಬಹುವಿಶಾಲವಾಗಿದ್ದು, ಸವಿಸ್ತಾರವಾದ ಭೂಪ್ರದೇಶದಿಂದ ಕೂಡಿದ್ದು ಹೆಚ್ಚಿನ ಜನಸಂಖ್ಯೆಯಿಂದ ಅವೃತವಾಗಿದೆ. ಈ ರೀತಿಯಾದಂತಹ ಬೃಹತ್ ರಾಷ್ಟ್ರದಲ್ಲಿ ಯಾವುದೇ ಒಂದು ಸ್ಥಳವನ್ನು ಕೇಂದ್ರವನ್ನಾಗಿಟ್ಟುಕೊಂಡು ದಕ್ಷತೆಯಿಂದ, ಕ್ರಮಬದ್ಧವಾಗಿ, ಸುವ್ಯವಸ್ಥಿತವಾಗಿ, ಸುಸೂತ್ರವಾದ ಆಡಳಿತ ನಡೆಸುವುದು ಕಷ್ಟಸಾಧ್ಯವೆನಿಸುತ್ತದೆ. ಆದ ಕಾರಣ ನೀತಿ ಬದ್ಧ ನಿಯಮಯುತ, ಪರಿಣಾಮಕಾರಿಯಾಗಿ ಫಲಪ್ರದವಾಗಿ, ಪ್ರಯೋಜನಕಾರಿಯಾಗಿ, ಪ್ರಜಾಹಿತವನ್ನು ಸಾಧಿಸುವಂತಹ ಆಡಳಿತದ ವ್ಯವಸ್ಥೆಯನ್ನು ಈ ದಿನದ ಸರ್ಕಾರ ಮೂರು ಹಂತಗಳಲ್ಲಿ ನಿರೂಪಿಸಿದೆ. ಅವುಗಳ ಮೂಲಕ ಆಡಳಿತ ಸುಗಮವಾಗಿ, ಸುಸ್ಥಿತವಾಗಿ ನಡೆಯುತ್ತಿದೆ. ಅವುಗಳೆಂದರೆ ಕೇಂದ್ರಾಡಳಿತ, ರಾಜ್ಯಡಳಿತ ಮತ್ತು ಜಿಲ್ಲಾ ಆಡಳಿತ.

ನಮ್ಮ ಇಲ್ಲಿಯ ಪ್ರಮುಖ ಪ್ರಸ್ತುತ ವಸ್ತುವಿಷಯವೇ ಜಿಲ್ಲಾಡಳಿತ ಅದರಲ್ಲಿಯೂ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ, ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿ ಅದಕ್ಕಿಂತ ಹೆಚ್ಚಾಗಿ ಪ್ರಜೆಗಳ ಅಂದರೆ ಪ್ರಮುಖವಾಗಿ ಗ್ರಾಮೀಣ ಜನರ ಬದುಕು ಅಥವಾ ಅಭಿವೃದ್ಧಿಗಾಗಿ ಈ ಹಂತದ ಆಡಳಿತ ಅತ್ಯವಶ್ಯಕವೆನಿಸುತ್ತದೆ.

ಭಾರತ ದೇಶದ ಸುದೀರ್ಘ ಚರಿತ್ರೆಯ ಪುಟಗಳಲ್ಲಿ ಜಿಲ್ಲಾಡಳಿತ ಅತ್ಯುನ್ನತ ಸ್ಥಾನಗಳಿಸಿಕೊಂಡಿದೆ. ಇದು ಚಕ್ರಾಧಿಪತ್ಯದ ಮಟ್ಟಕ್ಕೆ ಪರಿತ್ತಲ್ಲದೆ ಅಂದಿನ ಸಾಮ್ರಾಟರುಗಳಿಂದಲೂ ಹಾಗು ರಾಜಮಹಾರಾಜ, ಸಾಮಂತರುಗಳಿಂದಲೂ ಪ್ರಜಾಸಮುದಾಯದಿಂದಲೂ ಅಂಗೀಕರಲ್ಪಟ್ಟು ಮಾನ್ಯತೆಗಳಿಸಿದ್ದಿತು. ಪುರಾತನ ಕಾಲದ ಪ್ರಭುಗಳು ಇದನ್ನೆ ಆಧಾರವಾಗಿಟ್ಟುಕೊಂಡು ರಾಜ್ಯಾಡಳಿತವನ್ನು ನಡೆಸಿದ್ದಾರೆಂಬುದಕ್ಕೆ ಅನೇಕ ಆಧಾರಗಳುಂಟು ಭಾರತೀಯರ ಆಡಳಿತ ನೀತಿ ಸಂಹಿತೆಗಳಾದ ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ, ಕಾಮಂದಕನ ನೀತಿಸಾರ, ಹಲವು ಶಾಸನಗಳು ಈ ಆಡಳಿತದ ಬಗೆಗೆ ಮಾಹಿತಿ ನೀಡುತ್ತವೆ. ಇಷ್ಟು ಮಾತ್ರವಲ್ಲದೆ ದುರ್ವಿನೀತ ಗಂಗರ ಕಾಲದಲ್ಲಿ ಜಿಲ್ಲಾಡಳಿತದ ಮೂಲಕವೇ ಭೂಕಂದಾಯ, ಆಸ್ತಿಯ ತೆರಿಗೆ ಮುಂತಾದುವುಗಳ ಉಲ್ಲೇಖವಿದೆ. ಹಾಗು ''ದಶಗ್ರಾಮ'' (ಹತ್ತು ಹಳ್ಳಿಗಳ ಒಂದು ಆಡಳಿತ) 'ಬೆಳ್ವೊಲ' (300 ಹಳ್ಳಿಗಳ ಒಂದು ಭಾಗ ಮೊದಲಾದ ಆಡಳಿತ ಘಟಕಗಳ ವಿವರಣೆಯನ್ನು ಜಿಲ್ಲಾಡಳಿತದ ಬಗೆಗೆ ನಾವು ಕಾಣಬಹುದಾಗಿದೆ. ಪರಾಶರ ಮಾಧವೀಯದಲ್ಲಿ ಕಂಡು ಬರುವಂತೆ ವಿಜಯನಗರ ಕಾಲದಲ್ಲಿಯೂ ಜಿಲ್ಲಾ ಆಡಳಿತದ ಬಗೆಗೆ ಅದರ ಜೊತೆಗೆ ತೆರಿಗೆ ಭೂ ಕಂದಾಯ ಮುಂತಾದುವುಗಳನ್ನು ಕುರಿತು ಉಲ್ಲೇಖವಿದೆ. ಕರ್ನಾಟಕ

ಪುರಾತನ ಸಂಸ್ಕೃತ ಕೃತಿಗಳಾದ ''ಮಾನಸೋಲ್ಲಾಸ, ದೇವಸೂರಿಯನೀತಿ ವಾಕ್ಯಾಮೃತ ಗ್ರಂಥಗಳಲ್ಲಿ ವಿಚಾರ ಮಾಡಿರುವುದು ಗೋಚರವಾಗಿದೆ. ಈ ರೀತಿ ಆಡಳಿತ ಕ್ರಮವನ್ನು ಮುಂದೆ ಬಂದಂತಹ ಮೊಗಲರ ಆಡಳಿತಗಾರರಾದ ಬಹುಮನಿಸುಲ್ತಾನರಾಗಲಿ ಅಥವಾ ಅಧಿಕ ಶಾಹಿಗಳಾಗಲಿ ಬಲವಾಗಿ ಬೇರೂರಿದ್ದ ಹಿಂದೂ ಆಡಳಿತಕ್ರಮವನ್ನು ಬದಲಾಯಿಸಲಾಗದೆ ಇದನ್ನೆ ಬೇರೆ ರೀತಿಯಲ್ಲಿ ಮುಂದುವರಿಸಿರುವುದು ಕಂಡುಬರುತ್ತದೆ.

ಬಾದಾಮಿ, ಚಾಲುಕ್ಯರ, ರಾಷ್ಟ್ರಕೂಟರ ದಾಖಲೆಗಳಲ್ಲಿ ರಾಷ್ಟ್ರ, ಮಂಡಲ ಎಂಬುವುದರೊಳಗೆ ಜಿಲ್ಲೆಗಳಿದ್ದವೆಂಬುದನ್ನು ಅದರಲ್ಲಿಯೂ ಅಮೋಘವರ್ಷನ ಕಾಲದಲ್ಲಿ 16 ಮಂಡಲಗಳಿದ್ದು ಅವುಗಳಲ್ಲಿ ಆಡಳಿತ ನಡೆಸುವ ಸಲುವಾಗಿ ಜಿಲ್ಲೆಗಳನ್ನಾಗಿ ಮಾಡಿಕೊಂಡಿದ್ದನೆಂಬುದನ್ನು ಇತಿಹಾಸದ ಪುಟಗಳಲ್ಲಿ ಕಂಡುಬಂದಿದೆ. ಬನವಾಸಿ ಅಥವಾ ನೊಳಂಬವಾಡಿ ಪ್ರಾಂತ್ಯಗಳಲ್ಲಿ 12 ಜಿಲ್ಲೆಗಳಿದ್ದವೆಂದು ಡಾ|| ಧೀಕ್ಷಿತರು ವಿವರಿಸಿದ್ದಾರೆ. ವಿಜಯನಗರ ಸಾಮ್ರಾಜ್ಯದಲ್ಲಿಯೂ ಚಕ್ರಾಧಿಪತ್ಯವನ್ನು ಪ್ರಾಂತ್ಯಗಳನ್ನಾಗಿಯೂ ಇವುಗಳನ್ನು ವಿಷಯಗಳನ್ನಾಗಿ ವಿಭಾಗಿಸಿ ಅವುಗಳನ್ನು ಸೀಮೆ ಅಥವಾ ನಾಡು ಜಿಲ್ಲೆಗಳನ್ನಾಗಿ ವಿಂಗಡಿಸಿ ಮತ್ತೆ ಅವುಗಳನ್ನು ಕಂಪಣ ಅಥವಾ ಸ್ಥಳಗಳನ್ನಾಗಿ ವಿಭಾಗಿಸಿ ಆಡಳಿತ ನಡೆಸಿರುವುದನ್ನು ಕಾಣಬಹುದಾಗಿದೆ ಮುಮ್ಮಡಿ ಕೃಷರಾಜ ಒಡೆಯರ ಕಾಲದಲ್ಲಿಯೂ ಜಿಲ್ಲಾ ಆಡಳಿತವಿತ್ತೆಂಬುದಕ್ಕೆ ಅನೇಕ ಅಧಾರಗಳುಂಟು.

ಜಿಲ್ಲಾ ಆಡಳಿತದ ಅಧ್ಯಯನ ಸಂಪ್ರದಾಯದಷ್ಟೇ ಹಳೆಯದಾಗಿದ್ದು ರಾಜಮಹಾರಾಜರುಗಳೆಂದರೆ ಮೊಗಲರ ಕಾಲದಿಲ್ಲಯೂ ಸಹ ಅದರಲ್ಲಿಯೂ ಅಕ್ಬರನ ಕಾಲದಲ್ಲಿ ಇದಕ್ಕೆ ಹೆಚ್ಚಿನ ಪ್ರಧಾನತೆ ನೀಡಿರುವುದು ಕಂಡುಬರುತ್ತದೆ. ಇದು ರಾಜ್ಯಾಡಳಿತದ ಮುಖ್ಯ ಬಿಂದುವಾಗಿ, ಜನತೆಯ ಮತ್ತು ರಾಜ್ಯದ ನಡುವೆ ಮಾಧ್ಯಮವಾಗಿ ನಡೆದುಕೊಂಡು ಬಂದಿದೆ. ಬಿಳಿಯರು ಭಾರತದಲ್ಲಿ ಇದನ್ನೆ ಆಡಳಿತದ ಮೂಲ ಘಟಕವೆಂದು ಪರಿಗಣಿಸಿ, ಇದನ್ನು ಭೌಗಳಿಕ ಅಥವಾ ಪ್ರಾದೇಶಿಕ ಹಾಗು ಜನಸಂಖ್ಯೆಯನ್ನು ಅನುಸರಿಸಿ ಈ ಆಡಳಿತಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಇದನ್ನು ಕ್ಷೇತ್ರಾಡಳಿತ, ಪ್ರಾದೇಶಿಕ ಆಡಳಿತ, ಜಿಲ್ಲಾ ಆಡಳಿತ ಎಂಬೆಲ್ಲಾ ನಾಮಗಳಿಂದ ಗುರ್ತಿಸಿ ಸ್ವಾತಂತ್ರ್ಯ ಪೂರ್ವದಲ್ಲಿ ಎಷ್ಟು ಮಾನ್ಯತೆ ಇದ್ದಿತೊ ಅದಕ್ಕಿಂತ ಹೆಚ್ಚಾಗಿ ಸ್ವತಂತ್ರ್ಯಾನಂತರವೂ ಸಹ ಇದು ಶಾಶ್ವತ ಸ್ಥಾನಗಳಿಸಿಕೊಂಡು ನಿರಂತರವಾಗಿ ಆಡಳಿತದ ಮೂಲ ಘಟಕವಾಗಿ ಬೆಳೆದು ಉಳಿದುಕೊಂಡು ಬಂದಿದೆ. ಈಗ ರಾಜ್ಯ ಸರ್ಕಾರದಡಿಯಲ್ಲಿ ಪ್ರಮುಖ ಸ್ಥಾನಗಳಿಸಿಕೊಂಡು ಪ್ರದೇಶದ ಅಥವಾ ಸ್ಥಳೀಯ ಜನರ ಉದ್ದಾರಕ್ಕಾಗಿ, ಪ್ರಜಾಪ್ರಭುತ್ವದ ಯಶಸ್ಸಿಗಾಗಿ ಶ್ರಮಿಸುತ್ತಿರುವುದನ್ನು ಕಾಣುತ್ತಿದ್ದೇವೆ.

ಒಟ್ಟಾರೆ ಹಿಂದಿನಿಂದ ಇಂದಿನವರೆವಿಗೂ ಒಂದೇ ರೀತಿಯ ಸ್ಥಾನವನ್ನು ಗಳಿಸಿಕೊಂಡಿದೆ. ಇದಿಲ್ಲದೆ ಹೋದರೆ ರಾಜ್ಯಾಡಳಿತ ಸುಗಮವಾಗಿ ಸಾಗದು ಎಂಬುದು ಸತ್ಯವು, ಸಹಜವು ಆಗಿದೆ. ಇದೊಂದು ಮೂಲಭೂತ ಪ್ರಾದೇಶಿಕ ಆಡಳಿತ ಘಟಕವಾಗಿ ರಾಜಕೀಯವಾಗಿ, ಆರ್ಥಿಕವಾಗಿ,

ಸಾಮಾಜಿಕವಾಗಿ, ಸಂವೈಧಾನಿಕವಾಗಿ ಶೈಕ್ಷಣಿಕವಾಗಿ ಅನೇಕ ಬದಲಾವಣೆಗಳ ಜೊತೆಗೆ ಆಡಳಿತದ ಮೇಲೆ ಹೆಚ್ಚಿನ ಅಸದಳವಾದ ಪ್ರಭಾವ ಬೀರಿದೆ.

ಮನುಸ್ಮೃತಿಯಲ್ಲಿಯೂ ಸಹ ಇದರ ಬಗ್ಗೆ ಈ ಕೆಳಕಂಡಂತೆ ಉಲ್ಲೇಖಿಸಿರುವುದನ್ನು ನೋಡಬಹುದು

''ಯಾವುದೇ ಒಂದು ರಾಜ್ಯ ಪ್ರಜೆಗಳ ಯೋಗ ಕ್ಷೇಮವನ್ನು ನೋಡಿಕೊಳ್ಳಬೇಕಾದರೆ, ಸುವ್ಯವಸ್ಥಿತ, ಸುಂದರ, ಸುದೀರ್ಘ, ಸುಸ್ಥಿರ ಆಡಳಿತವನ್ನು ನೀಡಬೇಕಾದರೆ ಹಾಗು ಸ್ಥಳೀಯ ಸಾಮಾಜಿಕ ವ್ಯವಸ್ಥೆ, ಸಧೃಡ ಆರ್ಥಿಕ ಸ್ಥಿತಿ, ಮೌಲ್ಯಧಾರಿತ ರಾಜಕಾರಣ, ನೀತಿಯುತ ಧಾರ್ಮಿಕ, ಶ್ರದ್ಧಾ ಯುಕ್ತ, ಶುದ್ಧ ಶಿಕ್ಷಣಮಟ್ಟ ಹಾಗು ಮತ್ತಿತರ ಕ್ಷೇತ್ರಗಳು ಅಭಿವೃದ್ಧಿಯಾಗಬೇಕಾದರೆ ಅದು ಜಿಲ್ಲಾ ಆಡಳಿತವನ್ನು ಅನುಸರಿಸಿರುತ್ತದೆ.''

(ಮನುಸ್ಮೃತಿ)

ಆಕ್ಸ್‌ಪರ್ಡ ನಿಘಂಟಿಗೆ ಅನುಗುಣವಾಗಿ ಜಿಲ್ಲಾ ಆಡಳಿತ ಎಂದರೆ

''ವಿಶೇಷ ಆಡಳಿತಾತ್ಮಕ ಉದ್ದೇಶ ಉಳ್ಳ ನಿರ್ದಿಷ್ಟ ಪ್ರದೇಶಕ್ಕೆ ಸಂಭಂದಪಟ್ಟ ಸಾರ್ವಜನಿಕರ ವ್ಯವಹಾರಗಳನ್ನು ಮತ್ತು ಅವರ ಚಟುವಟಿಕೆಗಳನ್ನು ಆಗು-ಹೋಗುಗಳನ್ನು ನೋಡಿಕೊಳ್ಳುವಂತಹ ವ್ಯವಸ್ಥೆಯೇ ಜಿಲ್ಲಾಡಳಿತ.''

ಎಸ್.ಎಸ್. ಕೇರ್ ಅವರಿಗೆ ಅನುಗುಣವಾಗಿ

'' ಭೌಗಳಿಕವಾಗಿ ಗುರ್ತಿಸಲ್ಪಟ್ಟ ಪ್ರದೇಶವೊಂದರ ಸಂಮಿಶ್ರಿತ, ಸಾಂಸ್ಥಿತ, ಸಾರ್ವಜನಿಕ ವ್ಯವಹಾರಗಳು ಅಚಲವಾಗುವಂತೆ ಕ್ರಿಯಾತ್ಮಕವಾಗಿ, ವ್ಯವಸ್ಥಿತವಾಗಿ ಸರ್ಕಾರದ ಎಲ್ಲಾ ಕರ್ತವ್ಯಗಳನ್ನು ನಡೆಸಿಕೊಂಡು ಹೋಗುವುದೇ ಜಿಲ್ಲಾ ಆಡಳಿತ.''

ಪ್ರೊಪೆಸರ್ ಪಾಟರ್ ರವರ ಪ್ರಕಾರ

''ನಿಶ್ಚಿತ ಪ್ರದೇಶವೊಂದನ್ನು ರಾಜ್ಯ ಸರ್ಕಾರ ಜಿಲ್ಲೆ ಎಂದು ಘೋಷಿಸಿ ಅಲ್ಲಿಯ ಸರ್ಕಾರದ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವುದೇ ಜಿಲ್ಲಾಡಳಿತ''

ಇದು ಸಾರ್ವಜನಿಕ ಆಡಳಿತದ ಒಂದು ಭಾಗವಾಗಿದ್ದು ಸೀಮಿತ ಪ್ರದೇಶವೊಂದರ ಸರ್ಕಾರದ ಆಡಳಿತ ಕಾರ್ಯಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಹಾಗು ಅಲ್ಲಿಯ ಜನತೆಯ ಉದ್ದೀಪನಕ್ಕೆ ಅನುವುಮಾಡಿಕೊಡುವಂತಹ ಒಂದು ಶಾಸ್ತ್ರವೆಂದು ಪರಿಗಣಿಸಬಹುದು.

ರಾಜ್ಯಶಾಸ್ತ್ರದ ದೃಷ್ಟಿಯಿಂದಲೂ ಸಾರ್ವಜನಿಕ ಆಡಳಿತ ದೃಷ್ಟಿಯಿಂದ ಇದರ ಅಧ್ಯಯನವು ಬಹು ಮುಖ್ಯವೆನಿಸುತ್ತದೆ. ಸ್ವಾತಂತ್ರ್ಯಾನಂತರ ಅದರಲ್ಲಿಯೂ ಸಂವಿಧಾನ ಜಾರಿಗೆ ಬಂದ ಮೇಲೆ ಆಡಳಿತದಲ್ಲಿ ಗುಣಾತ್ಮಕ ಹಾಗು ಪ್ರಮಾಣತ್ಮಾಕವಾದಂತಹ, ಅದರಲ್ಲಿಯೂ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಇದರ ಆವಶ್ಯಕತೆ ಹೇಳತೀರದು. ಆಡಳಿತ ಕ್ಷೇತ್ರ ಸವಿಸ್ತಾರಾಗೊಂಡು ರಾಜ್ಯ ಮತ್ತು ಜನಗಳ ನಡುವಿನ, ಚಿಕ್ಕ ಸರ್ಕಾರ ದೊಡ್ಡ ಸರ್ಕಾರವಾಗಿ ಪರಕೀಯರ ಆಡಳಿತ ಹೋಗಿ ಸ್ವಕೀಯ ಆಡಳಿತ ಉಂಟಾಗಿ, ಅಧಿಕಾರ ಶಾಹಿಯ ಬದಲು ಪ್ರಜಾಸತ್ತಾತ್ಮಕ ಹಾಗು ಸಂಸದೀಯ ಸಂವಿಧಾನಾತ್ಮಕ, ಜವಾಬ್ದಾರಿಯುತ, ಅಧಿಕಾರ ವಿಕೇಂದ್ರಿಕರಣದಂತಹ ಅಭಿವೃದ್ಧಿ ಯೋಜನೆಗಳನ್ನು ಒಳಗೊಂಡಿರುವ ಜನತೆಯ ಕಲ್ಯಾಣಕ್ಕಾಗಿ ಬೆಳೆದು ಉಳಿದುಕೊಂಡು ಬಂದಿರುವಂತದ್ದು.

ಜಿಲ್ಲಾ ಆಡಳಿತ ಬಹುಮುಖ ಸಮಸ್ಯೆಗಳನ್ನು ಪರಿಹಾರ ಮಾಡುವಂತಹ ಒಂದು ಸಾಧನವಾಗಿದೆ. ಸಾರ್ವಜನಿಕ ಕುಂದುಕೊರತೆಗಳನ್ನು ಆಡಳಿತಸಾಮರಸ್ಯ, ದಕ್ಷ, ಪ್ರಾಮಾಣಿಕ ವ್ಯವಸ್ಥೆಯ ಮೂಲಕ ರಾಜ್ಯದ ಎಲ್ಲಾ ಕಾರ್ಯ ಭಾರಗಳನ್ನು ಆಡಳಿತ ಚಟುವಟಿಕೆಗಳನ್ನು ಅಷ್ಟೆಯಲ್ಲದೆ, ಹೊಸ ಸಂವಿಧಾನದ ಕುರುಹಾಗಿ ಮೂಲಭೂತ ಹಾಗು ಪರಿಣಾಮಕಾರಿಯಾದಂತಹ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಕ್ಷೇತ್ರದ ಬದಲಾವಣೆಗೆ ಇದು ಅವಕಾಶ ಮಾಡಿಕೊಟ್ಟಿದೆ. ಇದು ಜಿಲ್ಲಾಮಟ್ಟದಲ್ಲಿಯ ಪ್ರಜೆಗಳ ಹಿತ ಮತ್ತು ಇಚ್ಛೆಗಳನ್ನು ಗಮನಿಸಿ ಸಾಮರಸ್ಯದಿಂದ ಸಹಬಾಳ್ವೆಯು, ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಬೇಕಾದರೆ ಈ ಆಡಳಿತ ಅತಿಮುಖ್ಯ ಗಾಂಧೀಜಿ ಅವರ ಪಂಚಾಯಿತಿ ರಾಜ್ಯ ಹಾಗು ಅವರ ಕಂಡ ಹಳ್ಳಿಗಳ ಭಾರತದ ಕನಸು ನನಸಾಗಬೇಕಾದರೆ ಈ ಆಡಳಿತ ಅತಿಮುಖ್ಯವೆನಿಸುತ್ತದೆ.

ಜಿಲ್ಲಾ ಆಡಳಿತದ ವ್ಯಾಪ್ತಿ ಸಾಮಾನ್ಯವಾಗಿ ಐದು ಅಂಶಗಳನ್ನು ಒಳಗೊಂಡಿದೆ ಅದರಲ್ಲಿ ಡಾ॥ ಕೆ.ಎಸ್.ವಿ. ಶಾಸ್ತ್ರಿಯವರ ಪುಸ್ತಕದ ಪ್ರಕಾರ ಇವುಗಳೆಂದರೆ :-

1. ಸಾಮಾನ್ಯ ಆಡಳಿದತ ಯಂತ್ರವನ್ನು ಬಲಪಡಿಸುವುದು ಹಾಗೂ ಆಡಳಿತದ ಮಟ್ಟವನ್ನು ಸುಧಾರಣೆ ಮಾಡುವುದು.

2. ಸಾಮಾನ್ಯ ಸಂಘಟನೆಯ ಪೂರ್ವಸಿದ್ಧತೆ ಹಾಗೂ ವಿಸ್ತರಣೆ ಜಿಲ್ಲೆಯಲ್ಲಿ ಬರುವ ಎಲ್ಲಾ ಇಲಾಖೆಗಳ ಅನೇಕ ಅಭಿವೃದ್ಧಿ ಆಡಳಿತಾತ್ಮಕ, ಯೋಜನಾ ಯುಕ್ತ ಕಾರ್ಯ ಚಟುವಟಿಕೆಗಳನ್ನು ಒಂದುಗೂಡಿಸಿ ಕಾಯಿದೆ ಅನ್ವಯ ಕ್ರಮಬದ್ಧವಾಗಿ ಸಂಘಟನೆಯನ್ನು ಸವಿಸ್ತಾರಗೊಳಿಸುವುದು.

3. ಜಿಲ್ಲೆಯಲ್ಲಿ ಬರುವ ಅಭಿವೃದ್ಧಿ ಕಾರ್ಯಗಳ ಸಂಬಂಧವನ್ನು ಹಾಗು ಸ್ಥಳೀಯ ಸ್ವಯಂ

ಆಡಳಿತಾತ್ಮಕ ಕರ್ತೃತ್ವ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಅಭಿವೃದ್ಧಿ ಕಾರ್ಯಗಳ ಜೊತೆಯಲ್ಲಿ ರಾಜ್ಯ ಸರ್ಕಾರದ ಸಂಘಟನೆಗಳು ಆಡಳಿತಾತ್ಮ ಹಾಗು ರಾಜ್ಯ ಸರ್ಕಾರದ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲು ಜಿಲ್ಲಾ ಆಡಳಿತ ಸಹಾಯ ಮಾಡುತ್ತದೆ.

4. ಪ್ರಾದೇಶಿಕ ಅಭಿವೃದ್ಧಿ ಕಾರ್ಯಗಳ ಉಸ್ತುವಾರಿ ಮತ್ತು ನಿಯಂತ್ರಣ ಹಾಗೂ ಸಹಕಾರವನ್ನು ಇದು ನೀಡುತ್ತದೆ.

5. ಜಿಲ್ಲೆಯಲ್ಲಿ ನಡೆಯಬಹುದಾದ ಸರ್ಕಾರದ ಎಲ್ಲಾ ಉಪಯುಕ್ತ ಕಾರ್ಯಗಳ ನಿರ್ವಹಣೆ ಮತ್ತು ಅವುಗಳು ಸುಗಮವಾಗಿ ಸಾಗುವಂತೆ ಅವಕಾಶ ಮಾಡಿಕೊಡುವುದು.

ಹೀಗೆ ಜಿಲ್ಲಾ ಆಡಳಿತ ಎಂದರೆ ಕಾನೂನು, ಕ್ರಮಾನ್ವಯ ಜನತೆಯ ಯೋಗಕ್ಷೇಮ, ಜೀವನ ಮಟ್ಟ ಸುಧಾರಣೆ, ಸಾಮಾಜಿಕ ರಕ್ಷಣೆ, ಆರ್ಥಿಕ ನ್ಯಾಯ ದೊರಕಿಸಿಕೊಡುವುದು ಸರ್ಕಾರಕ್ಕೆ ಬರಬಹುದಾದ ಎಲ್ಲಾ ರೀತಿಯ ಕಂದಾಯ ಸಂಗ್ರಹಣೆ ಅಂದರೆ ನೆಲ, ಜಲ, ಕೃಷಿ, ನೀರಾವರಿ ಯಂತಹ ತೆರಿಗೆ ಸಂಗ್ರಹಣೆ ಮುಂತಾದುವುಗಳನ್ನು ಉಚಿತ ರೀತಿಯಲ್ಲಿ ವಸೂಲಿಮಾಡಿ ಜನತೆಯ ಕಷ್ಟ ಸುಖಗಳನ್ನು ಅರಿತು ಸುಗಮವಾಗಿ ಅವರು ಜೀವನ ಮಾಡಲು ವ್ಯವಸ್ಥೆ ಮಾಡಿ ಕೊಡುವುದು, ಸರ್ಕಾರದಿಂದ ದೊರಕಬಹುದಾದ ಎಲ್ಲಾ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಜನತೆಗೆ ಮುಟ್ಟಿಸುವುದು ಅದರಲ್ಲಿಯೂ ನೈಸರ್ಗಿಕ ವಿಕೋಪ ಉಂಟಾದಾಗ ಅಂದರೆ, ಆಕಸ್ಮಿಕ, ಅಮಾನವೀಯ ಅಕೃತ್ಯಗಳು ತಲೆದೋರಿದಾಗ ಅಂದರೆ ಚಂಡಮಾರುತ, ಭೂಕಂಪ, ನೆರೆಹಾವಳಿ ಪ್ರವಾಹ, ಬರಗಾಲ, ಬೆಂಕಿಯ ಅನಾಹುತ, ಯುದ್ಧ, ಕೋಮುವಾರು ಗಲಭೆ ಇನ್ನು ಮುಂತಾದ ಗಂಡಾಂತರ ಪರಿಸ್ಥಿತಿಯಲ್ಲಿ ಅಲ್ಲಿಯ ಜನತೆಯನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ, ಕಾಪಾಡುವ ಹೊಣೆಗಾರಿಕೆ ಅಥವಾ ಜವಾಬ್ದಾರಿ ಈ ಜಿಲ್ಲಾ ಆಡಳಿತಕ್ಕೆ ಸೇರಿರುತ್ತದೆ.

ಜಿಲ್ಲಾಡಳಿತ ಪ್ರಮುಖವಾಗಿ ಕಾರ್ಯಗಳನ್ನು ಒಳಗೊಂಡಿದೆ, ಅವುಗಳೆಂದರೆ :

1. ಸಾರ್ವಜನಿಕ ನೆಮ್ಮದಿ ಮತ್ತು ಶಾಂತಿ ಪರಿಪಾಲನೆ.
2. ಕಂದಾಯ ಇಲಾಖೆಗೆ ಸಂಬಂಧಪಟ್ಟವು
3. ಅಭಿವೃದ್ಧಿ ಕಾರ್ಯಗಳು
4. ವ್ಯವಸ್ಥಿತ ಕಾರ್ಯಾಂಗೀಯ ಕಾರ್ಯಗಳು
5. ಜಿಲ್ಲಾ ಆಡಳಿತ ಅಭಿವೃದ್ಧಿ ಕಾರ್ಯಗಳು
6. ಚುನಾವಣೆಗೆ ಸಂಬಂಧಪಟ್ಟವು
7. ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುವುದು
8. ತುರ್ತು ಪರಿಸ್ಥಿತಿಗೆ ಸಂಬಂಧಿಸಿದವು

9. ರಾಜ್ಯಕ್ಕೆ ಸಂಬಂಧಪಟ್ಟ ಕಾರ್ಯಾಂಗೀಯ ಕಾರ್ಯಾಲಯ.

ಸಾರ್ವಜನಿಕ ನೆಮ್ಮದಿ ಮತ್ತು ಶಾಂತಿ ಪರಿಪಾಲನೆ.

1. ಕಾನೂನು ಮತ್ತು ಶಿಸ್ತು ಪರಿಪಾಲನೆ
2. ಅಪರಾಧಗಳನ್ನು ತಡೆಗಟ್ಟುವುದು
3. ದಂಡದ ಮೂಲಕ ನ್ಯಾಯ ದೊರಕಿಸಿಕೊಡುವುದು
4. ಜಿಲ್ಲೆಯ ಆರಕ್ಷಕರ ಉಸ್ತುವಾರಿ ಮತ್ತು ನಿಯಂತ್ರಣ.
5. ತನಿಖೆ ನಡೆಸುವುದು ದಂಡ ವಿಧಿಸುವುದು, ಶಿಕ್ಷೆ ನೀಡುವುದು
6. ಸೆರೆಮನೆ ಉಸ್ತುವಾರಿ

2. ಕಂದಾಯ ಇಲಾಖೆಗೆ ಸಂಬಂಧ ಪಟ್ಟವು.

1. ರಾಜ್ಯದ ಬೊಕ್ಕಸಕ್ಕೆ ಹಣ ಬರಿಸುವಂತದ್ದು
2. ರಾಜ್ಯದ ಆದಾಯ ವೆಚ್ಚವನ್ನು ಜಿಲ್ಲಾ ಮಟ್ಟದಲ್ಲಿ ನೋಡಿಕೊಳ್ಳುವುದು

3. ಭೂಕಂದಾಯ, ಜಲಗಂದಾಯ, ತಲೆಗಂದಾಯ, ಮನೆಗಂದಾಯ, ಭೂಮನೆ ಆದಾಯ, ನಿವೇಶನ ಕಂದಾಯ, ಪತ್ರಾಗಾರ, ಕೃಷಿ ತರಿ ಬರಭೂಮಿ, ಅರಣ್ಯ, ನೀರಾವರಿ ವ್ಯವಸಾಯ, ಸಾರ್ವಜನಿಕಸಾಲ, ಭೂಸುಧಾರಣಾ ಕಾಯಿದೆ, ಭೂಮಿವಶ, ಭೂನ್ಯಾಯಾಡಳಿತ, ಸ್ಟಾಂಪು, ಮತ್ತು ನೋಂದಾಣಿ ಮುಂತಾದುವುಗಳು.

3. ಅಭಿವೃದ್ಧಿ ಕಾರ್ಯಗಳು

ಇವರಲ್ಲಿ ಎರಡು ಭಾಗ.

1. ಕೃಷಿ ಉತ್ಪನ್ನ, ನೀರಾವರಿ ಅಭಿವೃದ್ಧಿ, ಒಣ ಭೂಮಿ, ಅಭಿವೃದ್ಧಿ, ಸಹಕಾರ, ಪಶುಸಂಗೋಪನೆ, ಮೀನುಗಾರಿಕೆ
2. ಪಂಚಾಯಿತಿ ರಾಜ್ಯ ವ್ಯವಸ್ಥೆ.

4. ಜಿಲ್ಲಾ ಆಡಳಿತ ಅಭಿವೃದ್ಧಿ ಕಾರ್ಯಗಳು

ಕಲ್ಯಾಣ ಕಾರ್ಯ ಚಟುವಟಿಕೆಗಳು, ಸಾರ್ವಜನಿಕ ಆರೋಗ್ಯ ಶಿಕ್ಷಣ, ಸಮಾಜ ಕಲ್ಯಾಣ, ಹಿಂದುಳಿದ ವರ್ಗದವರ ವಾಳಿಗೆ ಸಂಪರ್ಕ ಮುಂತಾದುವು ಇವರ ವ್ಯಾಪ್ತಿಗೆ ಬರುತ್ತವೆ.

5. ವ್ಯವಸ್ಥಿತ ಕಾರ್ಯಾಂಗೀಯ ಕಾರ್ಯಗಳು

ಕಾಯಿದೆಯ ನಿರ್ವಹಣೆ ಆಹಾರ ಮತ್ತು ನಾಗರೀಕ ಸರಬರಾಜು ದಿನಬಳಕೆಯ ವಸ್ತುಗಳು ದವಸ ಧಾನ್ಯ, ಕಾಳುಗಳು ಸೀಮೆಎಣ್ಣೆ, ಕಬ್ಬಿಣ, ಉಕ್ಕು ಸಿಮೆಂಟ್ ಮುಂತಾದುವುಗಳು.

6. ಚುನಾವಣೆಗೆ ಸಂಬಂಧಪಟ್ಟವು.

ಜಿಲ್ಲಾ ಮಟ್ಟದಲ್ಲಿ ಸಂಸತ್ತಿನ ಚುನಾವಣೆಗಳು ರಾಜ್ಯವಿಧಾನ ಸಭೆ, ಸ್ಥಳೀಯ ಸಂಸ್ಥೆಗ ಚುನಾವಣೆ ಅಭ್ಯರ್ಥಿಯ ಆಯ್ಕೆಯಿಂದ ಆರಂಭವಾಗಿ ಫಲಿತಾಂಶ ಪ್ರಕಟವಾಗುವವರೆಗೆ.

7. ಸ್ಥಳೀಯ ಆಡಳಿತವನ್ನು ನೋಡಿಕೊಳ್ಳುವುದು

ಗ್ರಾಮೀಣ ಮತ್ತು ಪುರಸಭೆಗಳು ನಿಯಂತ್ರಣ, ಉಸ್ತುವಾರಿ

8. ತುರ್ತು ಪರಿಸ್ಥಿತಿಯವು

ಜಿಲ್ಲೆಯಲ್ಲಿ ಉಂಟಾಗುವ ಪ್ರಕೃತಿ ವಿಕೋಪ ಬರಗಾಲ, ಚಂಡಮಾರುತ, ಪ್ರವಾಹ, ಅತಿವೃಷ್ಟಿ ಅನಾವೃಷ್ಟಿ ಮುಂತಾದುವು.

9. ರಾಜ್ಯ ಸಂಬಂಧ ಪಟ್ಟ ಕಾರ್ಯಾಂಗೀಯ ಕಾರ್ಯಗಳು.

ಕಾನೂನನ್ನು ಜಾರಿಗೊಳಿಸುವುದು ಸಹಕಾರ ನೀಡುವುದು ಜನತೆಯ ಕಲ್ಯಾಣ ಅಂದರೆ ಶಾಂ ನೆಮ್ಮದಿಗೆ ಭಂಗಬರದಂತೆ ನೋಡಿಕೊಳ್ಳುವುದು.

ಜಿಲ್ಲಾ ಮಟ್ಟದಲ್ಲಿ ಅನೇಕ ಇಲಾಖೆಗಳಿದ್ದು ಅವುಗಳೆಲ್ಲವೂ ಇದರ ವ್ಯಾಪ್ತಿಯ ಬರುವಂತವು.

ಕಂದಾಯ ಇಲಾಖೆ
ಸಾಮಾನ್ಯ ಆಡಳಿತ
ಪೋಲಿಸ
ಅಬಕಾರಿ
ಸಾರ್ವಜನಿಕ ಆರೋಗ್ಯ
ವೈದ್ಯಕೀಯ
ಅರಣ್ಯ
ವಿದ್ಯಾ ಇಲಾಖೆ
ಕೃಷಿ-ತೋಟಗಾರಿಕೆ
ಸಹಕಾರ
ಪಶುಸಂಗೋಪನೆ
ಕೈಗಾರಿಕೆ
ಯೋಜನೆ
ನ್ಯಾಯಾಂಗೀಯ
ಹಿಂದುಳಿದ ವರ್ಗ
ಸಮಾಜ ಕಲ್ಯಾಣ ಮತ್ತು ಕಾರ್ಮಿಕ
ಖಜಾನೆ ಮುಂತಾದುವು.

ಈ ಸಂಚಿಕೆಯ ಲೇಖಕರು

ಕು. ಕಮಲ ಸೆಲ್ವಿ

ದ್ವಿತೀಯ ಎಂ.ಎ. ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು 560 056

ಡಾ. ಹಂಪ. ನಾಗರಾಜಯ್ಯ

ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು 560 056

ಶ್ರೀ ಎಂ. ಜಿ. ಮಂಜುನಾಥ

ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು 560 056

ಡಾ. ಎಸ್.ಪಿ. ಪದ್ಮ ಪ್ರಸಾದ

ಪ್ರಾಂಶುಪಾಲರು
ಟಿ.ವಿ.ವಿ. ಶಿಕ್ಷಣ ಕಾಲೇಜು
ಮಧುಗಿರಿ
ತುಮಕೂರು ಜಿಲ್ಲೆ

ಶ್ರೀ.ಟಿ. ಮಲ್ಲಪ್ಪ

ಎಂ.ಫಿಲ್. ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಬೆಂಗಳೂರು 560 056

ಶ್ರೀ.ಟಿ.ಡಿ. ರಾಜಣ್ಣ

ದ್ವಿತೀಯ ಎಂ. ಎ. ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ. ಬೆಂಗಳೂರು 560 056

ಶ್ರೀ ಕೆಂಗೇರಿ ಚಕ್ರಪಾಣಿ
ನಂ. 23. ಕೋಟೆ ಕೆಂಗೇರಿ
ಬೆಂಗಳೂರು 560 060

ಡಾ. ಕಮಲಾ ಹಂಪನಾ
ನಂ. 1079, ಸ್ವನಿಮಾ
18 ನೇ ಎ. ಮುಖ್ಯ ರಸ್ತೆ
66ನೇ ಕ್ರಾಸು ರಾಜಾಜಿನಗರ
5ನೇ ಬ್ಲಾಕು
ಬೆಂಗಳೂರು 560 010

ಶ್ರೀ ಪಿ.ವಿ. ಕೃಷ್ಣಮೂರ್ತಿ.
ಜಿ.ಬಿ.ಜೆ. 510, 12 ನೇ ಕ್ರಾಸ್
ಜವಾಹರ್‌ನಗರ, 3ನೇ ಸೆಕ್ಟಾರ್
ಬೆಂಗಳೂರು 560 037

ಶ್ರೀ. ಹೊ. ನ. ನೀಲಕಂಠೇಗೌಡ
ಕನ್ನಡ ಉಪನ್ಯಾಸಕರು
ಸರ್.ಎಂ. ವಿಶ್ವೇಶ್ವರಯ್ಯ ಕಾಲೇಜು
ಕೋನೇನ ಅಗ್ರಹಾರ
ಎಚ್.ಎ.ಎಲ್.
ಬೆಂಗಳೂರು 560 017

ಕು. ಶಶಿಕಲಾ ಆರ್.
ಪ್ರಥಮ ಎಂ.ಎ. ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನ ಭಾರತಿ
ಬೆಂಗಳೂರು 560 056

ಎಂ. ಬೈರೇಗೌಡ
ನಂ. 119, 3ನೇ ತಿರುವು
8ನೇ ಮುಖ್ಯ ರಸ್ತೆ
ಆರ್. ಪಿ.ಸಿ. ಬಡಾವಣೆ
ವಿಜಯನಗರ 2ನೇ ಹಂತ
ಬೆಂಗಳೂರು 40

ಡಾ. ಬಸವಲಿಂಗಸೊಪ್ಪಿಮಠ	ಮುಖ್ಯಸ್ಥರು ಕನ್ನಡ ವಿಭಾಗ ಎಲ್.ವಿ.ಡಿ. ಕಾಲೇಜು ರಾಯಚೂರು 584101
ಶ್ರಿ ತಲಘಟ್ಟಪುರ ನಟರಾಜ	ದ್ವಿತೀಯ ಎಂ.ಎ. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ, ಬೆಂಗಳೂರು 560 056
ಡಾ. ಟಿ. ಬಿ. ಬಸವರಾಜು	ಅಧ್ಯಾಪಕರು ತತ್ವಶಾಸ್ತ್ರ ವಿಭಾಗ ಜ್ಞಾನಭಾರತಿ, ಬೆಂಗಳೂರು 560 056
ಪ್ರೊ ॥ ಶಿವರಾಮಯ್ಯ	ಅಮ್ಮಾಜಿ, ನಂ. 121 13ನೆಯ ಮುಖ್ಯರಸ್ತೆ, ಬಿನ್ನಿಲೇಔಟ್ ವಿಜಯನಗರ ಬೆಂಗಳೂರು 560 040
ಶ್ರೀಮತಿ ಶಾಂತ ಲಕ್ಷ್ಮಿ	ಉಪನ್ಯಾಸಕರು ಕನ್ನಡ ವಿಭಾಗ ಮಹಾರಾಣಿ ಕಲಾಕಾಲೇಜು ಬೆಂಗಳೂರು
ಡಾ. ವಿ.ಜಿ. ಪೂಜಾರ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ 585 106.
ಶ್ರೀ. ಡಿ.ಬಿ. ಮಲ್ಲಿಕಾರ್ಜುನ ಸ್ವಾಮಿ	ನಂ. 44, 2ನೇ ಮಹಡಿ ರಾಜೇಶ ಸ್ಟಿಚ್‌ವೇರ್ ಮೇಲ್ಬಾಗ ಪೈಪ್‌ಲೈನ್ ರಸ್ತೆ ಜೆ.ಸಿ. ನಗರ ಕುರುಬರ ಹಳ್ಳಿ ಭೆಂಗಳೂರು 560 086

ಪಿ. ವಿಜಯಕುಮಾರ ಮಹಾನುಭಾವಿಗಳು	ನಂ. 608, ಸಿದ್ಧ 3ನೇ ವಿಭಾಗ 3ನೇ ಹಂತ, 7ನೇ ಮುಖ್ಯ ರಸ್ತೆ ಬಸವೇಶ್ವರನಗರ ಬೆಂಗಳೂರು 560 079
ಶ್ರೀ. ಜಿ.ಕೆ. ದೇವರಾಜಸ್ವಾಮಿ	ನಂ. 3936, 2ನೇ ಅಡ್ಡ ರಸ್ತೆ
ಶ್ರೀ. ರಘುವೀರಹೆಗಡೆ.	2ನೇ ಹಂತ, ಗಾಯತ್ರಿನಗರ ಬೆಂಗಳೂರು 560 021
ಶ್ರೀ ಆರ್. ಜಗದೀಶ್	ಕನ್ನಡ ಉಪನ್ಯಾಸಕರು ಸರ್ವೋದಯ ಪ್ರಥಮ ದರ್ಜೆ ಕಾಲೇಜು ಶ್ರೀ ರಾಮಪುರಂ. ಬೆಂಗಳೂರು 560 0
ದೇ. ಸ್ಮಿತಾರೆಡ್ಡಿ	ಪ್ರಥಮ ಎಂ.ಎ ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು, ವಿ.ವಿ. ಜ್ಞಾನ ಭಾರ ಬೆಂಗಳೂರು 560 056.
ಡಾ ॥ ವಿಲ್ಯಂ ಮಾಡ್ತ	ಪ್ರಾಧ್ಯಾಪಕರು ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 580 003
ಡಾ ॥ ಎಂ. ಪಿ. ಭುವನೇಶ್ವರ ಪ್ರಸಾದ್	ಮುಖ್ಯಸ್ಥರು ರಾಜ್ಯಶಾಸ್ತ್ರ ವಿಭಾಗ ವಿವೇಕಾನಂದ ಪದವಿ ಕಾಲೇಜು ರಾಜಾಜಿನಗರ, 2ನೆಯ ಹಂತ ಬೆಂಗಳೂರು-560 055

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056